**DAMAGE BOOK**

# brown book

**THE BOOK WAS DRENCHED**

UNIVERSAL
LIBRARY
OU_200249
UNIVERSAL
LIBRARY

# ದೌಲತ್

## ಪ್ರಥಮ ಭಾಗ

ಮಂತ್ರಿವಧೆ

1937

ಎಂ. ಸೀತಾರಾಮಶಾಸ್ತ್ರಿ

PRINTED BY Y. R. RANGA RAO, PROPRIETOR,
SREE CHAMUNDESWARI ELECTRIC PRESS, MYSORE

# ಮುನ್ನುಡಿ.

ದೌಲತ್. ಇದೊಂದು ಐತಿಹಾಸಿಕ ಕಾದಂಬರಿ! ಮೈಸೂರಿನ ಇತಿಹಾಸದಲ್ಲಿ ಹೈದರಾಲಿ ಮತ್ತು ಟಿಪ್ಪೂಸುಲ್ತಾನರ ಆಡಳಿತವು ಬಹು ಮುಖ್ಯವಾದ ಕಾಂಡ! ಈ ಕಥೆಯು ಆ ಕಾಂಡಕ್ಕೆ ಸೇರಿದ್ದು! ಇತರ ಭಾಷೆಗಳೊಡನೆ ಹೋಲಿಸಿ ನೋಡಿದರೆ ಕನ್ನಡದಲ್ಲಿ ಕಾದಂಬರಿಗಳ ಸಂಖ್ಯೆಯು ಬಹು ಕಮ್ಮಿ. ಕನ್ನಡ ಕಾದಂಬರಿಗಳಲ್ಲಿ ವಂಗ, ಮಹಾರಾಷ್ಟ್ರ ದೇಶಗಳ ಇತಿಹಾಸ, ಸಂದರ್ಭಗಳಲ್ಲಿಯೇ ಹಣೆದ ಕಾದಂಬರಿಗಳೇ ಹೆಚ್ಚು! ಕರ್ಣಾಟಕದ ಇತಿಹಾಸ, ಸನ್ನಿವೇಶಗಳಿಂದಲೇ ಕಾದಂಬರಿಗಳನ್ನು ನಿರ್ಮಾಣಮಾಡಬಾರದೇ ಎನ್ನಿಸುತ್ತಿತ್ತು ನನ್ನ ಮನಸ್ಸು. ಹೇಳಿ-ಹೇಳಿ ಮನಸ್ಸಿಗೆ ಶಾಂತಿಯನ್ನುಂಟುಮಾಡಿಕೊಳ್ಳುವುದಕ್ಕಿಂತ ಮಾಡಿತೋರಿಸುವುದು ಮೇಲೆಂದು ನನ್ನ ಅಭಿಪ್ರಾಯ. ಅದನ್ನು ಹೀಗೆ ಮಾಡಿ ಕನ್ನಡಿಗರಲ್ಲಿ ಸಮರ್ಪಿಸಿದೇನೆ.

ಐತಿಹಾಸಿಕ ಕಾದಂಬರಿಗಳಲ್ಲಿ-ಇತಿಹಾಸವು ಪ್ರಭಾವಳಿಯಂತೆ. ಅದರಲ್ಲಿ ಮಂಡಿಸಿರುವ ಕಥೆಯನ್ನು ರಸ, ಭಾವಗಳಿಂದ ಹೇಗೆ ಬೇಕೆಂದರೆ ಹಾಗೆ ಅಲಂಕರಿಸುವ ಸ್ವಾತಂತ್ರ್ಯವು ಲೇಖಕನಿಗೆ ಉಂಟೆಂದು ನನ್ನ ಅಭಿಪ್ರಾಯ! ಈ ಕಥೆಯಲ್ಲಿ ಪ್ರತಿಯೊಂದು ಘಟ್ಟ-ಘಟ್ಟಕ್ಕೂ ತಾರೀಖುಗಳನ್ನು ಕೊಡುವ ಆಸ್ಪದವಿತ್ತು. ಹಾಗೆ ಮಾಡಿದರೆ ಕಥೆಯ ಕೆಲವು ಘಟ್ಟಗಳು ಶಿಥಿಲವಾಗುತ್ತವೆಂದು ದಿನ ವರ್ಷಗಳ ನಿರ್ದೇಶ ಮಾಡಿಲ್ಲ. ಈ ಕಥೆಯು ಮೂರು ಭಾಗಗಳಾಗಿ ವಿಂಗಡಿಸಲ್ಪಟ್ಟಿದೆ. ಪ್ರಥಮ ಭಾಗವು "ಮಂತ್ರಿವಧೆ" ದ್ವಿತೀಯ ಭಾಗವು "ಮಂಗಳೂರಿನ ವಿಪ್ಲವ" ತೃತೀಯ ಭಾಗವು "ಕಡೆಯ ದಿನ" ಈ ಮೂರು ಭಾಗಗಳನ್ನು ಒಂದು ಪುಸ್ತಕದಲ್ಲಿಯೇ ಪ್ರಕಟಿಸಬೇಕೆಂಬ ಸಂಕಲ್ಪವಿತ್ತು. ಆದರೆ ಈ ಪುಸ್ತಕವು 750 ಪುಟಗಳ ದೊಡ್ಡ ಪುಸ್ತಕವಾಗುತ್ತಿತ್ತು. ಅಷ್ಟು ದೊಡ್ಡ ಕಥೆಯನ್ನು ಒಂದೇ ಪುಸ್ತಕದಲ್ಲಿ ಕೊಡುವುದಕ್ಕಿಂತ, ಮೂರು ಭಾಗಗಳಾಗಿ ಕೊಡುವುದು ಉಚಿತವೆಂದು ಬಗೆದು ಹೀಗೆ ಮಾಡಿದೇನೆ. "ಮಂತ್ರಿವಧೆ"ಯ ಘಟ್ಟವು ಟಿಪ್ಪೂಸುಲ್ತಾನರವರು ಅಧಿಕಾರಸೂತ್ರಗಳನ್ನು ವಹಿಸಿದ ತರುಣದಲ್ಲಾದ ಉದಂತ! ದ್ವಿತೀಯಭಾಗ "ಮಂಗಳೂರಿನ ವಿಪ್ಲವ" ತೃತೀಯ ಭಾಗವಾದ "ಕಡೆಯ ದಿನ" ವೆಂಬುದು ಶ್ರೀರಂಗಪಟ್ಟಣದ ಪತನಕ್ಕೆ ಅನ್ವಯಿಸಿದ ಕಥೆ. ಹೀಗೆ ಅನೇಕ ಕಥಾಘಟ್ಟಗಳನ್ನು ಒಂದಾಗಿ ಕೂಡಿಸಿ, ಈ

ಕಾದಂಬರಿಗೆ " ದೌಲತ್ " ಎಂದು ಹೆಸರು ಇಟ್ಟಿದೆ. ಈ ಹೆಸರನ್ನು ಸೂಚಿಸಿದವರು ನನ್ನ ಮಿತ್ರರೂ, " ತಾಯಿನಾಡು " ಪತ್ರಿಕೆಯ ಸಂಪಾದಕರೂ ಆದ, ಶ್ರೀಯುತ ಪ. ರಾ. ರಾಮಯ್ಯನವರು ಈ ಕಥೆಯನ್ನು ಬರೆಯುವುದಕ್ಕೂ ಅವರದೆಷ್ಟೋ ಪ್ರೇರೇಪಣೆಯಿದೆ. ಅದಕ್ಕಾಗಿ ಅವರಿಗೆ ನನ್ನ ಹೃತ್ಪೂರ್ವಕವಾದ ಧನ್ಯವಾದಗಳು. ನನಗೆ ಬಹು ಮಂದಿ ಮಿತ್ರರು. ನನಗಿರುವ ಐಶ್ವರ್ಯ-ಬಲ ಎಲ್ಲವೂ ಆ ಮೈತ್ರಿಯೇ ಶ್ರೀಮಾನ್ ದೇವುಡೂರವರೂ, ಶ್ರೀಯುತ ಅ. ನ. ಕೃಷ್ಣರಾಯರು ಇವರಿಬ್ಬರು ಮಿತ್ರರು ಈ ಪುಸ್ತಕವನ್ನು ಓದಿಸಿ, ಓದಿ ಬೇಗ ಮುದ್ರಿಸಬೇಕೆಂದು ನನ್ನನ್ನು ಒತ್ತಾಯಪಡಿಸಿದರು. ಆ ಇಬ್ಬರು ಸ್ನೇಹಿತರಿಗೂ ನನ್ನ ವಿಶ್ವಾಸದ ವಂದನೆಗಳು. ಶ್ರಿಂಗೇರಿಯಲ್ಲಿರುವ ಕೂತುಕೋಡು ಸಾಹುಕಾರ್ ಶ್ರೀಯುತ ಕೆ. ಎಲ್. ನಾಗಭೂಷಣ ಭಟ್ಟರವರು ಮುದ್ರಣ ವೆಚ್ಚವನ್ನು ಕೊಟ್ಟು ಪ್ರೋತ್ಸಾಹಿಸಿದ ಗೆಳೆಯರು. ಅವರಿಗೆ ಸಂಪ್ರದಾಯ ಪ್ರಕಾರ ಧನ್ಯವಾದಗಳನ್ನು ಅರ್ಪಿಸುವುದು ನನ್ನ ಭಾಗದ ದೌರ್ಜನ್ಯವಾದೀತು. ಈ ಕಾದಂಬರಿಯನ್ನು ಓದಿ ಮನಸೊಚ್ಚಿದ ವಾಚಕರು ಅವರಿಗೊಂದು " ಶಾಭಾಸ್ " ಕೊಟ್ಟರೆ ನನಗೆ ಎಷ್ಟೋ ಸಂತೋಷ!

ಈ ಪುಸ್ತಕವನ್ನು ಮುದ್ರಿಸಿದ " ಶ್ರೀ ದೇವಿ ಪವರ್ ಪ್ರೆಸ್" ನ ಮಾಲೀಕರಾದ ಮ|| ರಾ|| ರಾಮಚಂದ್ರರಾಯರವರನ್ನು ಎಷ್ಟು ಶ್ಲಾಘಿಸಿದರೂ ಸಾಲದು. ನಾನು ಬರದದ್ದು ಬರದಂತೆ ಮುದ್ರಣಕ್ಕೆ ಕೊಟ್ಟೆ. ಅದನ್ನು ತಿದ್ದಿ ಸರಿಪಡಿಸಿ ಪ್ರೂಫುಗಳನ್ನು ನೋಡಿ ತಿದ್ದಿ ಮುದ್ರಣಕಾರ್ಯವನ್ನೆಲ್ಲಾ ಸಾಂಗೋಪಾಂಗವಾಗಿ ಅವರು ಪೂರೈಸಿದರು. ಇದಕ್ಕಾಗಿ ನಾನು ಮ|| ರಾ|| ರಾಮಚಂದ್ರರಾಯರವರಿಗೆ ಅನಂತ ಧನ್ಯವಾದಗಳನ್ನು ಒಪ್ಪಿಸುತ್ತೇನೆ.

ಅಲ್ಲಲ್ಲಿ ಶಬ್ದ ಸ್ಖಾಲಿತ್ಯಗಳೂ, ದೋಷಗಳೂ ಇವೆ. ಅದಕ್ಕಾಗಿ ಪಂಡಿತರಲ್ಲಿ ಕ್ಷಮೆಬೇಡುವೆನು.

ಶೀಘ್ರದಲ್ಲಿಯೇ ದೌಲತ್‌ನ ಮೂರನೆಯ ಭಾಗವಾದ (ಕಡೆಯ ದಿನ) ವನ್ನು ಕನ್ನಡಿಗರಿಗೆ ಅರ್ಪಿಸುವೆನು.

ಬೆಂಗಳೂರು |
೧-೮-೧೯೩೭. |

ಇತಿ
ಸೀತಾರಾಮಶಾಸ್ತ್ರಿ.

# " ಫಕೀರನೋ ಛದ್ಮವೇಷಧಾರಿಯೋ ? "

" ಧರ್ಮವೇನಾದರೂ ಸಿಕ್ಕಿತೋ, ಇಲ್ಲವೋ ನಿನಗೆ? ಏಕೆ ನಿಂತಿದ್ದಿ ? "

" ನನಗೆ ದಾನಧರ್ಮವೇನೂ ಬೇಕಾಗಿಲ್ಲ ! "

" ಫಕೀರನೇ ಹಾಗಾದರೆ ಇಲ್ಲಿಗೇಕೆ ಬಂದೆ ? "

" ನಿಮ್ಮ ರಾಣಿಯು ಮಾಡುವ ದಾನವನ್ನು ಕೇಳಿದ್ದೆ. ನೋಡಿ ಹೋಗೋಣವೆಂದು ಬಂದೆ."

" ದಾನವನ್ನು ನೋಡಿದರೆ ನಿನಗೇನು ಲಾಭ ? "

" ಮಗಳೇ ! ದರಿಯಾಬಾಗಿನ ಕೀರ್ತಿಯು ಬಲುದೂರ ಹಬ್ಬಿದೆ. ಇಂದು ಅದನ್ನು ಕಣ್ಣಾರ ಕಂಡೆ. ಅರಮನೆಯಲ್ಲಿ ನಡೆಯುವ ಇಂಥಾ ದಾನಧರ್ಮಗಳಿಂದ ರಾಜ್ಯದ ಪಾಪವು ಶಮನವಾಗುತ್ತದೆ."

" ನೀವು ಸಾಮಾನ್ಯರಂತೆ ಕಾಣುವುದಿಲ್ಲ ! ನಿಮ್ಮ ಊರಾವುದು ?

" ನನಗೆ ಊರುಕೇರಿಗಳಲ್ಲಿ ಬಂತು ? ಎಲ್ಲಿ ಹೋದರೂ ನವಾಬರ ಲಂಗರಖಾನೆಗಳಲ್ಲಿ ಊಟವು ದೊರೆಯುತ್ತದೆ. ಮಶೀದಿಯ ಜಗತಿಯ ಮೇಲೆ ವಾಸ. ಮತ್ತೇನು ಬೇಕು ?

" ಫಕೀರರೇ, ತಾವು ಇಂದು ಇಲ್ಲಿಗೆ ಬಂದು ನಮ್ಮ ರಾಣಿಯ ದಾನವನ್ನು ಸ್ವೀಕರಿಸದೇ ಹೋದರೆ, ನಮ್ಮ ದಾನವೆಲ್ಲವೂ ವ್ಯರ್ಥವಾಗುತ್ತದೆ. ತಾವು ಮಹಾಪುರುಷರಂತೆ ಕಾಣುತ್ತೀರಿ. ಈ ಮೊಹರವನ್ನು ಸ್ವೀಕರಿಸಿರಿ."

ಎಂದು ಹೇಳಿ ರಾಧೆಯು ಚಿನ್ನದ ಮೊಹರವನ್ನು ವೃದ್ಧ ಫಕೀರನ ಕೈಗೆ ಕೊಡುವುದಕ್ಕೆ ಹೋದಳು. ಫಕೀರನು ನಗುತ್ತಾ " ಹಾಗಾದರೆ ಕೊಡಮ್ಮ ! ಯಾರಾದರೂ ಗರೀಬರಿಗೆ ಕೊಟ್ಟು ಖುದಾನನ್ನು ಸಂತೋಷ

ಪಡಿಸುತ್ತೇನೆ. ಎನ್ನುತ್ತಾ ದಿಟ್ಟತನದಿಂದ ಕೈ ನೀಡಿದನು. ಅಷ್ಟರಲ್ಲಿ ಹಿಂದಿನಿಂದ ಯಾರೋ ನಗುತ್ತ ಮಿಂಚಿನಂತೆ ಹಾರಿಬಂದು ಮೃದು ಮಧುರ ಹಸ್ತಗಳಿಂದ ಫಕೀರನ ಕೈಯನ್ನು ಎತ್ತಿ ಹಿಡಿದು ಮರ್ಯಾದೆಯಿಂದ ಮುತ್ತಿಟ್ಟರು. ರಾಧೆಯು ಆಶ್ಚರ್ಯಚಕಿತಳಾಗಿ ಎರಡು ಹೆಜ್ಜೆ ಸರಿದು ನಿಂತಳು.

ಫಕೀರನು ಮುಗುಳು ನಗೆಯನ್ನು ನಗುತ್ತಾ.

" ರಾಣಿಯವರು ಸುಖದಿಂದ ಇರುವಿರಾ ? "

" ತಮ್ಮ ಪ್ರಿಯ ದೌಲತ್ತಳನ್ನು–ರಾಣಿ ರಾಣಿಯವರು–ಎಂದು ಕರೆದು ಹಾಸ್ಯಮಾಡುವಿರಾ ? "

" ದೌಲತ್ " ! ನೀನು ಮಾಡುವ, ದಾನ ಧರ್ಮ, ನಿನ್ನ ಔದಾರ್ಯ ಇವುಗಳು ನಿನ್ನನ್ನು ರಾಣಿಯೆಂದು ಕರೆಯುವಂತೆ ಮಾಡಿವೆ. ಈ ಪುಣ್ಯವು ಮತ್ತಾರಿಗಿದೆ ? ರಾಣಿಯೇ ಏಕೆ ರಾಣಿಗಿಂತಲೂ ದೊಡ್ಡ ಮಹಾರಾಣಿಯಾಗುವೆ ! "

" ತಮ್ಮ ಆಶೀರ್ವಾದವು ಬೆಳೆಯುತ್ತಲೇ ಇದೆ. ಎಷ್ಟೋ ಕಾಲದ ಮೇಲೆ ತಮಗೆ ಈ ಗರೀಬಳ ಮೇಲೆ ದಯೆ ಬಂತು. ಸವಾರಿಯು ಎಲ್ಲಿಂದ ಬರುತ್ತಿದೆ ? ಕತ್ತಲಾಯಿತು. ಮಹಲಿನೊಳಗೆ ದಯಮಾಡಿ ಸೋಣವಾಗಲಿ."

ಎಂದು ಹೇಳಿ ದೌಲತ್ತಳು ಫಕೀರನ ಕೈಹಿಡಿದು ಮಹಲಿನೊಳಗೆ ಕರೆದುಕೊಂಡು ಹೋದಳು.

ಹೈದರಾಲಿಯ ಕಾಲದಲ್ಲಿ ನಗರಕ್ಕಿದ್ದ ವೈಭವವು ಮತ್ತಾವ ಪಟ್ಟಣಕ್ಕೂ ಇರಲಿಲ್ಲ! ನಗರದ ಉಪತ್ಯಕೆಯಲ್ಲಿ ದರಿಯಾಬಾಗೆಂಬುದು ಒಂದು ದೊಡ್ಡ ಸುಂದರೋದ್ಯಾನ. ಅದರಲ್ಲಿ ಸೋನಾಮಹಲ್ ಚಿಕ್ಕ ಅರಮನೆ. ಈ ಮಹಲು. ಚಿಕ್ಕದಾದರೂ ಬಲು ಅಚ್ಚುಗಟ್ಟಾಗಿದ್ದಿತು. ಹಸರು ಛಾಯೆಯ ನುಣುಪಾದ ಕಲ್ಲಿನ ಎರಡಂತಸ್ತಿನ ಕಟ್ಟಡ. ಮೇಲುಗಡೆ ಅಮೃತ ಶಿಲೆಯಿಂದ ನಿರ್ಮಿತವಾದ ಒಂದಂಕಣದ ಮಂಟಪ ! ಮಂಟಪದ ಮೇಲೆ ಚಿನ್ನದ ಶಿಖರ !!

ಈ ಸೋನಾ ಮಹಲನ್ನು ಬಹಳ ವರ್ಣಿಸುವುದೇನು? ರಸಿಕಾಗ್ರೇಸರನಾದ ಇಯಜ್‌ಖಾನನ ಕಲ್ಪನಾ ಚಿತ್ರದ ಪ್ರತ್ಯಕ್ಷ ಮೂರ್ತಿಯೇ ಈ ಸೋನಾ ಮಹಲು. ಆಗ್ರಾದ ಟಾಜ್‌ಮಹಲನ್ನು ಮಾದರಿಯಾಗಿಟ್ಟುಕೊಂಡು ಸುಪ್ರಸಿದ್ಧನಾದ ಶಿಲ್ಪಿ ಸೋಮಯ್ಯನು ಕಟ್ಟಿದ ಕಟ್ಟಡವಿದು. ಪ್ರಕೃತಿ ದೇವಿಯ ಪೂರ್ಣಾನುಗ್ರಹವು ಈ ಸೋನಾಮಹಲಿಗಿದೆ. ಪಶ್ಚಿಮ ಘಟ್ಟಗಳ ಪ್ರಕೃತಿ ಸೌಂದರ್ಯವು ಅನ್ಯಾದೃಶ್ಯವಾದುದು! ಈ ವನಲಕ್ಷ್ಮಿಯ ವಯ್ಯಾರದ ಮಡಲಿನಲ್ಲಿ ಕಿಲ ಕಿಲ ನಗುತ್ತಿರುವ ಮುದ್ದು ಮಗುವಿನಂತಿದೆ ಸೋನಾಮಹಲ್.

ಮಹಲಿನ ಮೇಲಂತಸ್ತಿನ ಅಮೃತ ಶಿಲೆಯ ವಿಮಾನದಲ್ಲಿ ವೃದ್ಧ ಫಕೀರನೂ ಅವನ ಸಮೀಪದಲ್ಲಿ ದೌಲತ್ತಳೂ ಅವರ ಎದುರಿನಲ್ಲಿ ರಾಧಾ ಮತ್ತು ಕೃಷ್ಣವೇಣಿಯರೂ ಕುಳಿತಿದ್ದಾರೆ. ಬಹಳ ಹೊತ್ತು ಮಾತುಕಥೆಗಳು ನಡೆದವು. ಈ ಗುಪ್ತ ಮಂತ್ರಾಲೋಚನೆಯ ಅಂತ್ಯದಲ್ಲಿ ಫಕೀರನು ದೌಲತ್! ಹಾಗಾದರೆ ಏನು ಹೇಳುವೆ.

"ಹೇಳುವುದೇನಿದೆ? ದೊಡ್ಡ ನವಾಬರ ಆಜ್ಞೆ. ಅದೂ ಅವರು ರುಗ್ಣ ಶಯ್ಯೆಯಲ್ಲಿದ್ದಾರೆ! ಅವರು ಬದುಕಲಾರರೆಂದು ಹೇಳುತ್ತಿರೀ? ನವಾಬರ ಕಡೆಯ ದರ್ಶನವನ್ನು ಮಾಡಬೇಕೆಂದು ನನಗೂ ಆಶೆಯು ಬಹಳವಾಗಿದೆ."

"ದೌಲತ್! ಅವರು ಬದುಕಲಾರರೆಂದು ನನಗೆ ತೋರುವುದಿಲ್ಲ. ಇನ್ನೂ ಅವರು ಹತ್ತಾರು ವರುಷ ಜೀವಿಸಬಹುದೆಂದೇ ನನಗೆ ನಂಬುಗೆ. ಜೋಯಿಸರೂ ಹಾಗೆಯೇ ಹೇಳುತ್ತಾರೆ. ಹಕೀಮರು ಪ್ರಾಣಕ್ಕೆ ಪ್ರಾಣ ಕೊಡುವುದಾಗಿ ಬಹಳ ಘಟ್ಟಿ ಭರವಸೆ ಕೊಡುತ್ತಾರೆ. ಆದರೆ ಸ್ವಯಂ ನವಾಬರು ಸಂದೇಹವುಳ್ಳವರಾಗಿದ್ದಾರೆ. ಸಂದೇಹವೇನು? ನಿಶ್ಚಯವನ್ನೇ ಮಾಡಿಕೊಂಡಿದಾರೆ!"

"ಅದು ಭಗವಂತನ ಕೈಯ್ಯಲ್ಲಿದೆ. ನವಾಬರ ಆಜ್ಞೆಯನ್ನು ಪಾಲಿಸುವುದು ನಮ್ಮ ಕೈಯ್ಯಲ್ಲಿದೆ. ಆದರೆ ರಾಜಕೀಯ ದೃಷ್ಟಿಯಿಂದ ಚಿಕ್ಕ ಸುಲ್ತಾನರವರೂ, ನಗರದ ನವಾಬರಾದ ಇಯಜ್‌ಖಾನ್‌ರವರೂ ಈಗ

ದೊಡ್ಡ ನವಾಬರ ಸಮೀಪದಲ್ಲಿರುವುದು ಬಲು ಅಗತ್ಯವೆಂದು ಕಾಣುತ್ತದೆ. ಹಾಗೆ ಅವರಿಬ್ಬರೂ ಅಲ್ಲಿ ಸೇರುವುದಾದರೆ, ನನಗೆ ದೊಡ್ಡ ನವಾಬರ ದರ್ಶನವೇ ಅಸಂಭವ! ಚಿಕ್ಕ ಸುಲ್ತಾನರೂ, ಇಯಜ್‌ಖಾನರೂ ಅಲ್ಲಿ ಸೇರಿದರೆ ಅಲ್ಲಿ ನಾನೂ ಬಂದರೆ ಅದೇ ಕುರುಕ್ಷೇತ್ರವಾಗಿ ಬಿಡುತ್ತದೆ.

ಮಗಳೇ! ನಿನ್ನ ಸಂಭಾವನೆಗಳೆಲ್ಲಾ ಸರಿಯಾಗಿಯೇ ಇವೆ. ಆದರೆ ದೊಡ್ಡ ನವಾಬರು ಮಹಾ ಸತ್ವಶಾಲಿಗಳು. ಆ ಮಹಾಸತ್ವದ ಕೈಯಲ್ಲಿ ಇಯಜ್ ಖಾನರಾಗಲೀ, ಚಿಕ್ಕ ಸುಲ್ತಾನರಾಗಲೀ ಗುಬ್ಬಿ ಪಾರಿವಾಳಗಳಂತೆ! ಬರೀ ಸತ್ವವು ಮಾತ್ರವೇ ಅಲ್ಲ; ಅವರ ಬುದ್ಧಿಶಕ್ತಿಯೂ ಅಂತಹದು. ನವಾಬರವರು ಅವರಿಬ್ಬರನ್ನೂ ದೂರದಲ್ಲಿಯೇ ಇಟ್ಟಿದ್ದಾರೆ. ಖಾಯಿಲೆಯು ದಿನದಿನಕ್ಕೆ ಗುಣವಾಗುತ್ತಿದೆಯೆಂದೇ ಹಕೀಮರಿಂದಲೂ, ದಿವಾನರಿಂದಲೂ ಅವರಿಬ್ಬರಿಗೂ ಬರೆಸುತ್ತಲೇ ಇದ್ದಾರೆ. ಅವರು ಇಷ್ಟು ಸಂಧಾನವನ್ನು ಮೊದಲೇ ಮಾಡಿಟ್ಟು ನಿನ್ನನ್ನು ಕರೆತರಬೇಕೆಂದು ಗುಟ್ಟಾಗಿ ನನ್ನನ್ನು ಕಳುಹಿಸಿದರು.''

"ಹಾಗಾದರೆ ಇಯಜ್‌ಖಾನರಿಗೆ ನಾನು ಎಲ್ಲಿಗೆ ಹೋಗಿದ್ದೇನೆಂದು ತಿಳಿಯಬಾರದು?''

"ಹೌದು! ಅದೇ ನವಾಬರ ಅಪ್ಪಣೆ. ಇಯಜ್‌ಖಾನನು ನವಾಬರ ದತ್ತು ಮಗನಾದರೂ, ನವಾಬರಲ್ಲಿ ಅವನ ಭಕ್ತಿಯೂ ಅಪಾರವಾದುದು. ಅವರಿಗೂ ಅವನಲ್ಲಿ ಅಂತಹ ಪ್ರೇಮ! ನವಾಬರಿಗೆ ಟಿಪ್ಪುಸುಲ್ತಾನರವರಿಗಿಂತಲೂ ಇಯಜ್‌ಖಾನನ ಮೇಲೆಯೇ ಹೆಚ್ಚು ಪ್ರೀತಿ ವಿಶ್ವಾಸಗಳು! ಈಗಿನ ಸಮಾಚಾರವನ್ನು ಇಯಜ್ ಖಾನನು ತಿಳಿದರೆ ಅವನು ನವಾಬರ ದರ್ಶನಕ್ಕೆ ಹಕ್ಕಿಯು ಹಾಗೆ ಹಾರಿಬಿಡುವನು.''

"ನಾನು ಹೊರಟು ಹೋದ ಗುರುತು ಇಯಜ್ ಖಾನನಿಗೆ ಗೊತ್ತಾಗದಂತೆ ಮಾಡುವುದು ಕಷ್ಟವಲ್ಲ. ಈ ನನ್ನ ಸಖಿಯರು ಅದನ್ನು ರಕ್ಷಣ ಮಾಡಬಲ್ಲರು. ಆದರೆ ತಾವು ಬಂದುಹೋದ ಸಮಾಚಾರವು ಗೊತ್ತಾದರೆ ಈ ಸಂಧಾನವೆಲ್ಲಾ ಕೆಟ್ಟುಹೋಗುತ್ತದೆ.''

"ಇಲ್ಲ! ಈ ಪ್ರಾಂತದಲ್ಲಿ ನನ್ನನ್ನು ಕಂಡವರು ಯಾರೂ ಇಲ್ಲ. ಇಲ್ಲಿ ನನ್ನ ಪರಿಚಯವಿರುವುದು ಇಯಜ್‌ಖಾನನೊಬ್ಬನಿಗೆ. ನೀನೊಬ್ಬಳು ನನ್ನನ್ನು ಬಲ್ಲೆ. ಖಾನನು ನನ್ನನ್ನು ನೋಡುವ ಸಂಭವವೇ ಇಲ್ಲ ನಾನು ಈ ರಾತ್ರಿಯೇ ಹೊರಟುಹೋಗುತ್ತೇನೆ. ಮಾರ್ಗದಲ್ಲಿ ನಿನ್ನನ್ನು ಸೇರಿ ಕೊಳ್ಳುತ್ತೇನೆ."

"ಬಡಾ ಫಕೀರರೇ! ಈ ರಾಧೆಯೊಬ್ಬಳು ನನ್ನೊಡನೆ ಬರುತ್ತಾಳೆ."

"ನಿನ್ನೊಬ್ಬಳನ್ನೇ ವೇಷಾಂತರದಲ್ಲಿ ಕರತರುವಂತೆ ನವಾಬರ ಹುಕುಂ."

"ನಾನೊಬ್ಬಳೆ ಬರಲು ಭಯವಾಗುವುದಿಲ್ಲವೇ?"

ಸಣ್ಣ ನಗುವನ್ನು ನಕ್ಕು "ಭಯ ದೌಲತ್! ನೀನು ಭಯಪಡು ವುದೇ? ಸಿಂಹಿಣಿಯು ಅರಣ್ಯದಲ್ಲಿ ಭಯಪಡುವುದೇ? ಇದೊಂದು ಆಶ್ಚರ್ಯದ ಕಲ್ಪನೆ! ನಿನಗೆ ನಿನ್ನ ಸಖಿಯನ್ನು ಕರೆತರುವ ಉದ್ದೇಶ್ಯವಿರಬಹುದು. ಆಗಲಿ ನಿನ್ನ ಇಷ್ಟಕ್ಕೆ ಆಕ್ಷೇಪಣೆ ಇಲ್ಲ. ಆದರೆ ನಿನ್ನೊಬ್ಬಳನ್ನೇ ಕರತರ ಬೇಕೆಂದು ನವಾಬರ ಇಷ್ಟ. ಈ ನಿನ್ನ ಸಖಿಯಾರು?

ಇವಳೊಬ್ಬ ನಿರ್ಭಾಗ್ಯ ಹೆಣ್ಣು! ಇಲ್ಲಿಯೇ ಒಬ್ಬ ಪಾಳೇಗಾರರ ಮಗಳು. ರಾಮಪುರವು ಇವರ ಪಾಳಯಪಟ್ಟು! ಇವಳ ತಂದೆಯವರು ಈ ಪ್ರಾಂತದ ಪಾಳೇಗಾರರಲ್ಲೆಲ್ಲಾ ಮುಕುಟಪ್ರಾಯರು. ಅವರು ಐದನೂರು ಕಾಳಗದಲ್ಲಿ, ಶ್ರೀರಂಗಪಟ್ಟಣದ ಸೈನ್ಯವನ್ನು ಕಾಡುಕಿಚ್ಚಿನಂತೆ ಸುಟ್ಟರು. ಕೊನೆಯಲ್ಲಿ ಅಸಿಧಾರೆಯಲ್ಲಿ, ಯುದ್ಧಭೂಮಿಯಲ್ಲಿ ಪ್ರಾಣಕೊಟ್ಟು ವೀರಸ್ವರ್ಗವನ್ನೇರಿ ದರು."

ಹಾಗಾದರೆ ಈ ರಾಧಾರಾಣಿಯೂ ಬರಲಿ. ಇವಳ ದರ್ಶನದಿಂದ ನವಾಬರು ಸಂತೋಷಪಡಬಹುದು.

ರಾಧೆಯು ತಲೆಬಾಗಿದಳು. ಫಕೀರನು "ಖುದಾನು ನಿನಗೆ ಅನಂತ ಕಲ್ಯಾಣವನ್ನುಂಟುಮಾಡಲಿ ಎಂದು ಹರಸಿದನು.

ರಾಧೆಯೂ ಕೃಷ್ಣವೇಣಿಯೂ ಎದ್ದು ಕೆಳಗಿಳಿದರು. ದೌಲತ್ತಳು ಫಕೀ ರನನ್ನು ಕೆಳಗೆ ಕರತಂದಳು. ಅಲ್ಲಿ ಫಕೀರನಿಗೆ ಫಲಹಾರವು ಸಿದ್ಧವಾಗಿತ್ತು.

ಮೂವರೂ ಉಪಚಾರ ಮಾಡಿ ವೃದ್ಧ ಫಕೀರನಿಗೆ ಉಪಹಾರ ಮಾಡಿಸಿದರು. ಫಲಹಾರಾನಂತರ ಸುಸಜ್ಜಿತವಾದ ಹಜಾರದಲ್ಲಿ ಫಕೀರನು ತಿವಾಶಿಯ ಮೇಲೆ ಸುಖಾಸನದಲ್ಲಿ ಬಂದು ಕುಳಿತನು. ರಾಧೆಯು ಎಡಗಡೆಯ ಕೋಣೆಗೆ ಹೋಗಿ ಹುಕ್ಕಾವನ್ನು ತಂದು ಅದರಲ್ಲಿ ಕಿಡಿಕೆಂಡವನ್ನು ಸಣ್ಣ ಉಸುರಿನಿಂದ ಊದಿ ಕೆರಳಿಸಿ ಸುಗಂಧಮಿಶ್ರಿತವಾದ ತಂಬಾಕನ್ನು ತಿಕ್ಕಿ ಹದಮಾಡಿ ಹಾಕಿ ಫಕೀರನ ಮುಂದಿಟ್ಟು "ಶ್ರಮವಾಗಿದೆ ಸ್ವಲ್ಪ ಸ್ವೀಕರಿಸಿರಿ" ಎಂದು ಪ್ರೀತ್ಯಾದರಗಳಿಂದ ನುಡಿದಳು. ವೃದ್ಧ ಫಕೀರನಿಗೆ ಬಲು ಆನಂದವಾಯಿತು. ತನ್ನ ಬಿಳುಪಾದ ಗಡ್ಡವನ್ನು ಸ್ವಲ್ಪ ಸವರಿಕೊಳುತ್ತಾ ಆ ಚಿನ್ನದ ನಳಿಗೆಯನ್ನು ಕೈಗೆ ತೆಗೆದುಕೊಂಡು ಕಾಲುಮೇಲೆ ಕಾಲುಹಾಕಿ ಪದ್ಮಾಸನದಲ್ಲಿ ನೀಳವಾಗಿ ಕುಳಿತುಕೊಂಡು ಶೀಧುಪಾನಾಸಕ್ತನಾದನು.

ಆಗ ಲೋಕಾಭಿರಾಮನಾಗಿ ಮಾತನಾಡುತ್ತಾ ದೌಲತ್ತಳು ತನ್ನ ಮತ್ತೊಬ್ಬ ಸಖಿಯ ಪೂರ್ವೋತ್ತರಗಳನ್ನು ಪ್ರಸ್ತಾಪಿಸಿ ಬಡಾಫಕೀರರಿಗೆ ಇವಳು ಮಂತ್ರಿ ಅಪ್ಪಣ್ಣನ ಕುಮಾರಿಯೆಂದೂ, ಬಾಲವಿಧವೆಯೆಂದೂ ತಿಳಿಸಿದಳು. ಅವಳ ಕಥೆಯನ್ನು ಕೇಳಿ ಫಕೀರನ ಕಣ್ಣುಗಳಲ್ಲಿ ಒಂದೆರಡು ಹನಿಗಳು ಉದುರಿದವು. ಮಾತು ಅಲ್ಲಿಗೆ ಮುಗಿಯಿತು.

ಫಕೀರನು ಎದ್ದು ಅವರಿಂದ ಬೀಳ್ಕೊಂಡು ಕಂಬಳಿಯನ್ನು ಎತ್ತಿ ಹೆಗಲ ಮೇಲೆ ಹಾಕಿಕೊಂಡು ಹೊರಡಲು ರಾಧೆಯು—

ಈ ಮಧ್ಯರಾತ್ರಿಯಲ್ಲಿ ತಾವು ಎಲ್ಲಿಗೆ ಹೋಗುವಿರಿ? ಇಲ್ಲಿಯೇ ಇದ್ದು ಬೆಳಗಿನಝಾವ ನಸುಕಿನಲ್ಲಿ ಎದ್ದು ಹೋಗಕೂಡದೇ? ಎಂದು ಕೇಳಿದಳು.

"ಮಗಳೇ! ನಾನು ಫಕೀರ! ನಮ್ಮಂಥವರಿಗಾಗಿಯೇ ನವಾಬರ ಲಂಗರ ಖಾನೆಗಳೂ, ಮಶೀದಿಯ ಬಿಡದಿಗಳೂ ಇವೆ."

ರಾಧೆಯು ಮರುಮಾತನಾಡಲಿಲ್ಲ. ಎಲ್ಲರೂ ಫಕೀರನಿಗೆ ವಂದಿಸಿದರು. ಅವನು ಅವರನ್ನು ಹರಸಿ ಹೊರಟನು. ದೌಲತ್ತಳು ಹೊರಗಿನ ಅಂಗಳದವರೆಗೆ ಹೋಗಿ ಫಕೀರನನ್ನು ಕಳುಹಿಸಿಬಂದಳು.

ಅವಳು ಬರುವ ಹೊತ್ತಿಗೆ ರಾಧೆಯೂ ಕೃಷ್ಣವೇಣಿಯೂ ಫಕೀರನ ವಿಚಾರವಾಗಿ ಮಾತನಾಡಿಕೊಳ್ಳುತ್ತಿದ್ದರು. ಫಕೀರನು ನಿಜವಾದ ಫಕೀರನೋ

ಛದ್ಮವೇಷಧಾರಿಯಾದ ಗೂಡಾಚಾರನೋ? ಎಂದು ಪ್ರಸ್ತಾಪಿಸುತ್ತಿದ್ದರು. ದೌಲತ್ತಳೂ ಸೇರಿಕೊಂಡಳು. ಫಕೀರನು ವೇಷಧಾರಿಯಲ್ಲವೆಂದೂ, ಆತನು ವಿರಕ್ತ ಸತ್ಪುರುಷನೆಂದೂ, ದೊಡ್ಡ ನವಾಬರ ಬಾಲ್ಯಸ್ನೇಹಿತನೂ, ಸಂಪತ್ತಿನಲ್ಲಿಯೂ, ವಿಪತ್ತಿನಲ್ಲಿಯೂ ನವಾಬರ ನೆರಳಿನಂತೆ ಇರತಕ್ಕವನೆಂದೂ, ಇವನನ್ನೇ ಎಲ್ಲರೂ ಬಡಾಫಕೀರ ಬಡಾಫಕೀರ ಎಂದು ಗೌರವಿಸುತ್ತಾರೆಂದೂ, ಅವನಿಗೆ ಎಲ್ಲಾ ರಾಜವೈಭವಗಳೂ ಇದ್ದರೂ ಅವನು ನಿಜವಾದ ಫಕೀರನ ಜೀವನವನ್ನೇ ಮಾಡುತ್ತಾನೆಂದೂ ಹೇಳಿದಳು. ತೇಜಃಪುಂಜದಂತಿದ್ದ ಆ ವೃದ್ಧಫಕೀರನ ದರ್ಶನದಿಂದಲೂ, ಅವನ ಮಾತುಕಥೆಗಳಿಂದಲೂ ಆ ಸಖಿಯರಿಗೆ ಹುಟ್ಟಿದ್ದ ಪೂಜ್ಯಬುದ್ಧಿಯು ದೌಲತ್ತಳ ಮಾತಿನಿಂದ ಅವರ ಮನಸ್ಸಿನಲ್ಲಿ ಸ್ಥಿರವಾಯಿತು. ರಾತ್ರಿ ಬಹಳ ಹೊತ್ತು ಅವರು ಮೂವರೂ ಮಾತನಾಡುತ್ತಿದ್ದರು. ಮಾರನೆಯ ದಿನ ನಸುಕಿನಲ್ಲಿಯೇ ರಾಧೆಯೂ ದೌಲತ್ತಳೂ ದೊಡ್ಡ ನವಾಬರ ದರ್ಶನಕ್ಕೆ ಪ್ರಯಾಣಮಾಡುವುದಾಗಿಯೂ, ಕೃಷ್ಣವೇಣಿಯು ಇಲ್ಲೇ ಇರುವುದೆಂದೂ, ಇಯಜ್‌ಖಾನನು ವಿಚಾರಿಸಿದರೆ ಬಾಬಾಬುಡನಗಿರಿಗೆ ಸಾಧುಗಳ ದರ್ಶನಕ್ಕೆ ಹೋಗಿದ್ದಾರೆಂದು ಹೇಳಿ ಅದೇ ನಂಬಿಕೆಯನ್ನುಂಟು ಮಾಡುತ್ತಿರಬೇಕೆಂದೂ, ಹದಿನೈದು ದಿನಗಳಲ್ಲಿ ಹಿಂತಿರುಗಿ ಬಂದು ಸ್ಥಳಕ್ಕೆ ಸೇರುವುದಾಗಿಯೂ ನಿಶ್ಚಯವಾಯಿತು. ಹೀಗೆ ಮಧ್ಯರಾತ್ರಿಯ ಮೇಲೆ ಎಲ್ಲರೂ ತಮ್ಮ ತಮ್ಮ ಕೊಠಡಿಗಳಲ್ಲಿ ಹೋಗಿ ಮಲಗಿ ನಿದ್ರಿಸಿದರು.

## ನವಾಬರ ಸಮ್ಮುಖದಲ್ಲಿ

ದಕ್ಷಿಣಾಪಥದಲ್ಲಿ ಅರಣಿಯ ಸಮೀಪದಲ್ಲಿ ಮೈಸೂರಿನ ಬೀಡು ಬಿಟ್ಟಿದೆ. ವಿಶಾಲವಾದ ಆ ಮೈದಾನವೆಲ್ಲಾ ದೊಡ್ಡ ಸಣ್ಣ ಗುಡಾರಗಳಿಂದ ನಿಬಿಡವಾಗಿದೆ. ಹೊರಗಡೆ ತೋಪುಖಾನೆ; ಅದನ್ನು ಅನುಸರಿಸಿ ವರ್ತುಲಾಕಾರವಾಗಿ ಸೈನಿಕರ ಗುಡಾರಗಳು. ಆ ಸುತ್ತಳತೆಯು ಸುಮಾರು ಎರಡು ಮೈಲಿಯಷ್ಟಿರಬಹುದು. ಆ ಗುಡಾರಪಂಗ್ತಿಯ ಹಿಂದುಗಡೆ ಕುದುರೆಗಳೂ ಆನೆಗಳೂ ಸಾಲಾಗಿ ಕಟ್ಟಲ್ಪಟ್ಟಿವೆ. ಒಳಗಿನ ಸುತ್ತು ಸೈನ್ಯದ ಅಧಿಕಾರಿಗಳದು. ಆ ಗುಡಾರಗಳು ಸ್ವಲ್ಪ ಎತ್ತರ

ವಾಗಿಯೂ, ವಿಶಾಲವಾಗಿಯೂ ಇವೆ. ಆ ಎರಡನೆಯ ವರ್ತುಲದ ಗರ್ಭದಲ್ಲಿ ನಿರ್ಮಿಸಲ್ಪಟ್ಟಿರುವ ಕಛೇರಿ ಕೊತ್ವಾಲಿಗಳೂ ಸಭಾ ಮಂಟಪವೂ ಅದರ ಸಮ್ಮುಖದಲ್ಲಿ ನೌಪತ್ತುಖಾನೆಯೂ ಎದುರು ಬದರಾಗಿ ಆಢ್ಯತೆಯಿಂದ ಶೋಭಿಸುತ್ತಿವೆ. ಆ ನೌಪತ್‌ಖಾನೆಯು ಅಟ್ಟಣಿಕೆಗಳಿಂದ ಬಲು ಎತ್ತರವಾಗಿ ಕಟ್ಟಲ್ಪಟ್ಟು ಅದರ ಮೇಲೆ ಮೈಸೂರಿನ ಬಾವುಟವು ಮೆರೆಯುತ್ತಿದೆ. ಚಚ್ಚೌಕವಾದ ಸಭಾಮಂಟಪದ ಗುಡಾರದ ಮೇಲೆ ಚಿನ್ನದ ಶಿಖರಗಳು ಪ್ರಭಾತ ಕಿರಣಗಳ ಸಂಪರ್ಕದಿಂದ ಥಳಥಳಿಸುತ್ತಿವೆ. ಆ ಸಭಾಮಂಟಪದ ಹಿಂದುಗಡೆ ಪ್ರಶಸ್ತವಾದ ಮಾರ್ಗ. ಆ ಮಾರ್ಗವು ಮೂವತ್ತು ಗಜಗಳ ಉದ್ದವಿರಬಹುದು. ಆ ಮಾರ್ಗದ ಎರಡು ಕಡೆಗಳಲ್ಲಿಯೂ ಚಿಕ್ಕಚಿಕ್ಕ ಕಂಬಗಳನ್ನು ನೆಟ್ಟು ಅದರ ಮೇಲೆ ಪತಾಕೆಗಳನ್ನು ಎತ್ತಿ ಕಟ್ಟಿದ್ದಾರೆ. ಜಾಲರಿಯ ತೋರಣಗಳನ್ನು ಕಟ್ಟಿದ್ದಾರೆ. ಆ ಪ್ರಶಸ್ತವಾದ ಮಾರ್ಗದಲ್ಲಿ ಸೊಗಸಾದ ನಡೆಮುಡಿಯು ಹಾಸಲ್ಪಟ್ಟಿದೆ. ಆ ಮಾರ್ಗವು ಒಂದು ಭವ್ಯವಾದ ಬಿಳಿಯ ಪಟಮಂಟಪದ ಬಾಗಲಿಗೆ ಹೋಗಿ ಮುಟ್ಟುತ್ತದೆ. ಆ ಮಂಟಪದ ಬಾಗಿಲಿನಲ್ಲಿ ಬಿಳಿಯ ಅಂಗರೇಖುಗಳನ್ನು ತೊಟ್ಟು ತಲೆಯ ಮೇಲೆ ಕೆಂಪು ಉಷ್ಣೀಷಗಳನ್ನು ಇಟ್ಟುಕೊಂಡು ಜರಿಯ ಡವಾಲಿಗಳನ್ನೂ, ನಡುಕಟ್ಟನ್ನೂ ಕಟ್ಟಿಕೊಂಡು ಕೈಯಲ್ಲಿ ಚಿನ್ನದ ಸೋಟಾಗಳನ್ನು ಧರಿಸಿ ರಾಜಸೇವಕರು ಶಿಸ್ತಿನಿಂದ ಕಾಯುತ್ತಿದ್ದಾರೆ. ಬಿಚ್ಚುಗತ್ತಿ ಪಹರೆಯವರು ಬಲು ಜಾಗರೂಕತೆಯಿಂದ ಕಾವಲು ಕಾಯುತ್ತಿದ್ದಾರೆ. ಆ ಪಟಮಂಟಪದ ಬಾಗಿಲಿನಿಂದ ಒಳಗೆ ಹೋಗುತ್ತಲೇ ಪ್ರಶಸ್ತವಾದ ದಿರ್ವಾಖಾನೆ. ಅಲ್ಲಿ ಮೆತ್ತಗಿರುವ ರತ್ನಗಂಬಳಿಯು ಹಾಸಿದೆ. ಗೋಡೆಗಳಿಗೆಲ್ಲಾ ಕಿಂಕಾಪಿನ ಫರದೆಗಳು ಇಳಿಬಿಟ್ಟು ಕಟ್ಟಿದ್ದಾರೆ. ನಾಲ್ಕು ಮೂಲೆಗಳಲ್ಲಿಯೂ ಕಾಲುಮಣೆಗಳಮೇಲೆ ಪುಷ್ಪದಾನುಗಳು. ಆ ಪುಷ್ಪಸೌರಭವು ಮಂಟಪವನ್ನೆಲ್ಲಾ ಪರಿಮಳಿಸುತ್ತಿವೆ. ಆ ದಿರ್ವಾಖಾನೆಯಿಂದ ಒಳಗೆ ಹೋಗುವುದಕ್ಕೆ ಎರಡು ಬಾಗಿಲುಗಳಿವೆ. ಆ ಬಾಗಿಲುಗಳಿಗೆ ರೇಶಿಮೆಯ ಫರದೆಗಳು ಕಟ್ಟಿಬಿಟ್ಟಿವೆ. ಅದರೊಳಗೆ ಪ್ರವೇಶ ಮಾಡಿದರೆ ನವಾಬರು ಇರುವ ಅಂತಗೃಹ! ಅಲ್ಲಿ ಅನರ್ಘವಾದ ಪರ್ಷಿಯಾ ದೇಶದ ಮೆತ್ತನೆಯ ಕಂಬಳಿಯು ಹಾಸಿದೆ. ಗೋಡೆಗಳಿಗೆಲ್ಲಾ ಹಸುರು ಬಣ್ಣದ ಮಖಮಲ್ಲಿನ ಫರದೆಗಳು. ಅದರ ಮೇಲೆ ಥಕ್ಕಾಮಜರ್ಲಿ ಫರದೆ

ಮೇಲಿನ ವಾತಾಯನಗಳಿಂದ ಮಂದಮಾರುತವು ಒಳಗೆ ಬಂದು ಅವೆರಡು ಪರದೆಗಳನ್ನೂ ಕೂಡಿಸುತ್ತಾ ಬಿಡಿಸುತ್ತಾ ಆಟವಾಡುತ್ತಿದೆ. ಅದನ್ನು ನೋಡಿದರೆ ಮಾನಸಸರೋವರದ ಮೃದುವಾದ ಅಲೆಗಳಂತೆ ಭಾಸಮಾನವಾಗಿದೆ ಆ ವಾಸಗೃಹದಲ್ಲಿ ವಿಶಾಲವಾದ ಒಂದು ಬೆಳ್ಳಿಯ ಮಂಚ. ಮಂಚದ ಮೇಲೆ ಸೊಗಸಾದ ಹಂಸತೂಲಿಕಾತಲ್ಪ! ಅದರ ಮೇಲೆ ಟರ್ಕಿದೇಶದ ಮೆತ್ತನೆಯ ಬಟ್ಟೆಯನ್ನು ಹಾಸಿ ಇಳೀ ಬಿಟ್ಟಿದ್ದಾರೆ. ಕುತ್ತನಿಯ ದಿಂಬುಗಳನ್ನು ಇಟ್ಟಿದ್ದಾರೆ. ಆ ಮೆತ್ತನೆಯ ಹಾಸಿಗೆಯು ಮಂಜುಗಡ್ಡೆಗಳಿಂದ ನಿರ್ಮಿತವಾದ ವೇದಿಕೆಯಂತೆ ಆಹ್ಲಾದಕರವಾಗಿದೆ. ಮಂಚದ ಸಮೀಪದಲ್ಲಿ ದಿಂಬುಲೋಡುಗಳಿಂದ ಸುಸಜ್ಜಿತವಾದ ಭದ್ರಾಸನ. ಎದುರಿನಲ್ಲಿ ಚಿನ್ನದ ಕಟ್ಟು ಹಾಕಿದ ದೊಡ್ಡ ನಿಲುಗನ್ನಡಿ! ಅದರ ಮೇಲೆ ಕಿಂಕಾಪಿನ ಬಟ್ಟೆಯು ಇಳೀ ಬಿಟ್ಟಿದೆ. ಫರದೆಗಳಿಂದ ಅಲಂಕೃತವಾದ ಆ ಕನ್ನಡಿಯಲ್ಲಿ ನೋಡಿಕೊಂಡರೆ ಮುಖವು ಕಾಣಿಸುತ್ತದೆ. ಶುಭ್ರವಾದ ಹಗುರವಾದ ಮೇಘಗಳ ಮಧ್ಯದಲ್ಲಿ ಚಂದ್ರನು ಕಾಣುವಂತೆ ಕಾಣಿಸುತ್ತದೆ. ಮೂಲೆಗಳಲ್ಲಿ ಪುಷ್ಪದಾನುಗಳು ಇಡಲ್ಪಟ್ಟಿವೆ. ಕನ್ನಡಿಯ ಎಡಬಲ ಪಾರ್ಶ್ವಗಳಲ್ಲಿ ಅಮೃತಶಿಲೆಯ ಕಾಲುಮಣೆಗಳ ಮೇಲೆ ಎರಡು ಚಿನ್ನದ ನವಿಲುಗಳು ಅಲಂಕೃತವಾಗಿವೆ. ಆ ನವಿಲಿನ ಅರಳಿದ ಪುಕ್ಕದಲ್ಲಿ ಸುವಾಸನೆಯ ಊದುಬತ್ತಿಯನ್ನು ಹತ್ತಿಸಿಟ್ಟಿದ್ದಾರೆ. ಅದರಿಂದ ಹೊರಡುತ್ತಿರುವ ಸಣ್ಣ ಹೊಗೆಯನ್ನು ಮಂದಮಾರುತನು ಮೇಲಿನ ವಾತಾಯನದಿಂದ ಎತ್ತಿಕೊಂಡುಹೋಗುತ್ತಿದ್ದಾನೆ.

ಇಂಥಾ ಸುವಾಸಿತವಾದ, ಸುಲಂಕೃತವಾದ, ಸುಮನೋಹರವಾದ ವಾಸಗೃಹದಲ್ಲಿ ಮಂಚದ ಮೇಲೆ ಒಬ್ಬ ಮಹಾ ವ್ಯಕ್ತಿಯು ಮಲಗಿದ್ದಾನೆ. ಮೈ ಬಹಳ ಕೃಶವಾಗಿದೆ. ಮುಖವು ಮಾತ್ರ ಗಂಭೀರ ಮುದ್ರೆಯಿಂದ ತೇಜೋವಿರಾಜಮಾನವಾಗಿದೆ. ಕಣ್ಣುಗಳು ಅರೆಯಾಗಿ ಮುಚ್ಚಿಕೊಂಡಿವೆ. ಸಮೀಪದಲ್ಲಿ ಹಕೀಮನು ಎವೆ ಇಕ್ಕದೆ ನೋಡುತ್ತಾ ಕುಳಿತಿದ್ದಾನೆ. ತಲೆಯ ಪಾರ್ಶದಲ್ಲಿ ಶುಭ್ರವಸನಧಾರಿಯಾದ ಬಾಲಕನೊಬ್ಬನು ಲಾಮಂಚದ ಬೀಸಣಿಗೆಯಿಂದ ಬೀಸುತ್ತಿದ್ದಾನೆ. ಎಲ್ಲಾ ಕಡೆಯೂ ನಿಶ್ಶಬ್ದ! ಆ ರುಗ್ಣಶಯ್ಯೆಯಲ್ಲಿ ಮಲಗಿರುವ ಮಹಾ ವಿಭೂತಿಯು ಹೈದರಲ್ಲಿ ಖಾನನೆಂದು ಈಗಾಗಲೇ ವಾಚಕರು ಊಹಿಸಿದ್ದಾರೆ. ಇಂದು ಪ್ರಾತಃಕಾಲದ ತೋಪುಗಳು ಹಾರಿಲ್ಲ.

ನೌಪತ್ತುಖಾನೆಯಲ್ಲಿ ನಗಾರಿ ನೌಪತ್ತು ಆಗಿಲ್ಲ. ಚೌಪದಾರರು ಗರ್ಭ ನಿರ್ಭೇದ ಧ್ವನಿಯಿಂದ "ಹುಷಾರು" ಕೂಗುತ್ತಿಲ್ಲ. ಅಧಿಕಾರಿಗಳು ಸೈನಿಕರಿಂದ ಕವಾತು ಮುಜುರೆಯನ್ನು ತೆಗೆದುಕೊಂಡಿಲ್ಲ. ಕುದುರೆಗಳು ಎಲ್ಲಿ ಹೇಷಾರವ ಮಾಡುವವೋ ಎಂದು ಕಾಸುದಾರರ ಎದೆ ಬಡಿದುಕೊಳ್ಳುತ್ತಿದೆ. ಕಾಮಾಟಿಗಳಾಗಲೀ, ಸೈನಿಕರಾಗಲೀ ಸದ್ದು ಮಾಡಕೂಡದೆಂದು ಸೈನ್ಯಾಧಿಕಾರಿಯ ಸುಗ್ರೀವಾಜ್ಞೆಯಾಗಿದೆ. ಪಹರೆಯುವರು ಬಹಳ ಶಿಸ್ತಿನಿಂದ ಕಾಯುತ್ತಿದ್ದಾರೆ. ಅಷ್ಟು ದೊಡ್ಡ ಪಾಳಯವು ಪ್ರಸುಪ್ತವಾದ ಗಂಭೀರ ಸಾಗರದಂತೆ ಅಚಲವಾಗಿದೆ. ಯಾರ ಬಾಯಲ್ಲೂ ಮಾತಿಲ್ಲ! ಮುಖಗಳಲ್ಲಿ ಜೀವವಿಲ್ಲ! ಈ ಪಾಳಯದಲ್ಲಿ ದರಬಾರಿನ ಮುಖ್ಯರಾದ ಇಬ್ಬರು ಮಹಾ ವ್ಯಕ್ತಿಗಳಿಲ್ಲ. ಚಿಕ್ಕ ನವಾಬರಿಲ್ಲ. ಬಡಾ ಫಕೀರರಿಲ್ಲ. ಚಿಕ್ಕ ನವಾಬರು ಬಹು ದೂರದಲ್ಲಿ ಸಂಗ್ರಾಮದಲ್ಲಿದ್ದಾರೆ. ಬಡಾ ಫಕೀರರು—ಅವರೆಲ್ಲಿ ಹೋಗಿದ್ದಾರೋ ಯಾರಿಗೂ ಗೊತ್ತಿಲ್ಲ. ಹದಿನೈದು ದಿವಸಗಳಾಗಿಹೋಯಿತು. ಇಂಥಾ ದುರ್ಘಟ ಸಮಯದಲ್ಲಿ ಬಡಾ ಫಕೀರರಿಲ್ಲವೇ ಎಂದು ಎಲ್ಲರಿಗೂ ಆಶಂಕೆ! ಅವರಿಗೇ ಗೊತ್ತಿಲ್ಲದ ಒಂದು ವಿಧವಾದ ದಿಗಿಲು! ಎಲ್ಲರ ಮುಖದಲ್ಲಿಯೂ ನಿರಾಶೆ!

ಬಡಾ ಫಕೀರರು ತೋಪುಖಾನೆಯ ಮಹಾ ದ್ವಾರವನ್ನು ಪ್ರವೇಶಿಸಿದರು. ಅವರ ಹಿಂದೆ ಇಬ್ಬರು ಹಿಂದೂ ಸರದಾರರು ಬರುತ್ತಿದ್ದರು. ಆ ಪಾಳಯದಲ್ಲಿ ಬಡಾ ಫಕೀರರನ್ನು ಎಲ್ಲರೂ ಬಲ್ಲರು. ಅವರ ಹಿಂದೆ ಬರುತ್ತಿರುವ ತೇಜಸ್ವಿಗಳಾದ ತರುಣ ಸರದಾರರ್ಯಾರೆಂದು ಎಲ್ಲರಿಗೂ ಕುತೂಹಲ! ಎಲ್ಲರೂ ಫಕೀರರಿಗೆ ಸಲಾಂ ಮಾಡುತ್ತಿದ್ದರು. ಅವರು ಮುಂದುವರಿಯುತ್ತಲೇ ಈ ಸರದಾರರಾರೆಂದು ಪಿಸುಮಾತನಾಡಿಕೊಳ್ಳಲಾರಂಭಿಸಿದರು. ಬಡಾ ಫಕೀರರು ತೋಪುಖಾನೆಯ ಮಹಾದ್ವಾರದಿಂದ ಪ್ರವೇಶಿಸಿ ನೌಪತ್ತುಖಾನೆಯನ್ನು ದಾಟಿ, ದರಬಾರು ಮಂಟಪವನ್ನು ಹಾದು ಪ್ರಶಸ್ತವಾದ ನಡಮುಡಿ ಹಾಸಿದ ಮಾರ್ಗವನ್ನು ಅತಿಕ್ರಮಿಸಿ, ನವಾಬರ ವಾಸಗೃಹವನ್ನು ಪ್ರವೇಶ ಮಾಡಿದರು. ಅವರ ಹಿಂದೆ ಬಂದ ಸರದಾರರು ಯಾರೂ ಅಲ್ಲ! ದೌಲತ್ ಮತ್ತು ರಾಧಾ!!

ಆಗ ದೇಶದಲ್ಲಿ ಬಹಳ ವಿಕ್ಷೋಭವಿತ್ತು. ಮರಾಠರೂ ಇಂಗ್ಲೀಷರೂ ಸ್ನೇಹವಾಗಿದ್ದರು. ಅವರ ಜೊತೆಗೆ ತಿರವಾಂಕೂರಿನ ಮಹಾರಾಜರೂ ಸೇರಿ ಕೊಂಡಿದ್ದರು. ಹೈದರನ ಸೌಜನ್ಯವು ಎಲ್ಲೆಲ್ಲಿಯೂ ಪ್ರಸಿದ್ಧವಾಗಿದ್ದರೂ, ಟಿಪ್ಪೂಸುಲ್ತಾನನ ಔದ್ಧತ್ಯದಿಂದ ದ್ವೇಷವು ಪ್ರಭಲಿಸಿತ್ತು. ಎಲ್ಲೆಡೆಯಲ್ಲಿಯೂ ಮಹಮದೀಯರ ಮೇಲಿನ ವಿದ್ವೇಷವು ತುಂಬಿತ್ತು. ಆಗ ಮಹಮದೀಯರನ್ನು ಎಲ್ಲಿ ಕಂಡರೆ ಅಲ್ಲಿ ಹಿಂಸಿಸುತ್ತಿದ್ದರು. ಮಹಮದೀಯ ಯೋಧರನ್ನು ಕಂಡರೆ ಸೆರೆ ಹಿಡಿಯುತ್ತಿದ್ದರು. ಹಿಂದೂ ವೇಷದಿಂದ ಹೋದರೆ ಭಯವಿರಲಿಲ್ಲ. ಮುಸಲ್ಮಾನರಾದವರೂ ಮೇಲೆ ಬಿದ್ದರೆ ಒಳಗುರುತನ್ನು ಹೇಳಿ ಪಾರಾಗಬಹುದಾಗಿತ್ತು. ಕ್ಷಣ ಕಾಲದಲ್ಲಿ ಪಾಳಯದಲ್ಲೆಲ್ಲಾ ಬಡಾ ಫಕೀರರು ಬಂದ ವಾರ್ತೆಯು ಹರಡಿಹೋಯಿತು. ಆ ತರುಣ ಸರದಾರರ್ಯಾರೆಂದು ಎಲ್ಲರಲ್ಲಿಯೂ ಜಿಜ್ಞಾಸೆ! ಯಾರೋ ದೇಶಾಭಾಗದವರೆಂದು ಕೆಲವರಿಗೆ ಔದಾಸೀನ್ಯ! ಮೈಸೂರಿನ ರಾಜಮನೆತನದವರೆಂದೂ, ಅವರಿಗೆ ಪಟ್ಟ ಕಟ್ಟಲು ನವಾಬರು ಫಕೀರರನ್ನು ಕಳಿಸಿ ಕರಸಿದ್ದಾರೆಂದೂ ಹಿಂದೂ ಸೈನಿಕರ ಆಶಾ ಕಲ್ಪನೆ. ಬಡಾ ಫಕೀರರು ಹೋಗಿ ಪೇಷ್ವೆಯವರಲ್ಲಿ ರಾಜೀ ಮಾಡಿಕೊಂಡು ಬಂದಿದ್ದಾರೆಂದು, ಸರದಾರರ ಊಹಾಪೋಹ. ಇಷ್ಟಾದರೂ ಇವರಾರು? ಇವರಾರು? ಎಂಬ ಆಕಾಂಕ್ಷೆಯು ಶಮನವಾಗಲೇ ಇಲ್ಲ. ಎಲ್ಲ ಕಡೆಯೂ, ಒಂದು ಹೊಸ ಕಲ್ಪನೆ! ಸಂದಿಗ್ಧ! ಹೊಸ ಆಸೆ! ಭರವಸೆಗಳು!

ಬಡಾ ಫಕೀರರೂ, ಅವರ ಅನುಯಾಯಿಗಳಾದ ತರುಣ ಸರದಾರರೂ ನವಾಬರ ದಿವಾನಖಾನೆಯನ್ನು ಪ್ರವೇಶಿಸಿದರು. ಅಲ್ಲಿ ಮತ್ತಾರೂ ಇಲ್ಲ. ಅಲ್ಲಿ ನಿಂತಿದ್ದ ಸನ್ನಿಧಾನದ ಹಯತ್‌ಖಾನನು ಬಡಾ ಫಕೀರನನ್ನು ನೋಡುತ್ತಲೇ ಭವ್ಯನಾಗಿ ನೆಲಮುಟ್ಟಿ ಸಲಾಂ ಮಾಡಿದನು. ಹೊಸ ಸರದಾರರಿಗೂ ಸಲಾಂ ಮಾಡಿದನು; ಏನೋ ಸಂಶಯ ದೃಷ್ಟಿಯಿಂದ ಹೊಸಬರನ್ನು ದೃಷ್ಟಿಸಿ ನೋಡಿದನು. ಪುನಃ ಬಡಾ ಫಕೀರರ ಕಡೆ ತಿರುಗಿ ನೋಡಿದನು. ಬಡಾ ಫಕೀರರ ಮುಖದ ಮೇಲೆ ಮಂದಹಾಸವು ಮೂಡಿತು. ಹಯಾತನು ಶಾಂತನಾದನು. ಬಡಾ ಫಕೀರರು ಸನ್ನೆ ಮಾಡಿದರು. ಹಯಾತನು ಪಿಸುಮಾತಿನಿಂದ "ಸೀದ್ ಸೀದ್" ಎಂದನು. ಬಡಾ ಫಕೀರರು ತನ್ನ ಸಂಗಡಿಗರಾದ ಸರದಾರರ ಕಡೆಗೆ ತಿರುಗಿ ನೋಡಿ, ಸಾವಧಾನವಾಗಿ ಕಿವಿಯನ್ನು ಬಾಗಿಲಿನ

ಕಡೆಗೆ ಆಲೈಸಿಕೊಟ್ಟು ನಿಂತುಕೊಂಡರು. ಅಷ್ಟರಲ್ಲಿ ಅಂತರ್ಗೃಹದ ಪ್ರಶಾಂತತೆಯನ್ನು ಭೇದಿಸಿಕೊಂಡು ದೀರ್ಘ ನಿಶ್ವಾಸವೊಂದು ಕೇಳಿಸಿತು. ಹೊರಗಡೆ ಅದನ್ನು ಆಲೈಸಿ ಫಕೀರರು "ನವಾಬರು ಎದ್ದರು" ಎಂದುಕೊಂಡರು. ಅದರಿಂದ ಅವರ ಮನಸ್ಸಿಗೆ ಏನೋ ಸ್ವಲ್ಪ ಸಮಾಧಾನವಾಯಿತು. ಒಳಗೆ ಹಾಸಿಗೆಯಮೇಲೆ ನವಾಬರು ಸಣ್ಣಗೆ ಮುಲುಗುತ್ತಾ ಮಗ್ಗುಲಿಗೆ ತಿರುಗಿದರು. ಕಣ್ಣು ಬಿಟ್ಟರು. ಹಕೀಮರು ಮಗ್ಗುಲಿಗೆ ಹೋಗಿ,

"ಈ ದಿನ ಹೇಗಿದೆ?" ಎಂದರು.

"ಸ್ವಲ್ಪ ಗುಣವಾಗಿದೆ. ಆಯಾಸವು ಕಡಿಮೆಯಾದಂತಿದೆ".

ಹಕೀಮರ ಮುಖವು ಸ್ವಲ್ಪ ಅರಳಿತು. ನವಾಬರ ಮುಖದಲ್ಲಿಯೂ ಸಣ್ಣ ನಗುವು ಕಂಡಿತು.

"ಜಹಾಪನಾ! ದಿವಾನ್ ಮಹಮದ್ ಆಲಿಯವರೂ, ಮಂತ್ರಿ ಪೂರ್ಣಯ್ಯನವರೂ ಭೇಟಿಗೆ ಬಂದಿದ್ದರು. ಖಾವಂದರಿಗೆ ಸಣ್ಣ ನಿದ್ದೆ ಹತ್ತಿತ್ತು."

"ವಿಶೇಷವೇನು?"

"ಸಣ್ಣ ನವಾಬರನ್ನು ಕರೆಯಿಸುವುದು ಒಳ್ಳೆಯದಲ್ಲವೇ ಎಂದು ನನ್ನನ್ನು ಕೇಳಿದರು. ಅಂಥಾ ಭಯವಿಲ್ಲವೆಂದೂ, ನಾನು ಪ್ರಾಣಕ್ಕೆ ಪ್ರಾಣ ಕೊಡಬಲ್ಲೆನೆಂದು ಹೇಳಿದೆ. ಔಷಧಿಗಳಲ್ಲಿ ಮಹಾ ಸತ್ವವುಂಟೆಂದು ಧೈರ್ಯ ಹೇಳಿದೆ. ಆದರೂ ಖಾವಂದರವರ ಅಭಿಲಾಷೆಯನ್ನು ತಿಳಿದುಕೊಳ್ಳಬೇಕೆಂದು ಅವರ ಇಷ್ಟ. ಹುಜೂರಿನ ಹುಕುಂ ಏನಾಗುತ್ತದೋ?"

ನಿರುತ್ತರ! ಮೌನ! ಮಾತನಾಡಲಿಲ್ಲ! ಏನೋ ಒಂದು ಆಲೋಚನೆಯನ್ನು ಮಾಡಿದಂತೆ ಕಣ್ಣುಗಳನ್ನು ವಿಸ್ತಾರ ಮಾಡಿದ್ದರಿಂದ ಭಾಸವಾಯಿತು!

ನವಾಬರು ಸಣ್ಣ ಧ್ವನಿಯಿಂದ "ಬಡಾ ಫಕೀರರು ಇನ್ನೂ ಬರಲಿಲ್ಲವೇಕೆ ಇಲ್ಲಿಂದ ಹೋಗಿ ಎರಡು ಹಪ್ತೆಗಳಾಯಿತು."

"ಖಾವಿಂದ್, ಅವರು ಎಲ್ಲಿಗೆ ಹೋಗಿದ್ದಾರೋ ಯಾರಿಗೂ ಗೊತ್ತಿಲ್ಲ."

ಮೌನ!

ಒಳಗೆ ಮಾತನಾಡುವುದನ್ನು ಕೇಳಿ ಹಯಾತನು ಮೆಲ್ಲಗೆ ಘರದೆಯನ್ನು ಓರೆಮಾಡಿಕೊಂಡು ಒಳಗೆ ಹೋದನು. ಹೋಗಿ ಸನ್ನಿಧಾನದ ಕಾಲುಕಡೆ ನಿಂತು ನೆಲ ಮುಟ್ಟಿ ಸಲಾಂ ಮಾಡಿದನು.

ನವಾಬರ ಕಡೆಗೆ ನೋಡುತ್ತಾ "ಹುಜೂರ್! ಬಡಾ ಫಕೀರರು ಬಂದಿದ್ದಾರೆ.''

ನವಾಬರ ಮುಖವು ಪ್ರಸನ್ನವಾಯಿತು. ಕರತರಬೇಕೆಂದು ಕಣ್ಣುಗಳಿಂದ ಸನ್ನೆ ಮಾಡಿದರು. ಹಯಾತನು ಹೊರಗೆ ಬಂದು ಫಕೀರರಿಗೆ ಮುಜರೆ ಮಾಡಿ ಒಳಗಡೆ ಕೈ ತೋರಿಸಿದನು. ಫಕೀರರು ಘರದೆಯನ್ನು ಓರೆಮಾಡಿ ಒಂದು ಹೆಜ್ಜೆ ಒಳಗಿಟ್ಟರು. ದೌಲತ್ತಳು ಅವರನ್ನನುಸರಿಸಿ ಹೋದಳು. ನವಾಬರ ಕಣ್ಣುಗಳೂ ಫಕೀರರ ಕಣ್ಣುಗಳೂ ಸೇರಿದವು. ಫಕೀರರು ಮಂದಹಾಸದಿಂದ ಒಂದು ಬಾರಿ ನವಾಬರ ಕಡೆ ನೋಡಿದರು. ಹಾಸಿಗೆ ಹತ್ತಿರ ಹೋಗಿ ನವಾಬರ ತಲೆಯಮೇಲೆ ಮುಖವನ್ನಿಟ್ಟು ಚುಂಬಸಿದರು. ಬಡಾ ಫಕೀರರು ಹಕೀಮರೊಡನೆ ನವಾಬರ ದೇಹಸ್ಥಿತಿಯನ್ನು ವಿಚಾರಿಸಿದರು. ಅವರು ಹುಣ್ಣು ಮಾಯುತ್ತಿದೆಯೆಂದೂ, ದೇಹದಲ್ಲಿ ಶಕ್ತಿ ಬರುತ್ತಿದೆಯೆಂದೂ, ಕಣ್ಣುಗಳಲ್ಲಿ ಕಾಂತಿಯು ಬೆಳಗುತ್ತಿದೆಯೆಂದೂ ಉಸಿರಿನಲ್ಲಿ ಬಲವಿದೆಯೆಂದೂ, ನಾಡಿಶುದ್ಧವಾಗಿದೆಯೆಂದೂ ಹೇಳಿದರು. ಫಕೀರರು ಸಮಾಧಾನವನ್ನು ತೋರಿಸಿ, ಕಣ್ಣು ಸನ್ನೆ ಮಾಡಿದರು. ಹಕೀಮರು ನವಾಬರಿಗೆ ಸಲಾಂ ಮಾಡಿ ಎದ್ದು ಹೊರಗೆ ಹೊರಟರು. ಬೀಸುವ ಹುಡುಗನು ಬೀಸಣಿಗೆಯನ್ನಿಟ್ಟು ಹೊರಗೆ ಹೊರಟನು. ಹೊಸ ಸರದಾರನು ಅವನ ಕೈಯಿಂದ ಬೀಸಣಿಗೆಯನ್ನು ಈಸುಕೊಂಡನು. ಅತಃಗೃಹದಲ್ಲಿ ಮಂಚದ ಮೇಲೆ ನವಾಬರು ಮಲಗಿದ್ದಾರೆ. ತಲೆಯಕಡೆ ಫಕೀರರು ನವಾಬರ ಮೈ ಸವರುತ್ತಾ ಕುಳಿತಿದ್ದಾರೆ. ಫಕೀರರ ಜತೆಯಲ್ಲಿ ಬಂದ ವ್ಯಕ್ತಿಯು ಬೀಸಣಿಗೆಯಿಂದ ಗಾಳಿ ಬೀಸುತ್ತಿದ್ದಾಳೆ. ಹಯಾತನು ಹೊರಬಾಗಿಲಿನಲ್ಲಿ ಕಾದಿದ್ದಾನೆ.

ಆ ನಿಶ್ಶಬ್ದತೆಯಲ್ಲಿ, ಆ ಪ್ರಶಾಂತವಾತಾವರಣದಲ್ಲಿ ಆ ಪ್ರಶಸ್ತವಾದ ವಾಸಭವನದಲ್ಲಿ ಆ ಅನರ್ಘ್ಯ ಪರ್ಯಂಕದಲ್ಲಿ, ಆ ಸುಖಕರವಾದ ಹಂಸತೂಲಿಕಾ

ತಲ್ಪದಲ್ಲಿ, ದೀರ್ಘಾಕಾರವಾಗಿ ಮಲಗಿದ್ದ ಆ ಮಹಾ ವ್ಯಕ್ತಿಯು ಸ್ವಲ್ಪ ತಿರುಗಿ ವಾತ್ಸಲ್ಯಪೂರಿತವಾದ ನೋಟದಿಂದ ಸಮೀಪದಲ್ಲಿ ನಿಂತಿದ್ದ ದೌಳತ್ತಳನ್ನು ನೋಡಿ, ಆಶಾಪೂರಿತವಾದ ವಾಣಿಯಿಂದ "ದೌಲತ್! ಬಂದೆಯಾ! ಬಹು ದೂರ ಬಂದಿರುವೆ! ನಿನ್ನನ್ನು ನೋಡಿ ಸಂತೋಷ ವಾಯಿತು.''

"ಜಹಾಪನಾ! ಈ ಗರೀಬಳು ಯಾವಾಗಲೂ ಆಜ್ಞಾಧಾರಕಳು.''

"ಇಯುಜ್ ಖಾನನು ಕ್ಷೇಮವೋ?''

"ಹುಜೂರಿನ ಅನುಗ್ರಹದಿಂದ ಕ್ಷೇಮವಾಗಿದ್ದಾರೆ."

"ನಗರದ ಸೀಮೆ?''

"ಖಾವಂದರ ಅಧಿಕಾರವು ಅಪ್ರತಿಹತವಾಗಿದೆ. ದೇಶವು ಭದ್ರವಾಗಿದೆ. ಸುಖಶಾಂತಿಗಳಿವೆ. ಪ್ರಜೆಗಳಿಗೆ ಮಹಾ ಪ್ರಭುಗಳಲ್ಲಿ ಭಕ್ತಿ ವಿಶ್ವಾಸಗಳು ಚೆನ್ನಾಗಿವೆ.''

ನವಾಬನು ಸಂತೋಷದಿಂದ ಫಕೀರನ ಕಡೆ ನೋಡಿದನು.

"ಹುಜೂರು! ನಗರವು ವೀರಭೂಮಿ! ಅಲ್ಲಿ ಅಸಮಸಾಹಸಿಗಳಾದ ಪಾಳಯಗಾರರಿದ್ದಾರೆ. ಅವರಿಗೆಲ್ಲಾ ಪ್ರಕೃಷ್ಟವಾದ ಸ್ವಮತಾಭಿಮಾನ! ಇಯುಜ್ ಖಾನನಲ್ಲಿ ಹಿಂದೂಗಳಿಗೆ ದೃಢವಾದ ವಿಶ್ವಾಸವಿದೆ. ಕೊಂಕಣವನ್ನು ಆಕ್ರಮಿಸಬೇಕೆಂದು ಇಂಗ್ಲೀಷರು ಹೊಂಚು ಹಾಕುತ್ತಿದ್ದಾರೆ. ಆದರೂ ಇಯುಜ್‌ಖಾನರ ಪರಾಕ್ರಮವನ್ನು ನೋಡಿ, ಅವರು ಭಯಪಡುತ್ತಾರೆ. ಖಾನನು ಭೀಮ ಪರಾಕ್ರಮಿ! ಕುಶಲಮತಿ! ಅವನ ಕೈಯ್ಯಲ್ಲಿ ಭದ್ರತೆಗೆ ಕೊರತೆಯೇನು? ಅದರಲ್ಲಿ ತಮಗೆ ಲವಲೇಶವೂ ಚಿಂತೆಗೆ ಕಾರಣವಿಲ್ಲ. ಹುಜೂರ್! ಇಯುಜ್‌ಖಾನರು ಮಹಾ ಪ್ರಭುಗಳಿಗೆ ತಕ್ಕ ಮಗ."

ನವಾಬರ ಮುಖವು ಪ್ರಫುಲ್ಲವಾಯಿತು. "ಇಯುಜ್‌ಖಾನನು ಮಹಾ ಪರಾಕ್ರಮಿಯೆಂದೂ, ಅತಿ ಬುದ್ಧಿವಂತನೆಂದೂ ನಾನು ಅವನ ಬಾಲ್ಯದಲ್ಲಿಯೇ ಕಂಡು ಹಿಡಿದೆ. ಆದರಿಂದಲೇ ಅವನನ್ನು ದತ್ತು ತೆಗೆದುಕೊಂಡೆ. ಅವನ ಶಕ್ತಿ ಸಾಮರ್ಥ್ಯಗಳನ್ನು ನೋಡಿ ನಗರದ ನವಾಬಗಿರಿಯನ್ನು ಕೊಟ್ಟೆ.

ನನಗೆ ಶ್ರೀರಂಗಪಟ್ಟಣಕ್ಕಿಂತಲೂ ನಗರವು ಹೆಚ್ಚು ವಿಶ್ವಾಸಾಸ್ಪದವಾದದ್ದು. ಆದರೆ...........ಆದರೇನು! ನನ್ನ ಕಾಲವು ಮೀರುತ್ತ ಬಂತು. ನಾನು ಹೋಗುತ್ತೇನೆ. ನನಗೆ ಸಂತೋಷವಿಲ್ಲ. ಸಾಯುವಾಗ ಸಂತೋಷವಿಲ್ಲ; ಭಯಂಕರವಾದ ಮೇಘಾಡಂಬರವು ನನ್ನ ಕಣ್ಣಿಗೆ ಕಟ್ಟುತ್ತಲಿದೆ.'' ಹಾಗೆಯೇ ಮುಖದಲ್ಲಿ ಕೆಂಪೇರಿತು. ಮೂರ್ಛೆ ಬಂತು. ದೌಲತ್ತಳು ತಲೆಯ ಮೇಲೆ ಪನ್ನೀರು ಚುಮುಕಿಸಿದಳು. ಸಣ್ಣಗೆ ಗಾಳಿ ಹಾಕಲಾರಂಭಿಸಿದಳು. ಅವಳ ಮತ್ತೊಂದು ಹಸ್ತವು ನವಾಬರ ತಲೆಯ ಮೇಲೆ ಇತ್ತು. ಸ್ವಲ್ಪ ಹೊತ್ತಿನಲ್ಲಿ ನವಾಬರಿಗೆ ತಿಳಿವು ಬಂದಿತು. ದೌಲತ್ತಳು ಷರಬತ್ತನ್ನು ಕುಡಿಸಿದಳು. ನವಾಬರು ಪುನಃ ಮಾತನಾಡತೊಡಗಿದರು. ಫಕೀರನು ಪ್ರತಿರೋಧ ಮಾಡುವುದಕ್ಕೆ ಆರಂಭಿಸಿದನು.

" ಖಾವಿಂದ್! ಮಾತನಾಡಬೇಡಿರಿ. ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿರಿ. ತಮ್ಮ ಶರೀರದಲ್ಲಿ ಜ್ವರ ಬಂದಿದೆ.''

" ಫಕೀರಜಿ! ನಾನು ಇಂದು ಆರೋಗ್ಯವಾಗಿದ್ದೇನೆ. ಇದೊಂದು ದಿನ ಮಾತನಾಡುವುದಕ್ಕಾಗಿಯೇ ಅಲ್ಲಾನು ಶಕ್ತಿಯನ್ನು ಕರುಣಿಸಿದ್ದಾನೆ. ಇನ್ನು ನನಗೆ ಇಲ್ಲಿ ಈ ಭೂಮಿಯ ಮೇಲೆ ಅವಕಾಶವಿಲ್ಲ. ನೀವು ನನಗೆ ಬಹಳ ಉಪಕಾರ ಮಾಡಿದ್ದೀರಿ. ದೌಲತ್ತಳನ್ನು ಕರತಂದು ಭೇಟಿ ಮಾಡಿಸಿದ್ದೀರಿ. ನನಗೆ ಇರುವುದು ಇದೊಂದೇ ಭರವಸೆ.''

ಭಾಪೂಜೀ! ತಮ್ಮಂಥಾ ಮಹಾಪುರುಷರು ಇಷ್ಟು ಉದ್ವಿಗ್ನರಾಗುವುದೇಕೆ? ಅಪ್ಪಣೆಯಾದರೆ ಈ ಪ್ರಾಣಗಳನ್ನು ಇಂದೇ ಒಪ್ಪಿಸಬಲ್ಲೆನು. ಈ ಅಲ್ಪಳ ಮೇಲೆ ಇಷ್ಟೊಂದು ದೊಡ್ಡ ಮಾತೇಕೆ?

ನವಾಬರ ಕಣ್ಣುಗಳಲ್ಲಿ ನೀರು ತುಂಬಿತು. ಧಾರಾಕಾರವಾಗಿ ಸುರಿಯಲಾರಂಭಿಸಿತು. ಹಾಗೆಯೇ ದೌಲತ್ತಳ ಕೈ ಹಿಡಿದುಕೊಂಡು :—

" ದೌಲತ್! ಈ ಮೈಸೂರು ರಾಜ್ಯವು ಎಷ್ಟು ಸಣ್ಣದಾಗಿತ್ತು. ನಾನು ದೇವರ ಕೃಪೆಯಿಂದ ಎಷ್ಟು ದೊಡ್ಡ ರಾಜ್ಯವನ್ನು ಬೆಳಸಿದ್ದೇನೆ. ಇದನ್ನೊಂದು ಸಾಮ್ರಾಜ್ಯವನ್ನು ಮಾಡಬೇಕೆಂದು ನನ್ನ ಆಶೆ! ಅಷ್ಟು ರಾಜ್ಯವನ್ನು ಸಂಪಾದಿಸಿದ್ದೇನೆ. ಆದರೆ ಅದನ್ನು ಕಟ್ಟಿ ನಿಲ್ಲಿಸುವಷ್ಟು ಅವಕಾಶವನ್ನು

ಖುದಾನು ಅನುಗ್ರಹಿಸಲಿಲ್ಲ. ಇಯುಜ್ ಖಾನನೂ, ಟಿಪ್ಪೂಸುಲ್ತಾನನೂ ಸೇರಿದರೆ ಈ ಸಾಮ್ರಾಜ್ಯವನ್ನು ಕಟ್ಟಬಲ್ಲರು. ಅವರಿಬ್ಬರಿಗೂ ಅಷ್ಟು ಪರಾಕ್ರಮವಿದೆ. ಶಕ್ತಿ, ಸಾಮರ್ಥ್ಯಗಳಿವೆ. ಆದರೂ ಅವರಿಬ್ಬರಲ್ಲಿ ಸ್ನೇಹವಿಲ್ಲ, ವಿಶ್ವಾಸವಿಲ್ಲ. ಅಲ್ಲಾನು ನನಗೆ ಅಪ್ಪಣೆ ಕೊಟ್ಟಿದ್ದಾನೆ. ನಾನು ಸತ್ತುಹೋಗುತ್ತೇನೆ. ಸಾವಿಗೆ ನಾನು ರವೆಯಷ್ಟೂ ಅಂಜುವುದಿಲ್ಲ. ಮೈಸೂರು! ನಾನು ಬೆಳೆಸಿದ ಮೈಸೂರು! ನನಗೆ ಪ್ರಿಯವಾದ ಈ ಮೈಸೂರು ರಾಜ್ಯವು ಮುಂದೆ ಚೂರುಚೂರಾಗಿ ಹೋಗುವುದು ನನ್ನ ಕಣ್ಣಿಗೆ ಕಾಣುತ್ತಿದೆ. ಅದನ್ನು ನೆನೆದರೆ ನನ್ನ ಹೃದಯವು ಝುಲ್ಲೆನ್ನುತ್ತದೆ. ಅವರಿಬ್ಬರ ಅಂತಃಕಲಹದಿಂದ ಈ ಸಾಮ್ರಾಜ್ಯವು ಪುಡಿಪುಡಿಯಾಗುತ್ತದೆ. ಒಂದು ಕಡೆಯಿಂದ ಮರಾಟರೂ, ಮತ್ತೊಂದು ಕಡೆಯಿಂದ ಇಂಗ್ಲೀಷರೂ ಮೈಸೂರನ್ನು ಹತ್ತಿ, ಹರಿದು, ಹಂಚಿ ನುಂಗಿಬಿಡುತ್ತಾರೆ. ಆಮೇಲೆ ಮೈಸೂರು–ಮೈಸೂರು! ಎಲ್ಲಿದೆ? ಇದನ್ನು ನಾನು ಎಷ್ಟೋ ದಿವಸಗಳಿಂದ ಬಲ್ಲೆ. ಈ ಟೀಪುವನ್ನೂ, ಇಯುಜ್ ಖಾನನ್ನೂ ಸ್ನೇಹದಿಂದ ಬೆಳೆಯುವಂತೆ ಮಾಡಲು ಎಷ್ಟೋ ಪ್ರಯತ್ನ ಮಾಡಿದೆ. ಅದು ಆಗದೇ ಹೋಯಿತು. ಅವರಿಬ್ಬರೂ ಸ್ನೇಹದಿಂದ ಇದ್ದಿದ್ದರೆ, ಮರಾಟರು ಎಷ್ಟರವರು? ಫರಂಗಿಯವರು ಎಷ್ಟು ಮಾತ್ರದವರು? ಮೈಸೂರಿನ ಕಡೆಗೆ ಕಣ್ಣೆತ್ತಿ ನೋಡುವುದಕ್ಕೂ ಅವರಿಗೆ ಧೈರ್ಯವಿಲ್ಲ. ಈಗ ಹಾಗಲ್ಲ! ಈಗ ನನಗೆ ಇರುವುದು ಒಂದೇ ಒಂದು ಭರವಸೆ. ಅವರಿಬ್ಬರೂ ನನ್ನ ವಾತ್ಸಲ್ಯದಿಂದ ಬೆಳೆದವರು. ಖಾನನಾಗಲೀ, ಟಿಪ್ಪುವಾಗಲೀ ಶತ್ರುಗಳ ಪಕ್ಷವನ್ನು ಸೇರಿ ಮೈಸೂರಿಗೆ ದ್ರೋಹ ಬೆಳೆಸುವವರಲ್ಲ. ಆ ಭಯವು ನನಗೆ ಇಲ್ಲವೇ ಇಲ್ಲ. ಆ ಅಪಖ್ಯಾತಿಯು ಸೋಂಕಿಲ್ಲ. ಅವರವರೇ ಹೋರಾಡಿ, ಈ ರಾಜ್ಯವನ್ನೇ ಕುರುಕ್ಷೇತ್ರವಾಗಿ ಮಾಡಿ, ಬಂಗಾರದಂತಹ ಮೈಸೂರನ್ನು ಬೂದಿಯಾಗಿ ಮಾಡುತ್ತಾರೆಂದು ನನ್ನ ಹೃದಯವು ತಲ್ಲಣಿಸುತ್ತದೆ.

ದೌಲತ್! ನೀನು–ನೀನು ಈ ಮೈಸೂರನ್ನು ರಕ್ಷಿಸಬಲ್ಲೆ. ದೌಲತ್! ಭರವಸೆ ಕೊಡು. ಈ ಬಿಗಿಮುಷ್ಟಿಯಲ್ಲಿರುವ ಮೈಸೂರು ಭದ್ರವಾಗಿಯೇ ಉಳಿಯುವುದೆಂಬ ಭರವಸೆಯಿಂದ ಶಾಂತವಾಗಿ ಸಾಯುತ್ತೇನೆ.'' ಕಂಠವು ಬಿಗಿದುಬಂತು. ಮುಂದೆ ಮಾತು ಹೊರಡದಾಯಿತು. ದೌಲತ್ತಳು ನವಾಬರ ಎರಡು ಕೈಗಳನ್ನು ಎತ್ತಿಕೊಂಡು ಆ ಕೈಗಳನ್ನು ಮೂರು ಬಾರಿ ಮುತ್ತಿಟ್ಟು

" ಬಾಪೂಜೀ! ದೇವರು ಇಂತಹ ಮಹತ್ಕಾರ್ಯಕ್ಕಾಗಿಯೇ ಈ ದೌಲತ್ತಳನ್ನು ನಿರ್ಮಾಣ ಮಾಡಿದ್ದರೆ ಅಗತ್ಯವಾಗಿ ಆತ್ಮಸಮರ್ಪಣೆಯಾಗಲೀ! ಈ ಮೈಸೂರು ಸಾಮ್ರಾಜ್ಯಕ್ಕಾಗಿ ನನ್ನ ಶರೀರವನ್ನು ತುಂಡುತುಂಡಾಗಿ ನನ್ನ ಕೈಯಿಂದಲೇ ಕತ್ತರಿಸಿ ಕೊಡಬಲ್ಲೆ. ಜಹಾಪನಾ! ತಮ್ಮ ಈ ಪವಿತ್ರವಾದ ಪಾದಸ್ಪರ್ಶಮಾಡಿ ಶಪಥಮಾಡುತ್ತೇನೆ.—

" ಇಯುಜ್‌ಖಾನನೂ, ಟಿಪ್ಪೂಸುಲ್ತಾನರೂ ತಮ್ಮ ಆಜ್ಞೆಯನ್ನುಲ್ಲಂಘಿಸದಂತೆ, ತಮ್ಮ ಹೆಸರಿನಲ್ಲಿ ನನ್ನ ಪ್ರಾಣವನ್ನು ಒತ್ತೆಯಿಟ್ಟು ತಡೆಯುತ್ತೇನೆ. ಇಷ್ಟರ ಮೇಲೆ ಅಲ್ಲಾನ ಇಚ್ಛೆ!"

ನವಾಬರ ಮುಖದಲ್ಲಿ ದೇದೀಪ್ಯಮಾನವಾದ ನಗುವು ಮೂಡಿತು!

" ಪ್ಯಾರೀ! ದೌಲತ್! ನಾನು ಸಾಯುವಾಗಲೂ, ಸಂತೋಷದಿಂದ ಪ್ರಾಣ ಬಿಡುತ್ತೇನೆ. ದೌಲತ್ ಎಷ್ಟೋ ದಿವಸಗಳಿಂದ ನನ್ನ ಹೃದಯ ದಲ್ಲಿಯೇ ಅಡಗಿರುವ ಒಂದು ಮಾತನ್ನು ಕೇಳುವ ಆಶೆ ಇದೆ ನನಗೆ."

" ಬಾಪೂಜಿ! ಕೇಳಿರಿ. ತಮ್ಮ ಆಸೆಗೆ ನನ್ನ ಅಂತರಾತ್ಮದಲ್ಲಿ ಪ್ರತಿ ಧ್ವನಿ ಇಲ್ಲವೆ?"

" ಮಗಳೇ! ಅದು ನಿನ್ನ ಮದುವೆಯ ಮಾತು."

" ಬಾಪೂಜೀ! ಮದುವೆ........(ಅರ್ಧೋಕ್ತಿ)ಇಲ್ಲ. ನಾನು ಯಾರನ್ನೂ ಮದುವೆಯಾಗುವುದೇ ಇಲ್ಲ. ಈ ದಕ್ಷಿಣ ಹಿಂದೂಸ್ಥಾನದಲ್ಲಿ ತಮ್ಮ ಸಾಮ್ರಾಜ್ಯವು ಸ್ಥಿರವಾಗಿ ಸ್ಥಾಪಿಸಲ್ಪಟ್ಟಲ್ಲದೇ ನಾನು ವಿವಾಹಿತಳಾಗುವುದೇ ಇಲ್ಲ."

" ಪ್ಯಾರೀ! ನಿನ್ನ ಪ್ರತಿಜ್ಞೆಯಿಂದ ನನ್ನ ಇಷ್ಟಾರ್ಥವು ಈಡೇರುವುದು. ನೀನು ಈ ರಾಜ್ಯದ ರಾಜೇಶ್ವರಿಯಾಗುವೆ."

ವೃದ್ಧ ನವಾಬನ ವಾತ್ಸಲ್ಯವು ಉಕ್ಕಿ ಬಂದು ದೌಲತ್ತಳನ್ನು ಮುದ್ದಿಟ್ಟನು. ಫಕೀರನು ಸ್ತಂಭೀಭೂತನಾಗಿ ನೋಡುತ್ತಿದ್ದನು.

" ಜಹಾಪನಾ ನನ್ನ ಗೆಳತಿಯೊಬ್ಬಳನ್ನು ತಮ್ಮ ದರ್ಶನಕ್ಕಾಗಿ ಕರೆತಂದಿದ್ದೇನೆ. ಭೇಟಿಯನ್ನು ದಯಪಾಲಿಸಬೇಕು."

ನವಾಬರು ನಗುತ್ತಾ ಕರೆದುತಾ! ದೌಲತ್ತಳು ಹೊರಗೆ ಹೋಗಿ ರಾಧೆಯನ್ನು ಕರೆತಂದಳು. ರಾಧೆಯು ಒಳಗೆ ಬಂದು ನಮ್ರಭಾವದಿಂದ ಅಭಿವಂದನ ಮಾಡಿದಳು.

ನವಾಬರು ನಮ್ರ ಭಾವದಿಂದ 'ದೌಲತ್! ಈ ನಿನ್ನ ಗೆಳತಿ ಯಾರು?'

"ಖಾವಂದರಿಗೆ ಇವಳು ಅಪರಿಚಿತಳಲ್ಲ. ಆದರೆ ಇದೇ ಸನ್ನಿಧಾನದ ಪ್ರಥಮ ಭೇಟಿ. ಬೂದನೂರು ಕಾಳಗದಲ್ಲಿ ಹುಜೂರಿಗೆ ಪರಿಚಿತರಾದ ಗೋಪಾಲನಾಯಕರ ಏಕಮಾತ್ರ ಪುತ್ರಿ ಇವಳು. ಈಗ ಖಾವಂದರ ಪಾಲನೆಗೆ ಸೇರಿದವಳು."

ಹೈದರಾಲಿಯ ಕಣ್ಣುಗಳು ವಿಸ್ತೃತವಾದವು. ಮುಖವು ವಿಸ್ಮಯ ದಿಂದ ಪ್ರಫುಲ್ಲಿತವಾಯಿತು. ನವಾಬರು ಹಾಗೆಯೇ ದಿಂಬಿನ ಮೇಲೆ ಕೈಯೂರಿ ಎದ್ದು ಕುಳಿತು.

"ಮಹಾರಾಣಿಯವರೇ! ಗೋಪಾಲನಾಯಕರಿಗೆ ಒಬ್ಬ ಮಗಳಿದ್ದಾ ಳೆಂದು ಕೇಳಿದ್ದೆ. ತಮ್ಮ ಅನ್ವೇಷಣೆಗೆ ಬಹು ಶ್ರಮಪಟ್ಟೆ. ತಮ್ಮ ದರ್ಶನವು ಲಭಿಸಲಿಲ್ಲ. ಇಂದು ಈ ಮರಣ ಶಯ್ಯೆಯಲ್ಲಿ ತಮ್ಮ ದರ್ಶನ ಲಾಭವಾಯಿತು ಇದರಿಂದ ನನಗಾದ ಆನಂದಕ್ಕೆ ಪಾರವೇ ಇಲ್ಲ."

"ಮಹಾ ಪ್ರಭುಗಳೇ! ಸನ್ನಿಧಾನದ ಸೇವೆಗೆ ಬಂದಿದ್ದೇನೆ. ನಮ್ಮ ತಂದೆಯವರು ಸಾಯುವಾಗ ನಾನು ಚಿಕ್ಕ ಹುಡುಗಿ. ರಾಜದ್ರೋಹಿಯ ಮಗಳೆಂದು ಮಂತ್ರಿಗಳು ನನ್ನನ್ನು ಗುಪ್ತವಾಗಿಟ್ಟಿದ್ದರು."

"ರಾಣಿಯವರೇ! ರಾಜದ್ರೋಹಿ ಯಾರು? ಗೋಪಾಲನಾಯಕರು ಸ್ವತಂತ್ರ ರಾಜರು. ಅವರ ಸ್ನೇಹಕ್ಕಾಗಿ ಅವರಲ್ಲಿ ಭಿಕ್ಷೆ ಬೇಡಿದೆ. ಅವರು ಅಂದು ನನಗೆ ಸ್ನೇಹ ಹಸ್ತವನ್ನು ನೀಡಿದ್ದರೆ ಅವರನ್ನು ಸ್ವತಂತ್ರರಾದ ಬೂದ ನೂರು ಸಿಂಹಾಸನಾಧಿಪತಿಗಳನ್ನಾಗಿ ಮಾಡುತ್ತಿದ್ದೆ. ಆ ನಿಸ್ಸೀಮ ಹಿಂದೂ ವೀರನು ನನ್ನ ಕೈಗಳನ್ನು ದೂರ ತಳ್ಳಿ ಮುಸಲ್ಮಾನನೊಡನೆ ಸ್ನೇಹವೆಂದರೇನು ಎಂದು ಧಿಕ್ಕರಿಸಿದನು. ಆ ರಣಕ್ಷೇತ್ರದಲ್ಲಿ ಅಪ್ರತಿಮ ವೀರನಾಗಿ ಯುದ್ಧ ಮಾಡಿದನು. ಜಯಾಪಜಯಗಳು ಯಾರ ಅಧೀನ. ಆ ಮಹಾಪರಾ

ಕ್ರಮಿಯು ಯುದ್ಧದಲ್ಲಿ ಮಡಿದನು. ಗೋಪಾಲನಾಯಕನ ಪವಿತ್ರ ಶರೀರವು ಭೂಮಿಯಲ್ಲಿ ಸೇರಿಹೋಯಿತು. ಆ ಉಜ್ವಲ ಪರಾಕ್ರಮವು ಇನ್ನೂ • ನನ್ನ ಕಣ್ಣುಗಳ ಮುಂದೆ ಮೂರ್ತಿಮತ್ತಾಗಿ ನಿಂತಿರುವಂತಿದೆ. ರಾಣಿಯವರೇ! ಅಂದೇ ತಮ್ಮ ದರ್ಶನವಾಗಿದ್ದರೆ, ತಮ್ಮನ್ನು ಬೂದುನೂರು ಮಹಾರಾಣಿಯಾಗಿ ಪಟ್ಟ ಕಟ್ಟುತ್ತಿದ್ದೆ.''

"ಮಹಾ ಪ್ರಭು! ಖಾವಂದರು ಇಂದು ಯಾರನ್ನು ಬೇಕಾದರೂ ಸಿಂಹಾಸನದ ಮೇಲೆ ಕೂಡಿಸಬಲ್ಲಿರಿ. ಈ ಬಡ ಹುಡುಗಿಯು ಅದಕ್ಕೆ ಸಿದ್ಧಳಾಗಿಲ್ಲ. ಪ್ರಭುಗಳವರು ತಮ್ಮ ಅಭಿಮಾನದ ಕುವರಿಯೆಂದು ಭಾವಿಸಿ, ಹರಸಿದರೆ ಮಹಾಸ್ವಾಮಿಯವರ ಸೇವೆಯಲ್ಲಿ ಆತ್ಮಾರ್ಪಣೆ ಮಾಡುತ್ತೇನೆ.''

ತಾಯಿ! ನಾನು ನಾಯಕರಲ್ಲಿ ಬೇಡಿದ ಸ್ನೇಹ ಹಸ್ತವನ್ನು ಇಂದು ನೀನು ಸಫಲಗೊಳಿಸಿದೆ. ನಿನ್ನ ಅಭಿಮಾನವು ಮೈಸೂರಿನ ಮೇಲೆ ಶಾಶ್ವತವಾಗಿರಲಿ'' ಎಂದು ತಮ್ಮ ಬಾಹುವನ್ನು ನೀಡಿ, ರಾಧೆಯನ್ನು ಹರಸಿದರು. ರಾಧೆಯು ನಜಲನಯನೆಯಾಗಿ ನವಾಬರ ಹಸ್ತವನ್ನು ಚುಂಬಿಸಿದಳು. ಅನಂತರ ದೌಲತ್ತಳೂ, ರಾಧೆಯೂ ಅತಿ ಕಷ್ಟದಿಂದ ನವಾಬರ ಅಪ್ಪಣೆಯನ್ನು ಪಡೆದು ಫಕೀರರಿಗೆ ಅಭಿವಂದಿಸಿ, ವಾಸಗೃಹದಿಂದ ಹೊರಟರು. ಅವರು ಮೆಲ್ಲಮೆಲ್ಲಗೆ ಆ ಕೋಣೆಯಿಂದ ಹೊರಗೆ ಸರಿಯುವಾಗ ನವಾಬರ ನತೃಷ್ಣ ನಯನಗಳು ಎವೆ ಇಕ್ಕದೇ ಅವರ ಕಡೆಗೇ ನೋಡುತ್ತಿದ್ದವು. ಅವರು ಪಟಾಂಗಣದಿಂದ ಹೊರಗೆ ಹೋಗುತ್ತಲೇ ನವಾಬರ ಕಣ್ಣುಗಳಿಗೆ ಶೂನ್ಯವು ಆವರಿಸಿತು. ನವಾಬರ ಬಾಯಿಯಲ್ಲಿ—

ದೌಲತ್! ನನಗೆ ನೀನು ಅಭಯವನ್ನು ಕೊಟ್ಟೆ!
ಸ್ವರ್ಗ ಲೋಕದ ಅಮೃತ ಕುಮಾರಿ ನೀನು!!
ಎಂದು ಹೊರಟಿತು!

# ಪೂರ್ವ ಸ್ಮರಣೆ

ದೌಲತ್ತಳೂ, ರಾಥೆಯೂ ನಗರಕ್ಕೆ ಹಿಂದಿರುಗಿ ಬಂದು ಹದಿನೈದು ದಿವಸಗಳಾಯ್ತು. ಇಂದು ನಗರಕ್ಕೆ ಅರಣಿಯಿಂದ ಓಲೆಕಾರರಿಬ್ಬರು ಬಂದಿದ್ದಾರೆ. ಊರಿನಲ್ಲೆಲ್ಲಾ ಗುಸುಗುಂಪಲು. ಯಾರೂ ಗಟ್ಟಿಯಾಗಿ ಹೇಳುವುದಿಲ್ಲ. ಎಲ್ಲರ ಬಾಯಿಯಲ್ಲೂ ಒಂದೇ ಮಾತು. ಮಂತ್ರಿ ಪೂರ್ಣಯ್ಯನವರು ನಗರದ ನವಾಬ ಇಯುಜ್‌ಖಾನರಿಗೆ ಪತ್ರವನ್ನು ಕಳಿಸಿದ್ದಾರೆ. ಪತ್ರಿಕೆಯೇನೋ ಗುಟ್ಟಿನ ಕಾಗದ. ಆದರೂ ವಿಷಯವೆಲ್ಲಾ ರಟ್ಟಾಗಿಹೋಗಿದೆ. ಗುಟ್ಟು-ಗುಟ್ಟಿನ ಮಾತು ಎಂದೇ ಎಲ್ಲರೂ ಮಾತನಾಡಿಕೊಳ್ಳುತ್ತಾರೆ. ದೊಡ್ಡ ನವಾಬರ ಮರಣವಾರ್ತೆಯು ನಗರವೆಲ್ಲಾ ಹಬ್ಬಿಹೋಗಿದೆ. ಸಂಧ್ಯಾಕಾಲ ನಾಲ್ಕು ಝಾವದ ಸಮಯದಲ್ಲಿ ಫೌಜುದಾರರುಗಳೂ, ಅಧಿಕಾರಿಗಳೂ, ಖಾಜಿಗಳೂ, ಪುರೋಹಿತರೂ ನಗರದಲ್ಲಿ ಗಣ್ಯರಾದ ದೊಡ್ಡಮನುಷ್ಯರುಗಳೆಲ್ಲಾ ಅರಮನೆಯ ದರ್ಬಾರಿನಲ್ಲಿ ಸೇರಿದರು. ವಾದ್ಯಘೋಷಗಳಿಲ್ಲದೇ, ಚೌಪದಾರರ ಪರಾಕುಗಳಿಲ್ಲದೇ, ನವಾಬ ಇಯುಜ್‌ಖಾನರವರು ದರಬಾರಿಗೆ ಬಂದರು. ದರಬಾರಿನ ಖಾಜಿಯವರು ದೊಡ್ಡ ನವಾಬರ ಮರಣವಾರ್ತೆಯನ್ನು ಗಂಭೀರವಾಗಿ ಪ್ರಸಿದ್ಧಪಡಿಸಿದರು. ನಜುರುಮುಜರೆಗಳಿಲ್ಲದೇ ಎಲ್ಲರೂ ನವಾಬರಿಗೆ ತಲೆಬಾಗಿಸಿ ಸಭೆಯಿಂದ ಹೊರಟರು. ಸಭೆಯು ಭರಖಾಸ್ತಾಯಿತು. ಅರಮನೆಯ ಮುಂಭಾಗದಲ್ಲಿ ಕರಿಯ ಫರದೆಗಳನ್ನು ಕಟ್ಟಿಸಿದರು. ಅಂದು ನಗಾರಿ ನೌಫತ್ತುಗಳು ನಡೆಯಲಿಲ್ಲ. ಮಶೀದಿಗಳಲ್ಲಿ ನಮಾಜು ಮಾಡಿ, ದೊಡ್ಡ ನವಾಬರ ಆತ್ಮಕ್ಕೆ ಅಲ್ಲಾನು ಶಾಂತಿಯನ್ನು ಕೊಡಲೆಂದು ಪ್ರಾರ್ಥಿಸಿದರು. ಹಿಂದುಗಳ ದೇವಾಲಯಗಳಲ್ಲಿ ದೀಪಾರಾಧನೆ ಮಾಡಿದರು. ನವಾಬರಿಗೆ ದೇವರು ಸದ್ಗತಿಯನ್ನು ಕೊಡಲೆಂದು ಪ್ರಾರ್ಥಿಸಿದರು.

ಲಕ್ಷ್ಮೀ ನಿವಾಸದಂತಿದ್ದ ನಗರವು ಇಂದು ಶೋಭಾಹೀನವಾಗಿ ಮೇಘಾವೃತವಾದ ಗಗನದಂತೆ ದುಃಖದಿಂದ ತುಂಬಿದೆ. ಅಸ್ತಮಾನವಾಗಿತ್ತು. ಕತ್ತಲು ಕವಿದಿತ್ತು. ಆಕಾಶದಲ್ಲಿ ನಕ್ಷತ್ರಗಳ ಬೆಳಕು. ಆ ಬೆಳಕಿನಲ್ಲಿ ಅಶ್ವಾರೋಹಿಯಾದ ವೀರ ಪುರುಷನೊಬ್ಬನು ದರಿಯಾಬಾಗಿನ ಕಡೆ ಹೋಗುತ್ತಿದ್ದಾನೆ.

ಆ ಅಶ್ವಾರೋಹಿಯ ಮನಸ್ಸಿನಲ್ಲಿ ಯೋಚನಾತರಂಗಗಳೆದ್ದು ಅವನನ್ನು ಎಲ್ಲಿಗೋ ಕೊಂಡುಹೋಗಿಬಿಟ್ಟಿದ್ದವು. ಸ್ವಾಮಿಯ ಮನವರಿತು ನಡೆಯುವ ಆ ಜಾತ್ಯಶ್ವವು ಅಭ್ಯಾಸಾನುಗುಣವಾಗಿ ದರಿಯಾಬಾಗನ್ನು ಪ್ರವೇಶಿಸಿ, ಸೋನಾ ಮಹಲಿನ ಬಳಿ ಹೋಗಿ ನಿಂತಿತು. ಕುದುರೆಯಿಂದ ಇಳಿದು ಇಯಜ್‌ಖಾನನು ಸಾವಟಿಗೆಗಳನ್ನು ಹತ್ತಿ ಮಹಲಿನೊಳಗೆ ಪ್ರವೇಶಿಸಿದನು. ರಾಣಿಯ ಸಖಿಯಾದ ಕೃಷ್ಣವೇಣಿಯು ಖಾನನನ್ನು ಮಹಡಿಯ ಮೇಲೆ ಕರೆದುಕೊಂಡು ಹೋದಳು. ಮಹಡಿಯ ಮೆಟ್ಟಲುಗಳನ್ನು ಹತ್ತುತ್ತಾ ಖಾನನು "ಸಮಾಚಾರವು ಇಲ್ಲಿಗೂ ತಿಳಿಯಿತೋ?" ಎಂದು ಕೇಳಿದನು. ಕೃಷ್ಣವೇಣಿಯು "ದೊಡ್ಡ ನವಾಬರು ಪಾಳಯದಿಂದ ಮಹಮ್ಮದಾಲಿಯವರು ಪತ್ರ ಬರೆದು ಕಳಿಸಿದ್ದಾರೆ. ಆ ಪತ್ರದಿಂದ ಸಕಲವೂ ತಿಳಿಯಿತು" ಎಂದು ಹೇಳಿದಳು. ಖಾನನು ಏನೂ ಹೇಳದೆ ಎರಡು ಮೂರು ಮೆಟ್ಟಲುಗಳನ್ನು ಹತ್ತಿ "ಮಹಮದಾಲಿಯವರದೇ ಪತ್ರ?" ಎಂದನು. ಅಷ್ಟರಲ್ಲಿ ಕೃಷ್ಣವೇಣಿಯು ಹಂತಗಳನ್ನು ಹತ್ತಿಬಿಟ್ಟಿದ್ದಳು. ಮೇಲಿನ ಹಜಾರವನ್ನು ಪ್ರವೇಶಿಸಿ, ಅಲ್ಲಿ ಕುಳಿತಿದ್ದ ದೌಲತ್ತಳನ್ನು ನೋಡಿ, ಅಕ್ಕನವರೇ! ಖಾನರವರು ಬಂದಿದ್ದಾರೆ ಎಂದು ಹೇಳಿದಳು. ದೌಲತ್ತಳು ಸ್ವತಃ ಎದ್ದು ಬಂದು ಖಾನನನ್ನು ಕರೆದುಕೊಂಡು ಹೋಗಿ ಆಸನದ ಮೇಲೆ ಕುಳ್ಳಿರಿಸಿದಳು. ನವಾಬರ ಮರಣ ವಾರ್ತೆಯು ದೌಲತ್ತಳ ಮನಸ್ಸನ್ನು ಕಲಕಿ ಅವಳು ಉದ್ವಿಗ್ನಳಾಗಿರಬಹುದೆಂದು ಖಾನನು ಊಹಿಸಿದ್ದನು. ಆದರೆ ದೌಲತ್ತಳು ಅಷ್ಟು ದುಃಖಾಕ್ರಾಂತಳಾಗಿರುವಂತೆ ಕಾಣಲಿಲ್ಲ. ಸ್ವಲ್ಪ ಕಳವಳದ ಚಿಹ್ನೆಗಳು ಕಾಣುತ್ತಿದ್ದವು. ಮನಸ್ಸಿನ ಪರಿಯನ್ನು ಕಂಡುಹಿಡಿಯಬಲ್ಲ ಜಾಣರು ನೋಡಿದ್ದರೆ ಅವರಿಬ್ಬರಲ್ಲಿ ಇಯಜ್ ಖಾನನೇ ಹೆಚ್ಚು ಕಾತರನಾಗಿದ್ದನೆಂದು ಸುಲಭವಾಗಿ ತಿಳಿದುಕೊಳ್ಳುತ್ತಿದ್ದರು. ಅವರಿಬ್ಬರೂ ಬಹಳ ಹೊತ್ತು ಮೌನವಾಗಿದ್ದರು. ಅವರಿಬ್ಬರ ಮನಸ್ಸಿನಲ್ಲಿಯೂ ದುಃಖಪ್ರವಾಹವು ಹರಿಯುತ್ತಿದ್ದಿತು. ಇಯಜ್‌ಖಾನನು ದೀರ್ಘನಿಶ್ವಾಸವನ್ನು ಬಿಟ್ಟು—

"ದೌಲತ್! ನೋಡಿದೆಯಾ? ಕಡೆಗೆ ನವಾಬರ ದರ್ಶನವೇ ದೊರೆಯದೇಹೋಯಿತು. ಅದು ನನ್ನ ದೌರ್ಭಾಗ್ಯ!"

"ನವಾಬರ ರೋಗವು ಇಷ್ಟುದಾರುಣವೆಂದು ನಾನೂ ಭಾವಿಸಿರಲಿಲ್ಲ."

" ಹಾಗಾದರೆ ನವಾಬರು ಮರಣ ಹೊಂದುವರೆಂದು ಅವರಿಗೆ ಸಂದೇಹವೇ ಇರಲಿಲ್ಲವೇನು ?"

" ಅವರಿಗೇ ? ಆವರೊಬ್ಬರಿಗೆ ಮಾತ್ರ, ಸಂದೇಹವೇ ಏಕೆ ? ನಿಶ್ಚಯವೇ ಆಗಿತ್ತೆಂದು ಹೇಳುತ್ತಾರೆ. ಅವರು ಸಂತೋಷದಿಂದ ಶಾಂತಿಯಿಂದ ಪ್ರಾಣ ಬಿಟ್ಟರೆಂದು ಮುಹಮ್ಮದ್ ಆಲಿಯವರು ಬರೆದಿದ್ದಾರೆ. ಕೊನೆಯಲ್ಲಿ ನಿನ್ನನ್ನು ಬಹಳವಾಗಿ ನೆನಸಿಕೊಂಡರೆಂದು ಬರೆದಿದೆ.

ನನಗೆ ಬಂದಿರುವ ಪತ್ರವು ಮಂತ್ರಿ ಪೂರ್ಣಯ್ಯನವರ ಸ್ವಹಸ್ತ ಲಿಖಿತವಾದುದು. ಒಕ್ಕಣೆಯು ರಾಜಕೀಯ ಒಕ್ಕಣೆ। ಅದರಲ್ಲಿ ನವಾಬರು ಕಾಲಗತಿಯನ್ನೈದಿದರೆಂದು ಸ್ಪಷ್ಟವಾದ ಉಲ್ಲೇಖವಿದೆ. ಇಂಥಾ ಸಮಯಗಳಲ್ಲಿ ಅಷ್ಟೇ ಬರೆಯುವ ಸಂಪ್ರದಾಯವಿರಬಹುದು. ಮುಹಮ್ಮದಾಲಿಯವರು ನಿನಗೆ ಬರೆದಿರುವ ಪತ್ರದಲ್ಲಿ ಏನೋ ವಿಶೇಷವಿರುವಂತಿದೆ."

" ನಿನಗೆ ತಿಳಿಯದ ಅಂತರಂಗವು ನನಗೇನಿದೆ? ನಿಮ್ಮ ರಾಜಕಾರಣಗಳಲ್ಲಿ ನನಗೇನು ಸಂಬಂಧ ?"

ದೌಲತ್ ! ರಾಜಕಾರಣವಿಲ್ಲದೇ, ಗುಪ್ತವೇಷದಿಂದ ನೀನು ನವಾಬರ ಸಮ್ಮುಖಕ್ಕೆ ಪ್ರಯಾಣ ಬೆಳಸಿದ್ದೆಯಾ ? ನಾನು ಬಲ್ಲೆ. ಅಂದೇ ತಿಳಿದಿತ್ತು. ಬಡಾ ಫಕೀರರು ಬಂದಿದ್ದು ನನಗೆ ಗೊತ್ತು. ನೀನು ನವಾಬರ ದರ್ಶನಾರ್ಥವಾಗಿ ಹೊರಟಿದ್ದು ಗೊತ್ತಿದ್ದಿತು. ನವಾಬರನ್ನು ಒಮ್ಮೆ ನೋಡಿ ಬರಬೇಕೆಂದು ನನಗೂ ಅನ್ನಿಸಿತು. ನಗರಕ್ಕೆ ಇಂಗ್ಲೀಷರೊಡನೆ ಯುದ್ಧವು ಸಿದ್ಧವಾಗಿದ್ದ ಕಾಲದಲ್ಲಿ ಈ ಸೀಮೆಯನ್ನು ಬಿಟ್ಟು ಹೋಗುವುದು ಉಚಿತವಾಗಿರಲಿಲ್ಲ. ನೀನು ಹೇಳದೇ ಹೋದೆ. ನಾನು ಕೇಳದೇ ತಿಳಿದುಕೊಂಡೆ. ರಾಜಕಾರಣವಿಲ್ಲದೇ ನೀನು ನವಾಬರ ಶಿಬಿರಕ್ಕೆ ಹೊಗಿದ್ದೆಯೋ ? ರಾಜಕಾರಣವಿಲ್ಲದೆ ದಿವಾನ್ ಮುಹಮದಾಲಿಯವರು ನಿನಗೆ ಪತ್ರ ಬರೆದಿದರುವರೋ ?

" ಅಂತಹ ಅಂತರಂಗವೇನೂ ಇಲ್ಲ. ದೊಡ್ಡ ನವಾಬರು ಬಂದು ಹೋಗಬೇಕೆಂದು ಬಡಾ ಫಕೀರರೊಡನೆ ಹೇಳಿ ಕಳಿಸಿದ್ದರು. ಅದು ಅವರು ಈ ಗರೀಬಳ ಮೇಲೆ ಮಾಡಿದ ಅನುಗ್ರಹ. ಅದರಲ್ಲಿ ರಾಜಕಾರಣವೇನೂ ಇಲ್ಲ. ಇಂದು ಬಂದಿರುವ ಪತ್ರದ ಮಾತು ಬೇರೆ. ಮುಹಮ್ಮದಾಲಿಯವರ

ಪತ್ರವು—ಮೇಲೆ ನನಗೆ ಬರದಿದ್ದಂತೆ ಇದ್ದರೂ, ಒಳಗಿನ ಒಕ್ಕಣೆಯೆಲ್ಲಾ ನಿನಗೆ ಬರೆದಿದೆ. ಈ ಕಾಗದವನ್ನು ನೋಡು" ಎಂದು ದೌಲತ್ತಳು ಹೇಳಿದಳು. ಇಯುಜ್‌ಖಾನನು ಅವಸರದಿಂದ ಆ ಕಾಗದವನ್ನು ತೆಗೆದುಕೊಂಡು ಆದರದಿಂದ ಓದಿದನು.

ನವಾಬರ ಪ್ರೇಮದ ಕುಮಾರಿ!

ನವಾಬರು ದೈವಾಧೀನರಾದರು. ನೀವು ದರ್ಶನಮಾಡಿ ಹೊರಟು ಹೋದ ಮಾರನೆಯ ದಿವಸವೇ ಸ್ವರ್ಗಸ್ಥರಾದರು. ಅಲ್ಲಾನ ಕರುಣೆಯು ಅವರ ಮೇಲೆ ಅಪಾರವಾದುದು. ಶಾಂತವಾಗಿ ಪ್ರಾಣಬಿಟ್ಟರು. ಆ ಮರಣದಲ್ಲಿಯೂ ಅವರ ಮುಖದಲ್ಲಿ ನಗುವಿನ ಪ್ರಕಾಶವಿತ್ತು. ಸಮೀಪದಲ್ಲಿ ಬಡಾ ಫಕೀರರೂ, ಹಕೀಂ ಸಾಹೇಬರೂ, ಮಂತ್ರಿ ಪೂರ್ಣಯ್ಯನವರೂ ಇದ್ದರು. ಈ ಗರೀಬನಿಗೂ ಆ ಸಾನ್ನಿಧ್ಯವು ದೊರಕಿತ್ತು. ಮುಖ್ಯವಾಗಿ ಇಲ್ಲಿ ಇರಬೇಕಾಗಿದ್ದ ಚಿಕ್ಕನವಾಬರೂ, ನಗರದ ನವಾಬರೂ ಇರದಿದ್ದುದು ಮಾತ್ರ ಕೊರತೆ ಸಾಯುವುದಕ್ಕೆ ಸ್ವಲ್ಪ ಮುಂಚೆ ಬಡಾ ಫಕೀರರನ್ನು ಆಲಂಗಿಸಿ, ಮುತ್ತಿಟ್ಟು, ನಮಿಸಿದರು. ನಮ್ಮೆಲ್ಲರನ್ನೂ ಹರಸಿದರು, ಇಯುಜ್ ಖಾನರನ್ನು ಆಶೀರ್ವದಿಸಿದರು ಪುನಃ ಮೌನ! ನಿಶ್ಶಬ್ದತೆ!! ಅವರ ಮುಖದಲ್ಲಿ ಮಂದಹಾಸವು ಬೆಳಗುತ್ತಿತ್ತು. ಅದು ಅಲ್ಲಾನ ಪ್ರಸಾದ. ಕೊನೆಯ ಮಾತು. "ಈ ಮೈಸೂರು ನಿಮ್ಮದು" ಇದೇ ನವಾಬರ ಕೊನೆಯ ಮಾತು. ಇದೇ ನವಾಬರ ಕೊನೆಯ ಉಸಿರು! ಹೀಗೆ ನಾವೆಲ್ಲಾ ಇಂದು ಅನಾಥರಾದೆವು. ನಗರದ ನವಾಬರಾದ ಇಯುಜ್‌ಖಾನರಿಗೆ ಅನೇಕ ವಂದನೆಗಳನ್ನರ್ಪಿಸಬೇಕು. ಇದರೊಡನೆಯೇ ಬಡಾ ಫಕೀರರ ಹರಿಕೆಯನ್ನು ತಿಳಿಸಬೇಕು.

ಇತೀ ತಮ್ಮ ಸೇವಕ
ಗರೀಬ ಮುಹಮ್ಮದ್.

ಈ ಪತ್ರವನ್ನು ಓದುತ್ತ ಓದುತ್ತ ಇಯುಜ್‌ಖಾನನ ಕಣ್ಣುಗಳಲ್ಲಿ ನೀರು ಬಂತು. ಕೊರಳು ಬಿಗಿದು ಬಂತು. ಕಾಗದದ ಮೇಲೆ ಕಣ್ಣೀರು ತೊಟ್ಟಿಕ್ಕಿತು "ಇಯುಜ್‌ಖಾನರನ್ನು ಆಶೀರ್ವದಿಸಿದರು" ಎಂಬ ಮಾತನ್ನು ಕಂಡಾಗ ದುಃಖವು ಮೇಲಕ್ಕೆ ಬಂದೇಬಿಟ್ಟಿತು. ಬಿಕ್ಕಿ ಬಿಕ್ಕಿ ಅಳುತ್ತಾ ಆ ಮಾತನ್ನು ಕಣ್ಣಿಗೊತ್ತಿಕೊಂಡನು. ಮುತ್ತಿಟ್ಟನು. ಕೊನೆಗೆ ಗದ್ಗದ ಕಂಠದಿಂದ "ಈ

ಮೈಸೂರು ನಿಮ್ಮದು, ಈ ಮೈಸೂರು ನಿಮ್ಮದು" ಎಂಬ ಮಾತು ಅವನ ಬಾಯಿಯಲ್ಲಿ ಒಂದೆರಡು ಬಾರಿಬಂತು. ಈ ದುಃಖವು ಮೇಲೆ ಮೇಲೆ ಬಂತು. ದೌಲತ್ತಳಿಗೂ ದುಃಖ ಬಂತು. ರಾಧೆಯೂ ಅತ್ತಳು. ಕೃಷ್ಣವೇಣಿಯು ಅವಾಕ್ಕಾಗಿ ಸ್ವಲ್ಪ ಹೊತ್ತು ನಿಂತಿದ್ದು ಹೊರಟುಹೋದಳು. ಬಹಳ ಹೊತ್ತಾದ ಮೇಲೆ ದುಃಖದ ವೇಗವು ಇಳಿದಮೇಲೆ ಇಯಜ್‌ಖಾನನು.—

"ದೌಲತ್! ನಿನ್ನ ಮನಸ್ಸಿಗೆ ಇಂದು ಬಹಳ ದುಃಖವಾಗಿದೆ ಯೇನು?"

"ಅಷ್ಟೇನೂ ಇಲ್ಲ. ಎಷ್ಟೇ ಸಮಾಧಾನ ಮಾಡಿಕೊಂಡರೂ ಏನೋ ಒಂದು ಆವೇಶವು ಬಂದು ಎತ್ತಿಹಾಕುತ್ತದೆ."

"ಅದು ಪ್ರೀತಿಯ ಸ್ವಭಾವ! ಅದನ್ನು ನಾವೇ ಸಹಿಸಿಕೊಳ್ಳಬೇಕು."

"ತನ್ನಷ್ಟಕ್ಕೇ ಸಮಾಧಾನಕ್ಕೆ ಬರುತ್ತದೆ. ಅದು ಮಾನವ ಸ್ವಭಾವ."

ಪುನಃ ಮೌನವು ಆವರಿಸಿತು. ರಾಧೆಯು ಎದ್ದು ಹೊರಟು ಹೊದಳು.

"ಇಯಜ್‌ಖಾ! ಇನ್ನು ಮುಂದೆ ರಾಜ್ಯವು ಏನಾಗುತ್ತದೆ!"

"ನವಾಬರು ಕೃಷ್ಣಾನದಿಯಿಂದ ಕಾವೇರಿಯ ತಾಮ್ರಪರ್ಣಿಯವರೆಗೆ ರಾಜ್ಯವನ್ನು ವಿಸ್ತರಿಸಿದ್ದಾರೆ. ಅದನ್ನು ರಕ್ಷಿಸುವುದು ನಮ್ಮಗಳ ಕೆಲಸ ಅದೇ ನವಾಬರು ಹೇಳಿರುವ "ಮೈಸೂರು ನಿಮ್ಮದು" ಎಂಬ ಅಂತ್ಯ ವಾರ್ತೆಯ ಆದೇಶ."

"ಮೈಸೂರಿನ ಸಿಂಹಾಸನವು ಯಾರಿಗೆ ಸಲ್ಲತಕ್ಕದ್ದು?"

"ದೌಲತ್! ಸಿಂಹಾಸನದ ಮಾತೇಕೆ? ಈಗ ಅಧಿಕಾರವು ಟಿಪ್ಪೂ ಸುಲ್ತಾನರದು."

"ಇಯಜ್‌ಖಾನರೇ! ನಗರದ ನವಾಬರೂ ಟಿಪ್ಪೂಸುಲ್ತಾನರ ಅಧಿಕಾರ ವನ್ನು ಮಾನ್ಯಮಾಡುವರೇ?"

"ದೊಡ್ಡ ನವಾಬರಿಗಿದ್ದ ಸರ್ವಾಧಿಕಾರವೂ ಟೀಪೂಸುಲ್ತಾನರಿಗೆ ಸಲ್ಲ ತಕ್ಕದ್ದೇ. ನಗರದ ನವಾಬರೂ ಶಿರಸಾವಹಿಸಿ ಅದನ್ನು ನಡೆಸಲೇಬೇಕು."

"ಇಯಜ್‌ಖಾನ್! ಟೀಪೂಸುಲ್ತಾನರಲ್ಲಿ ನಿನಗೆ ಇಷ್ಟು ಸ್ನೇಹವೇ?"

"ದೌಲತ್! ಅದು ಟೀಪುವಿನ ಸ್ನೇಹವಲ್ಲ. ದೊಡ್ಡ ನವಾಬರಲ್ಲಿರುವ ಅಚಂಚಲ ಭಕ್ತಿ. ಮೈಸೂರು ರಾಜ್ಯದಲ್ಲಿರುವ ಪ್ರೇಮ."

"ಟೀಪೂಸುಲ್ತಾನರಿಗೂ, ಇಯುಜ್‌ಖಾನರಿಗೂ ಸ್ನೇಹವಾಗುವ ಸಂಭವವೇ ಇಲ್ಲವೇ?"

"ಇಲ್ಲಾ! ಈ ಜನ್ಮದಲ್ಲಿಯೇ ಸ್ನೇಹವಾಗುವುದಿಲ್ಲ. ದೇವರು ನಮ್ಮಿಬ್ಬರನ್ನ ಸೃಷ್ಟಿಸಿದಾಗಲೇ ಆ ದ್ವೇಷವನ್ನಿಟ್ಟು ಸೃಜಿಸಿರುವನು. ಅದು ನಮ್ಮ ಮರಣಾವಧಿ."

"ಹಾಗಾದರೆ ನಗರದ ನವಾಬಗಿರಿಯು ನಿನಗೆ ಶಾಶ್ವತವಲ್ಲ."

"ನವಾಬಗಿರಿಯನ್ನು ನಾನು ಆಶಿಸುವುದೇ ಇಲ್ಲ. ಅದಕ್ಕಾಗಿ ಜಗಳವೂ ಇಲ್ಲ. ಅಂಥಾ ರಾಜ್ಯದ ಆಶೆ ನನಗಿದ್ದಿದ್ದರೆ ಈ ಅಖಂಡ ಸಾಮ್ರಾಜ್ಯವನ್ನು ನನ್ನ ಕತ್ತಿಯಿಂದ ಕಟ್ಟುತ್ತಿದ್ದೆ. ಆದರ ಮುಂದೆ ನೂರುಮಂದಿ ಟಿಪ್ಪುಗಳಾದರೂ ಕುರಿಯ ಮರಿಗಳೇ! ಆ ರಾಜ್ಯವನ್ನು ನಾನು ಮನಸಾರ ಟೀಪೂಸುಲ್ತಾನನಿಗೆ ಬಿಟ್ಟಿರುತ್ತೇನೆ."

"ದೌಲತ್ತಳು (ನಸುನಗುವನ್ನು ನಗುತ್ತಾ) ಮತ್ತೆ ನಿಮ್ಮಿಬ್ಬರ ವೈರವು ಎಲ್ಲಿದೆ?

"ದೌಲತ್! ನೀನು ಮೊದಲಿನಿಂದಲೂ ಬಲ್ಲೆ. ಇಂದು ನನ್ನ ಬಾಯಿನಿಂದ ಹೇಳಿಸುವ ಸಂದರ್ಭವನ್ನು ತಂದಿದ್ದಿ. ನಮ್ಮಿಬ್ಬರ ವೈರವು ಜಗನ್ಮೋಹಿನಿಯಾದ ನಿನ್ನಿಂದ! ಅಂದು ಶ್ರೀರಂಗಪಟ್ಟಣದಲ್ಲಿ ಕಾವೇರಿಯ ದಂಡೆಯ ಮೇಲೆ ಟಿಪ್ಪೂಸುಲ್ತಾನನು ನಿನ್ನ ಮೇಲೆ ಆಕ್ರಮಣ ಮಾಡಿದಾಗ—ಅಂದೇ ಅವನು ನನ್ನ ಹಿರಿದ ಕತ್ತಿಗೆ ಆಹುತಿಯಾಗಿದ್ದನು. ವಿಧಿಯು ಆ ಹೊತ್ತಿಗೆ ದೊಡ್ಡ ನವಾಬರನ್ನು ಅಲ್ಲಿಗೆ ಕರತಂದು ಟೀಪ್ಪುವಿಗೆ ಆಯುರ್ದಾನ ಮಾಡಿಸಿತು, ದೊಡ್ಡ ನವಾಬರು ಅಂದು ನನ್ನನ್ನು ಕ್ಷಮಿಸಿದರು. ಕ್ಷಮಿಸಿದುದು ಮಾತ್ರವಲ್ಲ. ಅನುಗ್ರಹಿಸಿದರು. ಅದೇ ದಿನ ನವಾಬರು ನನಗೆ ಈ ನಗರದ ನವಾಬಗಿರಿಯನ್ನು ಕೊಟ್ಟು ನನ್ನನ್ನು ಇಲ್ಲಿಗೆ ಕಳುಹಿಸಿದರು. ಅಂದಿನ ದರಬಾರಿನಲ್ಲಿ ನವಾಬರು ನನಗೆ ಮಾಡಿದ ಗೌರವವನ್ನು ನೋಡಿ ಎಲ್ಲರೂ ಅಚ್ಚರಿಗೊಂಡರು. ಆ ದಿನ ದರಬಾರಿಗೆ ಟಿಪ್ಪೂಸುಲ್ತಾನನು ಬರಲಿಲ್ಲ. ದೊಡ್ಡ ನವಾಬರು

ದರಬಾರಿನಲ್ಲಿ ನನಗೆ ಸಮುಗದ್ದುಗೆಯನ್ನು ಕೊಟ್ಟಿದ್ದರು. ಅದು ಟೀಪ್ಪುವಿಗೆ ಸಹನೆ ಇಲ್ಲ. ಅವನ ಮನಸ್ಸು ಕ್ರೋಧದ್ವೇಷಗಳಿಂದ ತಪ್ತವಾಗಿತ್ತು. ಆ ದಿನ ಸಂಧ್ಯಾಕಾಲ ನಸುಗತ್ತಲೆಯಲ್ಲಿ ಟೀಪುವು ನನ್ನ ಮನೆಗೆ ಬಂದನು. ನಾನು ಬಾಗಿಲಿಗೆ ಬಂದು ಎದುರುಗೊಂಡು ರಂಗಮಹಲಿಗೆ ಕರೆದುಕೊಂಡು ಹೋಗಿ ಆಸನವಲ್ಲಿ ಕೂಡಿಸಿ ಮನ್ನಣೆಮಾಡಿದೆ. ನಾನು ನನ್ನ ಅಪರಾಧವನ್ನು ಕ್ಷಮಿಸಬೇಕೆಂದು ಪ್ರಾರ್ಥನೆ ಮಾಡಿದೆ. ಟೀಪೂಸುಲ್ತಾನನು—" ಇಯುಜ್‌ಖಾನರೇ! ನೀವು ನವಾಬರ ಪ್ರೇಮದ ಪುತ್ರರು. ತಮ್ಮ ಅಪರಾಧವೆಲ್ಲಿ ಬಂತು. ನಾನು ಕ್ಷಮಿಸುವುದೆಂದರೇನು ? ಸುಲ್ತಾನರವರು ಯಶಸ್ವಿಗಳಾಗಿರುವಾಗಲೇ ತಾವು ಅವರಿಗೆ ಸರಿಸಮಾನಸ್ಥರೆಂಬ ನಗರದ ನವಾಬಗಿರಿಗೆ ಏರಿದ್ದೀರಿ. ಮುಂದೆ ಮೈಸೂರು ಸಿಂಹಾಸನವು ತಮ್ಮದೇ ಇದೆ ' ಎಂದು ಹೇಳಿದನು.

ನಾನು,— " ಚಿಕ್ಕ ನವಾಬರೇ ! ನಾನು ನವಾಬರವರ ಪ್ರೇಮದ ಪುತ್ರ ನಿಜ. ಅದು ಅವರು ಈ ಗರೀಬನ ಮೇಲೆ ಮಾಡಿರುವ ಅನುಗ್ರಹ. ತಾವು ನವಾಬರ ಔರಸಪುತ್ರರು. ಅದು ಅಲ್ಲಾವಿನ ಇಚ್ಛೆ. ನನಗೆ ನವಾಬರು ಹೇಗೆ ಯಜಮಾನರೋ, ತಾವೂ ಹಾಗೆಯೇ. ಈ ಸೇವಕನ ಭುಜಗಳಲ್ಲಿ ಬಲವಿದ್ದರೆ ಪರಾಕ್ರಮವಿದ್ದರೆ ಅದೆಲ್ಲಾ ತಮ್ಮ ಸೇವೆಗಾಗಿಯೇ. ಮರಾಠರನ್ನು ಮುರಿದು ಹೈದರಾಬಾದನ್ನು ಬಗ್ಗಿಸಿ ಇಡೀ ದಕ್ಷಿಣ ಹಿಂದೂಸ್ಥಾನದಲ್ಲಿ ಸಾಮ್ರಾಜ್ಯವನ್ನು ಕಟ್ಟಬೇಕೆಂದು ನವಾಬರ ಸಂಕಲ್ಪ. ಈ ಸಿಂಹಾಸನಕ್ಕೆ ತಾವೇ ಅಧಿಕಾರಿಗಳು. ನಾವೆಲ್ಲಾ ನವಾಬರ ಕಾರ್ಯಸಾಧನೆ ಮಾಡುವ ಭೃತ್ಯರು" ಎಂದು ಹೇಳಿದೆನು. ಟೀಪುವು ' ಇಯುಜ್‌ಖಾನರೇ ! ನಿಮ್ಮ ಸ್ವಾಮಿಭಕ್ತಿಯು ಅಕಲಂಕವಾದುದು. ಆದರೆ ನಮ್ಮ ವೈರವು ರಾಜ್ಯದ್ದಲ್ಲ. ನನ್ನ ಮನವು ದೌಲತ್ತಳಲ್ಲಿ ನೆಟ್ಟು ಹೋಗಿದೆ. ಅವಳ ಮೇಲಿನ ಮೋಹದಿಂದ ನಾನು ಹುಚ್ಚನಾಗಿದ್ದೇನೆ. ನಾನು ತಂದೆಯನ್ನಾದರೂ ಬಿಡಬಲ್ಲೆ. ಈ ರಾಜ್ಯವನ್ನಾದರೂ ತೊರೆಯಬಲ್ಲೆ. ದೌಲತ್ತಳನ್ನು ಬಿಡಲಾರೆ. ಅದಕ್ಕೆ ನೀನು ಪ್ರತಿದ್ವಂದ್ವಿ. ದೌಲತ್ತಳ ಪ್ರೇಮವು ನಿನ್ನ ಮೇಲೆ ಒಲಿದಿದೆಯೆಂದು ನನ್ನ ಸಂದೇಹ. ಇದೇ ಕಾರಣದಿಂದ ಒಂದು ಕ್ಷಣವೂ ಈ ಭೂಮಿಯ ಮೇಲೆ ನಿನ್ನನ್ನು ಸಹಿಸಲಾರೆ. ದೌಲತ್ತಳು ಒಪ್ಪಲಿ ಒಪ್ಪದಿರಲಿ ನಾನು ಬಲಾತ್ಕಾರದಿಂದಲಾದರೂ ಅವಳನ್ನು ವಶಪಡಿಸಿಕೊಳ್ಳುತ್ತೇನೆ."

" ನವಾಬರೇ! ದೌಲತ್ತಳನ್ನು ಬಲಾತ್ಕರಿಸುವ ಬಲವು ತಮ್ಮ ಭುಜ ಗಳಲ್ಲಿಲ್ಲ. ತಮಗಿರುವುದು ಮೋಹದ ಭ್ರಾಂತಿ "

" ಇಯಜ್ ಖಾನರೇ! ಅದನ್ನೇ ಶಪಥಪೂರ್ವಕವಾಗಿ ಹೇಳಿಹೋಗು ವುದಕ್ಕೆ ಬಂದೆ. ನಾವಿಬ್ಬರೂ ಇಂದಿನಿಂದ ಆಜನ್ಮಶತೃಗಳು. ಒಬ್ಬರ ಕತ್ತಿಯಲ್ಲಿ ಮತ್ತೊಬ್ಬರ ಪ್ರಾಣಗಳು ಹಾರಬೇಕು. ಇದು ನಮ್ಮಿಬ್ಬರಲ್ಲಿಯೇ ಇರಲಿ." ಹೀಗೆಂದು ಟೀಪೂಸುಲ್ತಾನನು ಆಗ್ರಹದಿಂದ ಹೇಳಿ ಆಸನದಿಂದ ಎದ್ದನು.

" ಅಲ್ಲಾನ ಇಷ್ಟ. ಆಗಲಿ! ಅದು ವೀರರಿಗೊಪ್ಪುವ ಮಾತು " ಎಂದು ನಾನು ಹೇಳಿದೆ. ಅವನು ಬೀಳ್ಕೊಂಡು ಹೊರಟುಹೋದನು. ಆ ಕತ್ತಲೆಯಲ್ಲಿ ಗವಾಕ್ಷದ ಕಡೆಯಿಂದ ಮತ್ತೊಬ್ಬರಾರೋ ವೇಗದಿಂದ ಹಿಂಬಾಲಿಸಿ ಹೋದರು. ಅವರು ಬಹುದೂರ ಹೊರಟುಹೋಗಿದ್ದರು. ಅವರು ಮತ್ತಾರೂ ಅಲ್ಲ. ಸಾಕ್ಷಾತ್ ದೊಡ್ಡ ನವಾಬರವರು. ಈ ಸಮಾಚಾರವು ಮತ್ತಾರಿಗೂ ತಿಳಿ ಯದು. ಇಂದು ನವಾಬರ ದುಃಖದಲ್ಲಿ ಹಳೆಯದೆಲ್ಲಾ ನೆನಪಾಯಿತು. ಅದು ನಿನ್ನ ಸಂಬಂಧದ ಮಾತು. ನಿನಗೂ ತಿಳಿದಿರುವುದು ಉತ್ತಮ.

" ಇದನ್ನು ನಾನು ಬಲ್ಲೆ. ದೊಡ್ಡ ನವಾಬರು ನನ್ನನ್ನು ಇಲ್ಲಿಗೆ ಕಳುಹಿಸುವಾಗ ಇಯಜ್ ಖಾನರಿಗೂ ಟೀಪುವಿಗೂ ಬದ್ಧ ವೈರವಿದೆ. ಇಬ್ಬರೂ ನಿನ್ನ ಪ್ರಣಯಕಾಂಕ್ಷಿಗಳು. ನೀನು ಒಲಿದವರನ್ನು ವರಿಸಬಹುದು. ಟೀಪುವಿನ ಅತ್ಯಾಚಾರ, ಆಕ್ರಮಣಗಳಿಂದ ತಪ್ಪಿಸಲು ನಿನ್ನನ್ನು ದೂರ ಕಳುಹಿಸುತ್ತೇನೆ. ಅಲ್ಲಿಯೂ ನೀನು ಇಯಜ್ ಖಾನನ ಅಧೀನಳಲ್ಲ, ಸ್ವತಂತ್ರಳು " ಎಂದು ಹೇಳಿದ್ದರು.

ಇಯಜ್ ಖಾನನೂ, ದೌಲತ್ತಳೂ ಬಹಳ ಹೊತ್ತು ನೀರವವಾಗಿ ದುಃಖಿ ಸುತ್ತಿದ್ದರು. ಬಲುಹೊತ್ತು ಕಳೆದಮೇಲೆ ರಾಧೆಯು ಹುಕ್ಕಾವನ್ನು ತಂದು ಮುಂದಿಟ್ಟಳು. ಸುಗಂಧಮಿಶ್ರಿತವಾದ ತಂಬಾಕನ್ನು ತಿಕ್ಕಿ ಹಾಕಿ, ಊದಿ, ಕಿಡಿಗಳನ್ನು ಕೆರಳಿಸಿ ಚಿನ್ನದ ನಳಿಗೆಯನ್ನು ಇಯಜ್ ಖಾನನ ಕೈಗೆ ಕೊಟ್ಟಳು. ಇಯಜ್ ಖಾನನು ಅನ್ಯಮನಸ್ಕನಾಗಿ ಹುಕ್ಕಾವನ್ನು ಆರಾಧಿಸುತ್ತಿದ್ದನು. ಮಧ್ಯೆ " ಮೈಸೂರು ನಮ್ಮದು ನಮ್ಮದು " ಎಂದು ಒಂದೆರಡು ಬಾರಿ ಸ್ಖಲಿತ ವಾಣಿಯಿಂದ ನುಡಿದನು. ಮತ್ತೊಂದು ಬಾರಿ ಹುಕ್ಕಾಸೇವನೆ ಮಾಡಿದನು.

ಮುಖವು ಕೆಂಪೇರಿತು. ಇಯುಜ್‌ಖಾನನು ಹೇಳಿದನು “ ಮೈಸೂರು ನಿಮ್ಮದು ”........

ಇಯುಜ್........ಖಾನನೂ........ಟಿಪ್ಪೂ........ಸುಲ್ತಾನನೂ............ ಆಜನ್ಮವೈರಿಗಳು. ನಗರದ ನವಾಬಗಿರಿಯು ಶಾಶ್ವತವಲ್ಲ. ಮೈಸೂರು ರಾಜ್ಯವು ಚೂರುಚೂರಾಗಿ ಹೋಗುವುದು. ಹೋಗಲಿ ! ಹೋಗಲಿ !

ದೌಲತ್ ! ದೌಲತ್ !! ಎಲ್ಲವೂ ನಿನ್ನ ಕೈಯಲ್ಲಿದೆ. ನೀನು ಇಂದು ಮೈಸೂರಿನ ಭಾಗ್ಯದೇವತೆ. ವಿಧಾತನಿಗಿಂತಲೂ ಮಿಗಿಲಾದ ವಿಧಾತ್ರಿ. ಎಲ್ಲವೂ ನಿನ್ನ ಕೃಪಾಪಾಂಗದಲ್ಲಿ.

ಸುಂದರ ಮುಖಾರವಿಂದ ಮಂದಹಾಸದಲ್ಲಿ ! ಕುಸುಮಕೋಮಲ ಚರಣತಲದಲ್ಲಿ !

ಹುಕ್ಕೆಯ ನಳಿಗೆಯನ್ನು ಕೆಳಗಿಟ್ಟು ಇಯುಜ್‌ಖಾನನು ಜಗ್ಗನೆದ್ದನು. ದೌಲತ್ತಳೂ ಎದ್ದಳು. ರಾಧೆಯೂ ಎದ್ದು ನಿಂತಳು. ಇಯುಜ್‌ಖಾನನು ಹೇಗೆ ಹೇಗೆಯೋ ದೌಲತ್ತಳನ್ನೂ, ರಾಧೆಯನ್ನೂ ಬೀಳ್ಕೊಂಡು ಕೆಳಗಿಳಿದು ಬಂದನು. ಮಾತನಾಡದೇ ಕುದುರೆಯ ಬಳಿಗೆ ಬಂದು ಕುದುರೆಯನ್ನು ಹತ್ತಿದನು. ಕುದುರೆಯನ್ನು ಚಪ್ಪರಿಸುತ್ತಲೇ ಅದು ನಗರಾಭಿಮುಖವಾಗಿ ಹೊರಟು ಹೋಯಿತು. ದಾರಿಯಲ್ಲಿ ಕಂಡವರು ಬಗ್ಗಿ ಅಭಿವಾದನ ಮಾಡುತ್ತಿದ್ದರು. ಖಾನನು ಅತ್ತಿತ್ತ ನೋಡದೆ ಮೈಮರೆತು ಮುಂದೆ ಹೋದನು. ಎಲ್ಲರೂ ಖಾನರು ದುಃಖಮಗ್ನರಾಗಿದ್ದಾರೆ ಎಂದು ಪಿಸುಮಾತಿನಿಂದ ಹೇಳಿಕೊಳ್ಳುತ್ತಿದ್ದರು. ಖಾನನು ಮಹಲಿನೊಳಗೆ ಪ್ರವೇಶಮಾಡಿದನು. ಅಂದಿನ ಗಂಭೀರ ದುಃಖದಲ್ಲಿ ನಗರವು ಮುಳುಗಿಹೋಗಿತ್ತು !

# ಅಗ್ನಿಮಥನ

ರಾಜಧಾನಿಯಾದ ಶ್ರೀರಂಗಪಟ್ಟಣವು ಇಂದು ಹೊಸಕಳೆಯಿಂದ ಶೋಭಿಸುತ್ತಿದೆ. ಮನೆಗಳಿಗೂ ಮಹಲುಗಳಿಗೂ ಸುಣ್ಣ, ಬಣ್ಣಗಳನ್ನು ಹಚ್ಚಿದಾರೆ. ಪಟ್ಟಣವೆಲ್ಲಾ ತಳಿರುತೋರಣಗಳಿಂದ ಅಲಂಕೃತವಾಗಿದೆ. ಎಲ್ಲ ಕಟ್ಟಡಗಳ ಮೇಲೆಯೂ ಪತಾಕೆಗಳು ಹಾರಾಡುತ್ತಿವೆ. ಸೈನಿಕರೂ, ಕಂದಾಚಾರದವರೂ, ಢಳಾಯಿತರೂ ಎಲ್ಲರೂ ಹೊಸ ಹೊಸ ದಿರಸುಗಳನ್ನು ಧರಿಸಿ ಬೀದಿಗಳಲ್ಲಿ ಸಡಗರದಿಂದ ಓಡಿಯಾಡುತ್ತಿದ್ದಾರೆ. ಎಲ್ಲೆಲ್ಲಿಯೂ ವಾದ್ಯಘೋಷಗಳು ಮೊಳಗುತ್ತಿವೆ. ಪಟ್ಟಣದ ಸಮಸ್ತ ಬೀದಿಗಳಲ್ಲಿಯೂ ಜನಸಂದಣಿ. ಈ ದಿನ ಟೀಪ್ಪೂಸುಲ್ತಾನರು ಅಧಿಕಾರ ಸೂತ್ರಗಳನ್ನು ರಾಜಕೀಯವಾಗಿ ಕೈಗೆ ತೆಗೆದುಕೊಳ್ಳುತ್ತಾರೆ. ಎಲ್ಲೆಲ್ಲಿಯೂ ಉತ್ಸವ. ಸಡಗರ ಬೆಳಿಗ್ಗೆ ಹತ್ತು ಗಂಟೆಗೆ ದರ್ಬಾರು. ದರ್ಬಾರಿನ ಮುಖ್ಯಸ್ಥರೆಲ್ಲರೂ ರಾಜಮಹಲಿನ ಕಡೆಗೆ ಹೋಗುತ್ತಿದಾರೆ. ಮಂತ್ರಿಗಳೂ, ಖಾಜಿಗಳೂ ಮ್ಯಾನಾಗಳಲ್ಲಿ ಕುಳಿತು ಮಹಲಿಗೆ ಹೊರಟಿದ್ದಾರೆ. ದರಬಾರು ಮಂದಿರವು ಅಭೂತಪೂರ್ವವಾಗಿ ಅಲಂಕೃತವಾಗಿದೆ. ಸದರಿನ ಮುಂದೆ ಗಾಯಕರು. ಅವರ ಮುಂದುಗಡೆ ನರ್ತಕಿಯರು. ಹೊರಬಾಗಿಲಿನಲ್ಲಿ ವಾದ್ಯಗಾರರು ಸನ್ನದ್ಧರಾಗಿ ಕಾದಿದ್ದಾರೆ. ಚೋಪುದಾರರು ಸಭಾಮಂದಿರದಲ್ಲೆಲಾ ತಮ್ಮ ತಮ್ಮ ಸ್ಥಾನದಲ್ಲಿ ನಿಂತು ಎಚ್ಚರಿಸುತ್ತಿದ್ದಾರೆ. ದರ್ಬಾರಿನ ದೊಡ್ಡಮನುಷ್ಯರೆಲ್ಲರೂ ಬಂದು ಆಸನಗಳಲ್ಲಿ ಕುಳಿತಿದ್ದಾರೆ. ಮಂತ್ರಿಗಳೂ, ಸೈನಾಧಿಕಾರಿಗಳೂ, ಖಾಜಿಗಳೂ, ರಾಜಬಂಡೆಯವರೂ ದಿವ್ಯಾಸನಗಳನ್ನು ಅಲಂಕರಿಸಿದ್ದಾರೆ. ಸಮಸ್ತರೂ ಖಿಲತ್ತುಗಳನ್ನು ಸಿದ್ಧವಾಗಿಟ್ಟುಕೊಂಡಿದ್ದಾರೆ. ಆ ತುಂಬಿದ ದರಬಾರು ನಿಶ್ಶಬ್ದವಾಗಿದೆ. ದರಬಾರೀ ದಿವಾನರವರ ಅಪ್ಪಣೆಯಂತೆ ವಾದ್ಯಘೋಷಗಳಿಗೆ ಆರಂಭವಾಯಿತು. ಸುಲ್ತಾನರ ಸವಾರಿಯು ಇನ್ನೂ ಬಿಜಯಮಾಡಿಸಿರಲಿಲ್ಲ. ಅಷ್ಟರಲ್ಲಿ ನಗರದ ನವಾಬರ ಕಡೆಯಿಂದ ಖಿಲ್ಲತ್ತುಗಳನ್ನು ತೆಗೆಸಿಕೊಂಡು ದಿವಾನ್ ಖಾಸಿಂ ಆಲಿಯವರು ದರ್ಬಾರು ಮಂದಿರವನ್ನು ಪ್ರವೇಶ ಮಾಡಿದರು. ಗಂಭೀರವಾಗಿ ಅಡಿ ಇಡುತ್ತಾ ಸಿಂಹಾಸನದ ಬಳಿಗೆ ಸಾರಿದರು. ವಿಶಾಲವಾದ ಚಿನ್ನದ ತಟ್ಟೆಗಳಲ್ಲಿ ಖಿಲ್ಲತ್ತುಗಳನ್ನು ತೆಗೆದುಕೊಂಡು ನಗರದ ಸರದಾರರುಗಳು ಖಾಸಿಂ ಆಲಿಯವರನ್ನು

ಹಿಂಬಾಲಿಸಿ ಬಂದರು ಸಿಂಹಾಸನದ ಮುಂದೆ ಆ ಖಿಲ್ಲತ್ತುಗಳನ್ನೆಲ್ಲಾ ಅಲಂಕರಿಸಿಟ್ಟರು. ಆ ಅನರ್ಘ ವಸ್ತ್ರಾಭರಣಗಳನ್ನು ನೋಡಿ, ದರಬಾರಿನವರೆಲ್ಲರೂ ಬೆರಗಾದರು. ನಗರದ ಖಿಲ್ಲತ್ತುಗಳು ಅಂದಿನ ದರಬಾರಿಗೇ ಕಾಂತಿಯನ್ನು ಬೀರುತ್ತಿದ್ದುವು. ಮಂತ್ರಿ ಪೂರ್ಣಯ್ಯನವರು ದಿವಾನ್ ಖಾಸಿಂ ಆಲಿಯುವರನ್ನು ಎದುರುಗೊಂಡು ತಮ್ಮ ಪಕ್ಕದಲ್ಲಿ ಕುಳ್ಳಿರಿಸಿಕೊಂಡರು. ಅಲ್ಲಿದ್ದ ಸಮಸ್ತ ಅಧಿಕಾರಿಗಳೂ, ದಿವಾನ್ ಖಾಸಿಂ ಆಲಿಯುವರಿಗೆ ಸಲಾಂ ಮಾಡಿದರು. ಹಸನ್ಮುಖದಿಂದ ಖಾನರವರೂ ಪ್ರತ್ಯಭಿವಾದನ ಮಾಡಿದರು. ಆ ದರಬಾರು ಮಂದಿರದಲ್ಲಿ ಅಧಿಕಾರಿಗಳೂ, ಫೌಜುದಾರರೂ ದಿವಾನ್ ಖಾಸಿಂ ಆಲಿಯುವರಿಗೆ ತೋರಿಸಿದ ಮರ್ಯಾದೆಯನ್ನು ನೋಡಿದರೆ, ಅವರೆಲ್ಲರಿಗೂ ನಗರದ ನವಾಬರಲ್ಲಿ ಅಂತರಂಗಿಕವಾಗಿದ್ದ ವಿಶ್ವಾಸ ಗೌರವಗಳೆಷ್ಟೆಂದು ಅಭಿವ್ಯಕ್ತವಾಗುತ್ತಿತ್ತು ! ಈ ಸಮಯದಲ್ಲಿ ವಂದಿಮಾಗದರು ದಿಗಂತವ್ಯಾಪಿಯಾದ ಧ್ವನಿಯಿಂದ ಹೊಗಳುವುದು ಕೇಳಿಸಿತು, ದರಬಾರೆಲ್ಲವೂ ಅಲೆ ನಿಂತ ಸಮುದ್ರದಂತೆ ಗಂಭೀರ ಭಾಗವನ್ನು ತಾಳಿತು. ಚೌಪುದಾರರ ಎಚ್ಚರಿಕೆಯ ಧ್ವನಿಯಾಯಿತು. ಹೊಗಳುಭಟರು ಪರಾಕುಗಳನ್ನು ಹೇಳುತ್ತ ಬಂದರು. ಟಿಪ್ಪೂಸುಲ್ತಾನರವರು ಅತಿ ಸಂಭ್ರಮದಿಂದ ಗಂಭೀರವಾಗಿ ಅಡಿ ಇಡುತ್ತಾ ಸಭಾಮಂಟಪವನ್ನು ಪ್ರವೇಶಿಸಿದರು. ದರಬಾರಿಗಳೆಲ್ಲರೂ ತಲೆಬಾಗಿ ಮುಜರೆಮಾಡಿದರು. ವಾದ್ಯಘೋಷಗಳು ಮೊಳಗುತ್ತಿದ್ದವು. ಮಂತ್ರಿ ಪೂರ್ಣ್ಯಯ್ಯನವರೂ, ದಿವಾನ್ ಮಹಮ್ಮದಾಲಿಯವರೂ ಹಸ್ತಲಾಘವನ್ನು ಕೊಟ್ಟು, ಟಿಪ್ಪೂಸುಲ್ತಾನರನ್ನು ಸಿಂಹಾಸನಾರೋಹಣ ಮಾಡಿಸಿದರು. ಚೌಪುದಾರರು ಪರಾಕನ್ನು ಹೇಳಿದರು. ಹೊಗಳಭಟರು ಟಿಪ್ಪೂಸುಲ್ತಾನರ ಪರಾಕ್ರಮದ ಗುಣಗಾನಮಾಡಿದರು. ಸದರಿನ ಮುಂದುಗಡೆ ಗಾಯಕರು ಗಾನಮಾಡಿದರು. ನರ್ತಕಿಯರ ನೃತ್ಯವಾಯಿತು. ಮಂತ್ರಿ ಪೂರ್ಣಯ್ಯನವರೆದ್ದು ಸಿಂಹಾಸನದ ಸಮೀಪದಲ್ಲಿ ಬಂದು ನಿಂತರು. ಚೋಪುದಾರರು ಪರಾಕು ಹೇಳಿದರು. ಪೂರ್ಣಯ್ಯನವರು ನವಾಬರ ಮುದ್ರಾಂಕಿತವಾದ ಫರ್ಮಾನ್ ಓದಿ ಹೇಳಿದರು. ದರಬಾರೆಲ್ಲವೂ ಜಯಘೋಷಮಾಡಿತು. ಚೋಪುದಾರರು ಪುನಃ ಪರಾಕು ಹೇಳಿದರು. ವಾದ್ಯಘೋಷಗಳಿಗೆ ಆರಂಭವಾಯಿತು. ಗಾಯಕರ ಗಾನ, ನರ್ತಕಿಯರ ನರ್ತನಗಳು ದರಬಾರನ್ನು ಬೆರಗುಮಾಡಿದವು. ದರಬಾರಿನ ದಿವಾನರವರು ನಜರು ಮುಜರೆಗಳಾಗಬೇಕೆಂದು

ಕಣ್ಣುಸನ್ನೆಯಿಂದ ಸೂಚಿಸಿದರು. ಮೊದಲು ನಗರದ ನವಾಬರ ನಜರು. ಖಾಸಿಂ ಆಲಿಯುವರೆದ್ದು ಸಿಂಹಾಸನದ ಮುಂದೆ ನಿಂತು ಮುಜರೆ ಮಾಡಿದರು. ಒಂದೊಂದಾಗಿ ಖಿಲ್ಲತ್ತಿನ ತಟ್ಟೆಗಳನ್ನು ಕೈಗೆ ತೆಗೆದುಕೊಂಡು ಮೇಲಿನ ಕಿಂಕಾಪು ಬಟ್ಟೆಯನ್ನು ತೆಗೆದು ಸಿಂಹಾಸನದ ಮುಂದೆ ಇಡುತ್ತಾ ಬಂದರು. ಕೊನೆಯಲ್ಲಿ ಒಂದು ಚಿನ್ನದ ತಟ್ಟೆಯಲ್ಲಿ—ಚಿನ್ನದ ಒರೆಯಲ್ಲಿ ರತ್ನಖಚಿತವಾದ ಕೈಪಿಡಿಯಿಂದ ಮಿಂಚುತ್ತಿದ್ದ "ಕಠಾರಿ" ಯು ನಜರಾಗಿ ಸಮರ್ಪಿಸಲ್ಪಟ್ಟಿತು. ಅದನ್ನು ಟಿಪ್ಪೂಸುಲ್ತಾನರವರು ಎರಡು ಕೈಗಳಿಂದಲೂ ಸ್ವೀಕರಿಸಿ, ಪುನಃ ತಟ್ಟೆಯಲ್ಲಿ ಇಟ್ಟರು. ಅನಂತರ ಮಂತ್ರಿಗಳೂ ಅಧಿಕಾರಿಗಳೂ ನಗರದ ಮುಖಂಡರುಗಳೂ, ದೊಡ್ಡ ದೊಡ್ಡ ಮನುಷ್ಯರುಗಳೂ ಕ್ರಮಕ್ರಮವಾಗಿ ಮುಜರೆ ಮಾಡಿ ನಜರನ್ನು ಒಪ್ಪಿಸಿದರು. ಈ ನಜರುಮುಜರೆಗಳಾದ ನಂತರ ಚೌಪುದಾರರು ಪರಾಕು ಹೇಳಿದರು. ಮಂತ್ರಿಗಳು ಹಸ್ತಲಾಘವನಿತ್ತರು. ನವಾಬರು ಹರ್ಷಚಿತ್ತರಾಗಿ ಹಸನ್ಮುಖದಿಂದ ಎಲ್ಲರನ್ನೂ ಬೀಳ್ಕೊಂಡು ಸಭಾಮಂದಿರದಿಂದ ಮಹಲಿನೊಳಗೆ ಪ್ರವೇಶಿಸಿದರು. ಹೀಗೆ ಟಿಪ್ಪೂಸುಲ್ತಾನರು ಶ್ರೀರಂಗಪಟ್ಟಣದ ಸಿಂಹಾಸನವನ್ನೇರಿದರು. ಅಂದಿನ ಸಂಧ್ಯಾಕಾಲದಲ್ಲಿ ಕುದುರೆಯ ಜೂಜೂ, ಟಗರಿನ ಕಾಳಗವೂ, ಪೈಲವಾನರ ಕುಸ್ತಿಗಳೂ, ಚಿತ್ರವಿಚಿತ್ರವಾದ ಬಾಣಬಿರಸುಗಳೂ ನಡೆದವು. ಆ ಉತ್ಸವಗಳಿಗೆಲ್ಲಾ ಸುಲ್ತಾನರವರು ವಯುಮಾಡಿಸಿದ್ದರು. ರಾತ್ರಿಯಲ್ಲಿ ಸರದಾರರಿಗೆಲ್ಲಾ ಸುಲ್ತಾನರೊಡನೆ ಭೋಜನಕ್ಕೆ ಆಹ್ವಾನ ಬಂದಿತ್ತು. ಅಂದು ಸುಲ್ತಾನರ ಪಕ್ಕದಲ್ಲಿ ಕುಳಿತುಕೊಳ್ಳುವ ಗೌರವವು ನಗರದ ಖಾಸಿಂ ಆಲಿಯುವರಿಗೆ ಲಭಿಸಿತ್ತು. ಅಂದಿನ ರಾತ್ರಿ ಆ ಆಮೋದಪ್ರಮೋದಗಳೆಲ್ಲಾ ಜರಬಾಗಿ ನಡೆದವು. ಎಲ್ಲರೂ ತಮ್ಮ ಬಿಡಾರಗಳಿಗೆ ತೆರಳಿದರು. ಖಾಸಿಂ ಆಲಿಯುವರೂ ಸುಲ್ತಾನರವರ ಅಪ್ಪಣೆ ಪಡೆದು ತಮ್ಮ ಬಿಡಾರವನ್ನು ಸೇರಿದರು. ಎರಡುಮೂರು ದಿವಸಗಳು ಉತ್ಸವಗಳಲ್ಲಿಯೇ ಕಳೆದುಹೋದವು. ಖಾಸಿಂ ಆಲಿಯುವರು ಮಂತ್ರಿಗಳ ಭೇಟಿ ಮಾಡಿ, ತಾವು ನಗರಕ್ಕೆ ಪ್ರಯಾಣಮಾಡಲು ಅಪ್ಪಣೆಯನ್ನು ಕೇಳಿದರು. ದಿವಾರ್ ಖಾಸಿಂ ಆಲಿಯುವರಿಗೆ ರಾಜಮಹಲಿನಲ್ಲಿ ಅಮೋಘವಾದ ಖಿಲ್ಲತ್ತುಗಳು ಕೊಡಲ್ಪಟ್ಟುವು. ಅಂದಿನ ಸಂಧ್ಯಾಕಾಲದಲ್ಲಿ ಅವರಿಗೆ ನವಾಬರ ಭೇಟಿಯು ದೊರೆಯುತ್ತದೆಂದು ಮಂತ್ರಿ ಪೂರ್ಣಯ್ಯನವರು ತಿಳಿಸಿದರು.

ಸಂಧ್ಯಾಕಾಲ ಸುಮಾರು ಹೊತ್ತುಮುಳುಗಿ, ಕತ್ತಲೆಯು ಕವಿಯುವ ಸಮಯ. ಶ್ರೀರಂಗಪಟ್ಟಣದ ದರಿಯಾದೌಲತ್ ಸುಸಜ್ಜಿತವಾಗಿ ಶೋಭಿಸುತ್ತಿದೆ. ದೀವಿಗೆಗಳಲ್ಲಿ ದೀಪಗಳು ಬೆಳಗುತ್ತಿವೆ. ಆ ದೀಪಪ್ರಭೆಯಲ್ಲಿ ಹಜಾರವೆಲ್ಲವೂ ಪ್ರಕಾಶಮಾನವಾಗಿದೆ. ಮೇಲಿನ ಮಹಡಿಯಲ್ಲಿ ಎಡಭಾಗದ ಕೊಠಡಿಯಲ್ಲಿ ಎರಡು ಆಸನಗಳು ಇಡಲ್ಪಟ್ಟಿವೆ. ಒಂದು ಬೆಳ್ಳಿಯಿಂದ ನಿರ್ಮಿತವಾದ ಪ್ರಶಸ್ತಾಸನ. ಮತ್ತೊಂದು ಸ್ವಲ್ಪ ತಗ್ಗಾದ ಮರದ ಸುಖಾಸನ. ವೇತ್ರಧಾರಿಯು ಬಾಗಿಲಿನಲ್ಲಿ ಚಿನ್ನದ ಸೋಟಾವನ್ನು ಧರಿಸಿ, ಎವೆ ಇಕ್ಕದೇ ಶಿಸ್ತಿನಿಂದ ಕಾದಿದ್ದಾನೆ. ಮಂತ್ರಿ ಪೂರ್ಣಯ್ಯನವರು ಜೊತೆಯಲ್ಲಿ ಆಜಾನುಬಾಹುವಾದ ರಾಜಪುರುಷನೊಬ್ಬನನ್ನು ಕರೆದುಕೊಂಡು—ದರಿಯಾದೌಲತ್ತಿನ ಮಹಡಿಯಮೇಲೆ ಬಂದರು. ಪ್ರತೀಹಾರಿಯು ನೆಲಮುಟ್ಟಿ ಸಲಾಂ ಮಾಡಿದನು. ಪೂರ್ಣಯ್ಯನವರು ಕಣ್ಣು ಸನ್ನೆಯಿಂದ ಸಮೀಪಕ್ಕೆ ಕರೆದು-ನಗರದ ದಿವಾನರನ್ನು ಕರೆತಂದಿರುವುದಾಗಿ ಹುಜೂರಿನಲ್ಲಿ ಅರಿಕೆಮಾಡು; ಎಂದು ಹೇಳಿದರು. ಪ್ರತೀಹಾರಿಯು ಕಾಲು ಸಪ್ಪಳಮಾಡದೆ ಕೊಠಡಿಯೊಳಗೆ ಹೋಗಿ ಸುಲ್ತಾನರಲ್ಲಿ ಅರಿಕೆಮಾಡಿ ಬಂದನು. ಹೊರಗೆ ಬಂದು ಮಂತ್ರಿಗಳಿಗೆ ಮರ್ಯಾದೆಯಿಂದ ಸಲಾಂ ಮಾಡಿ ಕೊಠಡಿಯೊಳಗಡೆ ಕೈ ತೋರಿಸಿದನು.

ಪೂರ್ಣಯ್ಯನವರೂ, ದಿವಾನ್ ಖಾಸಿಂ ಆಲಿಯವರೂ ಒಳಗೆ ಪ್ರವೇಶ ಮಾಡಿದರು. ಅಲ್ಲಿ ಸ್ವಯಂ ಸುಲ್ತಾನರವರು ನಿಂತಿದ್ದಾರೆ. ಕಾಲಿಗೆ ಸುರವಾಲು ಮೇಲೆ ಢಕ್ಕಾ ಮಜಲಿನ್ನಿನ ಅಳ್ಳಕವಾದ ಅಂಗಿ ಅದರ ಮೇಲೆ ಕಲಾಪತ್ತಿನ ಸಣ್ಣ ಲುಂಗಿ. ತಲೆಯ ಮೇಲೆ ಆಕಾಶ ಬಣ್ಣದ ರುಮಾಲು ನಡುವಿನಲ್ಲಿ ರತ್ನಖಚಿತವಾದ ನಡುಕಟ್ಟು. ಅದರಲ್ಲಿ ದೀರ್ಘವಾದ ಕತ್ತಿಯು ನೇತಾಡುತ್ತಿದೆ. ದಿವಾನ್ ಖಾಸಿಂ ಆಲಿಯು ವೀರಾಗ್ರೇಸರನಾದ ಈ ಮೈಸೂರು ಹುಲಿಯನ್ನು ನೋಡುತ್ತಲೇ ಚಕಿತನಾದನು. ಅವನು ಪದ್ಧತಿಯಪ್ರಕಾರ ಮೂರುಬಾರಿ ನೆಲಮುಟ್ಟಿ ಸಲಾಂ ಮಾಡಿ, ಅದಬ್ಬಿನಿಂದ ನಿಂತುಕೊಂಡನು. ಟೀಪೂ ಸುಲ್ತಾನನು ಕಿರುನಗುವನ್ನು ನಕ್ಕು ಪೂರ್ಣಯ್ಯನವರ ಕಡೆ ತಿರುಗಿ ನೋಡಿ, ಅದೇ ನೋಟದಿಂದಲೇ ದಿವಾನ್ ಖಾಸಿಂ ಆಲಿಯನ್ನು ಅನುಗ್ರಹ ದೃಷ್ಟಿಯಿಂದ ಮನ್ನಣೆಮಾಡಿದನು. ಆ ಕೃಪಾಲೋಕನದಿಂದ ಸಂತುಷ್ಟನಾದ ಖಾಸಿಂ ಆಲಿಯು ಮಂದಹಾಸದಿಂದ ವಿನಯಭಾವವನ್ನು ತೋರಿದನು.

" ಖಾನ್ ಸಾಹೇಬರೇ ನೀವು ಈಗಲೇ ರಾಜಧಾನಿಗೆ ಬಂದಿದ್ದೆಂದು ಕಾಣುತ್ತದೆ ನೀವು ಬಲುಪರಾಕ್ರಮಶಾಲಿಗಳೆಂದು ಕೇಳಿದ್ದೇವೆ."

" ಹುಜೂರು ! ಅನುಗ್ರಹ !!

" ನಗರದ ನವಾಬ ಸಾಹೇಬರವರು ಆರೋಗ್ಯದಿಂದ ಇರುವರೇ ? !!

" ಸುಖವಾಗಿದ್ದಾರೆ ! ಖಾವಿಂದ್."

" ಈ ಸಮಯದಲ್ಲಿ ಅವರೇ ರಾಜಧಾನಿಗೆ ದಯಮಾಡಿಸುವರೆಂದು ನಮ್ಮ ಆಶೆ ಇತ್ತು."

" ಅದು ನಮ್ಮ ನವಾಬರ ಮೇಲೆ ಸನ್ನಿಧಾನದ ಅನುಗ್ರಹ ಆದರೆ ಫರಂಗಳಿಗೂ, ನಮಗೂ ಯುದ್ಧವು ಪ್ರಾಪ್ತವಾಗಿದೆ. ಆದರಿಂದಲೇ ನವಾಬರು ಇಲ್ಲಿಗೆ ಬರಲಾಗಲಿಲ್ಲ ! "

" ನಗರಕ್ಕೆ ಭಯವೇನೂ ಇಲ್ಲವಷ್ಟೆ ? "

" ತಮ್ಮ ರಾಜ್ಯದಲ್ಲಿ ಭಯವೆಂದರೇನು ? ಕೀಟಲೇ "

ಟೀಪೂಸುಲ್ತಾನರು ನಸುನಗುತ್ತಾ ಇಯಜ್‌ಖಾನರಂಥಾ ಅಪ್ರತಿಮ ವೀರರ ಕೈಯಲ್ಲಿರುವಾಗ ನಗರಕ್ಕೆ ಭಯದ ಶಂಕೆಯೇ ಇಲ್ಲ. ನಮಗೆ ಎಳ್ಳಷ್ಟೂ ಆತಂಕವಿಲ್ಲ. ಆದರೂ ಈಗ ಇಂಗ್ಲೀಷರೊಡನೆ ಸಂಧಿಮಾಡಿಕೊಳ್ಳುವುದೇ ಒಳ್ಳೆಯದೆಂದು ತೋರುತ್ತದೆ.

ಖಾಸಿಂ ಆಲಿಯು--" ಖಾವಿಂದ್ ! ಬೇ ಅದಬ್ ! ಮಾಫ್ ಮಾಡಬೇಕು. ಇಯಜ್‌ಖಾನರು ಸಂಧಿಯ ಮಾತನ್ನೇ ಎತ್ತಕೂಡದೆನ್ನುತ್ತಾರೆ. ಸಮಾನರಲ್ಲಿ ಸಂಧಿಯು ಶೋಭಿಸುತ್ತದೆ. ರಾಜರಿಗೆ ವ್ಯಾಪಾರಿಗಳಲ್ಲಿ ಸಂಧಿ ಎಂದರೇನು ? ಎನ್ನುತ್ತಾರೆ. ಫರಂಗಿಯವರು ಬೇಕಾದರೆ ವ್ಯಾಪಾರಮಾಡುತ್ತಿರಬಹುದು. ಅವರ ಕಡೆ ಒಬ್ಬ ಸೈನಿಕನೂ ನಮ್ಮ ದೇಶದಲ್ಲಿರಕೂಡದು. ವ್ಯಾಪಾರಸ್ಥರ ಧನಧಾನ್ಯಗಳ ರಕ್ಷಣೆಯ ಭಾರವು ನಮ್ಮದು. ನಾವು ಬೇಡವೆಂದರೆ ಆಕ್ಷಣವೇ ಅವರು ಹೊರಟುಹೋಗಬೇಕು. ಹೋಗುವಾಗ ಅವರು ನ್ಯಾಯವಾಗಿ ಗಳಿಸಿಟ್ಟುಕೊಂಡಿರುವ ಧನವನ್ನು ತೆಗೆದುಕೊಂಡು ಹೋಗಬಹುದು. ಹೀಗೆಂದು ಇಯಜ್‌ಖಾನರು ಫರಂಗಿಗಳಿಗೆ ಹುಕ್ಕುಂ ಮಾಡಿರುತ್ತಾರೆ."

" ಖಾಸಿಂ ಆಲಿಯವರೇ! ಫರಂಗಿಗಳು ಅಷ್ಟು ತಗ್ಗಿ ನಡೆಯತಕ್ಕವರೇ? ಉತ್ತರ ಹಿಂದೂಸ್ಥಾನದಲ್ಲೆಲ್ಲಾ ಅವರ ಪ್ರಾಬಲ್ಯವು ರೂಢಮೂಲವಾಗಿದೆ.''

" ಹುಜೂರು! ಉತ್ತರ ಹಿಂದೂಸ್ಥಾನದ ಮಾತು ಬೇರೆ. ಇಲ್ಲಿಯ ಮಾತೇ ಬೇರೆ! ಫರಂಗಿಗಳು ತಮ್ಮ ಸರ್ಕಾರಕ್ಕೆ ಎದುರುನಿಂತರೆ ಉತ್ತರದಲ್ಲಿ ಬೆಳಸಿಕೊಂಡಿರುವ ಪ್ರಾಬಲ್ಯ—ಗಳಿಸಿಕೊಂಡಿರುವ ಐಶ್ವರ್ಯ ಇವೆಲ್ಲವನ್ನೂ ಇಲ್ಲಿ ಮುಟ್ಟಿಗೋಲು ಕೊಟ್ಟು ಹೋಗಬೇಕಾಗುತ್ತದೆ!''

ಟಿಪ್ಪೂಸುಲ್ತಾನರು ಫಕ್ಕನೆ ನಕ್ಕು—" ನವಾಬರು ಸ್ವಯಂ ಯುದ್ಧ ಪ್ರಿಯರು. ದಿವಾನರವರೂ ಯುದ್ಧದ ಉಪಾಸಕರೆಂದು ಕಾಣುತ್ತದೆ. ಇನ್ನೇನು! ನಗರವು ದಕ್ಷಿಣದ ಕುರುಕ್ಷೇತ್ರವೇ ಆಗುತ್ತದೆ!''

" ಅದೇ ನಗರದ ನವಾಬರ ಇಷ್ಟ. ನಗರದಲ್ಲಿ ಫರಂಗಿಗಳ ಸರ್ವಶಕ್ತಿಯನ್ನೂ ಆಕರ್ಷಣೆಮಾಡಿ, ನಿರ್ಮೂಲಮಾಡಬೇಕೆಂದು ಅವರು ಸಂಕಲ್ಪ ಮಾಡಿರುತ್ತಾರೆ."

" ನಮ್ಮ ಬಲವೆಷ್ಟಿದೆ?"

" ನಗರದಲ್ಲಿ ಸುಲ್ತಾನೀ ಸೈನ್ಯದಲ್ಲಿ ಎರಡು ಲಕ್ಷ ಶಿಪಾಯಿಗಳಿದ್ದಾರೆ. ತರಬೇತಾದ ಬಂದೂಕು ಶಿಪಾಯಿಗಳದು ಹತ್ತು ಸಹಸ್ರ ಸೈನ್ಯವಿದೆ. ಮುನ್ನೂರು ತೋಪುಗಳಿವೆ. ಪಾಳೆಯಗಾರರ ಸೈನ್ಯವು ಅಸಂಖ್ಯವಾಗಿದೆ."

ಸುಲ್ತಾನರು ತಲೆದೂಗುತ್ತಾ—ಹಣವೆಷ್ಟಿದೆ?

" ರಾಜ ಭಂಡಾರದಲ್ಲಿ ಹೆಚ್ಚಾಗಿಲ್ಲ. ನಗರದ ಶೀಮೆಯಲ್ಲಿ ಬೇಕಾದಷ್ಟು ಧನಕನಕವಿದೆ."

" ಅದನ್ನೆಲ್ಲಾ ಬೇಕಾದಾಗ ಸ್ವಾಧೀನಪಡಿಸಿಕೊಳ್ಳುವ ಸಿಗಾ ಇದೆಯೋ?"

" ಅದಕ್ಕೆ ಸಿದ್ಧತೆಯೇನೂ ಬೇಡ! ಅವಶ್ಯಕ ಬಿದ್ದಾಗ ಸರ್ವಸ್ವವನ್ನೂ ತಂದೊಪ್ಪಿಸುವ ಪ್ರೀತಿವಿಶ್ವಾಸಗಳಿವೆ.''

" ಬಹಳ ಸಂತೋಷ! ಅದರಿಂದಲೇ ನವಾಬರು ಇಷ್ಟು ದರ್ಪದಿಂದ ಆಡಳಿತ ನಡೆಸುತ್ತಿದ್ದಾರೆ.''

ಎಲ್ಲವೂ ಹುಜೂರಿನ ಅನುಗ್ರಹ! ಎಂದು ಖಾಸಿಂ ಆಲಿಯು ತಲೆಬಾಗಿಸಿದನು, ನೀವು ನಮ್ಮ ಪ್ರೀತಿಯ ಸಲಾಮುಗಳನ್ನು ಇಯಜ್‌ಖಾನರವರಿಗೆ

ತಿಳಿಸತಕ್ಕದ್ದು. ಈ ಖಿಲ್ಲತ್ತುಗಳನ್ನು ಅವರಿಗೆ ನಮ್ಮ ಕಡೆಯಿಂದ ಒಪ್ಪಿಸ ತಕ್ಕದ್ದು ಎಂದು ಹೇಳಿ ಪೂರ್ಣಯ್ಯನವರ ಕಡೆ ಸುಲ್ತಾನರು ತಿರುಗಿದರು. ದಿವಾನ್ ಖಾಸಿಂ ಅಲಿಯವರಿಗೆ ಅನರ್ಘ ವಸ್ತ್ರಾಭರಣಗಳಿಂದ ಮರ್ಯಾದೆ ಮಾಡಿದರು. ಖಾಸಿಂ ಅಲಿಯವರು ನೆಲ ಮುಟ್ಟಿ ಸಲಾಂ ಮಾಡಿ ಖಿಲ್ಲತ್ತು ಗಳನ್ನು ಸ್ವೀಕರಿಸಿದರು.

"ದಿವಾನರವರೇ! ಒಂದು ಮಾತು! ನಗರದಿಂದ ಬಂದ ನಜರುಗಳೆಲ್ಲಾ ಶ್ರೇಷ್ಠವಾದವುಗಳು. ಅದರಲ್ಲೊಂದು ಆಶ್ಚರ್ಯಕರವಾದ ಪದಾರ್ಥವಿದೆ. ಆ ರತ್ನ ಖಚಿತವಾದ ಕಠಾರಿಯು ಎಲ್ಲಿಂದ ಬಂತು?"

ಖಾಸಿಂ ಅಲಿ ! ಅದು ರಾಮಪುರದ ರಾಜರಾದ ಗೋಪಾಲನಾಯಕರದು. ಅದನ್ನು ಸ್ವತಃ ಗೋಪಾಲನಾಯಕರ ಪುತ್ರಿಯಾದ ರಾಧಾರಾಣಿಯವರು ಸನ್ನಿಧಾನಕ್ಕೆ ನಜರು ಕಳಿಸಿದಾರೆ."

ಟೀಪೂಸುಲ್ತಾನರು ಆಶ್ಚರ್ಯಚಕಿತರಾಗಿ—ಇದೊಂದು ಕೌತುಕವೇ ಸರಿ! ಗೋಪಾಲನಾಯಕರು ಮೈಸೂರಿನ ಪರಮ ವಿದ್ವೇಷಿ ಪಾಳಯಗಾರರು---ಅವರ ಮಗಳು........(ಅರ್ಧೋಕ್ತಿ)....ಮುಂದೆ ಮಾತು ಹೊರಡುವಷ್ಟರಲ್ಲಿ ಖಾಸಿಂ ಆಲಿಯು—ಹುಜೂರು! ರಾಧಾರಾಣಿಯವರು ದೊಡ್ಡ ನವಾಬರ ಪರಮಾನು ಗ್ರಹಕ್ಕೆ ಪಾತ್ರರು. ಅವರೂ, ದೌಲತ್ ರಾಣಿಯವರೂ ಸಹೋದರಿಯರಂತೆ ಇದ್ದಾರೆ.

"ಸಂತೋಷ! ರಾಣಿಯವರ ನಜರು---ಪರಮ ಪ್ರಿಯವಾದುದು. (ಪೂರ್ಣಯ್ಯನವರ ಕಡೆ ತಿರುಗಿ) ರಾಧಾರಾಣಿಯವರು ಸ್ವತಂತ್ರರೋ?"

ಪೂರ್ಣಯ್ಯನವರು ಕೈ ಮುಗಿದು--ಹುಜೂರು! ಹಾಗೆ ದೊಡ್ಡ ನವಾಬರ ರಾಯಸವಿದೆ. ಹಾಗಾದರ ಸರಿ! ಸ್ವತಂತ್ರ ರಾಣಿಗೆ ಆಯುಧವನ್ನು ಕಳಿಸುವ ಅಧಿಕಾರವಿದೆ. ಅವರಿಗೂ ಪ್ರತ್ಯೇಕವಾಗಿ ಖಿಲ್ಲತ್ತುಗಳನ್ನು ಕಳುಹಿಸ ತಕ್ಕದ್ದು! ಖಾಸಿಂ ಆಲಿಯವರೇ! ಅವರಿಗೂ ಖುದ್ದಾಗಿ ನಮ್ಮ ಸಂತೋಷ ವನ್ನು ತಿಳಿಸತಕ್ಕದ್ದು!

"ಹುಜೂರು! ಹುಕ್ಕುಂ!"

"ನಗರದ ನವಾಬರಿಗೆ ಸಲಾಮುಗಳನ್ನು ಹೇಳತಕ್ಕದ್ದು. ಎರಡು ತಿಂಗಳೊಳಗಾಗಿ ನಾವು ಇಯುಜ್‌ಖಾನರ ಭೇಟಿ ಮಾಡಬೇಕೆಂದು ಇಷ್ಟಪಡುವುದಾಗಿ ತಿಳಿಸತಕ್ಕದ್ದು."

'ಹುಕ್ಕುಂ!'

ಖಾಸಿಂ ಆಲಿಯು ಕುರ್ನೀಸಾತು ಮಾಡಿ, ಅಪ್ಪಣೆಯನ್ನು ಬೇಡಿದನು. ಟಿಪ್ಪೂಸುಲ್ತಾನರು ಅನುಗ್ರಹಪೂರ್ಣವಾದ ಮಂದಹಾಸವನ್ನು ಬೀರಿ, ಕಣ್ಣು ಸನ್ನೆಯಿಂದ ಅಪ್ಪಣೆಕೊಟ್ಟರು. ನಗರದ ದಿವಾನರೂ ಮಂತ್ರಿ ಪೂರ್ಣಯ್ಯನವರೂ ಸನ್ನಿಧಾನದ ಅಪ್ಪಣೆ ಪಡೆದು ಹೊರಟರು ಈ ಸಮಯದಲ್ಲಿ ರಾತ್ರಿ ಒಂಭತ್ತು ಗಂಟೆಯ ತುತ್ತೂರಿಯಾಯಿತು. ಮಂತ್ರಿ ಪೂರ್ಣಯ್ಯನವರೂ, ದಿವಾನ್ ಖಾಸಿಂ ಆಲಿಯುವರೂ ಕೋಟೆಯೊಳಗೆ ಹೊಕ್ಕು, ನಗರದ ಬಿಡದಿಗೆ ಹೋದರು. ರಾತ್ರಿ ಬಹಳ ಹೊತ್ತು ಅವರಿಬ್ಬರೂ ಮಾತುಕಥೆಗಳನ್ನಾಡುತ್ತಿದ್ದರು. ಖಾಸಿಂ ಆಲಿಯುವರು ಮಂತ್ರಿಗಳ ಅಪ್ಪಣೆಯನ್ನು ಪಡೆದರು. ಪೂರ್ಣಯ್ಯನವರು ಅರ್ಧರಾತ್ರಿಯ ಮೇಲೆ ಮ್ಯಾನಾದಲ್ಲಿ ಮನೆಗೆ ತೆರಳಿದರು. ಮರುದಿನ ಉಷಃಕಾಲದಲ್ಲಿ ಖಾಸಿಂ ಆಲಿಯು ಪರಿವಾರ ಸಮೇತ ನಗರಕ್ಕೆ ಹಿಂತಿರುಗಿ ಪ್ರಯಾಣ ಬೆಳಸಿದನು.

---

## ಸುಲ್ತಾನನ ಹಂಬಲಿಕೆ

ಹೈದರಾಲಿಯು ಕಾಲವಾಗಿ ಆರು ತಿಂಗಳುಗಳಾಗಿಹೋದವು. ಇಂದು ಟೀಪುಸುಲ್ತಾನನು ಸ್ವತಂತ್ರ! ಸರ್ವತಂತ್ರ ಸ್ವತಂತ್ರ! ಅವನು ಹೈದರಾಲಿಯಂತೆ ಮೈಸೂರರಸರ ಸರ್ವಾಧಿಕಾರಿಯಲ್ಲ. ಮೈಸೂರು ರಾಜರನ್ನು ಮೂಲೆಗೆ ಕೂಡಿಸಿ ಪಟ್ಟಕ್ಕೇರಿದ ನಿರಂಕುಶಪ್ರಭು. ಅವನ ದರ್ಪಕ್ಕೆ ದಕ್ಷಿಣ ಹಿಂದೂಸ್ಥಾನದಲ್ಲೆಲ್ಲಾ ನಡುಗುತ್ತಿತ್ತು. ಶ್ರೀರಂಗಪಟ್ಟಣದ ಹೆಸರು ಹಿಂದೂಸ್ಥಾನವಲ್ಲಿ ಮಾತ್ರವೇ ಅಲ್ಲ. ಯುರೋಪಿನಲ್ಲಿಯೂ ವ್ಯಾಪಿಸಿತ್ತು. ಟೀಪೂಸುಲ್ತಾನನು ಪರಾಕ್ರಮಶಾಲಿಯಾದ ಯೋಧಾಗ್ರೇಸರನೆಂದು ಜಗತ್ಪ್ರಸಿದ್ಧವಾಗಿತ್ತು. ಅವನ ರಾಜ್ಯವೂ ಹಾಗೆಯೇ ಇಡೀ ದಕ್ಷಿಣದೇಶವನ್ನು ಸುತ್ತುಗಟ್ಟಿತ್ತು. ಶ್ರೀರಂಗಪಟ್ಟಣದ ವೈಭವವನ್ನೂ ಟೀಪೂಸುಲ್ತಾನನ ಪರಾಕ್ರಮವನ್ನೂ ಕೇಳಿ ಇಡೀ

ಹಿಂದೂಸ್ಥಾನದಲ್ಲಿ ಮುಸಲ್ಮಾನರಿಗೆಲ್ಲಾ ಒಂದು ಆಶಾಂಕುರವು ಹುಟ್ಟಿತ್ತು. ಡೆಲ್ಲಿಯ ಮೊಗಲ್ ಸಾಮ್ರಾಜ್ಯವು ಅಸ್ತವಾಗಿಹೋಗಿತ್ತು. ದಕ್ಷಿಣದಲ್ಲಿ ಈ ಸುಲ್ತಾನೀ ಚಕ್ರಾಧಿಪತ್ಯವು ಉದಯವಾಗುವುದೆಂದು ಮುಸಲ್ಮಾನ ಜನಾಂಗದ ನಂಬಿಕೆ. ಹೀಗೆ ಟಿಪ್ಪುವಿನ ಮಹತ್ವವು ಒಂದುಕಡೆ ಬೆಳಗುತ್ತಿದ್ದರೂ ಶತೃತ್ವವೂ ಬೆಳೆಯುತ್ತಲೇ ಬಂತು. ದಕ್ಷಿಣದಲ್ಲಿ ಮಹಾರಾಷ್ಟ್ರರಿಗೆ ಸಹನೆ ಇರಲಿಲ್ಲ. ಹೈದರಾಬಾದಿನವರು ಜಾತಿಯಲ್ಲಿ ಮುಸಲ್ಮಾನರಾದರೂ; ಈ ಮೈಸೂರಿನ ಸುಲ್ತಾನರ ಅಭ್ಯುದಯವನ್ನು ದ್ವೇಷಿಸುತ್ತಿದ್ದರು. ಟೀಪೂಸುಲ್ತಾನನ ರಾಜ್ಯವು ಸ್ಥಿರವಾಗಿಬಿಟ್ಟರೆ, ಇಂಗ್ಲಿಷರಿಗೆ ನೆಲೆಯಿಲ್ಲವೆಂದು ಅವರಿಗೆ ಬಲವಾದ ಭಯವು ತಪ್ಪಿಹೋಗಿತ್ತು. ಅನಂತಶಯನದ ಹಿಂದೂ ರಾಜರಿಗೆ ಟೀಪುಸುಲ್ತಾನರ ರಾಜ್ಯ ಸ್ಥಾಪನೆಯಲ್ಲಿ ಒಪ್ಪಿಗೆಯಿಲ್ಲ. ಇದನ್ನೆಲ್ಲಾ ಟಿಪ್ಪೂಸುಲ್ತಾನನು ಲಕ್ಷ್ಯಮಾಡುತ್ತಿರಲಿಲ್ಲ. ಅವನ ಪರಾಕ್ರಮವು ಅಂತಹುದು. ಹಿಂದೂಸ್ಥಾನದ ಸಮಸ್ತ ರಾಜರನ್ನೂ ಒಂದೇ ಯುದ್ಧದಲ್ಲಿ ಎದುರಿಸುವ ಎದೆಗಾರುತನವು ಅತನಲ್ಲಿತ್ತು! ಸ್ವಾಭಿಮಾನಿಯೂ ಹೌದು!! ಆದರೇನು? ಅವನ ಮನಸ್ಸಿಗೆ ಶಾಂತಿ ಇಲ್ಲ! ಸುಖವಿಲ್ಲ! ಮನಸ್ಸೆಲ್ಲಾ ನಗರದ ಕಡೆಗೇ ಇತ್ತು! ನಗರವು ವೀರಭೂಮಿ. ಇಯಜ್‌ಖಾನನು ಪರಾಕ್ರಮಶಾಲಿ. ಅವನಿಗೂ ತನಗೂ ಬದ್ಧ ದ್ವೇಷ. ಈ ಇಬ್ಬರ ಮಧ್ಯದಲ್ಲಿ ಸಾಕ್ಷಾತ್ ಮೋಹಿನಿಯಂಥಾ ದೌಲತ್ತಳು! ಇದೇ ಟೀಪೂ ಸುಲ್ತಾನನ ಮನಸ್ಸನ್ನು ಕೊರೆಯುತ್ತಿತ್ತು. ಹೃದಯವನ್ನು ಸುಡುತ್ತಿತ್ತು. ಸುಲ್ತಾನನಿಗೆ ದೌಲತ್ತಳ ಜ್ಞಾಪಕ ಬಂದಿತೆಂದರೆ—ಅವನು ಹುಚ್ಚನೇ ಆಗಿ ಹೋಗುತ್ತಿದ್ದನು. ಆ ಉನ್ಮಾದಾವಸ್ಥೆಯಲ್ಲಿ ಮೈಸೂರು ರಾಜ್ಯವೇ ತೃಣ ಪ್ರಾಯ! ದೊಡ್ಡ ನವಾಬರು ತಂತ್ರದಿಂದ ದೌಲತ್ತಳನ್ನು ನಗರದಲ್ಲಿಟ್ಟರು. ಟೀಪೂಸುಲ್ತಾನನಿಗೇನೋ ದೂರವಾಯಿತು. ಮತ್ತೊಬ್ಬನು ಅವಳ ಪ್ರಣಯಾ ಕಾಂಕ್ಷಿ! ಇಯಜ್‌ಖಾನನು ದೌಲತ್ತಳ ಸಾನ್ನಿಧ್ಯದಲ್ಲಿಯೇ ಇದಾನೆ. ಟೀಪೂ ಸುಲ್ತಾನನಿಗೆ ಸರ್ವದಾ ಇದೊಂದು ಸಮಸ್ಯೆ! ಇಯಜ್‌ಖಾನನು ನಗರದ ನವಾಬ! ಅವನು ದೌಲತ್ತಳ ಪ್ರಣಯಾಕಾಂಕ್ಷಿ. ದೌಲತ್ತಳು ನಗರದಲ್ಲಿಯೇ ಇದ್ದಾಳೆ. ಆದಾಗ್ಯೂ ಅವರಿಬ್ಬರಿಗೂ ಮದುವೆಯಾಗಿಲ್ಲ! ದೌಲತ್ತಳಿಗೆ ತನ್ನನ್ನೇ ಮದುವೆಯಾಗುವ ಆಶೆಯಿರಬಹುದೇ? ದೌಲತ್ತಳು ಸ್ವರ್ಣಪಂಜರ ದಲ್ಲಿರುವ ರಾಜಹಂಸಿಯೋ? ಸ್ವತಂತ್ರಳೋ? ಅವಳ ಸಖಿ ರಾಧಾರಾಣಿಯು

ನನಗೆ ವಜ್ರದ ಕಠಾರಿಯನ್ನು ಕಳಿಸಿದ ಅರ್ಥವೇನು? ಈ ಆಲೋಚನೆಗಳೆಲ್ಲಾ ತರಂಗತರಂಗವಾಗಿ ಟಿಪ್ಪುವಿನ ಮನಸ್ಸಿನಮೇಲೆ ಏಳುತ್ತಿವೆ. ಈ ರತ್ನಕಠಾರಿಯು ದೌಲತ್ತಳ ಪ್ರೇಮಮುದ್ರೆಯೇ ಆಗಿದ್ದರೆ! ............ದೌಲತ್ತಳ ಸಖಿ ರಾಧೆಯು ಈ ಅಭಿಪ್ರಾಯದಿಂದಲೇ ಅದನ್ನು ಕಳಿಸಿದ್ದರೆ! ........ಆಹಾ! ಈ ಕಲ್ಪನೆಗಳೆಲ್ಲಾ ಟಿಪ್ಪೂಸುಲ್ತಾನನಿಗೆ ಎಷ್ಟು ಸುಖದಾಯಕವಾಗಿವೆ! ಮನಸ್ಸಿಗೆಷ್ಟು ಆಪ್ಯಾಯಮಾನವಾಗಿವೆ—

ಶರತ್ಕಾಲದ ರಾತ್ರಿ! ಆಕಾಶದಲ್ಲಿ ನಕ್ಷತ್ರಗಳು ಮಿನುಗುತ್ತಿವೆ. ಚಂದ್ರನು ಪೂರ್ಣಕಳೆಯಿಂದ ವಿರಾಜಿಸುತ್ತಿದ್ದಾನೆ. ಕಾವೇರೀ ನದಿಯು ಬಂಡೆಗಳ ಮೇಲೆ ಶಬ್ದಮಾಡುತ್ತಾ ಹರಿಯುತ್ತಿದೆ. ಪ್ರಕಾಶಮಾನವಾದ ಚಂದ್ರಕಿರಣಗಳು ನದೀ ಜಲದಲ್ಲಿ ಪ್ರತಿಬಿಂಬಿಸಿ ಜಲದೊಡನೆ ಜಲವಾಗಿ ಹರಿಯುತ್ತಿವೆ. ನದೀ ದಡದಲ್ಲಿ ಗೊಂಚಲುಗೊಂಚಲಾಗಿ ಬೆಳೆದಿರುವ ನೀಕಾಶಕೇಸರಗಳು ಪ್ರವಾಹದ ವೇಗಕ್ಕೆ ಬಗ್ಗಿ ನೀರಿಗೆ ತಗಲುತ್ತಿವೆ. ಪುನಃ ಗಾಳಿಗೆ ಎದ್ದು ಮೇಲಕ್ಕೆ ತಲೆ ಎತ್ತುತ್ತಿವೆ. ಈ ಮನೋಹರವಾದ ರಾತ್ರಿಯಲ್ಲಿ ಶ್ರೀರಂಗಪಟ್ಟಣದ ದರಿಯಾದೌಲತ್ತಿನ ಹಿಂದುಗಡೆ ಪಾವಟಿಗೆಗಳ ಮೇಲೆ ಇಬ್ಬರು ಕುಳಿತು ಮಾತನಾಡುತ್ತಿದ್ದರು. ಟಿಪ್ಪೂಸುಲ್ತಾನನು ತನ್ನ ಆಪ್ತ ಮಿತ್ರನಾದ ಮೀರ್‌ಸಾದಕ್‌ನೊಡನೆ ಮಾತನಾಡುತ್ತಿದ್ದಾನೆ. ಅವರಿಬ್ಬರೂ ಬಹಳ ಹೊತ್ತು ಮಾತನಾಡುತ್ತಿದ್ದರು. ಮಾತನಾಡುತ್ತಾ ಆಡುತ್ತಾ ನಗರದ ಮಾತು ಬಂತು. ಮೀರ್‌ಸಾದಕ್‌ನು ನಗರದ ವೈಭವವನ್ನು ವರ್ಣಿಸಿದನು. ಇಯುಜ್‌ಖಾನನ ಪರಾಕ್ರಮವನ್ನು ಹೊಗಳಿದನು. ನಗರದ ದರಿಯಾಬಾಗಿನ ಸೊಬಗನ್ನು ಬಣ್ಣಿಸಿದನು. ದರಿಯಾಬಾಗಿನಲ್ಲಿ ನಡೆಯುವ ದಾನಧರ್ಮಗಳನ್ನು ಸ್ತೋತ್ರಮಾಡಿದನು. ಪ್ರಸ್ತಾಪತ್ವೇನ ದೌಲತ್ ರಾಣಿಯ ಹೆಸರನ್ನೆತ್ತಿದನು. ಸಿದ್ದಿಕನು ಮಾತಿನಲ್ಲಿ ಬಲು ಚತುರ. ಎಲ್ಲವನ್ನು ತಾನೇ ಕಣ್ಣಾರ ಕಂಡಂತೆ ಮಾತನಾಡಿದನು. ಟಿಪ್ಪುವು ಅಪ್ರತಿಭನಾಗಿ ಸಿದ್ದಿಕನೇ ದೌಲತುಳನ್ನು ನೀನು ಕಂಡಿದ್ದೀಯಾ? ನಗರಕ್ಕೆ ಹೋಗಿ ಬಂದಿರುವೆಯಾ? ಎಂದು ಕೇಳಿದನು. ಜಹಾಪನಾ! ನಾನು ಸ್ವತಃ ನೋಡಿಲ್ಲ! ನನ್ನ ಹುಚ್ಚಿ ಸಾವಿತ್ರಿಯು ಹೋಗಿ ನೋಡಿ ಬಂದಿದ್ದಾಳೆ. ಅವಳು ನಗರದ ವೈಭವವನ್ನು ಬಲು ಹೊಗಳುತ್ತಾಳೆ. ದೌಲತ್ ರಾಣಿಯೆಂದರೆ ರೂಪದ ಖನಿಯೆಂದು ಹೇಳುತ್ತಾಳೆ. ಅವಳ ದಾನಧರ್ಮಗಳು ದೇಶದಲ್ಲೆಲ್ಲಾ ಪ್ರಸಿದ್ಧಿ

ಹೊಂದಿವೆ. ಅಪಾರವಾದ ಐಶ್ವರ್ಯವಿದೆ. ಅವಳು ಇಯಜ್‌ಖಾನನ ಉಪಪತ್ನಿಯೆಂದು ಜನರಾಡಿಕೊಳ್ಳುತ್ತಾರಂತೆ! ಎಂದನು.

ಎಲ್ಲಿಯೋ ಅನ್ಯಮನಸ್ಕನಾಗಿದ್ದ ಟಿಪ್ಪುವು ಈ ಮಾತನ್ನು ಕೇಳುತ್ತಲೇ ಚಕಿತನಾಗಿ ಉದ್ವಿಗ್ನನಾಗಿ ಛೀ! ಮುಠ್ಠಾಳ! ದೌಲತ್‌ಳು ಇಯಜ್‌ಖಾನನ ಉಪಪತ್ನಿಯಂತೆ! ಯಾರು ಹೇಳಿದರು ನಿನಗೆ? ವ್ಯಭಿಚಾರ ಬುದ್ಧಿಯ ತೊತ್ತಿನ ಮಗ ನೀನು! ನಿನಗೆ ಎಲ್ಲರಲ್ಲಿಯೂ ವ್ಯಭಿಚಾರವೇ ಕಾಣುವುದು. ಸಿದ್ದೀಕನು ನಗುತ್ತಾ ಹಾಗಾದರೆ ಖಾವಂದರವರು ದೌಲತ್ ರಾಣಿಯವರನ್ನು ಬಲ್ಲಿರೆಂದು ತೋರುತ್ತದೆ.

ಟೀಪು:—ಸಿದ್ದಿಕ್! ನಾನು ಬಲ್ಲೆ. ಚೆನ್ನಾಗಿ ಬಲ್ಲೆ. ದೌಲತ್ತಳು ನನ್ನವಳು. ದೊಡ್ಡ ನವಾಬರು ನನ್ನ ಕೈಯಿಂದ ಕಿತ್ತು ಅವಳನ್ನು ನಗರದಲ್ಲಿ ಸೆರೆಯಲ್ಲಿಟ್ಟಿದ್ದಾರೆ. ಆ ಸೋನಾ ಮಹಲು-ಆ ದೌಲತ್‌ಳನ್ನು ಇಟ್ಟಿರುವ ಸ್ವರ್ಣ ಪಂಜರ! ಅವಳು ನನ್ನಲ್ಲಿ ಚಿರ ಪ್ರಣಯಿನಿ! ಅವಳು ನನ್ನನ್ನು ಪ್ರೇಮ ಮಾಡುತ್ತಾಳೆ. ನಗರದ ನಜರುಗಳಲ್ಲಿ ಬಂದ ಅನರ್ಘವಾದ ರತ್ನ ಕಠಾರಿಯು ದೌಲತ್‌ಳು ಕಳಿಸಿದ ಪ್ರೇಮದ ಅಭಿಜ್ಞಾನ! ಅದನ್ನು ದೌಲತ್‌ಳೇ ಕಳಿಸಿದ್ದಾಳೆ. ನಮ್ಮಿಬ್ಬರ ನಡುವೆ ಇಯಜ್‌ಖಾನನೊಬ್ಬನು. ನವಾಬರ ಪ್ರೇಮದಲ್ಲಿಯೂ ಅವನು ನನ್ನ ಪ್ರತಿಧ್ವಂದ್ವಿ. ಇಂದು ಈ ರಾಜ್ಯದಲ್ಲಿಯೂ ಅವನು ಪ್ರತಿಸ್ಪರ್ಧಿ! ದೌಲತ್ತಳ ಪ್ರಣಯದಲ್ಲಿಯೂ ಪ್ರತ್ಯಾಕಾಂಕ್ಷಿ! ಇಯಜ್ ಖಾನನನ್ನು ನಾಶಪಡಿಸಿದಲ್ಲದೆ ನನ್ನ ಮನಸ್ಸಿಗೆ ಶಾಂತಿ ಇಲ್ಲ. ಈ ಅಂತರ್ದ್ವೇಷವನ್ನು ಹೇಳಿಕೊಳ್ಳುವುದಕ್ಕೂ ನನಗೆ ಯಾರೂ ಇಲ್ಲ. ನೀನೊಬ್ಬನು ನನಗೆ ಪರಮಾಪ್ತ. ಇಯಜ್ ಖಾನನೊಡನೆ ಪ್ರತ್ಯಕ್ಷ ಯುದ್ಧವನ್ನು ಹೂಡಿದರೆ ನಮ್ಮ ರಾಜಕ್ಕೆ ಹಾನಿ. ತಂತ್ರದಿಂದ ಅವನನ್ನು ಕೊಲ್ಲಿಸಬೇಕೆಂದು ಸಂಕಲ್ಪ ಮಾಡಿದ್ದೇನೆ. ಆಗ ದೌಲತ್ತಳು ನನ್ನವಳೇ ಆಗುವಳು. ನಗರವೂ ನಮ್ಮದಾಗುವುದು. ಈ ಅಖಂಡ ಮೈಸೂರು ರಾಜ್ಯವು ನನಗೇ ಉಳಿತಾಯವಾಗುವುದು. ಇದರಲ್ಲಿ ನಿನ್ನ ಸಹಾಯವು ಬಹಳವಾಗಿ ಬೇಕಾಗಿದೆ. ಈ ದಿನ ನನ್ನ ಮನಸ್ಸೆಲ್ಲವನ್ನೂ ಬಿಚ್ಚಿ ಬಿಚ್ಚಿ ನಿನ್ನೊಡನೆ ಹೇಳಿಬಿಟ್ಟಿದ್ದೇನೆ. ಇಯಜ್‌ಖಾನನ್ನು ನಾನು ಸಹಿಸಲಾರೆ. ದೌಲತ್ತಳ ವಿರಹವಂತೂ ನನ್ನನ್ನು ಸುಡುತ್ತಿದೆ.

ಇದಕ್ಕೆಲ್ಲಾ ದೊಡ್ಡ ತಂತ್ರವನ್ನೇ ಹೂಡಬೇಕು. ಶ್ರೀರಂಗಪಟ್ಟಣದಲ್ಲಿಯೂ ಇಯ್ಯಜ್‌ಖಾನನ ಕಡೆಯುವರು ಬಲು ಮಂದಿ ಇದಾರೆ. ನಮ್ಮ ದರಬಾರಿನಲ್ಲಿ ಅವನ ಮಿತ್ರರು ಅನೇಕರಿದಾರೆ. ಎಲ್ಲ ಕೆಲಸಗಳನ್ನೂ ಬಹಳ ಎಚ್ಚರಿಕೆಯಿಂದ ಮಾಡಬೇಕು ಎಂದು ಹೇಳಿದನು. ಮೀರ್‌ಸಾದಕನಿಗೆ ದೊಡ್ಡದೊಂದು ರಾಜ್ಯವೇ ಸಿಕ್ಕಿದ ಹಾಗಾಯಿತು. ಈ ಕಾರ್ಯದಲ್ಲಿ ತನಗೆ ಅತುಲ ಸಂಪತ್ತು ಕೈ ಸೇರುವುದೆಂದು ಅವನ ಆಶೆ. ಸುಲ್ತಾನರ ಪ್ರೇಮವು ತನ್ನ ಮೇಲೆ ಅತಿಶಯ ವಾಗುವುದೆಂದು ನಂಬಿಕೆ. ಅದರಿಂದ ಸಿದ್ದೀಕನು ಉತ್ತೇಜಿತನಾಗಿ, ಸಮಯೋಚಿತವಾದ ಮಾತುಕತೆಗಳನ್ನಾಡಿ, ಸುಲ್ತಾನರ ಮನಸ್ಸನ್ನು ಮತ್ತೂ ಉದ್ರೇಕ ಗೊಳಿಸಿ, ತನ್ನ ಕಾರ್ಯಸಾಧನೆಗೆ ಬೀಜಾವಾಪ ಮಾಡಿ ಮನೆಗೆ ಹೊರಟನು. ಪ್ರಭುಗಳಾದವರಿಗೆ ತಮಗೆ ಅತ್ಯಂತ ಪ್ರಿಯ ಕಾರ್ಯದಲ್ಲಿ ತಾವಾಗಿ ಮುಂದೆ ಬಂದು ಸಹಾಯಕರಾಗಿ ನಿಲ್ಲುವವರಲ್ಲಿ, ಪರಮ ಪ್ರೇಮ! ಅದರಲ್ಲಿಯೂ ಮೀರ್‌ಸಾದಕನು ಸುಲ್ತಾನರ ಗೆಳೆಯ. ಅವರ ಸೊಟ್ಟು ಗುಟ್ಟುಗಳನ್ನು ಬಲ್ಲ ವನು ಎಂಥಾ ರಹಸ್ಯವಾಗಲಿ, ಅವನಲ್ಲಿ ಬಿಚ್ಚಿ ಹೇಳಲು ಸುಲ್ತಾನರು ನಾಚು ತ್ತಿರಲಿಲ್ಲ. ಸರಿಯಾದ ಕಾರ್ಯದಲ್ಲಿ ಸರಿಯಾದ ಜೊತೆ ಸೇರಿದ ಹಾಗಾಯ್ತು. ಮೀರ್‌ಸಾದಕನು ಮನೆಗೆ ಹೋಗುತ್ತಾ ಯೋಚನೆ ಮಾಡುತ್ತಲೇ ಹೋದನು. ಅವನಿಗೆ ಇಯುಜ್‌ಖಾನನ ಪ್ರರಾಕ್ರಮವು ಚೆನ್ನಾಗಿ ಗೊತ್ತಿತ್ತು. ಅವನನ್ನು ಕೊಲ್ಲುವ ಕಾರ್ಯವು ಸುಲಭಸಾಧ್ಯವಲ್ಲವೆಂದು ಅವನಿಗೆ ತೋರಿತು. ಆದರೆ ದೌಲ ತ್ತಳನ್ನು ಕರೆತರುವ ಕಾರ್ಯವು ಬಲು ಸುಲಭವೆಂದು ಅವನು ಭಾವಿಸಿದನು. ಟೀಪುಸುಲ್ತಾನನಂಥಾ ರೂಪವಂತನನ್ನೂ ವೀರಾಗ್ರೇಸರನನ್ನೂ; ರಾಜಾಧಿ ರಾಜನನ್ನೂ ವರಿಸದವಳಾರು? ಶ್ರೀರಂಗಪಟ್ಟಣದ ಸುಲ್ತಾನನು ಪ್ರಣಯ ಭಿಕ್ಷೆ ಯನ್ನು ಬೇಡುವಾಗ ಯಾವ ನಾರೀಮಣಿಯು ತಾನೇ ಕಾರ್ಪಣ್ಯವನ್ನು ಮಾಡಿಯಾಳು? ಅದೂ ಅಲ್ಲದೆ ಅವಳು ಟೀಪೂಸುಲ್ತಾನನಿಗೆ ಪ್ರಣಯ ಮುದ್ರೆ ಯನ್ನು ಕಳುಹಿಸಿರುವಾಗ ಕಾರ್ಯವೆಲ್ಲವೂ ಕೈಗೂಡಿದಂತೆಯೇ. ಏನಾದರೊಂದು ತಂತ್ರದಿಂದ ದೌಲತ್ತಳನ್ನು ನಗರದಿಂದ ಅಪಹರಿಸಿಕೊಂಡು ಬಂದು ಬಿಟ್ಟರೆ ಸುಲ್ತಾನನು ತನಗೆ ಸರ್ವಸ್ವವನ್ನೂ ಕೊಟ್ಟುಬಿಡುತ್ತಾನೆ. ಇಯುಜ್‌ಖಾನನನ್ನು ಕೊಲ್ಲುವ ಮಾತು! ನೋಡಿಕೊಳ್ಳೋಣ!! ಎಂದುಕೊಂಡು ಮನೆಗೆ ಸೇರಿದನು.

ಮೈಸೂರಿನ ರಾಜಕೀಯ ಆಂದೋಳನಗಳು ಟಿಪ್ಪೂಸುಲ್ತಾನನನ್ನು ದೌಲತ್ತಿಳ ಆಲೋಚನೆಯಲ್ಲೇ ಮಗ್ನನಾಗಿರಲು ಬಿಡಲಿಲ್ಲ. ಆ ಮೈಸೂರಿನ ಹುಲಿಗೆ ಹೆಜ್ಜೆ ಹೆಜ್ಜೆಗೂ ಯುದ್ಧಗಳು ಕಾದಿವೆ. ಆ ಶೂರನಿಗೆ ತನ್ನ ಮಾನಕ್ಕಿಂತಲೂ ದೊಡ್ಡದು ಯಾವುದೂ ಇಲ್ಲ. ಒಂದು ಕಡೆ ಚಕ್ರಾಧಿಪತ್ಯವನ್ನು ಕಟ್ಟುವ ಆಸೆ. ಮತ್ತೊಂದು ಕಡೆ ಶತೃಗಳನ್ನು ಮಟ್ಟಹಾಕುವ ಹುರುಡು. ಇನ್ನೊಂದು ಕಡೆ ಮೈಸೂರು ರಾಜ್ಯಾಡಳಿತವನ್ನು ಅಣಿಯಾಗಿ, ಅಚ್ಚುಗಟ್ಟು ಮಾಡುವ ಆಲೋಚನೆ! ಇಂಥಾ ಪ್ರಳಯಾಗ್ನಿ ಮಧ್ಯದಲ್ಲಿರುವ ವೀರನು ಕಾಮಿನಿಯ ವ್ಯಾಮೋಹದಲ್ಲಿ ಪ್ರಣಯ ಪ್ರಸಂಗದಲ್ಲಿ ಆತ್ಮ ಬುದ್ಧಿಗಳನ್ನು ಅರ್ಪಣ ಮಾಡಿ ಕಾಮಾಂಧನಾಗಿರುವುದು ಅಸಂಭವ. ಶ್ರೀರಂಗಪಟ್ಟಣದ ಕೋಟೆಯನ್ನು ದುರಸ್ತು ಮಾಡಿಸಿ ಬಂದೋಬಸ್ತು ಮಾಡುವ ಕಾಂಗಾರಿಗೆ ಆರಂಭವಾಯಿತು. ಸೈನ್ಯವನ್ನು ಬೆಳೆಸಿ ಶಿಸ್ತಿಗೆ ತರುವ ಕಾರ್ಯವಂತೂ ಮೊದಲಿನಿಂದಲೂ ನಡೆಯುತ್ತಲೇ ಇದೆ. ಇದೇ ಸಮಯದಲ್ಲಿಯೇ ದೊಡ್ಡ ಮಸೀದಿಯ ಕೆಲಸಕ್ಕೂ ಆರಂಭವಾಯಿತು. ಬೊಕ್ಕಸದಲ್ಲಿ ಧನಾಭಾವ! ಮಂತ್ರಿಗಳು ಆಲೊಚನೆಗೆ ತೊಡಗಿದರು. ಆದರೆ ಸುಲ್ತಾನರು ಮಾತ್ರ ನಿರಾತಂಕವಾಗಿರುವಂತೆ ಕಾಣುತ್ತಿದ್ದರು. ಅವರು ಹಾಗಿರುವಾಗ ಹಣದ ಆತಂಕವನ್ನು ಹೇಳಿ ಅವರನ್ನು ಧೈರ್ಯಗೆಡಿಸುವ ಸಾಹಸವು ಯಾರಿಗೂ ಇರಲಿಲ್ಲ. ಬೊಕ್ಕಸವು ಪೂರ್ತಿಯಾಗಿ ಬರಿದಾಗಿಹೋದ ಮೇಲೆ ಹಣಕ್ಕೆ ಹಾಹಾಕಾರ ಮಾಡುವುದು ರಾಜನೀತಿಯಲ್ಲ. ಮಂತ್ರಿಗಳೆಲ್ಲಾ ಯೋಚನೆ ಮಾಡಿದರು. ಸುಲ್ತಾನರಿಗೆ ತಿಳಿಸಿಯೇಬಿಡಬೇಕೆಂದು ತೀರ್ಮಾನ ಮಾಡಿದರು. ಮೂರನೆಯ ದಿನವೇ ಮಂತ್ರಿಗಳು ಸುಲ್ತಾನರ ಭೇಟಿಯನ್ನು ಕೇಳಿದರು. ಸುಲ್ತಾನರು ಮಂತ್ರಿಗಳನ್ನು ಆದರದಿಂದ ಬರಮಾಡಿಕೊಂಡರು. ಒಂದೊಂದಾಗಿ ರಾಜ್ಯಕಾರ್ಯಗಳೆಲ್ಲಾ ಮಾತನಾಡಿಯಾಯಿತು. ಬೊಕ್ಕಸದ ಮಾತನ್ನೆತ್ತಲು ಯಾರಿಗೂ ಧೈರ್ಯವಿಲ್ಲ. ಒಬ್ಬರ ಮುಖವನ್ನು ಒಬ್ಬರು ನೋಡತೊಡಗಿದರು. ಟಿಪ್ಪೂಸುಲ್ತಾನನು ಇಂಗಿತವನ್ನರಿತು 'ನೀವೆಲ್ಲಾ ಏನೋ ಒಂದು ಮಂತ್ರಾಲೋಚನೆಯನ್ನು ಮಾಡಕೊಂಡು ಬಂದಿದ್ದೀರಿ. ಹೇಳಲು ಹಿಂಜರಿಯುತ್ತಿದ್ದೀರಿ. ಕಾರಣವೇನು? ಬೇಕಾದ್ದನ್ನು ತಿಳಿಸಬಹುದು' ಎಂದನು. ಆಗ ಮಂತ್ರಿ ಪೂರ್ಣಯ್ಯನವರೆದ್ದು; ಕೈ ಮುಗಿದು ವಿನಯದಿಂದ—

" ಖಾವಿಂದ್ ! ಕೆಲಸಗಳೆಲ್ಲಾ ಭರದಿಂದ ನಡೆಯುತ್ತಿವೆ. ಬೊಕ್ಕಸದಲ್ಲಿ ಹಣವು ಮುಗಿಯುತ್ತ ಬಂದಿದೆ. ಎರಡೇ-ಎರಡು ಲಕ್ಷ ರೂಪಾಯಿಗಳು ಮಾತ್ರವೇ ಇದೆ. ಇಂಥಾ ಸ್ಥಿತಿಯಲ್ಲಿ ರಾಜ್ಯಭಾರ ನಡೆಯುವುದು ಕಷ್ಟ. ಇದನ್ನು ಹುಜೂರಿಗೆ ಅರಿಕೆ ಮಾಡಲು ಹಿಂದೆಗೆಯುತ್ತಿದೇವೆ" ಎಂದು ಹೇಳಿದರು ಸುಲ್ತಾನನು:—" ನೀನು ಹೇಳುವುದು ಯುಕ್ತವಾಗಿದೆ. ಬೊಕ್ಕಸದಲ್ಲಿ ಹಣವಿಲ್ಲದಿದ್ದರೂ ರಾಜ್ಯದಲ್ಲಿ ಧನವಿದೆ. ಭಯಪಡುವ ಕಾರಣವಿಲ್ಲ. ಆಯಾ ಪರಗಣಗಳಿಗೆ ಅನುಗುಣವಾಗಿ ಹಣವನ್ನು ಕಳುಹಿಸಬೇಕೆಂದು ರಾಯಸಗಳನ್ನು ಬರೆಸಿರಿ ಮದ್ದಗಿರಿಗೆ-ಚಿತ್ರದುರ್ಗಕ್ಕೆ-ಒಬ್ಬೊಬ್ಬ ಸೇನಾಧಿಪತಿಗಳೇ ಹೋಗಿಬರಲಿ. ಅವೆರಡು ದುರ್ಗಾಧೀಶರಿಗೂ ಹತ್ತು-ಹತ್ತು ಲಕ್ಷ ರೂಪಾಯಿಗಳನ್ನು ಕೊಡುವ ಶಕ್ತಿ ಇದೆ. ನಗರದ ಸೀಮೆಯಂತೂ ನಮ್ಮದೇ ಇದೆ. ನಗರದ ನವಾಬರು ಮನಸ್ಸು ಮಾಡಿದರೆ ಒಂದು ಕೋಟಿ ರೂಪಾಯಿಗಳ ದ್ರವ್ಯ ಸಹಾಯವನ್ನು ಸುಲಭವಾಗಿ ಮಾಡಬಹುದು. ಮಲಶೀಮೆಯ ಪಾಳೆಯಗಾರರಿಂದ ನಾವು ಇದುವರೆಗೂ ಕಪ್ಪ ಕಾಣಿಕೆಗಳನ್ನು ಎತ್ತಲೇ ಇಲ್ಲ. ಪ್ರತಿಯೊಬ್ಬ ಪಾಳೆಯಗಾರನೂ ಪಾಳೆಯಪಟ್ಟಿನ ಶಕ್ತಿಗನುಗುಣವಾಗಿ ಕಾಣಿಕೆಯನ್ನು ಒಪ್ಪಿಸಬೇಕೆಂದು ರಾಯಸವನ್ನು ಕಳುಹಿಸತಕ್ಕದ್ದು. ಈ ಕಾರ್ಯಗಳಿಗೆಲ್ಲಾ ದೊಡ್ಡದೊಡ್ಡ ಸರದಾರರನ್ನೇ ಕಳುಹಿಸತಕ್ಕದ್ದು. ಇದರಿಂದ ನಮ್ಮ ಭಂಡಾರವು ತುಂಬುತ್ತದೆ. ಆದರೆ ಅಲ್ಲಿಗೇ ತೃಪ್ತರಾಗುವಂತಿಲ್ಲ. ನಮಗೆ ಒಂದರಮೇಲೊಂದು ಯುದ್ಧವು ಒದಗುವ ಸಂಭವ ಉಂಟು. ಮೈಸೂರಿನ ಅಖಂಡ ಸಾಮ್ರಾಜ್ಯವು ಸ್ಥಾಪಿತವಾಗುವವರೆಗೆ ಮೈಸೂರಿನ ಬೊಕ್ಕಸದಲ್ಲಿ ಕನಕವರ್ಷವಾಗಬೇಕು. ಅದಕ್ಕಾಗಿ ಇಂದಿನಿಂದ ಸಾಮ್ರಾಜ್ಯ ಸ್ಥಾಪನೆಯಾಗುವವರೆಗೆ ಪ್ರತಿಯೊಬ್ಬ ಸುಬೇದಾರರೂ, ನಾಡು ಗೌಡರೂ, ದುರ್ಗದ ನವಾಬರುಗಳೂ, ಪಾಳೆಯಗಾರರೂ, ಯುದ್ಧದ ಕಪ್ಪವನ್ನು ವರ್ಷಂಪ್ರತಿ ತಂದೊಪ್ಪಿಸಬೇಕು. ಮೈಸೂರು ರಾಜ್ಯದಲ್ಲಿ ಸಂದರ್ಭ ಒದಗಿದರೆ, ಪ್ರಜೆಗಳಲ್ಲಿರುವ ನವನಿಧಿಗಳನ್ನೂ ರಾಜಭಂಡಾರಕ್ಕೆ ತೆಗೆದುಕೊಳ್ಳುವ ಸಿದ್ಧತೆಯನ್ನು ಪ್ರತಿಯೊಂದು ಕಡೆಯೂ ಅಧಿಕಾರಿಗಳೂ ಮಾಡಿಕೊಂಡಿರತಕ್ಕದ್ದು." ಹೀಗೆ ಸುಲ್ತಾನರು ಶರ ವರ್ಷದಂತೆ ಅಧಿಕಾರವಾಣಿಯಿಂದ ಆಜ್ಞೆ ಮಾಡಿದರು. ಆಗ ಸುಲ್ತಾನರ ಮುಖಮುದ್ರೆಯನ್ನು ನೋಡಿದರೆ, ಆ ಆಜ್ಞೆಯ ಯುಕ್ತಾ ಯುಕ್ತತೆಯನ್ನು ಮಂತ್ರಿ

ಗಳು ಕೇಳಬೇಕೂಡದೆಂಬ ಕ್ರೌರ್ಯವು ಎದ್ದು ಕಾಣುತ್ತಿತ್ತು. ಮಂತ್ರಿಗಳೆಲ್ಲಾ ಆಜ್ಞೆ ಪಡೆದು ಹೊರಟುಹೋದರು.

ಈ ಧನ ಸಂಗ್ರಹ ಮಾರ್ಗವು ಮಂತ್ರಿಗಳಲ್ಲಿ ಒಬ್ಬರಿಗಾದರೂ ಒಪ್ಪಲಿಲ್ಲ. ಟಿಪ್ಪೂಸುಲ್ತಾನರ ಧೂರ್ತ ಸ್ವಭಾವದಲ್ಲಿ ಅದಕ್ಕೆ ಪ್ರತಿ ಹೇಳಿ ಸಾರ್ಥಕವಿಲ್ಲ. ಟಿಪ್ಪುಸುಲ್ತಾನರ ತಪ್ಪುಗಳನ್ನು ಖಂಡಿಸಿ ಹೇಳುವ ಧೈರವಿರುವುದು ಬಡಾ ಫಕೀರರೊಬ್ಬರಿಗೆ! ಅವರು ಮಕ್ಕಾ ಯಾತ್ರೆಗೆ ಹೊರಟುಹೋಗಿದ್ದಾರೆ. ಹೇಳುವರಾರು? ಆದರೂ ಪೂರ್ಣಯ್ಯನವರೂ ಮಹಮದ್ ಖಾನರೂ ಧೈರ್ಯ ಮಾಡಿ ಆ ದಿನ ರಾತ್ರಿಯೇ ಸುಲ್ತಾನರನ್ನು ಅಂತರಂಗದಲ್ಲಿ ಭೇಟಿ ಮಾಡಿದರು. ಅವರ ಭೇಟಿಯ ಅಂತರಂಗವನ್ನು ಸುಲ್ತಾನನು ಮೊದಲೇ ತಿಳಿದಿದ್ದನು. ಆದರೂ ಆದರದಿಂದ ಎದುರುಗೊಂಡು ಅವರನ್ನು ಆಸನದಲ್ಲಿ ಕುಳ್ಳಿರಿಸಿ ತಾನು ಕುಳಿತುಕೊಂಡನು. ಅವರು ಬಂದಿರುವ ಕಾರ್ಯವನ್ನು ವಿಚಾರಿಸಿದನು. ಅವರು ಈಗ ಸುಲ್ತಾನರು ಆಲೋಚಿಸಿರುವ ಧನಾಕರ್ಷಣೆಯ ಮಾರ್ಗವು ಯೋಗ್ಯವಾದುದಲ್ಲವೆಂದೂ ಅದರಿಂದ ಪ್ರಜಾ ಕ್ಷೋಭಯಾಗುವುದೆಂದೂ ರಾಜ್ಯಕ್ಕೆ ಅಪಾಯ ತಟ್ಟುವುದೆಂದೂ ತಿಳಿಸಿದರು.

ಟಿಪ್ಪೂಸುಲ್ತಾನರು ನಸುನಗುತ್ತಾ ಮಂತ್ರಿಗಳೇ, ದಿವಾನರೇ! ತಮ್ಮ ಗಾಬರಿಯು ನಿರಾಧಾರವಾದುದು. ನಾವು ಪ್ರಜೆಗಳ ಸರ್ವಸ್ವಾಪಹಾರ ಮಾಡುತ್ತಿಲ್ಲ. ಸಾಮ್ರಾಜ್ಯವನ್ನು ಕಟ್ಟುವಾಗ ರಾಜ್ಯದಲ್ಲಿರುವ ಹಣವನ್ನು ಖರ್ಚು ಮಾಡಲೇಬೇಕು. ನಾವು ಸಾಮ್ರಾಜ್ಯವನ್ನು ಸ್ಥಾಪಿಸುವುದು ನಮ್ಮ ಸ್ವಾರ್ಥಕ್ಕಾಗಿ ಅಲ್ಲ. ಮೈಸೂರಿನ ಪ್ರತಿಯೊಬ್ಬ ಪ್ರಜೆಯ ಸುಖ, ಸ್ವಾತಂತ್ರಗಳಿಗಾಗಿ ನಾವು ಸಾಮ್ರಾಜ್ಯವನ್ನು ಕಟ್ಟುತ್ತೇವೆ. ನಾವು ದುರ್ಗಾಧಿಪತಿಗಳಿಂದಲಾಗಲೀ, ಯಾವ ಪ್ರಜೆಯಿಂದಾಗಲಿ, ಕಪ್ಪಕಾಣಿಕೆಗಳನ್ನು ತೆಗೆದುಕೊಂಡಿಲ್ಲ. ಈಗ ಸಮಯ ಒದಗಿದಾಗ ಧನವನ್ನು ಅಪೇಕ್ಷಿಸುವುದು ರಾಜರ ಹಕ್ಕೇ ಆಗಿದೆ. ನೀವುಗಳು ಮೊದಲಿಂದಲೂ ಈ ರಾಜ್ಯದ ಆಧಾರಸ್ತಂಬಗಳಂತಿದ್ದೀರಿ. ನಿಮ್ಮ ಮಾತು ನನಗೆ ದೊಡ್ಡ ನವಾಬರ ಮಾತಿನ ಸಮಾನ. ಈಗ ಧನಾರ್ಜನೆಗೆ ಬೇರೆ ಸುಗಮ ಮಾರ್ಗವಿದ್ದರೆ ಹೇಳಿರಿ. ನಾನು ಅದಕ್ಕೆ ಒಪ್ಪಿಕೊಳ್ಳುತ್ತೇನೆ. ದೊಡ್ಡ ನವಾಬರು ಸಂಪಾದಿಸಿರುವ ಈ ರಾಜ್ಯವನ್ನು ಕಾಪಾಡಿಕೊಳ್ಳಬೇಕಾದರೆ ಧನ ಬೇಕು. ಶತ್ರುಗಳನ್ನು ಜಯಿಸಬೇಕಾದರೆ ಅತುಲ ಧನ ಬೇಕು. ಸಾಮ್ರಾಜ್ಯ

ವನ್ನು ಕಟ್ಟಬೇಕಾದರೆ ಅಪಾರ ಧನ ಬೇಕು! ಅದಕ್ಕೇನು ಮಾಡಬೇಕು ಹೇಳಿರಿ? ಮೈಸೂರು ರಾಜ್ಯವನ್ನು ಭದ್ರವಾಗಿ ಕಟ್ಟಬೇಕೇ? ಶತ್ರುಗಳಿಗೆ ಹರಿದು ಹಂಚಿ ಕೊಟ್ಟುಬಿಡಬೇಕೇ? ಈ ಪ್ರಸಂಗದಲ್ಲಿ ಏನು ಮಾಡಬೇಕು? ಅಪ್ಪಣೆ ಕೊಡಿಸೋಣವಾಗಲಿ! ಇದರಿಂದ ಪ್ರಜಾ ಕ್ಷೋಭೆಯಾಗುವುದೆಂದು ಹೇಳುತ್ತೀರಿ. ಇದರಿಂದ ಸ್ವಲ್ಪ ಅಸಮಾಧಾನವಾಗುತ್ತೆ. ಕೊಂಚ ಕಷ್ಟವಾಗುತ್ತದೆ. ಇದೆಲ್ಲಾ ಯುದ್ಧಗಳು ಪ್ರಾಪ್ತವಾದಾಗ ರಾಜ್ಯವನ್ನು ಕಟ್ಟುವಾಗ ಸಂಭವಿಸತಕ್ಕವುಗಳೇ. ಅದನ್ನೆಲ್ಲಾ ದರ್ಪದಿಂದ ಅಣಗಿಸಿ ಆಡಳಿತ ಮಾಡುವ ಸಾಮರ್ಥ್ಯವು ಅಧಿಕಾರಿಗಳಿಗಿರಬೇಕು. ಅದನ್ನು ನೀವುಗಳು ನೋಡಿಕೊಳ್ಳಬೇಕು. ಈ ಸಮಯದಲ್ಲಿ ಇದರ ಮಹತ್ವವನ್ನರಿತು ಪ್ರತಿಯೊಬ್ಬ ಅಧಿಕಾರಿಯು ನಮ್ಮ ಆಜ್ಞಾಪಾಲನ ಮಾಡುವನೆಂಬ ಭರವಸೆಯು ನನಗಿದೆ ಎಂದು ಹೇಳಿದನು. ಮಂತ್ರಿಗಳಿಬ್ಬರೂ ಅವಾಕ್ಕಾಗಿ ಹೋದರು. ಅವರು ಸುಲ್ತಾನನ್ನು ಬೀಳ್ಕೊಂಡು ಹೊರಟರು. ಸುಲ್ತಾನನು ಬಹಳ ಆದರ ವಿಶ್ವಾಸಗಳಿಂದ ಬೀಳ್ಕೊಟ್ಟು ಕಳುಹಿಸಿದನು. ಮಂತ್ರಿಗಳಿಬ್ಬರೂ ಧೈರ್ಯಮಾಡಿ ನವಾಬರಿಗೆ ಬುದ್ಧಿ ಹೇಳಿದರು. ನವಾಬರು ವಾಗ್ಜಾಲದಲ್ಲಿ ಬೆರಗಾಗಿ ಮೌನ ಮುದ್ರೆಯನ್ನು ವಹಿಸಿ ಹೊರಟು ಬಂದರು. ಆದರೂ ಮನಸ್ಸಿಗೆ ಶಾಂತಿಯಾಗಲಿಲ್ಲ. ಈ ಪ್ರಯತ್ನದಲ್ಲಿ ಪ್ರಜಾಕ್ಷೋಭೆಯಾಗುತ್ತದೆಂದೂ, ಮೈಸೂರಿಗೆ ಹಾನಿ ತಪ್ಪಿದ್ದಿಲ್ಲವೆಂದೂ ನಿರ್ಧರ ಮಾಡಿಕೊಂಡರು ಅದೇ ದಿನವೇ ರಾಯಸದವರು ಆಜ್ಞಾಪತ್ರಗಳನ್ನು ಬರೆದು ಸಿದ್ಧಪಡಿಸಿದರು. ಖುದ್ದು ಸುಲ್ತಾನರವರೇ ಯಾವ ಯಾವ ಸ್ಥಳಗಳಿಗೆ ಯಾರು ಯಾರು ಹೋಗಬೇಕೆಂಬುದನ್ನು ಗೊತ್ತು ಮಾಡಿ ಆ ಸರದಾರರುಗಳನ್ನೆಲ್ಲಾ ಸಮ್ಮುಖಕ್ಕೆ ಕರೆಸಿಕೊಂಡು ಅಪ್ಪಣೆ ಇತ್ತು ಕಳುಹಿಸಿದರು.

ಟಿಪ್ಪುಸುಲ್ತಾನನ ಸಂಕಲ್ಪವು ಬಹು ದೃಢವಾದದು. ಬೊಕ್ಕಸದಲ್ಲಿ ಹಣವಿಲ್ಲವೆಂದು ಕೇಳಿದನು. ತಕ್ಷಣವೇ ಹಣವನ್ನು ಶೇಖರಿಸುವ ಮಾರ್ಗವನ್ನು ಕಲ್ಪಿಸಿದನು. ಆಜ್ಞಾಪತ್ರಗಳು ಹೊರಟವು ಸುವರ್ಣ ನದಿಯೇ ತನ್ನ ಭಂಡಾರಕ್ಕೆ ಹರಿದು ಬರುವಂತೆ ಭಾವಿಸಿದನು. ತನ್ನ ಆಜ್ಞೆಯು ಅಪ್ರತಿಹತವಾದುದೆಂದು ಸುಲ್ತಾನನ ನಿಶ್ಚಯ! ಆದರೆ ನಗರದ ವಿಚಾರದಲ್ಲಿ ಮಾತ್ರ

ಸಂದೇಹ. ಇಯಜ್‌ಖಾನನ ಮೇಲೆ ಈಗೊಂದು ತಪ್ಪು ಹೊರಿಸಬಹುದೆಂದು ಸುಲ್ತಾನನ ಹವಣಿಕೆ!

ರಾಯಸದವರನ್ನು ಕರಸಿ ಇಯಜ್ ಖಾನನಿಗೊಂದು ಪತ್ರಬರೆಸಿದನು. ದಿವಾನ್ ಮಹಮದಾಲಿಯವರೇ ನಗರಕ್ಕೆ ರಾಯಭಾರಿಗಳಾಗಿ ಹೋಗಬೇಕೆಂದು ಹುಕ್ಮಂ ಆಯಿತು. ಅವರ ಸಹಾಯಕ್ಕೆ ಮೀರ್‌ಸಾದಕನೂ ಹೋಗುವುದೆಂದು ಗೊತ್ತಾಯಿತು. ಚತುರನಾದ ಸಾದಕನು ಮಹಮ್ಮದ್‌ಖಾನರ-ಪ್ರಿಯಶಿಷ್ಯನೇ ಆಗಿದ್ದನು. ಸುಲ್ತಾನರವರು ಮಹಮದ್‌ಖಾನರನ್ನು ಸಮ್ಮುಖಕ್ಕೆ ಕರೆಸಿಕೊಂಡು, ನಗರದಿಂದ ಹೇಗಾದರೂ ಮಾಡಿ, ಒಂದು ಕೋಟಿ ರೂಪಾಯಿಗಳನ್ನು ತರಲೇಬೇಕೆಂದು ಅಪ್ಪಣೆ ಮಾಡಿದರು.

ಅದೇ ದಿನ ಸಂಧ್ಯಾಕಾಲ ಮೀರ್‌ಸಾದಕನು ಅಂತರಂಗದಲ್ಲಿ ಸುಲ್ತಾನರ ಭೇಟಿ ಮಾಡಿದನು. ಸುಲ್ತಾನನು ನಗರಕ್ಕೆ ಪ್ರಯಾಣಮಾಡುವ ಈ ಸ್ನೇಹಿತನನ್ನು ಬಹುವಾಗಿ ಗೌರವಿಸಿದನು. ಇವನು ದೌಲತ್ತಳಿಗೆ ಪ್ರಣಯ ಸಂದೇಶವನ್ನು ತೆಗೆದುಕೊಂಡು ಹೋಗುವ ಮೇಘರಾಜ! ಟಿಪ್ಪುವಿನ ಆನಂದಕ್ಕೆ ಪಾರವೇ ಇಲ್ಲ. ದೌಲತ್ತಳನ್ನೇ ಪ್ರತ್ಯಕ್ಷವಾಗಿ ನೋಡಿದಂತೆ! ಅವಳೊಡನೆಯೇ ಸಂಭಾಷಣೆ ಮಾಡುತ್ತಿರುವಂತೆ! ಅವಳಾಗಿ ನಗುತ್ತ, ನಲಿಯುತ್ತ ಒಂದು ತನ್ನನ್ನು ಆಲಂಗಿಸಿದಂತೆ! ಹೀಗೆ ಟಿಪ್ಪುವು ಜಾಗ್ರದವಸ್ಥೆಯಲ್ಲಿಯೇ ಸ್ವಪ್ನಗಳನ್ನು ಕಾಣುತ್ತಿದ್ದನು. ಅವನು ಎಷ್ಟೋ ಆಶಾಕಲ್ಪನೆಗಳನ್ನು ಕಟ್ಟಿ; ಅದರಲ್ಲಿ ದೌಲತ್ತಳನ್ನು ಆವಾಹನೆಮಾಡಿ; ಮನಸ್ಸಿನಲ್ಲಿಯೇ ಆರಾಧಿಸುತ್ತಿದ್ದನು. ತನ್ನ ಮನಸ್ಸಿನಲ್ಲಿ ತುಂಬಿದ್ದ ಪ್ರೇಮದ ಪ್ರತಿಬಿಂಬದಂತೆ ಒಂದು ಪ್ರಣಯ ಪತ್ರವನ್ನು ಬರದು; ಅದನ್ನು ದೌಲತ್ತಳಿಗೆ ತಲಪಿಸಬೇಕೆಂದು ಮೀರ್‌ಸಾದಕನ ಕೈಯಲ್ಲಿ ಕೊಟ್ಟನು. ತಾನು ಈ ರಾಜ್ಯವೆಲ್ಲವನ್ನೂ ದೌಲತ್ತಳಿಗೆ ಒಪ್ಪಿಸಿ, ಜಹಂಗೀರನು ನೂರ್‌ಜಹಾನಳನ್ನು ಓಲೈಸಿದಂತೆ; ದೌಲತ್ತಳನ್ನು ಆರಾಧಿಸುವುದಾಗಿ ಹೇಳಿಕಳುಹಿಸಿದನು. ಹೈದರಾಲಿಯು ಯುವರಾಜ ಟಿಪ್ಪೂಸುಲ್ತಾನನಿಗೆ ಕೊಟ್ಟಿದ್ದ ಕತ್ತಿಯನ್ನು ಪ್ರಣಯ ಪಣವಾಗಿ ದೌಲತ್ತಳಿಗೆ ಕಳಿಸಿದನು. ಹೇಗಾದರೂ ಮಾಡಿ, ಏನಾದರೂ ಉಪಾಯದಿಂದ ದೌಲತ್ತಳನ್ನು ಕರತಂದು ಬಿಟ್ಟರೆ ನಗರದ ನವಾಬಗಿರಿಯನ್ನೇ ಕೊಡುವುದಾಗಿ ಮೀರ್‌ಸಾದಕನಿಗೆ ಬೆನ್ನು

ತಟ್ಟಿ ಹೇಳಿದನು. ಹೀಗೆ ಸುಲ್ತಾನನ ಪೂರ್ಣ ಅನುಗ್ರಹವನ್ನು ಹೊಂದಿ ಮೀರ್‌ಸಾದಕನು ನಗರಕ್ಕೆ ಪ್ರಯಾಣೋನ್ಮುಖನಾದನು.

ಮಾರನೇ ದಿನ ಉಷಃಕಾಲದಲ್ಲಿಯೇ ಇಬ್ಬರು ರಾಯಭಾರಿಗಳು : ರಾಜ ವೈಭವದಿಂದ ನಗರಕ್ಕೆ ಪ್ರಯಾಣ ಬೆಳಸಿದರು. ಶ್ರೀರಂಗಪಟ್ಟಣವನ್ನು ಬಿಟ್ಟ ಹನ್ನೆರಡನೇ ದಿನ ನಗರವನ್ನು ಸೇರಿದರು. ಒಂಟೆಯ ರಾಹುತರು ನಾಲ್ಕುದಿನ ಮುಂಚೆಯೇ ಈ ರಾಯಭಾರಿಗಳ ಆಗಮನ ವಾರ್ತೆಯನ್ನು ನಗರಕ್ಕೆ ತಂದಿದ್ದರು. ಅವರನ್ನು ಎದುರುಗೊಂಡು ಸತ್ಕರಿಸಲು ರಾಜಯೋಗ್ಯವಾದ ಏರ್ಪಾಡುಗಳು ನಗರದಲ್ಲಿ ಸಿದ್ಧವಾಗಿದ್ದುವು.

ಆ ರಾಯಭಾರಿಗಳು ನಗರವನ್ನು ತಲಪಿದ ದಿನವೇ ಸಂಧ್ಯಾಕಾಲ ರಾಜ ಮಹಲಿನಲ್ಲಿ ನಗರದ ನವಾಬರ ಭೇಟಿ ಮಾಡಿದರು. ಇಯುಜ್‌ಖಾನರು ಅತ್ಯಂತ ಪ್ರೀತಿವಿಶ್ವಾಸಗಳಿಂದ ಆ ರಾಯಭಾರಿಗಳನ್ನು ಮಾತನಾಡಿಸಿದರು. ಸುಲ್ತಾನರ ಯೋಗಕ್ಷೇಮವನ್ನು ವಿಚಾರಿಸಿದರು ಪರಸ್ಪರ ಕುಶಲಪ್ರಶ್ನೆಗಳಾದ ಮೇಲೆ ದಿವಾನ್ ಮಹಮುದ್‌ಖಾನರು ತಾವು ಬಂದ ವಿಷಯವನ್ನು ಪ್ರಸ್ತಾಪಿಸಿದರು. ಟಿಪ್ಪುಸುಲ್ತಾನರ ಪತ್ರವನ್ನು ನವಾಬರಿಗೆ ಒಪ್ಪಿಸಿದರು. ನಗರದ ನವಾಬರು ಸುಲ್ತಾನರ ರಾಯಸವನ್ನು ಆದರದಿಂದ ಸ್ವೀಕರಿಸಿದರು. ಓದಿ ನೋಡಿ ತಲೆದೂಗಿದರು. ಕೋಟಿ ರೂಪಾಯಿಗಳು ! ಒಂದುಕೋಟಿ ರೂಪಾಯಿಗಳು ನಗರದ ಹತ್ತು ವರ್ಷಗಳ ರಾಜಾದಾಯ. ಪುನಃ ಆ ರಾಯಸವನ್ನು ಗಟ್ಟಿಯಾಗಿ ಓದಲಾರಂಭಿಸಿದರು.

ಪ್ರಿಯ ನಗರದ ನವಾಬರೇ !

ನಾವು ಸುಖದಿಂದ ಇದ್ದೇವೆ. ತಮ್ಮ ಕ್ಷೇಮವನ್ನು ಕೋರುತ್ತೇವೆ. ದೊಡ್ಡ ನವಾಬರ ಆಶೀರ್ವಾದವು ನಮ್ಮೆಲ್ಲರಿಗೂ ಸಮಾನ. ಮೈಸೂರಿನ ದೊಡ್ಡಸ್ತಿಕೆಯು ನಮ್ಮೆಲ್ಲರಿಗೂ ಸೇರಿದ್ದು. ದೊಡ್ಡ ನವಾಬರು ವಿಸ್ತರಿಸಿದ ರಾಜ್ಯವನ್ನು ಕಟ್ಟಿ ಕಾಪಾಡಬೇಕು. ಮೈಸೂರಿಗೆ ನಾಲ್ಕು ಕಡೆಯೂ ಶತ್ರುಗಳ ಬಾಧೆ. ಅದಕ್ಕಾಗಿ ಬಲವಾದ ಸೈನ್ಯವನ್ನು ಕಟ್ಟಬೇಕು. ಶ್ರೀರಂಗಪಟ್ಟಣವು ನಮ್ಮ ಚಕ್ರಾಧಿಪತ್ಯದ ರಾಜಧಾನಿ. ಅದರ ಕೋಟೆಯು ಅಭೂತಪೂರ್ವವಾದುದು. ಆ ಕಾರ್ಯವನ್ನು ಕೈಗೊಳ್ಳಲಾಗಿದೆ. ಶ್ರೀರಂಗಪಟ್ಟಣದಲ್ಲಿ ದೊಡ್ಡ

ಮಶೀದಿಯನ್ನು ಕಟ್ಟುತ್ತಾ ಇರುವ ಸಮಾಚಾರವು ತಮಗೆ ತಿಳಿದೇ ಇರಬಹುದು. ಇಂಥಾ ದೊಡ್ಡ ಮಹಮ್ಮದೀಯ ರಾಜ್ಯದಲ್ಲಿ ನಮ್ಮ ಗೌರವ, ಅಭಿಮಾನಗಳಿಗೆ ತಕ್ಕಂಥಾ ಮಶೀದಿ ಇಲ್ಲದಿರುವುದು ನಮ್ಮ ರಾಜ್ಯಕ್ಕೇ ಕಳಂಕಪ್ರಾಯವಾದುದು. ಮೈಸೂರಿನಲ್ಲಿ ಮುಸಲ್ಮಾನ ರಾಜ್ಯವು ಸ್ಥಾಪಿಸುವುದಕ್ಕೆ ದೊಡ್ಡ ಮಶೀದಿಯೇ ಗುರ್ತು! ಅದು ಮುಸಲ್ಮಾನ ಜನಾಂಗದ ದೃಷ್ಟಿಯೆಲ್ಲವನ್ನೂ ಆಕರ್ಷಿಸುತ್ತದೆ. ಈ ದೊಡ್ಡ ದೊಡ್ಡ ಕಾರ್ಯಗಳಿಗೆ ತಮ್ಮ ಸಹಾಯವು ಅಗತ್ಯವಾಗಿದೆ. ಅಲ್ಲಿಂದ ಒಂದು ಕೋಟಿ ರೂಪಾಯಿಗಳನ್ನು ಕಳುಹಿಸಬೇಕೆಂದು ಕೋರಲ್ಪಟ್ಟಿದೆ. ಈ ಸಮಯದಲ್ಲಿ ಮೈಸೂರಿನ ಗೌರವವು ನಮ್ಮೆಲ್ಲರಿಗೂ ಸೇರಿದ್ದು. ದೊಡ್ಡ ನವಾಬರ ಪ್ರಿಯ ಪುತ್ರರಲ್ಲಿ ವಿಶೇಷ ಅರಿಕೆಮಾಡುವುದೇನಿದೆ.

ತಮ್ಮ ಸಹೋದರ
ಟಿಪ್ಪೂಸುಲ್ತಾನ.

ಕಾಗದವನ್ನು ಪುನಃ ಒಂದು ಬಾರಿ ಓದಿದರು. ದಿವಾನ ಮಹಮ್ಮದ್ ಖಾನರ ಕಡೆ ತಿರುಗಿ ನೋಡಿದರು.

ದಿವಾನ:—ಖಾನರವರು ಪತ್ರವನ್ನು ಪರಾಂಬರಿಸೋಣವಾಯಿತಷ್ಟೆ!

ಇಯಜ್‌ಖಾನ:—ಪೂಜ್ಯ ದಿವಾನ ಸಾಹೇಬರವರೇ! ಈ ರಾಯಸವು ಬಲು ವಿಶ್ವಾಸಪೂರ್ವಕವಾದದ್ದು. ಮೈಸೂರಿನ ಆಧಾರ ಸ್ಥಂಭದಂತಿರುವ ತಾವು ಈ ಕಾರ್ಯಕ್ಕೆ ಖುದ್ದು ದಯಮಾಡಿಸೋಣವಾಗಿದೆ. ಈ ನಗರವು ನವಾಬರ ರಾಜ್ಯ! ನಾನು ರಾಜಕರ್ಮಚಾರಿ! ಅವರ ಆಜ್ಞೆಯನ್ನು ಶಿರಸಾವಹಿಸಿ ನಡೆಯುವುದು ನಮ್ಮೆಲ್ಲರ ಕರ್ತವ್ಯ! ಆದರೂ, ಸಾಧ್ಯಾ—ಸಾಧ್ಯತೆಯನ್ನು ಯುಕ್ತಾ—ಯುಕ್ತತೆಯನ್ನೂ ಪರಿಶೀಲಿಸಬೇಕು. ಆಲೋಚನೆಮಾಡಿ ನಾಳೆ ಸಂಧ್ಯಾಕಾಲದೊಳಗಾಗಿ ಸಮುತ್ತರವನ್ನು ಕೊಡುತ್ತೇನೆ.

ದಿವಾನ:—ಅಪ್ಪಣೆ.

ರಾಯಭಾರಿಗಳಿಬ್ಬರೂ ಬಿಳ್ಕೊಂಡು ಬಿಡಾರಕ್ಕೆ ತೆರಳಿದರು. ಆ ಬಿಡಾರದಲ್ಲಿ ದಿವಾನರೂ, ಮಿರ್‌ಸಾದಕನೂ ಸುಖಾಸನಗಳಲ್ಲಿ ಎದುರುಬದರಾಗಿ ಕುಳಿತಿದಾರೆ.

ಮೀರ್ :—ದಿವಾನ್ ಸಾಹೇಬರವರೇ! ಇಂದಿನ ರಾಯಭಾರವು ತಮಗೆ ಹೇಗೆ ಕಾಣುತ್ತದೆ?

ದಿವಾನ್ :—ಅಷ್ಟೇನೂ ಸುಮುಖವಾಗಿ ತೋರುವುದಿಲ್ಲ!

ಮೀರ್ :—ನಗರದ ನವಾಬರು ಬಹಳ ಗೌರವವನ್ನು ತೋರಿದರು. ಸುಲ್ತಾನರ ವಿಷಯದಲ್ಲಿ ಹೆಚ್ಚು ಮನ್ನಣೆಯನ್ನು ತೋರಿದರು. ಆದರೆ ಹಣದ ವಿಷಯದಲ್ಲಿ ಅಷ್ಟು ಭರವಸೆಯು ತೋರುವುದಿಲ್ಲ.

ದಿವಾನ್ :—ಭರವಸೆ ಏನು? ಇಲ್ಲ ಎಂದೇ ಉತ್ತರ ಬರಬಹುದು.

ಮೀರ್ :—ಈ ಕಾರ್ಯಕ್ಕೆ ತಾವೇ ಖುದ್ದಾಗಿ ದಯಮಾಡಿಸಿ, ವಿಫಲ ವಾದರೆ ತಮ್ಮ ಗೌರವಕ್ಕೆ ಸ್ವಲ್ಪ ಕುಂದಕವಲ್ಲವೇ?

ದಿವಾನ್ :—ನನ್ನ ಗೌರವದ ಮಾತು ಹಾಗಿರಲಿ! ನಾವು ಬಂದ ಕಾರ್ಯವು ಸಫಲವಾಗದಿದ್ದರೆ ಸುಲ್ತಾನರ ಆಗ್ರಹವು ಬಂದೇ ಬರುವುದು. ನಗರದ ನವಾಬರಿಗೂ ನಮ್ಮ ಸುಲ್ತಾನರಿಗೂ ಬಲವಾದ ವಿರೋಧವು ಆರಂಭಿಸಿದಂತೆಯೇ ಸರಿ!

ಮೀರ್ :—ಸುಲ್ತಾನರಿಗೆ ಆಗ್ರಹ ಬಂದರೆ ಅವರ ವಿರೋಧವನ್ನು ಕಟ್ಟಿಕೊಂಡರೆ ನಗರದ ನವಾಬಗಿರಿಯು ಉಳಿದೀತೆ? ಇಯಜ್‌ಖಾನರ ಪಾಡೇನು?

ದಿವಾನ್ :—ಅದು ಅಷ್ಟು ಹಗುರವಾದ ಮಾತಲ್ಲ. ಇಯಜ್‌ಖಾನರೂ, ಸುಲ್ತಾನರೂ ಸಮ-ಸಮ ಪರಾಕ್ರಮಿಗಳು!

ಮೀರ್ :—ಇಬ್ಬರೂ ಸಮ-ಸಮ ಪರಾಕ್ರಮಿಗಳಾದರೆ ಮೈಸೂರಿಗೆ ಇಬ್ಬರು ರಾಜರಾದಂತೆಯೇ ಸರಿ!

ದಿವಾನ್ :—ಹಾಗಲ್ಲ. ಇಯಜ್‌ಖಾನರಿಗೆ ದೊಡ್ಡ ನವಾಬರಲ್ಲಿ ಪರಮ ಭಕ್ತಿ! ಮೈಸೂರು ರಾಜ್ಯದಲ್ಲಿ ಅಭಿಮಾನ. ಅದರಿಂದ ಟಿಪ್ಪೂಸುಲ್ತಾನರಲ್ಲಿ ಅವರು ತಗ್ಗಿ ನಡೆದಾರೆಂಬ ಭರವಸೆ ಇದೆ.

ಮೀರ್ :—ಈಗ ಆ ಭಕ್ತಿ ವಿಶ್ವಾಸಗಳನ್ನು ತೋರಿದರೂ ತೋರಬಹುದಷ್ಟೆ!

ದಿವಾನ:—ಆದರೂ ಒಂದು ಆಲೋಚನೆ. ಈಗ ನಮ್ಮ ಕಾರ್ಯ ಸಿದ್ಧಿಯಾದರೂ ಆಗಬಹುದು!

ಆ ಮಾತು ಅಲ್ಲಿಗೆ ನಿಂತಿತು!

ಮೀರ್‌ಸಾದಕನು ಮುಹಮ್ಮದ್ ಆಲಿಯುವರ ಪ್ರಿಯ ಶಿಷ್ಯ. ಅವರ ಸ್ನೇಹಿತನೆಂದು ಹೇಳಿಕೊಳ್ಳುವಷ್ಟು ವಿಶ್ವಾಸಕ್ಕೆ ಪಾತ್ರನಾಗಿದ್ದನು. ಉದಾರಿಯಾದ ಮುಹಮ್ಮದಾಲಿಯುವರು; ಮೀರ್‌ಸಾದಕನಿಗೆ ಬಹಳ ಸಹಾಯಮಾಡಿದ್ದರು. ದೊಡ್ಡ ನವಾಬರಿಗೆ ಅವನಮೇಲೆ ಬಹಳ ಅಸಮಾಧಾನವಿತ್ತು. ಅವನು ಚಿಕ್ಕಂದಿನಿಂದ ಟಿಪ್ಪೂಸುಲ್ತಾನರ ಸ್ನೇಹಿತ. ಟಿಪ್ಪುವನ್ನು ದುರ್ಮಾರ್ಗಕ್ಕೆ ಎಳೆಯುವ ಘಾತುಕನೆಂದು ದೊಡ್ಡ ನವಾಬರಿಗೆ ಇವನನ್ನು ಕಂಡರಾಗದು. ಮುಹಮ್ಮದಾಲಿಯುವರಿಗೆ ಅವನು ಚತುರನೆಂದೂ, ಬುದ್ಧಿವಂತನೆಂದೂ, ಅವನ ಮೇಲೆ ಒಂದು ವಿಧವಾದ ವಿಶ್ವಾಸ! ದೊಡ್ಡ ನವಾಬರಿಗೆ ಇವನ ಮೇಲೆ ಆಗ್ರಹ ಬಂದಾಗಲೆಲ್ಲಾ ಮುಹಮ್ಮದಾಲಿಯುವರ ಮರೆಯಲ್ಲಿಯೇ ಇವನು ಪಾರಾಗುತ್ತಿದ್ದನು. ಕೊನೆಗೂ ಒಂದು ದಿನ ಮೀರ್‌ಸಾದಕನು ಒಬ್ಬ ಹಿಂದೂ ಸ್ತ್ರೀಯನ್ನು ಅಪಹಾರ ಮಾಡಿದ್ದನ್ನು ದೊಡ್ಡ ನವಾಬರು ಅರಿತು, ಅವನನ್ನು ಆಮರಣಾಂತ ಸೆರೆಯಲ್ಲಿಟ್ಟರು. ಆಗ ಅವನನ್ನು ಯಾರೂ ಉದ್ಧಾರ ಮಾಡಲಾರದೇ ಹೋದರು. ನವಾಬರು ಕಾಲವಾದಮೇಲೆ ಮುಹಮ್ಮದಾಲಿಯುವರೇ ಅವನನ್ನು ಬಿಡುಗಡೆ ಮಾಡಿಸಿದರು. ಈಗ ಮೀರ್‌ಸಾದಕನು ಒಂದು ಕಡೆ ಸುಲ್ತಾನರ ನರ್ಮ ಸಚಿವ. ಮತ್ತೊಂದು ಕಡೆ ದಿವಾನರ ಮುಖ್ಯಶಿಷ್ಯ. ಅವನ ಹಳೆಯ ದೋಷಗಳೆಲ್ಲಾ ಮಾಯುವಾಗಿ ಎಲ್ಲರ ಗೌರವಕ್ಕೂ ಅವನು ಪಾತ್ರನಾಗಿದ್ದಾನೆ. ವಾಚಕರಿಗೆ ಅವನ ಪರಿಚಯ ಇಷ್ಟೇ ಸಾಕು. ದಿವಾನ ಮುಹಮ್ಮದಾಲಿಯು ಬಲು ಮುಂಗೋಪಿ. ಅವರಲ್ಲಿ ಮಾತನಾಡುವಾಗ ಮೀರ್‌ಸಾದಕನು ಬಲು ಜಾಗರೂಕನಾಗಿರುತ್ತಿದ್ದನು. ಮುಹಮ್ಮದಾಲಿಯು ಸರಸಿಯಲ್ಲ! ರಸಿಕನಲ್ಲ. ಅವನಲ್ಲಿ ರಾಜಕಾರ್ಯವನ್ನು ಧಾರಾಳವಾಗಿ ಮಾತನಾಡಬಹುದು. ಅವನದು ಗುಪ್ತ ಮಂತ್ರ! ಬಾಯಿಯಲ್ಲಿ ಹೆಚ್ಚು ಮಾತನಾಡುವನಲ್ಲ. ಲೆಖ್ಖಾಚಾರವಾಗಿ ತವಕವಾಗಿ ಒಂದೆರಡು ಮಾತು!

ಅವನು ಯುದ್ಧದ ವೀರರ ಕಥೆಗಳನ್ನು ಯಾವಾಗಲೂ ಮಾತನಾಡುತ್ತಾನೆ. ಅದರಲ್ಲಿ ಮೀರ್‌ಸಾದಕನಿಗೆ ರುಚಿ ಇಲ್ಲ. ಮುಹಮ್ಮದಾಲಿ

ಯಾವಾಗಲೂ ದೇವರ ಮಾತು! ಫಕೀರರ ಮಾತು, ವಿರಕ್ತರ ಮಾತು! ಅವ ನಿಗಿರುವ ದಿವಾನ್ ಪದವಿ, ಅವನ ರಣೋತ್ಸಾಹ ಇವುಗಳನ್ನು ಕ್ಷಣಹೊತ್ತು ಮರೆತುಬಿಟ್ಟರೆ ಮಹಮ್ಮದಾಲಿಯನ್ನು ಸಾಧು, ಫಕೀರನೆಂದೇ ಹೇಳಬಿಡ ಬಹುದು. ಈ ಮಾರ್ಗವೆಲ್ಲಾ ಮಿರ್ ಸಾದಕನಿಗೆ ನೀರಸ! ಮಹಮ್ಮದಾಲಿ ಯವರ ಮುಖದಾಕ್ಷಿಣ್ಯಕ್ಕಾಗಿ ಅವರ ಮೆಚ್ಚುಕೆಗಾಗಿ ಆಗಾಗ ಅವರಲ್ಲಿ ಆ ಮಾತುಗಳನ್ನು ಆಡುತ್ತಾನೆ. ಅದರಲ್ಲಿಯೂ ಅವನ ಬುದ್ಧಿಯನ್ನು ನೋಡಿ ದಿವಾನರವರು ಆಶ್ಚರ್ಯಪಡುತ್ತಾರೆ. ಅವನಿಗೂ ಮತದ ಭಾವನೆಯುಂಟು. ಪ್ರಜೆಗಳೆಲ್ಲರೂ ಮುಸಲ್ಮಾನರೇ ಆಗಬೇಕು. ಹಿಂದೂಸ್ಥಾನದಲ್ಲೆಲ್ಲಾ ಮಹ ಮ್ಮದೀಯ ರಾಜ್ಯವೇ ಇರಬೇಕು. ದೇಶದಲ್ಲೆಲ್ಲಾ ಮಶೀದಿಯ ಗುಂಬಚ್ಚು ಗಳು ಮೆರೆಯಬೇಕು. ಹಿಂದೂ ದೇವಾಲಯಗಳನ್ನೆಲ್ಲಾ ಬುಡಮಟ್ಟ ಕಿತ್ತೊಗೆ ಯಬೇಕು. ಹಿಂದೂಗಳು ಮುಸಲ್ಮಾನರ ಗುಲಾಮರಾಗಿರಬೇಕು. "ಇದೇ ಅಲ್ಲಾವಿನ ಆಜ್ಞೆ" ಎಂದು ಅವನ ಮತ! ಮಾತಿಗೆ ಮಾತು ಬಂದು ಮತದ ಮಾತು ಬೆಳೆದಾಗ ಇವರಿಬ್ಬರ ಭಾವಗಳು ಮಾತುಗಳಾಗಿ ಹೊರಟು; ಘರ್ಷಣ ವಾಗಿ ದಕ್ಷಿಣೋತ್ತರ ಧ್ರುವಗಳಷ್ಟು ಸಿಡಿದು ನಿಲ್ಲುತ್ತಿದ್ದುವು. ಮಹಮ್ಮದಾಲಿ ಯ ಸ್ಥಾನಮಾನಗಳನ್ನು ಬಲ್ಲ ಮಿರ್ ಸಾದಕನು ಮಾತಿನಲ್ಲಿ ಮುಂದುವರಿ ಯುತ್ತಿರಲಿಲ್ಲ. ಮನಸ್ಸಿನಲ್ಲಿಯೇ ಇವರು ಜ್ಞಾನಯೋಗಿಗಳು. ತಾನು ಕರ್ಮ ಯೋಗಿ ಎಂದುಕೊಳ್ಳುತ್ತಿದ್ದನು. ಆದರೂ ಇಂಥವರಿಂದ ಮತಕ್ಕೆ ಕಾಸಿನಷ್ಟೂ ಪ್ರಯೋಜನವಿಲ್ಲವೆಂದು ಅವನ ದೃಢ ನಿಶ್ಚಯ. ಮಹಮ್ಮದಾಲಿಯವರು ಈ ಮಿರ್ ಸಾದಕನು ದೇವರ ಆನಂದ ರಾಜ್ಯದ ಬೆಳಕನ್ನೇ ಅರಿಯದ ಅಜ್ಞಾನಿ ಯೆಂದು ಪರಿತಪಿಸಿ ಈ ಬಡ ಪ್ರಾಣಿಯನ್ನು ಅಲ್ಲಾನು ಕರುಣಿಸಲಿ! ಎಂದು ಕೊಳ್ಳುತ್ತಿದ್ದನು. ಇದೇ ಅವರ ಮಾತುಕಥೆಗಳ ಸ್ವಾರಸ್ಯ!

ಇಂದು ಮಿರ್ ಸಾದಕನಿಗೆ ಮತದ ಗೊಡ್ಡು ಮಾತು ಬೇಡ ಅವನಿಗೆ ಬೇಕಾದುದು ಸೋನಮಹಲಿನ ಮಾತು. ದೌಲತ್ ರಾಣಿಯ ಮಾತು. ಅವಳ ಸಖಿಯರ ಮಾತು. ಅವನು ಅದೇ ಮಾತನಾಡಲು ತವಕಪಡುತ್ತಿದ್ದಾನೆ. ಹುಚ್ಚಿ ಸಾವಿತ್ರಿಯ ಬಾಯಿಂದ ದರಿಯಾಬಾಗಿನ ಮಾತುಗಳನ್ನು ಬಹಳವಾಗಿ ಕೇಳಿದ್ದಾನೆ. ದೌಲತ್ತಳ ರೂಪು ಲಾವಣ್ಯಗಳಲ್ಲಿ ಅವನ ಮನಸ್ಸು ತನ್ಮಯ ವಾಗಿದೆ. ತಾನು ನೋಡಿ ಮನಸಲಿದಿರುವ; ಆಶೆಪಟ್ಟು ಕೊಸರಿರುವ ಎಷ್ಟೋ

ಸುಂದರ ಚಿತ್ರಗಳು ಅವನ ನೆನಪಿಗೆ ಬರುವುವು. ದೌಲತ್ತಳು ಅವಳಂತೆ ಇರಬಹುದೇ ಇವಳಂತೆ ಇರಬಹುದೇ ಎಂದುಕೊಳ್ಳುತ್ತಾನೆ. ಆ ಎಲ್ಲ ಸೌಂದರ್ಯ ರಾಶಿಗಳಿಗಿಂತಲೂ, ದರಿಯಾಬಾಗಿನ ರಾಣಿಯವರ ಸೌಂದರ್ಯವು ಅತಿಶಯವಾದುದೆಂದು ಅವನ ಮನಸ್ಸಿಗೆ ತೋರುತ್ತದೆ. ಅವನ ಕಾಮತಂತ್ರದ ಗೂಢಚಾರಳಾದ ಹುಚ್ಚಿ ಸಾವಿತ್ರಿಯು ಏಕಾಂತವಲ್ಲಿ ಆ ದಿವ್ಯಸುಂದರ ಮೂರ್ತಿಯನ್ನು ಬಣ್ಣಿಸಿ, ಬಣ್ಣಿಸಿ, ಅವನ ಮನಸ್ಸಿಗೆ ಹುಚ್ಚು ಹಿಡಿಸಿದಾಳೆ.

ಆ ದರಿಯಾಬಾಗಿನ ಮಾತೆತ್ತಬೇಕೆಂದು ಆಶೆ! ಮಹಮದ್ ಖಾನರು ಅರಸಿಕ ಶಿಖಾಮಣಿಯೆಂದು ನಿರಾಶೆ! ಆದರೂ ಮಾತು ಬಂದೇ ಬಿಟ್ಟಿತು.

ಮೀರ್;—ಖಾ ಸಾಹೇಬರವರೇ; ದರಿಯಾಬಾಗಿನ ಹೆಸರು ಬಲು ಪ್ರಸಿದ್ಧವಾಗಿದೆ.

ಮಹಮ್ಮದ್ :—ಹೌದು! ದೌಲತ್ ರಾಣಿಯವರ ದಾನ ಧರ್ಮಗಳು ಆ ಕೀರ್ತಿಯನ್ನು ತಂದಿವೆ. ದೌಲತ್ ರಾಣಿಯು ಈ ಶೀಮೆಯ ಬಡಬಗ್ಗರ ತಾಯಿ. ಗೋಸಾಯಿಗಳೂ, ಫಕೀರರು, ಭಿಕಾರಿಗಳು, ಭಿಕ್ಷುಕರು, ಬಡ ಸಂಸಾರಿಗಳು, ಸನ್ಯಾಸಿಗಳು, ಎಲ್ಲರಿಗೂ ದೌಲತ್ತಳೆಂದರೆ ದೇವರ ಕರುಣಾ ಹಸ್ತ!

ಮೀರ್ ;—ಆ ಕೀರ್ತಿಯನ್ನು ನಾನು ಬಹಳವಾಗಿ ಕೇಳಿದ್ದೇನೆ. ಆದರೆ ಅವರ ದಾನಧರ್ಮಗಳೂ ಆಚಾರ ವ್ಯವಹಾರಗಳೂ ಶುದ್ಧ ಮಹಮ್ಮದಿಯ ಧರ್ಮಕ್ಕೆ ಸ್ವಲ್ಪ ವಿರುದ್ಧವಾಗಿವೆಯೆಂದು ಕೆಲವು ಮಂದಿ ಫಕೀರರು ಹೇಳುತ್ತಾರೆ.

ಮಹಮ್ಮದ್ :—ಅದು ಅಜ್ಞಾನಿಗಳ ಹೇಳಿಕೆ. ಅಲ್ಲಾನ ಶುದ್ಧ ಸಾತ್ವಿಕ ಧರ್ಮವು ದೌಲತ್ ರಾಣಿಯವರಲ್ಲೇ ಇದೆಯೆಂದೂ ನನ್ನ ಭಾವನೆ. ಅವರು ಆ ಧರ್ಮದ ಸತ್ಯವನ್ನು ಶೋಧನೆಮಾಡಿ ನೋಡಿದಾರೆ.

ಮೀರ್ :—ದೌಲತ್ ರಾಣಿಯವರಿಗೆ ಮುಖ ಫರದೆ ಇಲ್ಲವಂತೆ! ಘೋಷ ಇಲ್ಲವಂತೆ! ಮಶೀದಿಗೆ ಅವರು ಹೋಗುವುದೇ ಇಲ್ಲವಂತೆ! ಹಿಂದೂ ಸನ್ಯಾಸಿಗಳಿಗೆ ನಮಸ್ಕಾರ ಮಾಡುತ್ತಾರಂತೆ. ಇದೆಲ್ಲಾ ಶುದ್ಧ ಮಹಮ್ಮದೀಯ ಧರ್ಮಕ್ಕೆ ಸರಿಹೋಗುತ್ತದೇನು?

ಮಹಮ್ಮದ್ :—ಸಾಮಾನ್ಯ ಸ್ತ್ರೀಯರಿಗೆ ಘೋಷ, ಮುಖಫರದೆ

ಎಲ್ಲವೂ ಬೇಕು. ವಿರಕ್ತ ಸ್ತ್ರೀಯರಿಗೆ ಘೋಷಾದಿಂದೇನು! ಬೆಂಕಿಗೆ ಘರದೆ ಹೊಚ್ಚಬೇಕೇ! ಅಲ್ಲಾನ ಅಮೃತ ಹಸ್ತಕ್ಕೆ ಗೌಸು ಹೊಲಿಸಬೇಕೇ?

ಮಿಾರ್ :—ಎಷ್ಟಾದರೂ ಹೆಂಗಸು ಹೆಂಗಸರೆ!

ಮಹಮ್ಮದ್ :—ಅಲ್ಲಾನ ಧರ್ಮರಾಜ್ಯದಲ್ಲಿ ಗಂಡಸರೂ ಹೆಂಗಸರೂ ಸಮಾನರು!

ಮಿಾರ್ :—ದೌಲತ್ ರಾಣಿಯವರು ಅಂತಹ ವೇದಾಂತಿಗಳೇನು?

ಮಹಮ್ಮದ್ :—ದೌಲತ್ ರಾಣಿಯವರು ವೇದಾಂತಿಗಳಿಗಿಂತಲೂ ದೊಡ್ಡ ಜ್ಞಾನಿಗಳು.

ಮಿಾರ್:—ಈ ದೌಲತ್ ರಾಣಿಯವರು ತನುಗೆ ಚಿರ ಪರಿಚಿತರಂತೆ ಕಾಣುತ್ತದೆ. ಅವರಾರು?

ಮಹಮ್ಮದ್:—ಅವರ ತಂದೆತಾಯಿಗಳನ್ನು ನಾನರಿಯೇ! ಅವರು ದೊಡ್ಡ ನವಾಬರ ಸಾಕು ಮಗಳು. ಬಡಾ ಫಕೀರರು ಮಕ್ಕಾದಿಂದ ಬರುತ್ತಿರುವಾಗ ಯಾತ್ರಿಕರ ಗುಂಪಿನಲ್ಲಿದ್ದ ಈ ದೌಲತ್ ರಾಣಿಯವರ ತಂದೆತಾಯಿಗಳು ಮೃತರಾದರೆಂದೂ, ಆ ಅನಾಥ ಶಿಶುವನ್ನು ಬಡಾ ಫಕೀರರು ತಂದು ಕೊಟ್ಟರೆಂದು ಹೇಳುತ್ತಾರೆ. ದೊಡ್ಡ ಬೇಗಂ ಸಾಹೇಬರು ಸಾಕಿ ಸಲಹಿದರು.

ಮಿಾರ್ :—ಅವರು ನಗರದಲ್ಲಿಯೇ ಏಕೆ ಇದಾರೆ?

ಮಹಮ್ಮದ್:—ಅದು ಯಾರಿಗೂ ಗೊತ್ತಿಲ! ದೊಡ್ಡ ನವಾಬರ ಆಜ್ಞೆ.

ಮಿಾರ್ :—ಹಾಗಾದರೆ ದೌಲತ್ ರಾಣಿಯವರು ನಗರದ ನವಾಬರ ರಕ್ಷಣೆಯಲ್ಲಿದಾರೆ. ಅವರು ಇಯಜ್ ಖಾನರ ಅಧಿಕಾರಕ್ಕೆ ಒಳಪಟ್ಟವರೆಂದು ಹೇಳಬಹುದು.

ಮಹ:—ಅವರು ಯಾರ ಅಧೀನದಲ್ಲಿಯೂ ಇಲ್ಲ. ಅವರಿಗೆ ಯಾರ ರಕ್ಷಣೆಯೂ ಬೇಕಾಗಿಲ್ಲ. ಅವರು ಬೇಕಾದಲ್ಲಿ ಇರಬಹುದು. ಬೇಕಾದ್ದು ಮಾಡಬಹುದು. ಅವರ ಮೇಲಿನ ಅಧಿಕಾರವು 'ಅಲ್ಲಾ' ನಿಗೆ ಸೇರಿದ್ದು.

ಮಿಾರ್.—ನವಾಬರು ಅವರಿಗೆ ಮದುವೆಯನ್ನೇಕೆ ಮಾಡಲಿಲ್ಲ?

ಮಹಮದ್:—ಬೇಕೂಫ್! ಏನೇನೋ ಮಾತನಾಡುತ್ತಾನೆ. ದೌಲತ್ ರಾಣಿಯವರು ಆಜನ್ಮ ಬ್ರಹ್ಮಚಾರಿಣಿ!

ಅಲ್ಲಿಗೆ ಮೀರ್ ಸಾದಕನು ಮೌನವನ್ನು ವಹಿಸಿದನು. ಅವನಿಗೆ ಆ ಮಾತು ಬೇಡವೂ ಬೇಡ! ಅಂಥಾ ಜಗನ್ಮೋಹಿನಿಯಾದ ಸುಂದರಿಯು ಮದುವೆಯಿಲ್ಲದ ಬಸವಿಯೆಂಬ ಕಲ್ಪನೆಯೂ ಅವನಿಗೆ ಸಹಿಸದು. ತಾನು ಕೇಳಿರುವ ಅವಳ ಸೌಂದರ್ಯ ಲಾವಣ್ಯಗಳಲ್ಲಿ ಅವನ ಮನಸ್ಸು ಮುಳುಗಿ ಓಲಾಡುತ್ತಿದೆ. ಅವನಿಗೆ ವೇದಾಂತಿಯಾದ ಪರಮ ಹಂಸಿಯು ಬೇಡ! ಶೃಂಗಾರ ರಸಿಕಳಾದ ರಾಜಹಂಸಿಯು ಬೇಕು. ಹೀಗೆ ಮೀರ್‌ಸಾದಕನು ಮನಸ್ಸಿನಲ್ಲಿಯೇ ಸುಖದ ಚಿತ್ರಗಳನ್ನು ಕಲ್ಪಿಸಿಕೊಂಡು ಆನಂದಿಸುತ್ತಾ ಇದ್ದನು. ಸ್ವಲ್ಪಹೊತ್ತು ಮೌನದಿಂದ ಇದ್ದರು. ಮಹಮದ್‌ಖಾನನು ಒಂದು ಪುಸ್ತಕವನ್ನು ಕೈಗೆ ತೆಗೆದುಕೊಂಡನು. ಮೀರ್‌ಸಾದಕನು ಮೆಲ್ಲಗೆದ್ದು ಅಲ್ಲಿಂದ ಸರಿದು ತನ್ನ ವಿಶ್ರಾಂತಿ ಗೃಹಕ್ಕೆ ಹೋದನು.

ಈಗ ಮೀರ್‌ಸಾದಕನು ಸ್ವತಂತ್ರ. ಬೇಕಾದ್ದು ಯೋಚಿಸಬಹುದು. ಬಾಯಿಯಲ್ಲಿ ಬೇಕಾದ ಮಾತನಾಡಿಕೊಳ್ಳಬಹುದು. ಅದನ್ನು ಕೇಳುವುದಕ್ಕೆ ಯಾರೂ ಇಲ್ಲ! ಆದರೂ ಅರಸಿಕನಾದ ಮಹಮದ್‌ಖಾನನ ಜೊತೆಯಲ್ಲಿ ಶುಷ್ಕಲಾಪ ಮಾಡುವುದಕ್ಕಿಂತಲೂ, ಮನಸ್ಸಿನೊಡನೆಯೇ ಬೇಕಾದ್ದು ಮಾತನಾಡಿಕೊಳ್ಳುವುದು ಸುಖ!

ಮಾರನೆಯ ದಿನ ಪ್ರಾತಃಕಾಲದಲ್ಲಿ ಮಹಮದ್‌ಖಾನರು ದರಿಯಾ ಬಾಗಿಗೆ ಹೋಗಿ ದೌಲತ್ ರಾಣಿಯವರೊಡನೆ ಮಾತನಾಡಿಕೊಂಡು ಬಂದರು. ಶ್ರೀರಂಗಪಟ್ಟಣದ ಸಮಾಚಾರಗಳನ್ನೆಲ್ಲಾ ಹೇಳಿದರು.

ತಾವು ಬಂದ ಕಾರ್ಯ ಗೌರವವನ್ನು ತಿಳಿಸಿದರು. ಇಲ್ಲಿ ಆ ಕಾರ್ಯವು ನೆರವೇರುವ ಸೂಚನೆಯು ಕಂಡುಬರುವುದಿಲ್ಲವೆಂದೂ, ಅದರಿಂದ ಅನರ್ಥ ಪರಂಪರೆಗಳು ಮೈಸೂರಿಗೆ ಪ್ರಾಪ್ತವಾಗುವುದೆಂದೂ ಹೇಳಿದರು. ದೌಲತ್ತಳು ಎಲ್ಲವನ್ನೂ ಕೇಳಿ ಇಯಜ್‌ಖಾನರವರಿಗೂ ಟೀಪುಸುಲ್ತಾನರವರಿಗೂ ವಿರೋಧವು ಪ್ರಾಪ್ತವಾಗದಂತೆ ನೋಡಿಕೊಳ್ಳುವುದು ಈಗ ನಮ್ಮ ಕರ್ತವ್ಯವೆಂದು ಹೇಳಿದಳು. ಇನ್ನೂ ಎಷ್ಟೋ ಮಾತುಗಳು ನಡೆದುವು. ಕೊನೆಗೆ ಮಹಮದ್‌ಖಾನರು

ಟಿಪ್ಪುಸುಲ್ತಾನರಿಗೂ ನಗರದ ನವಾಬರಿಗೂ ಯುದ್ಧ ಪ್ರಸಂಗ ಒದಗದಂತೆ ನೋಡಿಕೊಳ್ಳುವ ಭಾರವು ತಮ್ಮದು. ದೊಡ್ಡ ನವಾಬರ ಆಶೆಯೂ ತಮ್ಮ ಮೇಲೆಯೇ! ನಮ್ಮೆಲ್ಲರ ಭರವಸೆಯೂ ತಮ್ಮಲ್ಲಿಯೇ! ನಾನು ಬಂದ ಕಾರ್ಯ ಕಿಂತ ತಮ್ಮನ್ನು ನೋಡಿ ಈ ಪ್ರಸಂಗದಿಂದ ಮೈಸೂರನ್ನು ರಕ್ಷಿಸುವ ಶಕ್ತಿಯು ತಮ್ಮಲ್ಲಿದೆಯೆಂದು ಹೇಳಿ ಹೋಗವುದೇ ಮುಖ್ಯ ಕೆಲಸ. ಪೂರ್ಣಯ್ಯನವರು ತಮ್ಮಲ್ಲಿ ಅದೇ ಪ್ರಾರ್ಥನೆ ಮಾಡಿ ಬರಬೇಕೆಂದು ಹೇಳಿದಾರೆ. ಬಡಾ ಫಕೀರರು ಇಲ್ಲದ ಸಮಯ!

ದೌಲತ್;—ನನ್ನದೇನಿದೆ. ದೇವರ ಇಷ್ಟದಲ್ಲಿರುವುದು ಆಗುತ್ತದೆ. ಮೈಸೂರಿನ ಪುಣ್ಯವು ಹೇಗಿದೆಯೋ ನೋಡಬೇಕು.

ಮಹಮ್ಮದ್‌ಖಾನರು ಬಿಳ್ಕೊಂಡು ಹೊರಟರು. ಮ್ಯಾನಾದಲ್ಲಿ ಕುಳಿತು ಬಿಡಾರಕ್ಕೆ ಬಂದರು. ಅವರು ಎಲ್ಲಿಗೆ ಹೋಗಿದ್ದರೆಂಬುದು ಮಿರ್‌ಸಾದಕನಿಗೆ ಗೊತ್ತಿಲ್ಲ. ಅವನಿಗೆ ಅದು ಬೇಕಾಗಿಯೂ ಇರಲಿಲ್ಲ. ಪ್ರಾತಃಕಾಲ ಎಷ್ಟೋ ತಿರುಪೆಯವರು ಬಂದು ಹೋದರು. ಮಿರ್‌ಸಾದಕನು ಅವರನ್ನು ನೋಡುತ್ತಾ ಇದ್ದನು. ಸ್ವಲ್ಪ ಹೊತ್ತಿನಲ್ಲಿಯೇ ಹುಚ್ಚಿ ಸಾವಿತ್ರಿಯು ಹಾಡು ಹೇಳುತ್ತಾ ಬಂದಳು. ಉಗ್ರಾಣಿಯು ಭಿಕ್ಷ ಕೊಟ್ಟನು. ಅವಳು ಹೊರಟುಹೋಗಲಿಲ್ಲ. ದುಡ್ಡು ಕೊಡಬೇಕೆಂದು ಹಟ ಹಿಡಿದಳು. ಒಂದು ಬಟ್ಟೆಯನ್ನು ಬೇಡಿದಳು. ಎಲ್ಲರೂ ಅವಳನ್ನು ಹಾಸ್ಯ ಮಾಡುತ್ತಾರೆ. ಹುಡುಗನೊಬ್ಬನು. "ಎಂಥಾ ಬಟ್ಟೆ ಬೇಕು. ನಿನಗೆ" ಎಂದನು. ಅವಳು ನಗುತ್ತಾ ಮಿರ್‌ಸಾದಕನ ಕಡೆಗೆ ಕೈ ತೋರಿಸಿ ಅವರ ರುಮಾಲಿನಂತಹ ಜರಿ ಬಟ್ಟೆಯು ಬೇಕು ಎಂದಳು. ಎಲ್ಲರೂ ನಕ್ಕರು. ಮಿರ್‌ಸಾದಕನು ಅವಳನ್ನು ಕರೆದು ಆವಳೊಡನೆ ಮಾತ ನಾಡುತ್ತಾ ಹಾಸ್ಯ ಮಾಡುತ್ತಾ ಕಾಲ ಕಳೆಯುತ್ತಿದ್ದನು. ಆ ಹುಚ್ಚಿಯು ಹುಚ್ಚು ಹುಚ್ಚಾಗಿ ಮಾತನಾಡುತ್ತಿದ್ದರೂ ಅಲ್ಲಿಯ ಸಂಗತಿಗಳನ್ನು ಎಷ್ಟೋ ಹೇಳಿದಳು.

ಅವಳು;—ಮಹಾರಾಜರೇ ನೀವೇಕೆ ಬಂದಿರಿ! ದುಡ್ಡು ಬೇಕೇನು! ಇವತ್ತು ದರಿಯಾಬಾಗಿಗೆ ಹೋಗಿರಿ. ದೌಲತ್ ರಾಣಿಯವರು ದುಡ್ಡು ಕೊಡು ತ್ತಾರೆ. ನಾನು ಬರುತ್ತೇನೆ ಎಂದು ಹೇಳಿದಳು. ಎಲ್ಲರೂ ನಕ್ಕರು. ಮಿರ್ ಸಾದಕನು ಅವಳಿಗೊಂದು ಬಟ್ಟೆ ಕೊಟ್ಟನು. ತೆಗೆದುಕೊಂಡು "ಮೈಸೂರು

ಮಹಾರಾಜರು ನನಗೆ ಶಾಲು ಕೊಟ್ಟರು, ನಾನು ಸಂಗೀತಗಾರಳು. ನೋಡಿ! ಶಾಲುವನ್ನು ಎಂದು ಹೇಳುತ್ತಾ ಕುಣಿಯುತ್ತಾ ಹೊರಟುಹೋದಳು. ' ಅಷ್ಟ ರಲ್ಲಿ ಮಹಮ್ಮದ್ ಖಾನರು ಬಂದೇಬಿಟ್ಟರು. ಅವರು ಹುಚ್ಚಿಯ ತಮಾಷೆಯನ್ನು ನೋಡಿ ನಕ್ಕರು. ಅವರು ಬಿಡಾರದೊಳಗೆ ಪ್ರವೇಶ ಮಾಡಿದರು. ಮಿರ್ಸಾದ ಕನೂ ಅವರನ್ನು ಹಿಂಬಾಲಿಸಿ ಒಳಗೆ ಹೋದನು. ಒಳಗೆಹೋಗಿ ದಿವಾನಖಾನೆ ಯಲ್ಲಿ ಸುಖಾಸನದಲ್ಲಿ ಕುಳಿತರು.

ಮಿರ್ :—ದಿವಾನ ಸಾಹೇಬರವರು ನವಾಬರನ್ನು ನೋಡುವುದಕ್ಕೆ ದಯಮಾಡಿಸೋಣವಾಗಿತ್ತೇನು ?

ಮಹಮ್ಮದ್ :—ಇಲ್ಲಾ ! ದೌಲತ್ ರಾಣಿಯುವರ ಭೇಟಿಗೆ ಹೋಗಿದ್ದೆ.

ಇಂದು ಶುಕ್ರವಾರ! ದರಿಯಾಬಾಗಿನಲ್ಲಿ ದಾನಧರ್ಮಗಳ ದಿವಸ! ಅಲ್ಲಿ ಎಷ್ಟೋ ಜನ ಬಡಬಗ್ಗರು ಸೇರಿದ್ದಾರೆ. ಭಿಕ್ಷುಕರು ಬಂದಿದ್ದಾರೆ. ಹುಚ್ಚಿ ಸಾವಿತ್ರಿಯು ಬಂದಳು. ಅವಳನ್ನು ಕಂಡರೆ ಎಲ್ಲರಿಗೂ ಹಾಸ್ಯ. ಎಲ್ಲರಿಗೂ ತಮಾಷೆ! ಇವತ್ತು ಒಂದು ತಂಬೂರಿಯನ್ನು ತಂದಿದ್ದಾಳೆ. ಹಾಡುಗಳನ್ನು ಹೇಳುತ್ತಾಳೆ. ನಗುತ್ತಾಳೆ. ಕೇಕೆ ಹಾಕುತ್ತಾಳೆ. ಹುಚ್ಚಿ ಸಾವಿತ್ರಿಯ ಜೊತೆ ಯಲ್ಲಿ ಒಬ್ಬ ಫಕೀರನು ಬಂದಿದ್ದಾನೆ. ಕತ್ತಲಾಗುತ್ತಿದೆ. ಮುಖವು ಕಾಣುವು ದಿಲ್ಲ. ಆದರೂ ಅಜಾನುಬಾಹುವಾದ ಮನುಷ್ಯ! ಅವನ ಉಜ್ವಲವಾದ ಕಣ್ಣು ಗಳು, ಎಲ್ಲರಲ್ಲಿಯೂ ಒಂದು ವಿಧವಾದ ಗೌರವವನ್ನು ಹುಟ್ಟಿಸುತ್ತಿದೆ. ಆದ ರೇನು! ಪುನಃ ತಮ್ಮ ತಮ್ಮ ಮಾತಿನಲ್ಲಿ ಎಲ್ಲರೂ ತೊಡಗಿದರು. ಈ ಫಕೀರನ ಕಡೆ ಯಾರೂ ತಿರುಗಿ ನೋಡಲಿಲ್ಲ. ಹುಚ್ಚಿ ಸಾವಿತ್ರಿಯು ಒಂದೆರಡು ಸಾರಿ ಒಂದು ಮಾತನಾಡಿಸಿದಳು. ಫಕೀರನು ಮಾತನಾಡಲಿಲ್ಲ.

ಮೂಗಿ ಫಕೀರನೇ । ಸಾಗಿ ಹೋಗೆಲೋ ।
ಬಾಯಿ ಬಿಡದಲೇ । ಭಾಗ್ಯ ಬಾರದೋ ।
ಕೈಯ್ಯ ನೀಡದೇ । ಕಾಸು ಸಿಕ್ಕದೋ ।
ಕಣ್ಣು ತೆರೆಯದೇ । ದಾರಿ ದೊರೆಯದೋ ।
ಹೋಗಿ ಬಾರಲೋ ।
ಸಾಗಿ ಹೋಗೆಲೋ ।

ಎಂದು ಹಾಸ್ಯಮಾಡಿ ನಕ್ಕಳು. ಎಲ್ಲರೂ ಪುನಃ ನಕ್ಕರು. ಫಕೀರನು ಮಾತನಾಡಲಿಲ್ಲ. ಸಾವಿತ್ರಿಯು ಬೇರೆ ಕಡೆ ಹೊರಟುಹೋದಳು. ದೌಲತ್ ರಾಣಿಯುವರು ಮಹಲಿನಿಂದ ಬಂದರು. ಮೊದಲು ಹುಚ್ಚಿ ಸಾವಿತ್ರಿಯು ಹೋಗಿ ಕೈ ನೀಡಿದಳು. ದೌಲತ್ತಳು ಒಂದು ರೂಪಾಯಿ ಕೊಟ್ಟಳು. ಹುಚ್ಚಿ ಸಾವಿತ್ರಿಯು ಹಾಡು ಹೇಳಲಾರಂಭಿಸಿದಳು. ದೌಲತ್ತಳು ಮುಂದಕ್ಕೆ ಹೊರಟಳು. ಹುಚ್ಚಿಯು ಬಿಡಲಿಲ್ಲ. ಪುನಃ ಮತ್ತೊಂದು ರೂಪಾಯಿ ಕೊಟ್ಟಳು. ಎರಡನ್ನೂ ತೆಗೆದುಕೊಂಡು ಹುಚ್ಚಿಯು ದಾರಿ ಬಿಟ್ಟಳು. ದೌಲತ್ ರಾಣಿಯು ಎಲ್ಲರಿಗೂ ದುಡ್ಡು ಕೊಟ್ಟಳು. ಇಂದು ಬೇಗ ಬೇಗ ಕೊಟ್ಟು ಹೊರಟು ಹೋದಳು. ಯಾರನ್ನೂ ಮಾತನಾಡಿಸಲಿಲ್ಲ. ಯೋಗಕ್ಷೇಮ ಮಾಡಲಿಲ್ಲ. ಫಕೀರನು ದೂರದಲ್ಲಿ ನಿಂತಿದ್ದನು. ರಾಣಿಯುವರು ನೋಡಲಿಲ್ಲ. ಯಾರೂ ಹೇಳಲಿಲ್ಲ. ಅಷ್ಟರಲ್ಲಿ ಹುಚ್ಚಿ ಸಾವಿತ್ರಿಯು ಓಡಿಬಂದು ಮೂಗಿ, ಮೂಗಿ ಫಕೀರನೇ! ಕಾಸು ಕೊಡಲಿಲ್ಲವೇನೋ ! ತೆಗೆದುಕೋ! ಎಂದು ಹೇಳಿ ಎರಡು ರೂಪಾಯಿಗಳನ್ನು ಒಂದೊಂದಾಗಿ ಅವನ ಕೈಗೆ ಕೊಟ್ಟು ತೆಗೆದುಕೋ ! ನಾನೇ ದೌಲತ್ ರಾಣಿ ಗೊತ್ತಾಯಿತೇ! ಹೋಗು ಎಂದಳು.

ಅಷ್ಟರಲ್ಲಿ ದೌಲತ್ ರಾಣಿಯು ಮೆಟ್ಟಲುಗಳನ್ನು ಹತ್ತಿ ಜಗಲಿಯುಮೇಲೆ ಹೋಗಿದ್ದಳು. ಹಿಂತಿರುಗಿ ಹುಚ್ಚಿಯ ಗಲಾಟೆಯುನ್ನು ನೋಡಿದಳು.

ಪುನಃ ಹುಚ್ಚಿಯು :—ಅಯ್ಯೋ ಹುಚ್ಚ! ನಿನಗೆ ದೌಲತ್ ರಾಣಿಯುವರೇ ಬಂದು ದುಡ್ಡು ಕೊಡಬೇಕೋ! ಅವರು ಕೊಟ್ಟರೆ ಒಂದು ರೂಪಾಯಿ! ನಾನು ಕೊಟ್ಟರೆ ಎರಡು ರೂಪಾಯಿ।

ಫಕೀರನು :—ನನಗೆ ರೂಪಾಯಿ ಬೇಡ ! ನೀನೇ ತೆಗೆದುಕೋ !

ಹುಚ್ಚಿ :—ಅರಗಿಣಿಯೇ ಬಾಯಿ ಬಿಟ್ಟೆಯಾ! ರೂಪಾಯಿ ಬೇಡವಂತೆ ಇವನಿಗೆ! ಇವನು ಮಹಾರಾಜ!

ಮುದಿ ಫಕೀರನೇ! ಇಲ್ಲಿಗೇಕೆ ಬಂದೆ? ದುಡ್ಡು ಬೇಡದಿದ್ದರೆ ದೌಲತ್ ರಾಣಿಯುವರನ್ನು ಮದುವೆಯಾಗುವುದಕ್ಕೆ ಬಂದೆಯಾ?

ಎಲ್ಲರೂ ಘೊಳ್ಳೆಂದು ನಕ್ಕರು. ದೌಲತ್ತಳು ನಾಚಿಕೊಂಡು ಒಳಗೆ ಹೋಗಿಬಿಟ್ಟಳು. ಫಕೀರನು ಹುಚ್ಚಿಯುನ್ನು ಹೊಡೆಯುವುದಕ್ಕೆ ಹೋದನು.

ಅವಳು ಓಡಿಹೋದಳು. ಫಕೀರರೇ! ಹೊಡೆಯಬೇಡಿ! ಹುಚ್ಚಿ! ಹುಚ್ಚಿ! ಎಂದು ಕೂಗಿಕೊಂಡರು. ಅಷ್ಟರಲ್ಲಿ ಓಲೇಕಾರನೊಬ್ಬನು ಬಂದು ಫಕೀರನಿಗೆ ಅಡ್ಡ ನಿಂತನು. ಫಕೀರನು ಸ್ತಬ್ಧನಾದನು. ಓಲೇಕಾರನು ಮಹಾಸ್ವಾಮಿ! ತಮ್ಮನ್ನು ಮಹಲಿನೊಳಗೆ ಕರತರುವಂತೆ ರಾಣಿಯವರ ಅಪ್ಪಣೆಯಾಗಿದೆ ಎಂದು ಹೇಳಿದನು. ಫಕೀರನು ನಗುತ್ತಾ ಅವನ ಹಿಂದೆ ಹೋದನು.

ಹುಚ್ಚಿಯು:—ದಫೇದಾರಪ್ಪಾ! ನನ್ನ ಎರಡು ರೂಪಾಯಿಗಳನ್ನು ತಕೊಂಡಿದ್ದಾನೆ ಆ ಧಾಂಡಿಗ! ಅವನಿಗೆ ಮತ್ತೇನೂ ಕೊಡಬಾರದೆಂದು ಆ ಹುಚ್ಚ ರಾಣಿಗೆ ಹೇಳಪ್ಪಾ! ಎಂದು ಕೂಗಿ ಹೇಳಿ ಓಡಿಹೋದಳು. ಭಿಕ್ಷುಕರ ಪರಿಷೆಯಲ್ಲಾ ಅವಳ ಹಿಂದೆ ಹೊರಟುಹೋಯಿತು.

ಫಕೀರನು ಓಲೆಕಾರನ ಹಿಂದೆ ಸೋನಾಮಹಲನ್ನು ಪ್ರವೇಶಿಸಿದನು. ಹಜಾರದಲ್ಲಿ ಯಾರೂ ಇಲ್ಲ. ದೀಪಗಳು ಉರಿಯುತ್ತಿವೆ. ಸೊಗಸಾದ ಊದು ಬತ್ತಿಯವಾಸನೆಯು ಘಮಘಮಿಸುತಿದೆ. ಆ ಭವನದ ವೈಭವವನ್ನು ನೋಡುತ್ತಾ ಫಕೀರನು ಹಜಾರವನ್ನು ದಾಟಿದನು. ಮಹಡಿಯ ಮೆಟ್ಟಿಲು ಗಳನ್ನು ಹತ್ತಿ ಹೋದನು. ಅಲ್ಲಿ ಹೊರಗಿನ ಚಂದ್ರಶಾಲೆಯನ್ನು ದಾಟುತ್ತಲೇ ಸುಸಜ್ಜಿತವಾದ ಅಂತಃಗೃಹ! ನಾಲ್ಕು ಕಡೆಗಳಲ್ಲಿಯೂ ಬೆಳ್ಳಿಯ ಪುತ್ಥಳಿಯ ದೀಪಸ್ತಂಭಗಳು ಪ್ರಕಾಶಿಸುತ್ತವೆ. ಅದರಲ್ಲಿ ದೀಪಗಳು ಜ್ವಲಿಸುತ್ತಿವೆ. ನೆಲಕ್ಕೆ ಅನರ್ಘವಾದ ರತ್ನಗಂಬಳಿಯು ಹಾಸಿದೆ. ಅದರಮೇಲೆ ಲೋಡುದಿಂಬು ತಿವಾಸಿ ಗಳು ಅಲಂಕಾರವಾಗಿ ಇಡಲ್ಪಟ್ಟಿವೆ. ಗೋಡೆಯಲ್ಲಿ ದೊಡ್ಡ ನವಾಬರ ತೈಲ ಚಿತ್ರವು ಸಾಕ್ಷಾತ್ ನವಾಬರೇ ಎದ್ದುಬರುವಂತೆ ಕಂಗೊಳಿಸುತ್ತಿದೆ. ಪ್ರತೀ ಹಾರಿಯು ಹೊರಬಾಗಿಲಿನಲ್ಲಿಯೇ ನಿಂತು ಒಳಕ್ಕೆ ಕೈ ತೋರಿದನು. ಫಕೀರನು ಅಂತಃಗೃಹದೊಳಗೆ ಅಡಿ ಇಟ್ಟನು. ದೌಲತ್ತಳು ವಂದಿಸಿದಳು. ಆಸನದಮೇಲೆ ಕುಳಿತುಕೊಳ್ಳುವಂತೆ ಕೈ ತೋರಿಸಿದಳು. ಫಕೀರನು ಆಸನದಮೇಲೆ ಕುಳಿತನು.

ದೌಲತ್:—ಇಂದಿನ ದಾನದಲ್ಲಿ ಗಲಾಟೆಯಲ್ಲಿ ತಮ್ಮನ್ನು ಬಿಟ್ಟಂತಾ ಯಿತು. ಕ್ಷಮಿಸಬೇಕು!

ಫಕೀರ:—ಅದರಿಂದೇನು ತಾಯಿ! ನಾನು ದಾನಕ್ಕೆ ಬಂದವನಲ್ಲ. ತಮ್ಮ ದರ್ಶನಕ್ಕಾಗಿ ಬಂದವನು.

ದೌಲತ್:—ತಾವು ಯಾವ ದೇಶದಿಂದ ಬರೋಣವಾಯಿತು.

ಫಕೀರ:—ರಾಜಧಾನಿಯಿಂದ ಬಂದಿದ್ದೇನೆ. ರಾಣಿಯವರೇ! ನನ್ನ ತಪ್ಪನ್ನು ಮನ್ನಿಸಬೇಕು. ನಾನು ಫಕೀರನಲ್ಲ. ನಾನೊಬ್ಬ ರಾಜ ಕರ್ಮಚಾರಿ!

ದೌಲತ್ತಳಿಗೆ ಕುತೂಹಲ ಇಮ್ಮಡಿಯಾಯಿತು. ಅವಳು ನಗುತ್ತಾ ಹಾಗಾದರೆ ತಮ್ಮ ನಿಜವಾದ ಪರಿಚಯವನ್ನು ಕೊಡಬಹುದಲ್ಲಾ!

"ನಾನು ಟಿಪ್ಪೂಸುಲ್ತಾನರವರ ಕರ್ಮಚಾರಿ. ಖುದ್ದು ಸುಲ್ತಾನರವರೇ ತಮ್ಮ ಭೇಟಿಗಾಗಿ ಕಳುಹಿಸಿದಾರೆ.

ರುಮಾಲಿಗೆ ಕೈಹಾಕಿ ಮಡಿಕೆಯಿಂದ ಒಂದು ಪತ್ರವನ್ನು ತೆಗೆದು "ಈ ಪತ್ರವನ್ನು ತಮಗೆ ಒಪ್ಪಿಸಬೇಕೆಂದು ಕೊಟ್ಟಿದಾರೆ" ಎಂದು ಪತ್ರವನ್ನು ವಿನಯದಿಂದ ರಾಣಿಯವರ ಕೈಗೆ ಕೊಟ್ಟನು.

"ಬೇ ಅದಬ್! ಮಾಫೀ ಮಾಡಬೇಕು" ಎಂದು ನೆಲ ಮುಟ್ಟಿ ಸಲಾಂ ಮಾಡಿದನು.

ದೌಲತ್ತಳು ನಗುತ್ತಾ ಪತ್ರವನ್ನು ಕೈಗೆ ತೆಗೆದುಕೊಂಡಳು.

"ಟಿಪ್ಪೂಸುಲ್ತಾನರವರದೋ ಪತ್ರ!"

"ಹೌದು; ಮಹಾರಾಣಿಯವರೇ! ಅವರದೇ ಸ್ವದಸ್ತೂರು!"

ದೌಲತ್ತಳು ಸ್ವಲ್ಪ ದೀಪದ ಹತ್ತಿರಕ್ಕೆ ಸರಿದು, ಪತ್ರವನ್ನು ಬಿಚ್ಚುತ್ತಾ "ರಾಧಾ ಎಂದು ಕರೆದಳು. ಪಕ್ಕದ ಕೋಣೆಯಿಂದ ರಾಧಾರಾಣಿಯು ಜಗ್ಗನೆ ಹಾರಿ ಬಂದಳು. ದೌಲತ್ ರಾಣಿಯು "ನೋಡು! ಇವರೊಬ್ಬ ರಾಜಕರ್ಮಚಾರಿಗಳಾದ ಫಕೀರರು" ಎಂದು ನಕ್ಕಳು.

ಕೈಯಲ್ಲಿದ್ದ ಕಾಗದವನ್ನು ಬಿಚ್ಚಿ ಓದಲಾರಂಭಿಸಿದಳು!

ಫಕೀರನು ಎವೆಯಿಕ್ಕದೆ ಆ ಹೊಸ ವ್ಯಕ್ತಿಯನ್ನು ನೋಡಲಾರಂಭಿಸಿದನು. ರಾಧೆಯ ವಯಸ್ಸು ಇಪ್ಪತ್ತು! ಲಾವಣ್ಯವು ತುಂಬಿತುಳುಕುತ್ತಿತ್ತು. ಆ ಗುಂಡಾದ ಸುಂದರ ಮುಖ. ಉಜ್ವಲವಾದ ವಿಶಾಲ ನೇತ್ರಗಳು. ಆ ಕಣ್ಣುಗಳಿಗೆ ಮತ್ತಷ್ಟು ಕಾಂತಿಯನ್ನುಂಟುಮಾಡುತ್ತಿರುವ ದೀರ್ಘವಾದ ಹುಬ್ಬುಗಳು,

ಹಣೆಯಮೇಲೆ ಹಾರಾಡುತ್ತಿರುವ ಮುಂಗೂದಲು, ಎಳಸಾದ ಮೂಗು! ಥಳ ಥಳಿಸುವ ಕಪೋಲಗಳು! ಮುದ್ದಾದ ಚುಬಕ! ತೆಳುವಾದ ಕೆಂದುಟಿಗಳು. ಮುತ್ತಿನಂತಹ ಮನೋಹರವಾದ ದಂತಪಂಗ್ತಿ! ಇವೆಲ್ಲವನ್ನೂ ಬೆಳಗುವ ಮಂದಹಾಸ! ದೀರ್ಘವಾದ ಉರುಟಾದ ತೋಳುಗಳು! ಕೆಂಬಣ್ಣದ ಚಿಗುರು ಚಿಗುರಾದ ಹಸ್ತಗಳು! ದುಂಡಾದ ಪಾದಗಳು! ಬಳುಕುವ ಶರೀರ! ಬಿಚ್ಚಿದ ಕೇಶರಾಶಿ! ಆ ಸುಂದರಿಯು ಒಂದುಬಾರಿ ತಲೆಯನ್ನಲ್ಲಾಡಿಸಿದರೆ ಕೇಶದಾಮವು ಶರೀರವನ್ನೆಲ್ಲಾ ಮುಚ್ಚಿಬಿಡುತ್ತಿದ್ದಿತು. ಪುನಃ ಮೈ ಕುಲುಕಿದರೆ ಕೇಶ ಜಾಲವು ಹಿಂದಕ್ಕೆ ಹಾರಿ ಶರೀರದ ಕಾಂತಿಯು ಹೊರ ಹೊಮ್ಮಿ ಚಂದ್ರಿಕೆಯು ಚಲ್ಲಿದಂತಾ ಗುತ್ತಿದ್ದಿತು. ಹೀಗೆ ಒಳಗಿನಿಂದ ಓಡಿ ಬಂದ ಆ ಮೋಹಿನಿಯನ್ನು ನೋಡಿ ಫಕೀರನು ಬೆರಗಾಗಿಹೋದನು. ಆಹಾ! ಇಂತಹ ಸೌಂದರ್ಯವನ್ನು ಅವನು ನೋಡಿಯೇ ಇಲ್ಲ. ದೌಲತ್ ರಾಣಿಯು ಸುಂದರಿಯೆಂದು ಕೇಳಿದಾನೆ. ಈಗ ರಾಧೆಯ ಸೌಂದರ್ಯವನ್ನು ನೋಡುತ್ತಿದಾನೆ. ಅವೆರಡು ಸೌಂದರ್ಯಗಳೂ ಎದು ರಿಗೆ ಪ್ರತ್ಯಕ್ಷವಾಗಿ ನಿಂತಿವೆ. ಫಕೀರನ ಕರಣಶಕ್ತಿಯು ಅವೆರಡನ್ನು ಆಳೆಯಲಾ ರದೇ ಹೋಯಿತು. ಇವನು ಈ ಸೌಂದರ್ಯಮುಗ್ಧನಾಗಿದಾನೆ. ದೌಲತ್ತಳು ಕಾಗದವನ್ನು ಓದಿ ಮುಗಿಸಿದಳು. ನಕ್ಕಳು! ರಾಧೆಯು ನಗುತ್ತಾ ಹತ್ತಿರ ಹೋಗಿ "ಅಕ್ಕ! ಏನದು! ಯಾರ ಪತ್ರ! ಎಂದಳು.

ದೌಲತ್ :—ಸಾಕ್ಷಾತ್ ಸುಲ್ತಾನರದು! ತೆಗೆದುಕೋ! ಓದು.

ರಾಧೆ:—ಅದು ನಿನಗೆ ಬರೆದ ಕಾಗದ! ನಾನೇಕೆ ಓದಲಿ! ಅದರಲ್ಲಿ ಏನಿದೆಯೋ ?

ದೌಲತ್:— ಅದರಲ್ಲಿರುವುದೆಲ್ಲಾ ನಿನಗೇ ಇದೆಯೆಂದುಕೋ। ಓದು।

ರಾಧೆಯು ಓದಿದಳು ಪ್ರಿಯೆ ದೌಲತ್। ನಾವಿಬ್ಬರೂ ಬಾಲ್ಯದ ಗೆಳೆ ಯರು। ಒಂದು ಗೂಡಿನ ಎರಡು ಹಕ್ಕಿಗಳಂತೆ ಇದ್ದೆವು. ನೀನು ನನ್ನನ್ನು ಎಷ್ಟೋ ಪ್ರೀತಿಸುತ್ತಿದ್ದೆ. ನಾನು ಆಟವಾಡುವಾಗ ಪ್ರತಿಯೊಂದು ಸಾರಿಯೂ, ನಿನಗೆ ಸೋಲುತ್ತಿದ್ದೆ. ಏಕೆ। ಬಲ್ಲೆಯಾ ನಿನ್ನ ಆನಂದಕ್ಕೆ। ಆ ಬಾಲ್ಯದ ಪ್ರೀತಿಯನ್ನು ಅಳಿಸಲಾದೀತೆ? ಒಂದು ದಿನ ಜ್ಞಾಪಕವಿದೆಯೇ? ನಿನಗೆ ಆಗ ಹದಿನೈದು ವರ್ಷ। ನಾವಿಬ್ಬರೂ ಪಾರಿವಾಳಗಳನ್ನು ಹಾರಿಸಿದೆವು. ಆ ಪಂಥ ದಲ್ಲಿ ನಿನ್ನ ಪಾರಿವಾಳವು ಮೇಲಕ್ಕೆ ಹಾರಿತು. ನನ್ನ ಪಾರಿವಾಳವು ಸ್ವಲ್ಪ ಕೆಳ

ಗಿತ್ತು. ನೀನು ನನ್ನನ್ನು ಹಾಸ್ಯ ಮಾಡಿದೆ. ಆಗ ನನ್ನ ಪಾರಿವಾಳವು ಮೇಲೆ ಹೋದರೆ? ನೀನು................ನನ್ನ ಹೆಂಡತಿ ಯಾಗುವುದಾಗಿ ಹೇಳಿದೆ। ಮಾತು ಮುಗಿಯುವಷ್ಟರಲ್ಲಿ ನನ್ನ ಪಾರಿವಾಳವು ಮೇಲೆ—ಎಷ್ಟೋ ಮೇಲೆ ಹಾರಿಹೋಯಿತು. ನೀನು ಬಂದು ಬಿಗುವಾಗಿ ನನ್ನನ್ನು ಆಲಿಂಗಿಸಿ "ನಾನು ಸೋತೆ" ಎಂದು ಹೇಳಲಿಲ್ಲವೇ? ಆ ಕಿಂಚಿಲ್ಲಜ್ಜಿತ ಮಂದಹಾಸವಿಸದ್ವದನಾರವಿಂದವನ್ನು ಮರೆಯುವುದೆಂತು।

ಇಯಜ್ ಖಾನನು ನಮ್ಮ ಅರಮನೆಗೆ ಬಂದನು. ಅವನು ನಿನ್ನ ಸ್ನೇಹ ಮಾಡಿದನು. ದೊಡ್ಡ ನವಾಬರ ಪ್ರೀತಿವಿಶ್ವಾಸಗಳು ಅವನ ಕಡೆಗೆ ವಾಲಿದವು. ನೀನೂ ಅವನ ಕಡೆಗೆ ವಲಿದೆ. ಅಂದೇ ಅವನನ್ನು ಚೂರು ಚೂರುಮಾಡಿ ಬಿಸುಡುತ್ತಿದ್ದೆ. ದೊಡ್ಡ ನವಾಬರು ಅವನನ್ನು ಸದಾ ಕಾಯುತ್ತಿದ್ದರು. ಅವನಿಗೆ ದೊಡ್ಡ ನವಾಬರ ಬಲವೇ ಬಲ। ನಗರದ ನವಾಬಗಿರಿಯನ್ನು ಕೊಟ್ಟರು. ಅಂದು ನಾನು ಯುವರಾಜ। ಇಂದು ನಾನೇ ಅಖಂಡ ಮೈಸೂರಿನ ಅಧೀಶ್ವರ।ಇಯಜ್ ಖಾನನು ನನ್ನ ಭೃತ್ಯ।

ನಿನ್ನ ಬಾಲ್ಯದ ಮಾತುಗಳು ಈಗಲೂ ನನ್ನ ಹೃದಯದಲ್ಲಿ ವೀಣಾ ನಾದದಂತೆ ಝೇಂಕರಿಸುತ್ತಿವೆ. ನೀನು ಹುಡುಗಿಯಾಗಿದ್ದಾಗ "ನಾನು ರಾಣಿಯಾಗುತ್ತೇನೆ! ಸಾರ್ವಭೌಮನ ರಾಣಿಯಾಗುತ್ತೇನೆ" ಎಂದು ನೀನು ಹೇಳುತ್ತಿರಲಿಲ್ಲವೇ? ಇಂದು ನಾನು ಸಾರ್ವಭೌಮನಾಗಿದ್ದೇನೆ. ಡೆಲ್ಲಿಯ ಸಿಂಹಾಸನಕ್ಕಿಂತ ಇಂದು ನನ್ನ ಆಜ್ಞೆಯು—ಅಪ್ರತಿಹತವಾದದ್ದು! ನೀನು ನಿಜವಾಗಿ ರಾಣಿಯಾಗು! ಜಹಂಗೀರನು ನೂರ್ ಜಹಾನಳಿಗೆ ಒಪ್ಪಿಸಿದಂತೆ ರಾಜ್ಯವೆಲ್ಲವನ್ನು ನಿನಗೊಪ್ಪಿಸಿ ನಾನು ಸುಖದಿಂದ ಇರುವೆನು.

ದೌಲತ್! ನೀನು ನನ್ನವಳು. ಯಾರೂ ನನ್ನ ಕೈಯಿಂದ ನಿನ್ನನ್ನು ಕಿತ್ತುಕೊಳ್ಳಲಾರರು! ನೀನು ನನ್ನ ಹೃದಯೇಶ್ವರಿ? ನಿನಗಾಗಿ ನಾನು ಜೀವಿಸಿದ್ದೇನೆ. ನಿನ್ನ ಪ್ರಣಯವಿಲ್ಲದಿದ್ದರೆ ಈ ನನ್ನ ಜೀವನವು ಮರುಭೂಮಿ! ನಿನ್ನಲ್ಲಿ ಪ್ರಣಯಭಿಕ್ಷೆಯನ್ನು ಬೇಡುವ

ನಿನ್ನ
ಟೀಪೂ

ರಾಧೆಯು ಓದಿದಳು. ಮತ್ತೊಮ್ಮೆ ಓದಿದಳು. ನಕ್ಕಳು. ತಡೆಯಲಾರದೆ ನಕ್ಕಳು. ಅವರಿಬ್ಬರೂ ನಗುವುದನ್ನು ನೋಡಿ, ಫಕೀರನು ನೀರವವಾಗಿ ನಿಂತಿದ್ದನು.

ರಾಧೆ :—ಫಕೀರರೇ! ನೀವು ದೌಲತ್ತಳನ್ನು ಕರೆದುಕೊಂಡು ಹೋಗುತ್ತೀರಾ?

ಫಕೀರನು :—ಅಪ್ಪಣೆಯಾದರೆ..................

ರಾಧೆ :—ಇಯುಜ್ ಖಾನರಿಗೆ ತಿಳಿದರೆ ನಿಮ್ಮನ್ನು ಸಜೀವವಾಗಿ ಗೋರೀ ಮಾಡಿಸಾರು!

ಫಕೀರ :—ನಗರದ ಶೀಮೆಯನ್ನು ದಾಟುವವರೆವಿಗೆ—ಗುಟ್ಟಾಗಿ ಸಾಗಿ ಹೋದರೆ ಆಮೇಲೆ—

ರಾಧೆ :—ಟಿಪ್ಪೂಸುಲ್ತಾನರವರೇ ಇಲ್ಲಿಗೊಮ್ಮೆ ಬಂದು ಅವರ ರಾಣಿಯವರನ್ನು ಕರೆದುಕೊಂಡು ಹೋಗಲಿ. ನಾವು ಆ ಮೈಸೂರಿನ ಸಾಮ್ರಾಜರನ್ನು ನೋಡಿದ ಹಾಗಾಗುತ್ತದೆ.

ಫಕೀರ :—ಅದೇ ಸರಿ! ಸುಲ್ತಾನರಿಗೆ ಅರಿಕೆಮಾಡುತ್ತೇನೆ.

ಮತ್ತೊಂದು ವಿಜ್ಞಾಪನೆ. ಟಿಪ್ಪೂಸುಲ್ತಾನರ ದರಬಾರಿನಲ್ಲಿ ದೌಲತ್ ರಾಣಿಯವರ ನಜರು ಅತ್ಯಂತ ಶ್ಲಾಘನೀಯವಾದುದು.

ಮಧ್ಯದಲ್ಲಿ ದೌಲತ್ತಳು ಬೆರಗಾಗಿ ನಜರೆಂದರೇನು?

ಫಕೀರ :—ರತ್ನಖಚಿತವಾದ ಕಠಾರಿಯನ್ನು ಕಳುಹಿಸೋಣವಾಗಿತ್ತಷ್ಟೆ! ಆ ಬಹುಮಾನಕ್ಕೆ ಪ್ರತಿಯಾಗಿ ಈ 'ಕತ್ತಿ'ಯನ್ನು ಪ್ರಣಯಾಭಿಜ್ಞಾನವಾಗಿ ಕಳುಹಿಸಿರುವರು ಎಂದು ಹೇಳಿ, ದೊಡ್ಡ ದೊಗಳೆ ಅಂಗಿಯ ಒಳಗಿನಿಂದ ಒಂದು ಕತ್ತಿಯನ್ನು ತೆಗೆದು ದೌಲತ್ತಳ ಮುಂದೆ ಒಪ್ಪಿಸಿದನು.

ದೌಲತ್ :— ನಜರನ್ನು ಕಳುಹಿಸಿದ್ದವಳು ಈ ರಾಧಾರಾಣಿ! ಪ್ರಣಯಾಭಿಜ್ಞಾನವನ್ನು ಅವಳಿಗೇ ಕೊಡಿ.

ರಾಧಾ :—ನನಗೇ ಇರಲಿ! ಎಂದು ತೆಗೆದುಕೊಂಡಳು. ರಾಧೆಯು ತೆಗೆದುಕೊಳ್ಳುವಾಗ ಕೈ ಸೋಕಿ ಫಕೀರನಿಗೆ ರೋಮಾಂಚವಾಯಿತು. ಫಕೀ

ರನು ಹೊರಡುವುದಕ್ಕೆ ಅಪ್ಪಣೆ ಬೇಡಿದನು.

ರಾಧೆ :—ಫಕೀರರೇ ! ತಾವು ರಾಜಕರ್ಮಚಾರಿಗಳಾದರೂ ಈ ನಗರಕ್ಕೆ ಹೊಸಬರು. ರಾತ್ರಿ ಇಲ್ಲೇ ಇದ್ದು ಊಟ ತೀರಿಸಿಕೊಂಡು ಪ್ರಯಾಣಮಾಡ ಬಹುದಲ್ಲಾ !

ಫಕೀರ :—ಇಲ್ಲ! ನಾನು ಶ್ರೀರಂಗಪಟ್ಟಣದ ರಾಯಭಾರಿಗಳ ಬಿಡಾರಕ್ಕೆ ಹೋಗುವೆನು.

ರಾಧೆ :—ತಾವು ದಿವಾನ್ ಮುಹಮ್ಮದ್ ಖಾನರೊಡನೆ ಬಂದಿರುವ ಮತ್ತೊಬ್ಬ ರಾಯಭಾರಿಗಳೋ ?

ಫಕೀರ :—ಹೌದು.

ರಾಧಾ :—ತಮ್ಮ ರಾಯಭಾರವು ಇದೇಪ್ರೋ ? ತಮ್ಮ ನಿಜವಾದ ಹೆಸರೇನು ?

ಫಕೀರ :—ನನ್ನ ಹೆಸರು.... ಮಿರ್.... ಸಾದಕ್.

ರಾಧಾ :—ಕೇಳಿ ಬಲ್ಲೆ !

ಮಿರ್ ಸಾದಕನು ಇಬ್ಬರು ರಾಣಿಯರಿಗೂ ವಂದಿಸಿ ಅಪ್ಪಣೆ ಪಡೆದು ಹೊರಟನು. ಹೊರಡುವಾಗ ರಾಧೆಯನ್ನೊಂದು ಬಾರಿ ಇಣಿಕಿನೋಡಿ, ಆ ದಿವ್ಯಮೂರ್ತಿಯನ್ನು ಮನಸ್ಸಿನಲ್ಲಿ ಪ್ರತಿಷ್ಠಿಸಿದನು. ಕಾಲುಗಳು ಮುಂದೆ ಸರಿದವು. ಅವನಿಗೆ ಅರಿವಿಲ್ಲದೆಯೇ ಅವನು ದರಿಯಾಬಾಗಿನ ಬಯಲಿಗೆ ಬಂದು ಬಿಟ್ಟಿದ್ದನು. ಲಗುಬಗೆಯಿಂದ ದರಿಯಾಬಾಗಿನ ಹೊರಬಾಗಿಲಿಗೆ ಬಂದನು. ಅಲ್ಲಿ ಒಂದು ಗಿಡದ ಮರೆಯಲ್ಲಿ ಹುಚ್ಚಿಯು ಕಾದಿದ್ದಳು. ಅವಳೂ ಜೊತೆಯಲ್ಲಿ ಬಂದಳು. ಅಷ್ಟರಲ್ಲಿ ಯಾರೋ ಅಶ್ವಾರೋಹಿಯೊಬ್ಬನು ದರಿಯಾಬಾಗಿನೊಳಗೆ ಪ್ರವೇಶಿಸುತ್ತಿದ್ದನು. ಅವನು ಯಾರೆಂಬುದು ಮಿರ್ ಸಾದಕನಿಗೆ ತಿಳಿಯಿತು. ಇಯುಜ್ ಖಾನನೇ ! ಅವನನ್ನು ನೋಡಿ ಮಿರ್ ಸಾದಕನ ಎದೆಯು ಜಗ್ಗೆಂದಿತು. ಅಶ್ವಾರೋಹಿಯು ಇತ್ತ ನೋಡಿದರೂ ನಿಲ್ಲದೇ ವೇಗದಿಂದ ಹೊರಟುಹೋದನು. ಮಿರ್ ಸಾದಕನು "ಅವನಿಗೆ ಗೊತ್ತಾಗಲಿಲ್ಲ. ಅವನು ನೋಡಲಿಲ್ಲ" ಎಂದನು. ಹುಚ್ಚಿಯು ನಕ್ಕಳು. ಅವರು ಮುಂದೆ ಹೋದರು.

ಹುಚ್ಚಿಯು :—ಪಿಸುಮಾತಿನಿಂದ ದರಿಯಾಬಾಗಿನ ರಾಣಿಯರು ಹೇಗಿದಾರೆ ?

ಮೀರ್ :—ಸಾವಿತ್ರಿಯ ಬೆನ್ನು ತಟ್ಟಿ, "ಅಲ್ಲಿರುವವರು ಸ್ವರ್ಗಲೋಕದ ಸುಂದರಿಯರು ! ನಾನು ಅಂಥಾ ರೂಪವತಿಯನ್ನು ನೋಡಲೇ ಇಲ್ಲ."

ಹುಚ್ಚಿ :—ನೀನು ಬಂದ ಕಾರ್ಯವಾಯಿತೋ ?

ಮೀರ್ :—ಓಹೋ ! ಸಾಂಗವಾಗಿ ನೆರವೇರಿತು. ಒಂದಲ್ಲ! ಎರಡು ಬೇಟೆಗಳು ! ಒಂದು ನನಗೆ—ಮತ್ತೊಂದು ಸುಲ್ತಾನಸಿಗೆ !

ಹುಚ್ಚಿ ;—ನಿನಗೊಂದು ಸಿಕ್ಕುತ್ತದೇನು ?

ಮೀರ್ :—ಮನಸ್ಸೆಲ್ಲಾ ಆ ಇಬ್ಬರು ಸುಂದರಿಯರ ರೂಪುಲಾವಣ್ಯಗಳಿಂದ ತುಂಬಿಹೋಗಿದೆ. ಅಂತರಂಗವನ್ನು ಬಿಚ್ಚಿ ಹೇಳುವುದಾದರೆ—ಎರಡೂ ನನಗೆ ಬೇಕೆಂದು ಆಶೆ ।

ಹುಚ್ಚಿ :—ಅವರಿಬ್ಬರಲ್ಲಿ ಯಾರು ಸುಂದರಿ ?

ಮೀರ್ :—ಇಬ್ಬರೂ ಅನುಪಮ ರೂಪವತಿಯರು । ಆ ರಾಧೆ ಜಗನ್ಮೋಹಿನಿ !

ಆ ಮನೋಹರವಾದ ರಾತ್ರಿ ವನಲಕ್ಷ್ಮಿಯು ನೋಡಿಕೊಳ್ಳುವ ಮುಕುರ ಬಿಂಬದಂತೆ ಆಕಾಶದಲ್ಲಿ ಚಂದ್ರನು ಥಳಥಳಿಸುತ್ತಿದ್ದನು. ಆ ಕುಂದೇಂದು ಧವಳಚ್ಛವಿಯು ಭೂಮ್ಯಾಕಾಶಗಳನ್ನು ವ್ಯಾಪಿಸಿತ್ತು. ತಾರಾ ರಮಣಿಯರು ನಗುತ್ತಾ ಮುಂದೆ ಬಂದು, ನಿಶಾನಾಥನನ್ನು ಓಲೈಸುತ್ತಿದ್ದರು. ಆ ಸಾಂದ್ರವಾದ ವನದಲ್ಲಿ ವೃಕ್ಷಲತೆಗಳಲ್ಲೆಲ್ಲಾ ವನಪುಷ್ಪಗಳು ಪುಷ್ಪಿಸಿ ವನಲಕ್ಷ್ಮಿಯನ್ನು ಆರಾಧಿಸುತ್ತಿದ್ದುವು. ಆ ಚಂದ್ರಿಕಾಪ್ರಸಾದ ಪ್ರಫುಲ್ಲಿತವಾದ, ಆ ಪುಷ್ಪ ಸೌರಭ ಸಮೀರಣ ಸುವಾಸಿತವಾದ, ಸಾಂದ್ರವನ ಮಧ್ಯದಲ್ಲಿ ಸಾವಿತ್ರಿಯು ದಿವ್ಯ ಕಂಠದಿಂದ ಹಾಡತೊಡಗಿದಳು. ಆ ಅಪ್ಸರ ಗಾನವು ತರಂಗ ತರಂಗವಾಗಿ ಎದ್ದು ಗಿರಿ, ಗುಹೆಗಳನ್ನು ಆಕ್ರಮಿಸಿ ಪ್ರಶಾಂತವಾದ ಗಗನದಲ್ಲಿ ಲೀನವಾಗುತ್ತಿದ್ದಿತು. ಮನಸ್ಸಿನಲ್ಲಿ ಆ ಜಗನ್ಮೋಹಿನಿಯ ರೂಪ ವಿಲಾಸ। ಈ ಕಲಕಂಠಿಯ ಮಧುರಕಲ ನಿನಾದದ ವಿಭ್ರಮ। ಸುತ್ತಲೂ ಶರ

ಜ್ಜ್ಯಂದ್ರಿಕಾ ಸುವಾಸ ವಿಲಾಸಿತ ಪ್ರಫುಲ್ಲ ವನಕುಸುಮ ಸಂದೋಹ। ಇವುಗಳ ಮಧ್ಯದಲ್ಲಿ ಮಿರ್ಾಸಾದಕನು ಒಂದು ಸ್ವರ್ಗವನ್ನೇ ಅನುಭವಿಸುತ್ತಿದ್ದನು. ಬರಬರುತ್ತಾ ಈ ಗಾನ ಮಾಧುರ್ಯದಲ್ಲಿ ಆ ರೂಪವೈಭವವು ಮಲಿನವಾಗಿ ಹೋಯಿತು. ಊರಿಗೆ ಸಮೀಪದಲ್ಲಿ ಬರುತ್ತಲೇ ಆ ಗಾನವಾಹಿನಿಯು ಅಂತರ್ಧಾನವಾಯಿತು. ಆ ಮಧುಮಧುರ ಸಿನಾದದಲ್ಲಿ ಲೀನವಾಗಿದ್ದ ಮಿರ್ಾ ಸಾದಕನು ಸಾವಿತ್ರಿ। ಸಾವಿತ್ರಿ। ನನ್ನ ಮೋಹಿಸಿ। ಎಂದು ಎರಡು ಕೈಗಳನ್ನು ಚಾಚಿ ಸಾವಿತ್ರಿಯನ್ನು ಮುತ್ತಿಟ್ಟನು. ಅವನ ಆಲಿಂಗನ ಸುಖದಲ್ಲಿ ಮಗ್ನಳಾಗಿ ಸಾವಿತ್ರಿಯು ವೈಮರೆತಳು.

ಮಿರ್ಾಸಾದಕನು ಬಿಡಾರಕ್ಕೆ ಬರುವ ಹೊತ್ತಿಗೆ ರಾತ್ರಿ ಬಹಳ ಹೊತ್ತಾಗಿತ್ತು. ದಿವಾನ್ ಮುಹಮ್ಮದ್ ಖಾನನು ಹಾಸಿಗೆಯ ಮೇಲೆ ಕುಳಿತಿದ್ದನು: ದೀಪವು ಉರಿಯುತ್ತಿತ್ತು. ಮಿರ್ಾಸಾದಕನು ತನ್ನ ಕೋಣೆಗೆ ಹೋಗಿ ವೇಷವನ್ನು ಬದಲಾಯಿಸಿದನು. ಮುಹಮ್ಮದ್ ಖಾನರ ಬಳಿ ಬಂದು ಕುಳಿತುಕೊಂಡನು.

ಮುಹಮ್ಮದ್:—ಮಿರ್ಾಸಾದಕ್। ಸಂಧ್ಯಾಕಾಲದಿಂದ ಎಲ್ಲಿಹೋಗಿದ್ದೆ.

ಮಿರ್ಾ:—ದಿವಾನರೇ। ದರಿಯಬಾಗಿನ ದಾನವನ್ನು ನೋಡುವುದಕ್ಕೆ ಹೋಗಿದ್ದೆ. ಎಂಥಾ ದಿವ್ಯವಾದ ದಾನ। ಅದೊಂದು ಸ್ವರ್ಗ ಲೋಕವೆ। ದೌಲತ್ ರಾಣಿ ಸ್ವರ್ಗದ ರಾಣಿ. ನನಗೆ ಅವಳನ್ನು ಪೂಜಿಸಬೇಕೆನ್ನಿಸುತ್ತದೆ. ಆರಾಧಿಸಬೇಕೆನ್ನಿಸುತ್ತದೆ.

ಮುಹ:—ನಾನೇ ಹೋಗಿ ನೋಡಿಕೊಂಡು ಬಾರೆಂದು ನಿನ್ನನ್ನು ಕಳುಹಿಸಬೇಕೆಂದಿದ್ದೆ. ಧರ್ಮ ಬುದ್ಧಿ ಇಲ್ಲದ ನಿನಗೆ ಆ ದಾನಧರ್ಮಗಳು ರುಚಿಸದೆಂದು ನನಗೆ ತೋರಿತು.

ಮಿರ್ಾ :—ನೋಡದಿದ್ದರೆ ರುಚಿಸುತ್ತಿರಲಿಲ್ಲ. ನೋಡಿದ ಮೇಲೆ ರುಚಿಸುವುದಿರಲಿ। ಮನಸ್ಸೇ ಬೇರೆಯಾಗಿಹೋಗಿದೆ.

ಮುಹಮ್ಮದ್ :—ಕೇಳು! ಮಿರ್ಾಸಾದಕ್! ನಾವು ಬಂದ ಕಾರ್ಯವು ಪೂರೈಸಿತು. ನವಾಬರು ಹೇಳಿ ಕಳುಹಿಸಿದ್ದರು. ಬಹು ಮರ್ಯಾದೆಯಿಂದ ಕಂಡು ಮನ್ನಣೆ ಮಾಡಿದರು. ಭಾರಿ ಖಿಲ್ಲತ್ತುಗಳನ್ನು ಕೊಟ್ಟರು. ಸುಲ್ತಾ

ನರವರಿಗಾಗಿ ಅನರ್ಘ ವಸ್ತ್ರಾಭರಣಗಳನ್ನು ಒಪ್ಪಿಸಿದರು. ಒಂದು ಮುದ್ರಿತ ವಾದ ಲಕೋಟೆಯನ್ನು ಕೊಟ್ಟರು. "ಇದರಲ್ಲಿ ಸುಲ್ತಾನರವರಿಗೆ ಉತ್ತರ ವಿದೆ" ಎಂದು ಹೇಳಿದರು.

ನಾನು ಆತುರನಾಗಿ ನಮ್ಮ ರಾಯಭಾರದ ಫಲಿತಾಂಶವನ್ನು ಪ್ರಶ್ನೆ ಮಾಡಿದೆ. ಅವರು ನಗುತ್ತಾ:—

ದಿವಾನರೇ! ನಗರದಲ್ಲಿ ಹಣವಿಲ್ಲ. ಈ ರಾಜ್ಯವು ತಮ್ಮದೇ ಇದೆ.

ಅದನ್ನು ಸುಖವಾಗಿ ಕಾಪಾಡುವ ಭಾರವು ನನ್ನದಾಗಿದೆ. ನಾನು ಇಲ್ಲಿರುವವರೆಗೆ ನಗರದಿಂದ ಹಣವು ಬರುವುದೇ ಇಲ್ಲ. ನನ್ನನ್ನು ಕಿತ್ತುಹಾಕಿ ನಗರವನ್ನು ಸುಲಿಗೆ ಮಾಡಬಹುದು ಎಂದು ಹೇಳಿದರು. ಅವರು ಎಷ್ಟೋ ಮಾತನಾಡಿದರು. ಸ್ಪಷ್ಟವಾಗಿ ನುಡಿದರು. ಅವರ ಸ್ಪಷ್ಟ ಭಾಷಣ, ಶುದ್ಧ ನ್ಯಾಯನೀತಿಗಳು, ಪ್ರಜಾ ವಾತ್ಸಲ್ಯ, ಪ್ರಭು ಭಕ್ತಿ ಇವುಗಳೆಲ್ಲಾ ಅನಾದೃಶವಾದುವು. ಅದನ್ನು ಕೇಳಿ ನಿಮ್ಮ ರಾಯಭಾರವು ವಿಫಲವಾದರೂ ನನ್ನ ಮನಸ್ಸಿಗೆ ಎಷ್ಟೋ ಹರ್ಷವಾಯಿತು.

ಮೀರ್:—ಕಾರ್ಯವು ವಿಫಲವಾದರೂ ತಾವು ಖಿಲ್ಲತ್ತುಗಳನ್ನು ತಂದಿರಾ!

ಮಹಮುದ್:—ನಗುತ್ತಾ ಇದುವರೆಗೂ ಸುಲ್ತಾನರೂ ನಗರದ ನವಾಬರೂ ಸಮಾನರು. ಖಿಲ್ಲತ್ತುಗಳನ್ನು ನಿರಾಕರಿಸಿದರೆ, ವಿರೋಧವನ್ನು ಸ್ಥಾಪಿಸಿದಂತೆಯೇ ಸರಿ! ನಗರದ ನವಾಬರನ್ನು ವಿರೋಧಿಸುವುದಕ್ಕೆ ನಮಗೆ ಅಧಿಕಾರವಿಲ್ಲ.

ಮೀರ್‌ಸಾದಕನು ತಲೆದೂಗಿ ಸುಮ್ಮನಾದನು.

ಮಹಮುದ್‌ಖಾನರು ನಾಳೆ ಪ್ರಾತಃಕಾಲ ನಿನ್ನನ್ನು ಕಳುಹಿಸುವಂತೆ ಹೇಳಿದ್ದಾರೆ. ಹೋಗಿ ಭೇಟಿ ಮಾಡಿಕೊಂಡು ಬಾ!

ಮೀರ್:—ಏನು ಖಿಲ್ಲತ್ತುಗಳನ್ನು ತರುವುದಕ್ಕೋ!

ಮಹ:—ಖಿಲ್ಲತ್ತುಗಳನ್ನು ಕೊಡುತ್ತಾರೆ. ಏನೋ ನಿನ್ನೊಡನೆಯೇ ಮಾತನಾಡಬೇಕಂತೆ.

ಮೀರ್:—ಅಪ್ಪಣೆ.

ಅಲ್ಲಿಗೆ ಮಾತು ಮುಗಿಯಿತು. ಇಬ್ಬರೂ ಮಲಗಿದರು. ನಿದ್ರೆ ಬರಲಿಲ್ಲ. ಮಹಮದ್‌ಖಾನನಿಗೆ ರಾಯಭಾರವು ವಿಫಲವಾದ ಚಿಂತೆ! ಅದರಿಂದ ಮುಂದಾಗುವ ಅನಾಹುತಗಳ ಕಲ್ಪನೆ? ಮೈಸೂರಿನ ಅಂತಃಕಲಹದ ವಿಷಜ್ವಾಲೆ! ನವಾಬರ ವೀರಪುತ್ರರ ಸಂಗ್ರಾಮ, ಮೈಸೂರಿನ ಅಧಃಪತನ ಈ ಚಿತ್ರಗಳು; ಅವನ ಮನಸ್ಸಿನ ಮೇಲೆ ಪ್ರವಾಹದಂತೆ ಬಂದು ಧುಮುಕುತ್ತಿದ್ದವು. ಮೀರ್‌ಸಾಧಕನ ಆಲೋಚನೆಗಳೇ ಬೇರೆ. ಒಂದುಸಾರಿ ದೌಲತ್‌ಳ ಪ್ರಶಾಂತ ಮೋಹಿನೀರೂಪ! ಮತ್ತೊಂದು ಬಾರಿ ರಾಧೆಯ ಉಜ್ವಲ ಸೌಂದರ್ಯ ಪ್ರದೀಪ। ಇವುಗಳ ಆಂದೋಳನ. ಮಧ್ಯೆ ಒಂದುಕಡೆ ಟೀಪೂ ಸುಲ್ತಾನನ ಸ್ನೇಹನುತ್ತೊಂದು ಇಯಜ್‌ಖಾನನ ಭೀತಿ। ಅವನ ಹಿಂದಿನ ಕಥೆಗಳೆಲ್ಲಾ ಜ್ಞಾಪಕಕ್ಕೆ ಬಂದಂತೆ। ಅವನ ಮನಸ್ಸಿನಲ್ಲಿ ಆ ಸುಂದೋಪಸುಂದರ ಮಹಾ ಯುದ್ಧನಾದಂತೆ. ಅವರಿಬ್ಬರೂ ಧೂಳೀಪಟವಾಗಿ ಹೋದಂತೆ. ಆ ಇಬ್ಬರು ಮೋಹಿನಿಯರೂ ನಿರಾಶ್ರಯರಾದಂತೆ. ಯಾವುದೋ ಒಂದು ಅಮೃತ ಹಸ್ತವು ಅವೆರಡು ಜೀವರತ್ನಗಳನ್ನು ತನ್ನ ಕಂಠದಲ್ಲಿ ಕಟ್ಟಿದಂತೆ। ತಾನು ಗರುಡಾರೂಢನಾದ ಮಹಾವಿಷ್ಣುವಿನಂತೆ, ದೌಲತ್ ರಾಧೆಯರನ್ನು ಉಭಯ ಪಾರ್ಶ್ವದಲ್ಲಿಯೂ ಆಲಿಂಗಿಸಿಕೊಂಡು ಆಕಾಶಕ್ಕೆ ಹಾರಿಹೋದಂತೆ। ಸಾವಿತ್ರಿಯು ಗಂಧರ್ವ ಗಾನವನ್ನು ಹಾಡುತ್ತಾ ಭೂದೇವಿಯಂತೆ ಕೆಳಗೆ ಉಳಿದಂತೆ। ಅವನ ಕಲ್ಪನಾತರಂಗಗಳು ಏಳುತ್ತಿದ್ದುವು. ಈ ಕಲ್ಪನಾ ಸಾಮ್ರಾಜ್ಯದಲ್ಲಿ ಮೀರ್‌ಸಾದಕನು ಸುಖಿಯಂತೆ ಸುಖಿಯಾಗಿ, ಕಾಮಿಯಂತೆ ಕಾಮಿಯಾಗಿ, ಭೋಗಿಯಂತೆ ಭೋಗಿಯಾಗಿ, ಹುಚ್ಚನಂತೆ ಹುಚ್ಚನಾಗಿ, ರಾತ್ರಿಯನ್ನು ಕಳೆದನು.

ಬೆಳಕು ಹರಿಯಿತು. ಮೀರ್‌ಸಾದಕನು ಎದ್ದು ಬೆಳಗಿನ ಕೃತ್ಯಗಳನ್ನು ಪೂರೈಸಿದನು. ಅರಮನೆಯಿಂದ ಮ್ಯಾನಾ ಬಂದಿತು. ವಸ್ತ್ರಾಲಂಕಾರಭೂಷಿತವಾಗಿ ಅರಮನೆಗೆ ಹೋದನು. ಅಲ್ಲಿ ನವಾಬರ ಭೇಟಿ ಮಾಡಿದನು. ಇಯಜ್‌ಖಾನನು ಪ್ರೀತಿವಿಶ್ವಾಸಗಳಿಂದ ಮಾತನಾಡಿಸಿದನು. ರಾಜಕೀಯ ರಾಯಭಾರಿಯೊಡನೆ ಬಿಗಿಯಾಗಿ ಮಾತನಾಡುವಂತಿಲ್ಲ. ಪ್ರೀತಿಯ ಗೆಳೆಯನೊಡನೆ ಮಾತನಾಡುವಂತೆ ಮೀರ್‌ಸಾದಕನ ವಾಕ್ಚಾತುರ್ಯವನ್ನು ನೋಡಿ ನವಾಬನು ಆಶ್ಚರ್ಯಚಕಿತನಾದನು. ಟಿಪ್ಪೂಸುಲ್ತಾನರಿಗೆ ಬುದ್ಧಿವಾದವನ್ನು ಹೇಳಿ ಕಳುಹಿಸಿದನು.

ಸುಲ್ತಾನನ ಸಾಮ್ರಾಜ್ಯ ರಚನೆಯಲ್ಲಿ ತನಗಿರುವ ಅಪಾರ ಸಹಾನುಭೂತಿಯನ್ನು ವ್ಯಕ್ತಪಡಿಸಿದನು. ಇಯುಜ್‌ಖಾನನ ಪ್ರೀತಿ ಗೌರವಗಳನ್ನೂ ಪ್ರಭುಭಕ್ತಿಯನ್ನು ನೋಡಿ ಮಿರ್ಸಾದಕನು ಬೆರಗಾಗಿಹೋದನು. "ಎಂಥಾ ಧೀರ ಪುರುಷನಿವನು. ಎಷ್ಟು ಉದಾರಿ. ಇವನು ಟಿಪ್ಪುಸುಲ್ತಾನನಿಗಿಂತಲೂ ಎಷ್ಟೋ ಗುಣಾಢ್ಯನು" ಎಂದು ಅವನ ಅಂತರಾತ್ಮವು ಎದ್ದುಬಂದು ಅವನಿಗೆ ಹೇಳುತ್ತಿದ್ದಿತು. ನವಾಬನು ಟಿಪ್ಪೂಸುಲ್ತಾನನಿಗೆ ಕೊಡಬೇಕೆಂದು ಒಂದು ಗುಪ್ತ ಪತ್ರವನ್ನು ಅವನ ಕೈಯಲ್ಲಿ ಕೊಟ್ಟನು. ಮಿರ್ಸಾದಕನು ನಗರದ ನವಾಬರಿಂದ ಮಾನಿತನಾಗಿ ಬಿಡಾರಕ್ಕೆ ಸಂತೋಷದಿಂದ ಹಿಂದಿರುಗಿದನು.

ಅದೇ ದಿನವೇ ರಾಯಭಾರಿಗಳಿಬ್ಬರೂ ಶ್ರೀರಂಗಪಟ್ಟಣಕ್ಕೆ ಪ್ರಯಾಣ ಮಾಡಿದರು.

## ಸುಲ್ತಾನನ ಸಂಧಾನ.

ನಗರಕ್ಕೆ ಹೋಗಿದ್ದ ರಾಯಭಾರಿಗಳು ಶ್ರೀರಂಗಪಟ್ಣಕ್ಕೆ ಹಿಂದಿರುಗಿ ಬಂದು ಸೇರಿದರು. ಬಂದ ದಿನವೇ ಮುಹಮ್ಮದಾಲಿಯವರು ಸುಲ್ತಾನರವರ ಭೇಟಿ ಮಾಡಿದರು.

ದಿವಾನರವರು ತಾವು ಹೋಗಿದ್ದ ಕೆಲಸವು ವಿಫಲವಾಯಿತೆಂದು ತಲೆ ತಗ್ಗಿಸಿ ಹೇಳಿದರು. ನಗರದ ಖಿಲ್ಲತ್ತುಗಳನ್ನು ಸನ್ನಿದಾನದಲ್ಲಿ ಒಪ್ಪಿಸಿದರು. ಲಕ್ಕೋಟೆಯನ್ನು ಸುಲ್ತಾನರ ಕೈಗೆ ಕೊಟ್ಟರು. ಸುಲ್ತಾನರು ಲಕೋಟೆಯನ್ನು ಒಡೆದು ಕಾಗದವನ್ನು ಓದಲಾರಂಭಿಸಿದರು. ಬಲು ವಿಸ್ತಾರವಾದ ಕಾಗದ. ನಡು ನಡುವೆ ಸಮಾಧಾನದ ಭಾವವು ತೋರ್ಪಡುತ್ತಿತ್ತು. ಕೊನೆ ಕೊನೆಗೆ ಸುಲ್ತಾನರ ಮುಖವು ಕೆಂಪೇರಿತು. ಕಾಗದ ಮುಗಿಯಿತು. ಟಿಪ್ಪುವಿನ ಕ್ರೋಧವು ಮುಗಿಲು ಮುಟ್ಟಿ ಮಾತು ಉಚ್ಚಳಿಸಿತು. "ನಗರವು ಕೈಬಿಟ್ಟುಹೋಯಿತು" ಎಂದು ದೀರ್ಘಶ್ವಾಸ ಬಿಟ್ಟನು.

ದಿವಾನರೇ ನಗರದ ನವಾಬರು ಸ್ವತಂತ್ರರಂತೆ ವರ್ತಿಸಿದರೋ ?

ದಿವಾನ್ :—ಇಲ್ಲ ! ಖಾವಿಂದ್ ಬಹು ವಿಧೇಯತೆಯಿಂದ ನಡೆದುಕೊಂಡರು. ಸನ್ನಿಧಾನದಲ್ಲಿ ಬಹಳ ಭಕ್ತಿಗೌರವಗಳನ್ನು ವ್ಯಕ್ತಪಡಿಸಿದರು.

ಸುಲ್ತಾನ್ :—ನಗರದಲ್ಲಿ ಬಹಳ ಧನವಿದೆಯೆಂದು ಕೇಳಿದ್ದೇನೆ. ಒಂದು ಕೋಟಿ ರೂಪಾಯಿಗಳಿಲ್ಲವೆಂದರೆ ಆಶ್ಚರ್ಯ.

ದಿವಾನ್ :—ಅದರಲ್ಲಿ ಛದ್ಮನೆಯೇನೂ ಕಾಣಲಿಲ್ಲ. ಎಲ್ಲವೂ ಸಹಜವಾಗಿಯೇ ಇತ್ತು.

ಸುಲ್ತಾನ್ :—ನಾನು ನಂಬುವುದಿಲ್ಲ. ಇದೊಂದು ತಿರಸ್ಕಾರವೇ ಸರಿ. ಈ ವಿಷಯದಲ್ಲಿ ಗಹನವಾಗಿ ಆಲೋಚಿಸತಕ್ಕದ್ದಿದೆ. ಈ ದಿನವೇ ದರಿಯಾ ದೌಲತ್ತಿನಲ್ಲಿ ಮಂತ್ರಿಗಳೂ, ಸರದಾರರೂ, ಎಲ್ಲರೂ ಸೇರತಕ್ಕದ್ದು.

ರಾಯಭಾರಿಗಳಿಗೆ ಅಪ್ಪಣೆಕೊಟ್ಟು ಕಳುಹಿಸಿದನು.

ರಾಜಧಾನಿಯಲ್ಲೆಲ್ಲಾ ಗುಸುಗುಂಪಲು. ಮಂತ್ರಿಗಳೆಲ್ಲಾ ಪರಸ್ಪರ ಮಾತನಾಡುತ್ತಾರೆ. ಎಲ್ಲರೂ ದಿವಾನರನ್ನು ನೋಡಿ ಮಾತನಾಡಿದರು. ನಗರದ ವಿಚಾರವನ್ನು ಕೂಲಂಕಷವಾಗಿ ಚರ್ಚಿಸಿದರು. ಮಂತ್ರಿ ಪೂರ್ಣಯ್ಯನವರನ್ನು ದಿವಾನರು ಭೇಟಿಮಾಡಿದರು. ಸಮಾಚಾರಗಳನ್ನೆಲ್ಲಾ ಸವಿಸ್ತಾರವಾಗಿ ಹೇಳಿದರು. ಪೂರ್ಣಯ್ಯನವರು " ಕೆಲಸವು ಕೆಟ್ಟುಹೋಯಿತು " ಎಂದರು. ಸ್ವಲ್ಪ ಹೊತ್ತು ಸುಮ್ಮನಿದ್ದು—ದಿವಾನರವರೇ ! ದೌಲತ್ ರಾಣಿಯವರಲ್ಲಿ ಈ ರಾಯಭಾರದ ಮಾತು ಹೇಳಿ ಏನಾದರೂ ಸಂಧಾನ ನಡೆಸಲು ಅನುಕೂಲಿಸಲಿಲ್ಲವೇ ? ಅವರಲ್ಲಿಯೂ ಮಾತನಾಡಿದೆ. ಎಷ್ಟೋ ಪ್ರಯತ್ನ ಮಾಡಿದೆ. ಕಾರ್ಯಸಾಧನೆಯಾಗಲಿಲ್ಲ.

ಪೂರ್ಣಯ್ಯ ;—ದಿವಾನರೇ ಈ ರಾಯಭಾರದ ಭಂಗದಿಂದ ಪ್ರಮಾದವಾಗುತ್ತದೆಂದು ನಗರದ ನವಾಬರಲ್ಲಿ ಸೂಚಿಸಲಿಲ್ಲವೇ ?

ದಿವಾನ್ :—ಸೂಚಿಸುವುದೇನು ? ಯುದ್ಧವೇ ಪ್ರಾಪ್ತವಾಗುತ್ತದೆಂದು ನಗರದ ನವಾಬರಿಗೆ ಮನದಟ್ಟಾಗಿವೆ.

ಪೂರ್ಣಯ್ಯ :—ನಗರವೆಲ್ಲಿ ! ನವಾಬರೆಲ್ಲಿ ! ಎಲ್ಲಾ ತಲೆ ಕೆಳಗಾಗಿ ಹೋಯಿತು.

ದಿವಾನ್ :—ನವಾಬರೂ ನವಾಬಗಿರಿಯನ್ನು ತೃಣದಂತೆ ತೊರೆಯಬಲ್ಲ ಧೀರರು.

ಪೂರ್ಣಯ್ಯ :—ತಮಗೆ ಹಾಗೆ ತೋರಬಹುದು. ಆ ಕೆಲಸವು ಅಷ್ಟು ಸರಳವೆಂದು ನನಗೆ ಅನ್ನಿಸುವುದಿಲ್ಲ. ಒಂದುಕಡೆ ಸುಲ್ತಾನರು ಮತ್ತೊಂದು ಕಡೆ ಸಮಾನ ಬಲಪರಾಕ್ರಮಶಾಲಿಗಳಾದ ನವಾಬರು ಇವೆರಡು ಕುಲಾದ್ರಿಗಳೂ ಘರ್ಷಣದಿಂದ ಜ್ವಾಲಾಮುಖಿಯು ಏಳುತ್ತದೆ. ಈ ದುರ್ಘಟಪ್ರಸಂಗವು ಬಂದೇ ಬರುವುದೆಂದು ಅಂದುಕೊಂಡಿದ್ದೆ. ಇಷ್ಟುಬೇಗ ಬರುವುದೆಂದು ಸ್ವಪ್ನದಲ್ಲಿಯೂ ಎಣಿಸಿರಲಿಲ್ಲ. ಬಂದೇಬಿಟ್ಟಿತು ! ಆ ಮೇಲೆ ಬಹಳ ಹೊತ್ತು ಮಾತನಾಡುತ್ತಿದ್ದರು. ದಿವಾನರು ಮನೆಗೆ ಹೊರಟುಹೋದರು. ಈ ದಿನ ಮಂತ್ರಿಗಳು, ದಿವಾನರು, ಸರದಾರರು ಎಲ್ಲರ ಬಾಯಿಯಲ್ಲೂ ಇದೇ ಮಾತು. ಪುರಜರರು ವರ್ತಕರಲ್ಲಿಯೂ ಹರಡಿತು ಓಲೇಕಾರರು ಸಿಪಾಯಿಗಳಲ್ಲಿಯೂ ಹಬ್ಬಿತು. ನಗರದ ಮೇಲೆ ಫೌಜು ಹೊರಡುತ್ತದೆ. ಐವತ್ತು ಸಹಸ್ರ ಸೈನ್ಯವು ಹೊರಡುತ್ತದೆ. ಲಕ್ಷವೇ ಹೋಗಬಹುದು ! ಸ್ವಯಂ ನವಾಬರೇ ಹೊರಟುಬಿಟ್ಟಿದ್ದಾರಂತೆ. ಅಂಗಡಿಗಳೂ ಹೊರಡುತ್ತವೆ. ಆಟದವರು ಹೊರಡುತ್ತಾರೆ. ಬೇಟೆಯವರು ಹೋಗುತ್ತಾರೆ. ಕೆಲಸವಿಲ್ಲದವರಿಗೆಲ್ಲಾ ಇದೊಂದು ಹೊಸ ಉತ್ಸಾಹ ! ಪಟ್ಟಣದಲ್ಲೆಲ್ಲಾ ಇದೇ ಮಾತು ! ಪುಂಖಾನುಪುಂಖವಾಗಿ ಮಾತುಗಳು ಹೊರಡುತ್ತಿವೆ.

ಮಧ್ಯಾಹ್ನ ಭೋಜನೋತ್ತರ ಮೀರ್‌ಸಾದಕನು ಸುಲ್ತಾನರವರನ್ನು ಅಂತರಂಗದಲ್ಲಿ ಭೇಟಿಮಾಡಿದನು. ಸುಲ್ತಾನನು ಅವನಮೇಲೆ ಪೂರ್ಣಾನುಗ್ರಹವನ್ನು ಬೀರಿದನು. ಸುಲ್ತಾನನು ಮೀರ್‌ಸಾದಕನನ್ನು ಕೈಹಿಡಿದು ಹತ್ತಿರ ಕುಳ್ಳಿರಿಸಿಕೊಂಡು " ನಗರದ ಸಮಾಚಾರವೇನು ? ದೌಲತ್ ರಾಣಿಯವರನ್ನು ನೋಡಿದ್ದೆಯಾ ? ಅವರೇನು ಹೇಳಿದರು ?

ಜಹಾಪನಾ ! ನಾನು ರಾಣಿಯವರ ಭೇಟಿಮಾಡಿದೆ, ಅವರ ಅಂತಃಪುರದಲ್ಲಿಯೇ ಭೇಟಿಯಾಯಿತು. ತಮ್ಮ ಕಡೆಯವನೆಂದು ತಿಳಿಯುತ್ತಲೇ ಬಲು ವಿಶ್ವಾಸಗೌರವಗಳಿಂದ ನೋಡಿದರು. ಸ್ವಯಂ ದೌಲತ್ ರಾಣಿಯವರು ತಮ್ಮ ಯೋಗಕ್ಷೇಮವನ್ನು ಆದರದಿಂದ ವಿಚಾರಿಸಿದರು. ತಮ್ಮ ಪ್ರಣಯ ಪತ್ರಿಕೆಯನ್ನು ಅವರಿಗೊಪ್ಪಿಸಿದೆ. ಅದನ್ನು ಓದುವಾಗ ಅವರ ಮುಖದಲ್ಲಿ ಮಂದಹಾಸವು ಸೂಸುತ್ತಿತ್ತು. ಆ ಪತ್ರಿಕೆಯಿಂದ ಅವರೆಷ್ಟೋ ಆನಂದಪಟ್ಟರು. ಗೊಂಡಾರಣ್ಯದಲ್ಲಿ ಬಂಧುದರ್ಶನವಾದಷ್ಟು ಆನಂದವಾಯಿತು. ಅಲ್ಲಿ ಆ ಅಂತಃ

ಪುರದಲ್ಲಿ ನವಾಬರ ದೊಡ್ಡ ತೈಲಚಿತ್ರವಿದೆ. ಅವರ ಎದುರಿನಲ್ಲಿ ತಮ್ಮ ಭವ್ಯವಾದ ಚಿತ್ರಪಟವಿದೆ. ಆ ಪಟದ ಕಡೆಗೆ ಮುಗುಳುನಗೆಯಿಂದ ನೋಡಿದರು. ಆಗ ಅವರ ಮುಖದಮೇಲೆ ಲಜ್ಜೆ ಆವರಿಸಿತು. ಆ ಲಜ್ಜಾನತವಾದ ಮಂದಹಾಸಪೂರಿತವಾದ ಮುಖವು ಎಷ್ಟೋ ಶೋಭಾಯಮಾನವಾಗಿತ್ತು. ತಮ್ಮ ಪಟ್ಟದ ಕತ್ತಿಯನ್ನು ಅವರಿಗೊಪ್ಪಿಸಿದೆ. ಅದನ್ನು ಎರಡು ಕೈಗಳಿಂದಲೂ ಸ್ವೀಕರಿಸಿದರು. ಮುಖದ ಸಮೀಪಕ್ಕೆ ಕೊಂಡುಹೋಗಿ ಮೃದುವಾಗಿ ಮುದ್ದಿಟ್ಟರು. ಹೃದಯದಲ್ಲಿ ಧರಿಸಿದರು.

ಇದನ್ನು ಕೇಳಿ—ಕೇಳಿ ಸುಲ್ತಾನನು ಮೋಹ ವಿಹ್ವಲನಾಗಿ ಹೋದನು. ದೌಲತ್ತಳನ್ನೇ ಪ್ರತ್ಯಕ್ಷವಾಗಿ ಕಾಣುತ್ತಿದ್ದನು. ಆ ಆನಂದದಲ್ಲಿ ಮೀರ್ ಸಾದಕನ ಎರಡು ಭುಜಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ಕುಲಿಕಿ, ಅದಕ್ಕೆ ಉತ್ತರವೇನು ಬಂತು, ಹೇಳು ! ನನ್ನ ದೌಲತ್ತಳೇನು ಹೇಳಿದಳು? ಎಂದನು. ಮೀರ್ ಸಾದಕನು ಅವನ ರುಚಿಯಾದ ಸುಳ್ಳುಕಥೆಯನ್ನು ಮುಂದುವರಿಸಿದನು. ಅವರು ಹೊರಟೇ ನಿಂತಿದ್ದಾರೆ. ನನ್ನ ಜೊತೆಯಲ್ಲಿ ಹೊರಟುಬರುತ್ತಿದ್ದರು. ನನಗೆ ಕರೆತರುವ ಧೈರ್ಯವಿಲ್ಲ. ಖಾನರವರಿಗೆ ತಿಳಿದುಬಿಟ್ಟರೆ ಪ್ರಮಾದ! ಅವರು "ಟಿಪ್ಪೂಸುಲ್ತಾನರವರೇ ಇಲ್ಲಿಗೆ ಬರಲಿ" ಎಂದು ಹೇಳಿದರು. ಈ ಕಥೆಯನ್ನು ಕೇಳುತ್ತಾ ಟಿಪ್ಪುವು ತನ್ನ ಮನಸ್ಸಿನಲ್ಲಿಯೇ ಸ್ವರ್ಗದ ಅನಂತಕಲ್ಪನಾ ಚಿತ್ರಗಳನ್ನು ಕಾಣುತ್ತಿದ್ದನು. "ಸುಲ್ತಾನರೇ ಬರಲಿ" ಎಂಬ ಮಾತು ಅವನ ಕಿವಿಗೆ ದಿವ್ಯ ಸಂಗೀತದ ಪಲ್ಲವಿಯಂತಿತ್ತು. ಮನಸ್ಸಿಗೆ ಅಮೃತಧಾರೆಯಂತಾಯಿತು. ಅಂದು ಅವನಲ್ಲಿ ಒಂದು ವಿಮಾನವಿದ್ದಿದ್ದರೆ ನಗರಕ್ಕೆ ಹಾರಿಹೋಗಿ ದೌಲತ್ತಳ ದರ್ಶನಮಾಡಿ, ಅವಳನ್ನು ಶ್ರೀರಂಗಪಟ್ಟಣಕ್ಕೆ ಕರತರುತ್ತಿದ್ದನು. ಈ ಧೂರ್ತ ವಾಕ್ಯದಿಂದ ಅಷ್ಟೇ ಸಂತಸಗೊಂಡನು. ಮೀರ್ ಸಾದಕ್! ನಿನಗೆ ಏನು ಪುರಸ್ಕಾರ ಕೊಟ್ಟರೂ ತೀರದು. ಅಂತಹ ಸಂಧಾನವನ್ನು ಚಮತ್ಕಾರದಿಂದ ನಡೆಸಿದ್ದೀಯೇ ಎಂದು ಬಹುವಾಗಿ ಕೊಂಡಾಡಿದನು.

ಮೀರ್ ಸಾದಕನು "ಹುಜೂರು ನನ್ನದೊಂದು ಪ್ರಾರ್ಥನೆ ಇದೆ. ಅದನ್ನು ಸನ್ನಿಧಾನದಲ್ಲಿ ಅರಿಕೆಮಾಡಬೇಕೆಂದು ಆಶೆ! ಭಯವಾಗುತ್ತದೆ."

"ಭಯವೇಕೆ? ಹೇಳು ಬೇಕಾದ್ದು ನಡೆಸಿಕೊಡುತ್ತೇನೆ."

ನಗರದಲ್ಲಿ ಸೋನಾ ಮಹಲಿನಲ್ಲಿ ದೌಲತ್ ರಾಣಿಯವರ ಸಾನ್ನಿಧ್ಯದಲ್ಲಿ ರಾಧೆ ಎಂಬ ಹುಡುಗಿಯೊಬ್ಬಳಿದ್ದಾಳೆ. ಅವಳು ಸೌಂದರ್ಯದ ಖನಿ! ಅವಳನ್ನು ನನಗೆ ದಯಪಾಲಿಸಬೇಕು.

ಮುತ್ತಾಳ! ಪ್ರಪಂಚದಲ್ಲಿರುವ ಸುಂದರ ಸ್ತ್ರೀಯರೆಲ್ಲಾ ನಿನಗೇ ಬೇಕು. ಕಾಮ ಪರವಶನಾದ ನೀನು ಹಿಂದುಮುಂದೆ ನೋಡುವುದಿಲ್ಲ. ನಿನಗೆ ಇಂದೊಂದು ಹೆಣ್ಣು! ನಾಳೆ ಬೇರೊಂದು ಹೆಣ್ಣು.

ಇಲ್ಲ! ಖಾವಿಂದ್! ಆ ಜಗನ್ಮೋಹಿನಿಯಾದ ರಾಧೆಯನ್ನು ಕೊಟ್ಟು ಮದುವೆ ಮಾಡಿಸಿದರೆ ಆ ಮೇಲೆ ಪರಸ್ತ್ರೀಯರ ಮುಖಾವಲೋಕನ ಮಾಡು ವುದಿಲ್ಲ. ಈ ಶರೀರವನ್ನು ತಮ್ಮ ಸೇವೇಯಲ್ಲಿಯೇ ಅರ್ಪಣ ಮಾಡಿಬಿಡು ತ್ತೇನೆ.

ಆಹಾ! ಎಷ್ಟು ಸಭ್ಯ! ಎಷ್ಟು ಗುಣಾಢ್ಯ! ಹೆಂಗಸರ ಹುಚ್ಚು ಹಿಡಿದರೆ ಭ್ರಮರದಂತೆ ಪುಷ್ಪದಿಂದಿ ಪುಷ್ಪಕ್ಕೆ ಹಾರುತ್ತಿರುವುದೇ! ಆ ರಾಧೆಯು ಸಾಮಾ ನ್ಯಳಲ್ಲ! ಸ್ವತಂತ್ರ ರಾಣಿ! ಆ ವೀರ ಭೂಮಿಯ ಸ್ವತಂತ್ರ ರಾಣಿಯನ್ನು ಬಲಾತ್ಕಾರದಿಂದ ತಂದರೆ, ಹಿಂದೂ ಪಾಳಯಗಾರರ ವಿರೋಧಾನಲವನ್ನು ಮೂಟೆ ಕಟ್ಟಿ ಪಟ್ಟಣಕ್ಕೆ ತಂದಿಟ್ಟಂತೆಯೇ ಸರಿ! ಪೂರ್ವಾಪರವನ್ನು ನೋಡದೇ ಆ ದೊಡ್ಡ ಬೆಂಕಿಯ ಮೂಟೆಗೆ ನಾನೆಲ್ಲಿ ಕೈಯಿಟ್ಟೆ! ಕಾಮಪರವಶನಾದವ ರಿಗೆ ಅದೊಂದೂ ಕಾಣುವುದೇ ಇಲ್ಲ.

ಖಾವಿಂದ್:—ಏನೇನೋ ಹೇಳೋಣಾಗುತ್ತಿದೆ. ಆ ರಾಧೆಯು ದೌಲತ್ ರಾಣಿಯವರ ಜೊತೆ ಸೇರಿ ಮುಸಲ್ಮಾನಳೇ ಆಗಿಬಿಟ್ಟಿದ್ದಾಳೆ. ಆ ದೇಶದ ಹಿಂದುಗಳಿಗೆಲ್ಲಾ ಅವಳನ್ನು ಕಂಡರೆ ದ್ವೇಷ! ಆ ಜಾತಿ ಕೆ ರಾಣಿಯು ಸತ್ತರೂ ಕ್ಷೇಮವೆಂದು ಜನರಾಡಿಕೊಂಡಿದ್ದು ಅಲ್ಲಿ ನಾನೇ ಕಿವಿಯಾರ ಕೇಳಿ ದ್ದೇನೆ. ಬಲಾತ್ಕಾರವೆಲ್ಲಿ ಬಂತು. ಅವಳು ನನ್ನಲ್ಲಿ ಅನುರಕ್ತಳಾಗಿದ್ದಾಳೆಂದು ಅಂದು ಅವಳ ಮಾತಿನಿಂದ, ಹಾವ ಭಾವಗಳಿಂದ ಚೆನ್ನಾಗಿ ತೋರಿಸಿದಳು.

ಹುಜೂರ್:—ತಮ್ಮ ಕತ್ತಿಯನ್ನು ನಾನು ದೌಲತ್ ರಾಣಿಯವರಿಗೆ ಒಪ್ಪಿಸಲು ಮುಂದುವರಿದಾಗ, ಆ ರಾಧೆಯೇ ಬಂದು ನನ್ನ ಹಸ್ತ ಸ್ಪರ್ಶಮಾಡಿ ಅದನ್ನು ತೆಗೆದುಕೊಂಡು ಹೋಗಿ ದೌಲತ್ ರಾಣಿಗೆ ಒಪ್ಪಿಸಿದಳು. ಅದ

ರಿಂದಲೇ ಅವಳಿಗೆ ನನ್ನಲ್ಲಿ ಎಷ್ಟು ಪ್ರೇಮವಿದೆಯೆಂದು ನನಗೆ ಪ್ರತ್ಯಕ್ಷವಾಯಿತು. ಸ್ತ್ರೀಯರ ಹೃದಯವನ್ನು ಅಷ್ಟು ತಿಳಿಯುವ ಶಕ್ತಿ ಇಲ್ಲವೆ ನನಗೆ? ಹಿಂದೂ ಹೆಣ್ಣು. ಪ್ರೀತಿ ಇಲ್ಲದೇ ಮುಸಲ್ಮಾನನನ್ನು ಮುಟ್ಟುವಳೇ!

ಟಿಪ್ಪೂಸುಲ್ತಾನನು ನಗುತ್ತಾ ತಲೆದೂಗಿ, ಆಗಲಿ! ಮೀರ್ ಸಾದಕ್ । ನಿನ್ನ ಇಷ್ಟವನ್ನು ನೆರವೇರಿಸಿ ಕೊಡುತ್ತೇನೆ.

ಆ ಮಾತು ಕೇಳಿ ಮೀರ್‌ಸಾದಕನಿಗೆ ಸ್ವರ್ಗವೇ ಸಿಕ್ಕಿದಂತಾಯಿತು. ಇನ್ನೇನು ತಾನು ಏನಾದರೂ ತಂತ್ರಮಾಡಿ ರಾಧೆಯನ್ನು ಬಲಾತ್ಕರಿಸಿ ವಶಪಡಿಸಿಕೊಂಡರೂ ಭಯವಿಲ್ಲ. "ನನ್ನ ವಶವಾಗದಂತಹ ಮೂರ್ಖ ಹೆಣ್ಣೇ ಅವಳು। ಅಷ್ಟು ರೂಪವತಿಯಲ್ಲಿ ಮೃದುಹೃದಯವಿಲ್ಲದಿರುವುದೇ? ಬಲಾತ್ಕಾರವೇಕೆ? ಅಂದು ಅವಳಾಡಿದ ಮಾತಿನಲ್ಲಿ ಪ್ರಣಯ ಸ್ನಿಗ್ಧತೆಯಿಲ್ಲವೇ? ಆ ನೋಟದಲ್ಲಿ ಪ್ರಣಯಾನಲನ ಸಂಚಾಲನ ಇಲ್ಲವೇ? ಆ ಭಾವದಲ್ಲಿ ಪ್ರಣಯಾರ್ದ್ರತೆ ಇಲ್ಲವೇ? ಆ ನಗುವಿನಲ್ಲಿ ಪ್ರೇಮ ಭಾವವಿಲ್ಲವೆ, ಆ ವಯ್ಯಾರದಲ್ಲಿ ಪ್ರೇಮ ವಿಶ್ವಲತೆ ಇಲ್ಲವೆ? ರಾಧೆಯು ನನ್ನವಳೇ! ದೌಲತ್ತಳಿಗಾದರೂ ಪ್ರತಿಧ್ವಂದಿಗಳಾದ ಪ್ರಣಯಾಕಾಂಕ್ಷಿಗಳುಂಟು. ರಾಧೆಯು ಮಾತ್ರ ನನ್ನವಳೇ। ಎಂದುಕೊಂಡನು. ಅಷ್ಟರಲ್ಲಿ ಟಿಪ್ಪೂಸುಲ್ತಾನನು "ಇಯುಜ್ ಖಾನನ ಸಮಾಚಾರವೇನು? ನಗರದ ಭಂಡಾರದಲ್ಲಿ ಹಣವಿಲ್ಲವೆಂಬುದು ನಿಜವೆ?

ಜಹಾಪನಾ। ಭಂಡಾರದ ಮಾತು ನಿಶ್ಚಯವಾಗಿ ಹೇಳಲಾಗುವುದಿಲ್ಲ. ನಗರವು ಸಂಪದ್ಯುಕ್ತವಾದ ಶೀಮೆ।

ನವಾಬರ ಮಾತೇನು?

ಹುಜೂರು ನಮ್ಮಲ್ಲಿ ಬಹಳ ವಿಶ್ವಾಸವನ್ನು ತೋರಿದರು. ಮೈಸೂರಿನಲ್ಲಿ ಅವರಿಗೆ ಅತಿಶಯವಾದ ಅಭಿಮಾನವಿದೆ. ಸನ್ನಿಧಾನದಲ್ಲಿ ದೃಢವಾದ ಭಕ್ತಿ ವಿಶ್ವಾಸಗಳಿವೆ. ನನ್ನ ಕೈಯ್ಯಲ್ಲಿ ತಮಗೊಂದು ಗುಪ್ತ ಪತ್ರವನ್ನು ಕೊಟ್ಟಿದ್ದಾರೆ.

ಕಿಶೆಯಿಂದ ಪತ್ರವನ್ನು ತೆಗೆದು ಒಪ್ಪಿಸಿದನು.

ಸುಲ್ತಾನನು ನಸುನಗುತ್ತಾ ತೆಗೆದುಕೊಂಡನು, ಕಾಗದವನ್ನು ಬಿಚ್ಚಿ ಓದಿದನು.

ಟಿಪ್ಪೂ !

ನಗರವು ನಿನ್ನದು. ದೌಲತ್ತಳು ನನ್ನವಳು. ದೌಲತ್ತಳ ಆಶೆ ಇದ್ದರೆ ಪ್ರಾಣದ ಆಶೆಯನ್ನು ಬಿಟ್ಟುಬಿಡು! ಈ ಪಣವನ್ನು ಕಟ್ಟಿದವನು ನೀನು. ಸಾಧಿಸುವವನು ನಾನು.

" ಇಯುಜ್ "

ಈ ಕಾಗದವನ್ನು ಓದುತ್ತ ಓದುತ್ತ, ಶಬ್ದಶಬ್ದಗಳು, ಮಾತ-ಮಾತು ಗಳೂ, ಟಿಪ್ಪುವಿನ ಹೃದಯವನ್ನು ಕೀಲಿಸಿದವು. ಕ್ರೋಧದ ಜ್ವಾಲೆಗಳು ಸಿಡಿದೆದ್ದವು. ಮುಖವು ಗಂಭೀರವಾಯಿತು. ಕಣ್ಣು ಕೆಂಪಾಯಿತು. ಶರೀರವು ನಡುಗಲಾರಂಭಿಸಿತು. ಟಿಪ್ಪುವು ಕಾಗದವನ್ನು ಹರಿದು ಹಲ್ಲಿನಿಂದ ಕಡಿದು ಚೂರುಗಳನ್ನು ಚೆಲ್ಲುತ್ತಾ—

ಇಯುಜ್‌ಖಾನನು ಸಾಯಲೇಬೇಕು. ಅದು ನನ್ನ ಇಚ್ಛೆ! ನನ್ನ ಪ್ರತಿಜ್ಞೆ! ದೌಲತ್ತಳು ನನ್ನವಳು ಎಂದು ಹೇಳುತ್ತಾ ಅಂತಃಗೃಹಕ್ಕೆ ಹೊರಟು ಹೋದನು. ಮಿರ್‌ಸಾದಕನು ಆ ಕ್ರೋಧಮೂರ್ತಿಯನ್ನು ನೋಡಲಾರದೇ ಆ ಆವೇಶದಲ್ಲಿ ಎದುರಿಗೆ ನಿಲ್ಲಲಾರದೇ, ಮಾತನಾಡಿಸಲಾರದೇ, ಮನೆಗೆ ಹೊರಟುಹೋದನು.

ರಾತ್ರಿ ದರಿಯಾ ದೌಲತ್ತಿನಲ್ಲಿ ಮಂತ್ರಿಮಂಡಲವೆಲ್ಲಾ ಸೇರಿತು. ಮೇಲಿನ ಪಟ್ಟಾಂಗಣದಲ್ಲಿ ರಾಜ್ಯದ ಮುಖ್ಯಮಂತ್ರಿಗಳೂ, ದಿವಾನರುಗಳೂ, ಸೇನಾಧಿಪತಿಗಳೂ ಸುತ್ತುವರಿದು ಕುಳಿತಿದ್ದಾರೆ. ಸಭೆಯು ಅತ್ಯಂತ ಗುಪ್ತವಾದುದ್ದೆಂದು ಹುಕ್ಕುಂ ಆದಮೇರೆಗೆ ಕಟ್ಟುನಿಟ್ಟಾದ ಕಾವಲುಗಾರರು ಎಲ್ಲ ಬಾಗಿಲುಗಳಲ್ಲಿಯೂ ಕಾದಿದ್ದಾರೆ. ಸುಲ್ತಾನರವರೂ, ಮಂತ್ರಿ ಪೂರ್ಣಯ್ಯನವರೂ, ದಿವಾನ್ ಮಹಮ್ಮದ್‌ಖಾನರವರೂ ಅಂತಃಗೃಹದಿಂದ ಸಭಾಂಗಣಕ್ಕೆ ಬಂದರು. ಬಂದು ತಮ್ಮ ಆಸನಗಳಲ್ಲಿ ಕುಳಿತರು. ಸುತ್ತಲೂ ಪರದೆಗಳನ್ನು ಬಿಟ್ಟರು. ಪರದೆಯಿಂದಾಚೆ —ಕಾವಲುಗಾರರ ಕಾವಲು! ಸಭೆಯು ಬಹು ಬಿಗಿಯಾಗಿದೆ. ನಿಶ್ಶಬ್ದ! ಮೊದಲು ಸುಲ್ತಾನರವರೇ, ದಿವಾನ್ ಮಹಮ್ಮದ್ ಖಾನರನ್ನು ಕರೆದು ನಗರದ

ರಾಯಭಾರವನ್ನು ಮಂತ್ರಿಮಂಡಲಕ್ಕೆ ತಿಳಿಸೋಣವಾಗಲಿ! ಮಹಮದ್‌ಖಾನ ರೆದ್ದು ಸುಲ್ತಾನರಿಗೆ ಅಭಿವಂದಿಸಿ—

ಮಂತ್ರಿಮಂಡಲದ ಕಡೆ ತಿರುಗಿ—ನಗರಕ್ಕೆ ಹೋದ ರಾಯಭಾರಿಗಳನ್ನು ನವಾಬರು ಬಹಳ ಗೌರವದಿಂದ ಕಂಡರು. ಖಾವಂದರವರಲ್ಲಿ ಅತಿಶಯ ಭಕ್ತಿ ವಿಶ್ವಾಸಗಳನ್ನು ತೋರಿಸಿದರು. ಹಣವನ್ನು ಕೊಡಲಾಗುವುದಿಲ್ಲವೆಂದು ಸ್ಪಷ್ಟ ವಾಗಿ ಹೇಳಿ ನಮ್ಮನ್ನು ಹಿಂದಕ್ಕೆ ಕಳುಹಿಸಿದರು. ನಮ್ಮ ರಾಯಭಾರವು ವಿಫಲವಾಗಿ ಹೊರಟುಬಂದೆವು.

ಪೂರ್ಣಯ್ಯನವರೇ। ಆ ಕಾಗದವನ್ನು ಓದಿ ಇವರೆಲ್ಲರಿಗೂ ಅದರ ಅರ್ಥವನ್ನು ವಿವರಿಸೋಣವಾಗಲಿ!

ಪೂರ್ಣಯ್ಯನವರು ಓದಲಾರಂಭಿಸಿದರು—

ಷರ್ಹಾ-ಷಹಾ, ಮೈಸೂರಿನ ಸುಲ್ತಾನರವರೇ! ತಮ್ಮ ಆಜ್ಞಾಪತ್ರವನ್ನು ವಿಶ್ವಾಸಪೂರ್ವಕವಾಗಿ ಸ್ವೀಕರಿಸಿದೆನು. ತಾವು ದೊಡ್ಡ ನವಾಬರ ಉತ್ತರಾಧಿ ಕಾರಿಗಳು. ಅವರಿಗಿದ್ದ ಸಮಸ್ತ ಅಧಿಕಾರವು ಈಗ ತಮಗಿದೆ. ನಗರವು ತಮ್ಮದು. ನಾನು ಸುಲ್ತಾನರ ಕರ್ಮಚಾರಿ! ಕೋಟಿ ರೂಪಾಯಿಗಳನ್ನು ಒಪ್ಪಿಸಬೇಕೆಂದು ಆಜ್ಞೆಯಾಗಿದೆ. ನಗರದ ಬೊಕ್ಕಸದಲ್ಲಿದ್ದಿದ್ದರೆ ಅದನ್ನು ಸನ್ನಿಧಾನಕ್ಕೆ ಸಮರ್ಪಿಸತಕ್ಕದ್ದೇ! ಅದು ನಗರದ ಹತ್ತು ವರ್ಷಗಳ ರಾಜಾ ದಾಯ. ಅಷ್ಟು ಹಣ ಬೊಕ್ಕಸದಲ್ಲಿಲ್ಲವೆಂದು ಖಾವಂದರ ಚಿತ್ತಕ್ಕೆ ವೇದ್ಯವೇ ಇದೆ. ನಗರವೇನೋ ಭಾಗ್ಯದ ಬೀಡು! ನಾಡಿನಲ್ಲಿರುವ ಹಣವನ್ನು ನಾವು ಸೆಳೆದರೆ ಇದು ಅಪ್ರತ್ಯಕ್ಷವಾದ ಸುಲಿಗೆಯೇ ಸರಿ! ಹಾಗೆ ಸುಲಿಗೆ ಮಾಡುವುದು ರಾಜಧರ್ಮವಲ್ಲ. ಅದನ್ನು ನಾನು ಮಾಡಲಾರೆ. ಪ್ರಜೆಗಳನ್ನು ಸುಖದಿಂದ ಕಾಪಾಡುವ ಸಲುವಾಗಿ ದೊಡ್ಡ ಸುಲ್ತಾನರು ಇಲ್ಲಿ ನನ್ನನ್ನು ಇಟ್ಟಿದ್ದಾರೆ. ನಾನು ನಗರದ ಸ್ವತಂತ್ರ ನವಾಬನಲ್ಲ! ಸುಲ್ತಾನರ ಕರ್ಮಚಾರಿ! ಸುಲ್ತಾನ ರವರ ಕಡೆಯ ನುಡಿ "ಮೈಸೂರು ನಿಮ್ಮದು" ಎಂಬ ಮಾತನ್ನು ರಕ್ಷಿಸು ವುದು ನಮ್ಮೆಲ್ಲರ ಕರ್ತವ್ಯ. ರಾಜ್ಯದ ಹಿತಾಹಿತದ ಸಲುವಾಗಿ ತಮಗೆ ಎರಡು ಸ್ಪಷ್ಟ ಮಾತುಗಳನ್ನು ಹೇಳಬೇಕಾಗಿದೆ. ಹಿತಾಹಿತಗಳನ್ನು ಹೇಳುವುದು ನಮ್ಮ ಕರ್ತವ್ಯ! ಫಲಾಫಲಗಳನ್ನು ಅನುಭವಿಸುವುದು ರಾಜ್ಯದ ಅದೃಷ್ಟ!

ದೊಡ್ಡ ಸುಲ್ತಾನರು ಕಾಲವಾದ ಇಷ್ಟು ಕ್ಷಿಪ್ರಕಾಲದಲ್ಲಿ ಮೈಸೂರು ರಾಜ್ಯವು ಅಲ್ಲಕಲ್ಲೋಲವಾಗಿದೆ. ಮೊಟ್ಟಮೊದಲು ಖಾವಂದರವರು ದರ್ಬಾರುಮಾಡಿ ತಾವೇ ಮೈಸೂರಿನ ರಾಜರೆಂದುಕೊಂಡಿದ್ದು ತಪ್ಪು! ಮೈಸೂರು ಹಿಂದೂ ರಾಜ್ಯ. ಮೇಲೆ ರಾಜ್ಯದ ಕಟ್ಟಡವನ್ನು ನಾವು ಕಟ್ಟುತ್ತಿದ್ದರೂ, ಈ ರಾಜ್ಯಕ್ಕೆ ಹಿಂದುಗಳೇ ಅಡಿಗಲ್ಲು! ಆ ತಳಹದಿಯು ಸಿಡಿದು ಒಡೆದರೆ ಮೇಲಿನ ಕಟ್ಟಡವು ಮೊಗಚಿ ಬೀಳುತ್ತದೆ. ಮೈಸೂರಿನ ರಾಜರನ್ನು ಮೂಲೆಗೆ ಕೂಡಿಸಿದ್ದೇ ಹಿಂದೂಗಳಿಗೆಲ್ಲಾ ಅಸಮಾಧಾನ. ನಾವೇ ರಾಜರೆಂದುಕೊಂಡುಬಿಟ್ಟರೆ ದ್ವೇಷಾನಲವು ಏಳುತ್ತದೆ.

ದೊಡ್ಡ ನವಾಬರು ಗೆದ್ದ ರಾಜ್ಯವನ್ನು ಕಟ್ಟಬೇಕೆಂಬುದು ನ್ಯಾಯವಾದದ್ದು. ಅದಕ್ಕೆ ಎಲ್ಲರೂ ಒಪ್ಪುತ್ತಾರೆ. ರಾಜ್ಯವನ್ನು ಭದ್ರವಾಗಿ ಕಟ್ಟುವುದಕ್ಕೆ ಬೇಕಾದುದು ಪ್ರಜೆಗಳ ಪ್ರೀತಿ, ರಾಜ್ಯದ ಕಟ್ಟಡವು ನಿಲ್ಲುವುದು ಪ್ರಜಾಪಾಲನೆಯಿಂದ, ರಕ್ಷಣೆಯಿಂದ! ದೇಶದಲ್ಲಿ ಸುಖಶಾಂತಿಗಳು ನೆಲೆಗೊಳ್ಳದೆ ರಾಜ್ಯವನ್ನು ಕಟ್ಟುವುದೆಂದರೆ ಮರಳಿನ ಗೋಪುರವನ್ನು ಕಟ್ಟಿದಂತೆಯೇ ಸರಿ.

ಈಗ ರಾಜ್ಯದಲ್ಲೆಲ್ಲಾ ರಾಜಾಧಿಕಾರಿಗಳು ಕಪ್ಪಕಾಣಿಕೆಗಳನ್ನು ತಂದೊಪ್ಪಿಸಬೇಕೆಂದು ಫರಮಾನುಗಳನ್ನು ಹೊರಡಿಸಿವೆ. ಅದೂ ಅಪ್ರತ್ಯಕ್ಷವಾಗಿ ಪ್ರಜೆಗಳಿಂದಲೇ ಸುಲಿಗೆಯಾಗುತ್ತವೆ. ಇದೊಂದು ಸಾರಿ ಮಾತ್ರವಲ್ಲ. ನಮ್ಮ ಚಕ್ರಾಧಿಪತ್ಯವು ಸ್ಥಾಪಿತವಾಗುವವರೆಗೆ ಈ ಹಣವನ್ನು ಪ್ರತಿವರ್ಷವೂ ಅವರು ಕೊಡಲೇಬೇಕು. ಒಂದು ರೀತಿಯಲ್ಲಿ ಇದೂ ರಾಜ್ಯದ ಮೇಲೆ ದಂಡವನ್ನು ಹೊರಿಸಿದಂತೆಯೇ! ಇದಕ್ಕೆ ಪ್ರಜೆಗಳು ಒಪ್ಪುವುದಿಲ್ಲ. ಅಧಿಕಾರಿಗಳು ಬಲಾತ್ಕಾರ ಮಾಡುತ್ತಾರೆ. ಇಷ್ಟೇ ಅಲ್ಲ! ಈಗ ಹೊರಟಿರುವ ರಾಜಾಜ್ಞೆಯಂತೆ ಅಧಿಕಾರಿಗಳು ಪ್ರಜೆಗಳ ಆಸ್ತಿಪಾಸ್ತಿಗಳ ಮೇಲೆ ಕಣ್ಣಿಡುತ್ತಾರೆ. ಈ ಸುಲಿಗೆಗಳಿಂದ ರಾಜ್ಯದ ಅವಶ್ಯಕತೆಗಿಂತಲೂ ಅಧಿಕಾರಗಳ ಸ್ವಾರ್ಥವೇ ಹೆಚ್ಚು ಪೂರೈಸುತ್ತದೆ.

ಈಗ ಕಪ್ಪಕಾಣಿಕೆಗಳನ್ನು ತಂದೊಪ್ಪಿಸುವಂತೆ ಪಾಳಯಗಾರರಿಗೆ ಹುಕ್ಕುಂ ಹೊರಟಿದೆ. ಈ ನಗರದ ರಾಜ್ಯವು ಸತ್ವಶಾಲಿಗಳ ಪಾಳಯ. ಇಲ್ಲಿರುವವರು ವೀರರು, ಪರಾಕ್ರಮಿಗಳು. ಮಾನಕ್ಕಾಗಿ ಇಂದೂ ಪ್ರಾಣವನ್ನೊಪ್ಪಿಸಲು ಸಿದ್ಧರಾಗಿರುವವರು.

“ ಮೈಸೂರಿಗೆ ಸೈನ್ಯವು ಬೇಕಾದರೆ ನಾವು ಸೈನ್ಯವನ್ನು ತಂದು ಯುದ್ಧ ಮಾಡುತ್ತೇವೆ. ಮೈಸೂರಿಗೆ ಯುದ್ಧಭೂಮಿಯಲ್ಲಿ ನಮ್ಮ ಪ್ರಾಣಗಳನ್ನು ಒಪ್ಪಿಸುತ್ತೇವೆ. ಸೈನ್ಯವನ್ನು ಕಟ್ಟುವುದಕ್ಕೆ ಸುಲ್ತಾನರಿಗೆ ಹಣ ಕೊಡುವು ದೆಂದರೆ ಅದು ಹೇಡಿಗಳ ಲಕ್ಷಣ ” ಎಂದು ಹೇಳುತ್ತಾರೆ. ಅವರಮೇಲೆ ಯುದ್ಧದ ತೆರಿಗೆಯನ್ನು ಹೇರುವುದು ಸಾಧ್ಯವಿಲ್ಲ. ಹೇರಿದರೂ, ಅದನ್ನು ವಸೂಲು ಮಾಡುವ ಶಕ್ತಿಯು ನಮಗಿಲ್ಲ.

ದೊಡ್ಡ ಮಶೀದಿಯನ್ನು ಕಟ್ಟುವುದನ್ನು ನಿಲ್ಲಿಸಿಯೇಬಿಡಬೇಕೆಂದು ನನ್ನ ಸಲಹೆ! ಅದಕ್ಕೆ ಪ್ರಜೆಗಳು ಹಣ ಕೊಡಲು ಒಪ್ಪುವುದಿಲ್ಲ. ಈ ನಾನಾಮುಖ ವಾದ ಹಣದ ಸುಲಿಗೆಯಿಂದ ರಾಜ್ಯದಲ್ಲಿ ಕ್ಷೋಭೆಯೇಳುತ್ತದೆ.

ನಗರದ ರಾಜ್ಯದಲ್ಲಿರುವ ಪಾಳೆಯಗಾರರಿಗೆ ಸುಲ್ತಾನರವರಿಂದ ನೇರವಾಗಿ ಹುಕ್ಕುಂ ಬಂದುದು ಇದೇ ಮೊದಲು. ಇಲ್ಲಿಗೆ ನಗರದ ನವಾಬಗಿರಿಯು ಮುರಿದುಬಿದ್ದಂತೆಯೇ ಸರಿ!

ಹಿಂದೂಗಳ ಅಸಮಾಧಾನ ಅಧಿಕಾರಿಗಳ ಸುಲಿಗೆ, ಪ್ರಜಾಕ್ಷೋಭೆ, ಪರಾಕ್ರಮಶಾಲಿಗಳಾದ ಪಾಳಯಗಾರರ ಪ್ರತಿಭಟನೆ, ಇವಿಷ್ಟು ಅನಾಹುತಗಳು ಒಂದಕ್ಕೊಂದು ಸೇರಿಕೊಂಡರೆ ಮೈಸೂರು ರಾಜ್ಯವಾದರೂ ಉಳಿಯುವುದೇ ಎಂದು ಆಲೋಚಿಸೋಣವಾಗಲಿ. ಇದೆಲ್ಲಾ ಪರಾಂಬರಿಸೋಣವಾಗಲಿ. ಮಂತ್ರಿ ಮಂಡಲದಲ್ಲಿ ಆಲೋಚಿಸೋಣ, ರಾಜ್ಯದಲ್ಲಿ ಸುಖಶಾಂತಿಗಳು ನೆಲಸುವಂತೆ ರಾಜನೀತಿಯನ್ನು ಸ್ಥಾಪಿಸೋಣವಾಗಲಿ!

ಇತಿ, ಸುಲ್ತಾನರ ಸೇವಕ,
ಇಯಜ್ ಖಾನ್.

ಟಿಪ್ಪು:—ಮಂತ್ರಿಗಳ ಕಡೆ ತಿರುಗಿ, ಎಲ್ಲರೂ ಕೇಳಿದರಷ್ಟೆ! ಏನು ಹೇಳುತ್ತೀರಿ?

ಯಾರೂ ಮಾತನಾಡಲಿಲ್ಲ.

ದಿವಾನರೇ! ಮತ್ತೇನು ಹೇಳಿದರು ನಗರದ ನವಾಬರು?

ಮೈಸೂರಿಗೆ ಯುದ್ಧ ಸಂಭವಿಸಿದರೆ ನಗರದಿಂದ ಎರಡು ಲಕ್ಷ ಸೈನ್ಯ ವನ್ನು ಕೂಡಿಸಿ ತಂದು ತಾವೇ ಸ್ವತಃ ಯುದ್ಧ ಮಾಡುವುದಾಗಿಯೂ, ಅದಕ್ಕೆ

ಎಷ್ಟು ದ್ರವ್ಯ ಬೇಕಾದರೂ ತರುವುದಾಗಿಯೂ ಹೇಳಿದರು.

ಟಿಪ್ಪೂ:—ಆಹಾ! ಎಂಥಾ ಉದ್ಧತತರ ಮಾತಿದು! ನಮ್ಮ ದರ್ಬಾರು ತಪ್ಪಂತೆ! ಮಶೀದಿಯನ್ನು ಕಟ್ಟಬಾರದಂತೆ! ಹಿಂದೂಗಳಿಗೆ ಅಸಮಾಧಾನವಂತೆ! ಕಪ್ಪಕಾಣಿಕೆಗಳನ್ನು ಕೇಳುವುದು ಸುಲಿಗೆಯಂತೆ! ಪ್ರಜಾಕ್ಷೋಭೆಯಂತೆ! ನಗರದ ನವಾಬಗಿರಿಯು ಹೋಯಿತಂತೆ! ಮೈಸೂರು ರಾಜ್ಯವು ಮುರಿದು ಬೀಳುತ್ತದಂತೆ. ಎಂಥಾ ಒಳ್ಳೆಯ ಆಲೋಚನೆ. ಎಷ್ಟು ದಿಟ್ಟತನ ಇವರು ಸುಲ್ತಾನರ ಸೇವಕರಂತೆ. ಇಲ್ಲಿ ಪ್ರಭು ಭಕ್ತಿ! ಅಲ್ಲಿ ರಾಜಶಕ್ತಿ! ಇಯಜ್‌ಖಾನರು ಮಾತಿನಲ್ಲಿ ಸುಲ್ತಾನರ ಸೇವಕರು; ಎಂದುಕೊಂಡರೆ ನಮಗೆ ಬಂದ ಭಾಗ್ಯವೇನು? ಪಾಳೆಯಗಾರರೆಲ್ಲಾ ಪ್ರತಿಭಟಿಸುತ್ತಾರೆ ಎಂದು ಅವರು ಬರೆದೇ ಇದ್ದಾರೆ. ಅತ್ತ ಕಡೆಯ ಪಾಳೆಯಗಾರರನ್ನು ಎತ್ತಿಕಟ್ಟಿದ್ದಾರೆಂದೇ ಅರ್ಥ. ಇಂಗ್ಲೀಷರೊಡನೆ ಏನೋ ಸಂದಿ ಮಾಡಿಕೊಂಡಿದ್ದಾರೆ. ಇದುವರೆಗೂ ಆ ಸಂಗತಿಯನ್ನೇ ನಮಗೆ ತಿಳಿಯಿಸಲಿಲ್ಲ. ಫ್ರೆಂಚರು ನಮ್ಮ ಕಡೆಯವರಾದರೂ ನಗರದ ರಾಜ್ಯದಲ್ಲಿ ಫ್ರೆಂಚರ ರಕ್ಷಣೆಯಾಗದೇ ಓಡಿಹೋದರು. ಇದರ ಅರ್ಥವೇನು? ನಗರದಲ್ಲಿ ಎರಡು ಲಕ್ಷ ಸೈನ್ಯವಿದೆಯೆಂದು ನಮಗೆ ತಿಳಿಸುತ್ತಾರೆ. ಅದು ನಮ್ಮನ್ನು ಭಯಪಡಿಸುವ ಮಾತಲ್ಲವೋ?

ಇನ್ನೇನು ಬೇಕು. ಇದನ್ನೆಲ್ಲಾ ಸಹಿಸಿದರೆ ನಗರವೇ ರಾಜಧಾನಿ. ಐಯುಜ್ ಖಾನರೇ ಸುಲ್ತಾನರು. ಇನ್ನು ಆಲೋಚಿಸತಕ್ಕದ್ದೇನಿದೆ. ತಡ ಮಾಡಲು ಕಾರಣವೇನಿದೆ. ಮೈಸೂರು ಒಡೆದೇಹೋಯಿತು. ನಗರವು ಕೈಬಿಟ್ಟು ಹೋಯಿತು. ಪುನಃ ಯುದ್ಧ ಮಾಡಿಯೇ ಅದನ್ನು ಸ್ವಾಧೀನ ಮಾಡಿಕೊಳ್ಳಬೇಕು.

ನಗರದ ಮೇಲೆ ನಮ್ಮ ಐವತ್ತು ಸಹಸ್ರ ಸೈನ್ಯವು ಹೊರಡಲಿ. ಫ್ರೆಂಚರ ಐದು ಸಾವಿರ ಸೈನ್ಯವು ಹೊರಡಲಿ. ಮಹಮದ್‌ಖಾನರು ಸೈನ್ಯದ ಮೊಕ್ತೇಸರರಾಗಿ ಹೊರಡಲಿ. ನಗರವು ವೀರಭೂಮಿಯಂತೆ! ಮೈಸೂರಿಗೆ ಶಕ್ತಿ ಇದೆಯೋ ಇಲ್ಲವೋ ನೋಡೋಣ. ಪೂರ್ಣಯ್ಯನವರು ಪಟ್ಟಣದ ರಕ್ಷಣೆಯನ್ನು ವಹಿಸಲಿ. ಈ ಯುದ್ಧಕ್ಕೆ ನಾನೇ ಹೊರಡುತ್ತೇನೆ. ಮೈಸೂರಿಗೆ ಇಬ್ಬರು ಸುಲ್ತಾನರು ಇರಕೂಡದು. ನಾನು ಅಥವಾ ಖಾನನು, ಯಾರಾದರೂ ಸರಿ ಇಷ್ಟು ಮಾತುಗಳನ್ನು ಆಗ್ರಹದಿಂದ ಸುಲ್ತಾನನು ಹೇಳಿದನು. ಆ

ಮೈಸೂರು ಹುಲಿಯ ಘರ್ಜನೆಯನ್ನು ಕೇಳಿ ಮಂತ್ರಿಗಳ ದಿವಾನರ, ಸರದಾರರ ಹೃದಯಗಳು ನಡುಗಿದವು. ಎಲ್ಲರೂ ಕತ್ತಿಗಳನ್ನು ಹಿರಿದು ಎತ್ತಿ ಮುಜರೆ ಮಾಡಿದರು. ಅಪ್ಪಣೆಯನ್ನು ಪಡೆದು ಹೊರಟರು.

## ಇಯುಬ್ ಖಾನನ ರಾಜ್ಯತ್ಯಾಗ.

ಟಿಪ್ಪೂಸುಲ್ತಾನನು ಕತ್ತಿ ಎತ್ತಿ ಕಟ್ಟಿರುವ ಸಮಾಚಾರವು ಗೂಢಚಾರರ ಮುಖಾಂತರ ನಗರದ ನವಾಬನಿಗೆ ತಿಳಿಯಿತು. ಆದರಿಂದ ಖಾನನು ಸ್ವಲ್ಪವೂ ಚಲಿಸಲಿಲ್ಲ. ಅವನಿಗೆ ಆದೊಂದು ಮಹದ್ವಿಷಯವೇ ಅಲ್ಲ. ದೊಡ್ಡ ಸುಲ್ತಾನರ ಅಪ್ಪಣೆಯನ್ನು ಪಾಲಿಸುವುದಕ್ಕಾಗಿ ನವಾಬಗಿರಿಯನ್ನು ವಹಿಸಿದನು. ಇಂದು ಅದನ್ನು ಮೈಸೂರಿಗೆ ಒಪ್ಪಿಸುವುದಕ್ಕೆ ಅವನು ಹಿಂತೆಗೆಯುವವನೇ ಅಲ್ಲ. ಮೊದಲೇ ಎಲ್ಲವನ್ನು ಸಿದ್ಧಪಡಿಸಿಟ್ಟಿದ್ದನು. ಸಲ್ತಾನನು ಒಂದು ಲಕ್ಕೋಟಿಯನ್ನು ಬರೆದು ಓಲೇಕಾರನನ್ನು ಕಳುಹಿಸಿದ್ದರೇ ಸಾಕು. ಅದೇ ಲಕ್ಕೋಟಿಯಲ್ಲಿಯೇ ನಗರದ ನವಾಬಗಿರಿಯನ್ನು ಖಾನನು ಶ್ರೀರಂಗ ಪಟ್ಟಣಕ್ಕೆ ಮುಟ್ಟಿಸುತ್ತಿದ್ದನು. ಇದನ್ನು ಟೀಪ್ಪೂಸುಲ್ತಾನನು ಅರಿತಿರಲಿಲ್ಲವೆ? ಅವನೂ ಬಲ್ಲ! ಅವನಿಗೆ ನಗರವನ್ನು ವಶಪಡಿಸಿಕೊಳ್ಳುವುದೇ ಮುಖ್ಯವಲ್ಲ! ಖಾನನನ್ನು ಹಿಡಿದು ತರಬೇಕೆಂದು, ತಂದು ಸೆರೆಯಲ್ಲಿಡಬೇಕೆಂದು ಸುಲ್ತಾನನ ಹಠ! ಅದಕ್ಕಾಗಿ ಇಷ್ಟು ಪ್ರಯತ್ನ! ನಗರಕ್ಕಿಂತಲೂ ಮಿಗಿಲಾದ ವಸ್ತು ದೌಲತ್ ರಾಣಿ! ಅವಳನ್ನು ಕರತುವುದು ಸುಲ್ತಾನನಿಗೆ ಎಲ್ಲದಕ್ಕಿಂತಲೂ ಹೆಚ್ಚು! ಅಖಂಡ ಮೈಸೂರಿನ ಸಾಮ್ರಾಜ್ಯವನ್ನಾದರೂ, ಅವನು ಬಿಟ್ಟು ಕೊಡುತ್ತಾನೆ. ದೌಲತ್ತಳನ್ನು ಬಿಡಲಾರ. ಆ ಸಾಮ್ರಾಜ್ಞಿಯನ್ನು ಹೇಗಾದರೂ ಮಾಡಿ ಕರತರಲೇಬೇಕು. ಸುಲ್ತಾನನು ತಾನೇ ಖುದ್ದಾಗಿ ಹೊರಟಿರುವುದರ ರಹಸ್ಯವೇ ಇದು. ನಗರದ ನವಾಬನಿಗೆ ಮೈಸೂರಿನ ಸೈನ್ಯವು ಬರುವುದು ತಿಳಿದಿತ್ತು. ಸುಲ್ತಾನನೇ ಬರುವ ವಿಷಯಗೊತ್ತಿಲ್ಲ. ದೌಲತ್ತಳ ಆಶೆಯು ಸುಲ್ತಾನನನ್ನು ಸುಡುತ್ತಿದೆಯೆಂದು ಖಾನನು ಬಲ್ಲ. ಆದರೆ ಟಿಪ್ಪೂ ಸುಲ್ತಾನನಿಗೆ ನಗರದಲ್ಲಿ ಕಾಲಿಡುವ ಧೈರವಿಲ್ಲವೆಂದು ಖಾನನ ಭಾವನೆ. ನವಾಬನು ದಿವಾನ್ ಖಾಸಿಂ ಖಾನನ್ನು ಕರೆಸಿದನು.

“ ಖಾಸಿಂ ! ನಗರದ ಮೇಲೆ ಮೈಸೂರಿನ ಸೈನ್ಯವು ಬರುತ್ತಿರುವುದೆಂಬು ದನ್ನು ಬಲ್ಲೆಯಾ ?”

“ ಹುಜೂರು ! ಬಲ್ಲೆ. ಏನು ಹುಕ್ಕುಂ ಆಗುತ್ತದೆ ?”

“ ಆ ಸೈನ್ಯದೊಡನೆ ಯುದ್ಧ ಮಾಡುವೆಯಾ ?”

“ ಖಾವಂದರು ಈ ಸೇವಕನ ಮೇಲೆ ಅನುಗ್ರಹವಿಟ್ಟರೆ ಅದೆಷ್ಟರ ಕಾರ್ಯ ?”

“ ಪರಾಕ್ರಮಶಾಲಿಗಳಾದ ಮಹಮ್ಮದಾಲಿಯವರೊಡನೆ ಯುದ್ಧ ಮಾಡಬಲ್ಲೆಯಾ ?”

“ ಯುದ್ಧವು ಒದಗಿದರೆ ಮಹಮ್ಮದಾಲಿಯವರಾದರೇನು ? ಯಾರಾ ದರೇನು ?”

“ ಸ್ವಯಂ ಸುಲ್ತಾನರೇ ಬಂದು ನಿಂತರೆ !”

“ ಹುಜೂರು ! ಅವರ ಮೇಲೆ ಒಂದು ಕೈ ತೋರಿಸಬೇಕೆಂದು ಆಶೆಯಿದೆ.”

“ ಸುಲ್ತಾನರು ನಮ್ಮ ಪ್ರಭುಗಳಲ್ಲವೇ ?”

“ ತಾವು ನನ್ನ ಪ್ರಭು ! ತಮ್ಮ ಮಾತಿನ ಮೇಲೆ ಇಲ್ಲಿ ಯಾರ ಪ್ರಭುತ್ವವೂ ಇಲ್ಲ !”

“ ನಿನ್ನ ಶಕ್ತಿ ಸಾಮರ್ಥ್ಯಗಳನ್ನು ನಾನು ಬಲ್ಲೆ. ನಿನ್ನ ಉತ್ಸಾಹವನ್ನು ಬಲ್ಲೆ. ಮೈಸೂರು ರಾಜ್ಯವೂ ನಗರವೂ ಬೇರೆಬೇರೆಯಲ್ಲ. ಅವರದೇ ಈ ರಾಜ್ಯ. ನಾನು ರಕ್ತಪಾತವಿಲ್ಲದೆ ಅವರನ್ನು ಜಯಿಸಬೇಕೆಂದಿದ್ದೇನೆ. ಈ ನಗ ರದ ಆಡಳಿತವನ್ನು ನಿನಗೊಪ್ಪಿಸಿದ್ದೇನೆ. ಇಂದಿನಿಂದ ನೀನೇ ನಗರದ ನವಾಬ ನಾಗಿ ನನ್ನ ಅಧಿಕಾರವನ್ನೆಲ್ಲಾ ಚಲಾಯಿಸತಕ್ಕದ್ದು. ಇನ್ನು ಕೆಲವು ಕಾಲ ನಾನು ನಗರದಲ್ಲಿರುವುದಿಲ್ಲ. ಮೈಸೂರಿನ ಮಹಮದ್ ಆಲಿಯವರು ಬಲು ದೊಡ್ಡ ಮನುಷ್ಯರು. ಅವರು ದೊಡ್ಡ ಸುಲ್ತಾನರ ಬಲಗೈಯಂತೆ. ಅವರು ಬಂದು ನಿಂತರೆ ನಗರವನ್ನು ಅವರಿಗೊಪ್ಪಿಸಿಬಿಡು. ಅವರು ಹೇಳಿದಂತೆ ನೀನು ನಡೆಯತಕ್ಕದ್ದು. ಎಂದು ಆಜ್ಞಾಪಿಸಿ ಖಾನನಿಗೆ ಎಷ್ಟೋ ಸಮಾಧಾನ ಹೇಳಿ

ನಂಬಿಸಿ ಕಳುಹಿಸಿದನು. ಹೀಗೆ ಇಯಜ್‌ಖಾನನು ನಗರದ ನವಾಬಗಿರಿ ಯನ್ನು ಒಪ್ಪಿಸಿಬಿಟ್ಟನು. ಅಂದಿನಿಂದ ಅವನು ನಗರದಲ್ಲಿ ಅದೃಶ್ಯನಾದನು.

ಇದು ಕಾರ್ತಿಕ ಶುದ್ಧ ಪೂರ್ಣಿಮಾ. ಹಾಲು ಚೆಲ್ಲಿದಂತೆ ಬೆಳದಿಂಗಳು ವನಾಂಗಣವನ್ನೆಲ್ಲಾ ಬೆಳಗುತ್ತಿದೆ. ವನಕುಸುಮಗಳ ಪರಾಗಗಳನ್ನು ಹೊತ್ತು ಕೊಂಡು ಬಂದಿರುವ ವನವಾತವು ಸೋನಾಮಹಲಿನ ಮೇಲೆ ಸುಳಿದಾಡುತ್ತಿದೆ. ಮಹಲಿನಮೇಲೆ ಅಮೃತಶಿಲಾ ಮಂಟಪದಲ್ಲಿ ಮೆತ್ತನೆಯ ರತ್ನಕಂಬಳಿಯ ಮೇಲೆ ದೌಲತ್ತಳು ಕುಳಿತಿದ್ದಾಳೆ. ಅವಳ ಮುಂದೆ ಸಿತಾರು ಇಡಲ್ಪಟ್ಟಿದೆ. ಖಾನನು ದೌಲತ್ತಳ ಪಕ್ಕದಲ್ಲಿ ಕುಳಿತು ಚಿನ್ನದ ನಳಿಗೆಯನ್ನು ಹಿಡಿದು ಹುಕ್ಕಾಸೇವನೆ ಮಾಡುತ್ತಿದ್ದಾನೆ.

ಆ ಏಕಾಂತದಲ್ಲಿ, ಆ ಪ್ರಶಾಂತ ನಿಶಿಯಲ್ಲಿ, ಆ ಉಜ್ವಲ ಚಂದ್ರಾತಪದಲ್ಲಿ ದೌಲತ್ತಳು ಜಗನ್ಮೋಹಿನಿಯಾಗಿ ಕಂಗೊಳಿಸಿದಳು. ಇಂದು ಅವಳ ಮನವು ಹರ್ಷಪೂರ್ಣವಾಗಿದೆ. ಇಯಜ್‌ಖಾನನಿಗೆ ದೌಲತ್ತಳ ಸಾನ್ನಿಧ್ಯವೆಂದರೆ ಅದ ಕ್ಕಿಂತಲೂ ಮಿಗಿಲಾದ ಸ್ವರ್ಗವೇ ಇಲ್ಲ! ದೌಲತ್ತಳ ಆ ಲಾವಣ್ಯಮಯಿಾ ಮೂರ್ತಿಯನ್ನು ನೋಡಿ ನೋಡಿ, ಅವನ ಮನಸ್ಸಿನಲ್ಲಿ ಪ್ರೇಮವು ಉಕ್ಕು ತ್ತಿದೆ. ಅವರಿಬ್ಬರ ದೃಷ್ಟಿಗಳೂ ಕೂಡಿದುವು. ಇಬ್ಬರೂ ಮೌನ! ಮಾತಿ ಗಿಂತಲೂ ಮೌನವೇ ಮನೋಹರವಾಗಿತ್ತು! ಆ ಮೌನದಿಂದ; ಆ ದೃಷ್ಟಿ ವಿನಿಮಯದಿಂದ, ಮನಸ್ಸುಗಳು ಮುಗ್ಧವಾಗಿ ಇಬ್ಬರ ಮುಖದಲ್ಲಿಯೂ ಮಂದ ಹಾಸವು ಮೂಡಿತು! ಖಾನನು ಸ್ವಲ್ಪ ಸರಿದು ದೌಲತ್ತಳ ಸಮಿಾಪದಲ್ಲಿ ಭುಜಕ್ಕೆ ಭುಜ ತಗಲುವಂತೆ ಕೂತನು! ಖಾನನು ಮೃದುವಾಗಿ ದೌಲತ್ತಳ ಬೆನ್ನು ಚಪ್ಪರಿಸಿ; ದೌಲತ್! ಈ ಸೊಗಸಾದ ಬೆಳದಿಂಗಳಿನಲ್ಲಿ, ನಿನ್ನ ಕೋಮಲ ಕಂಠದಿಂದ ಗಾನವನ್ನು ಕೇಳಬೇಕೆನ್ನಿಸುತ್ತದೆ. ಎಷ್ಟೋ ದಿನ ಗಳಾಯಿತು.

ಖಾನನ ಕರಸ್ಪರ್ಶದಿಂದ ದೌಲತ್ತಳಿಗೆ-ರೋಮಾಂಚವಾಯಿತು. ಅವಳು ನಸುನಗುತ್ತಾ ಇಯಜ್! ಇಂದುಗಾನ ಮಾಡಬೇಕೆಂದೇ ಇಷ್ಟೊಂದು ಸಂಭ್ರಮ! ಈ ದಿನ ಸಂಧ್ಯಾಕಾಲದಿಂದಲೂ, ಮನದಲ್ಲಿ ರಾಗದ ಲಹರಿಗಳು ಏಳುತ್ತಿವೆ ಎಂದು ಹೇಳಿ—ಸಿತಾರನ್ನು ತೆಗೆದುಕೊಂಡು ನುಡಿಸಲಾರಂಭಿಸಿ

ದಳು. ದೌಲತ್ತಳ ದಿವ್ಯ ಕಂಠದಿಂದ ತರಂಗತರಂಗವಾಗಿ ಗಾನ ಸುಧೆಯು ಚಿಮ್ಮುತ್ತಿತ್ತು.

ಆ ಪ್ರಭಾಮಯವಾದ ಪ್ರಶಾಂತನಿಶಿಯಲ್ಲಿ, ಆ ಕ್ಷೀರಸಾಗರದಂತಹ ಚಂದ್ರಿಕಾವಿತಾನದಲ್ಲಿ, ಆ ಮಲಯಾನಿಲಸುರಭಿ ಆ ವನವಾತದಲ್ಲಿ; ಆ ಸುಂದರೋದ್ಯಾನವಿಲಾಸ ಸೌಧದಲ್ಲಿ; ಆ ಅಪ್ಸರೆಯ ಸಾನ್ನಿಧ್ಯದಲ್ಲಿ; ಆ ಸುಮನೋಹರವಾದ ಗಾನ ಮಾಧುರ್ಯದಲ್ಲಿ ಮಗ್ನನಾದ ಖಾನನು ಎಲ್ಲವನ್ನು ಮರೆತಿದ್ದಾನೆ. ತನ್ನನ್ನೇ ತಾನು ಮರೆತಿದ್ದಾನೆ. ಅವನ ಕಲ್ಪನಾ ಪ್ರಪಂಚದಲ್ಲಿ; ಆ ಪ್ರೇಮೋನ್ಮತ್ತವಾದ ಮನಸ್ಸೊಂದು. ಆ ಪ್ರಿಯ ದೌಲತ್ತಳೊಬ್ಬಳು. ಇವೆರಡು ಮಾತ್ರ ಕಾಣುತ್ತಿವೆ. ಆ ಮೋಹಿನಿಯ ಅಪ್ಸರ ಕಂಠದಿಂದ ಏಳುತ್ತಿರುವ ಗಾನಾಮೃತವು ಅವೆರಡನ್ನು ಒಂದಾಗಿ ಮಾಡಿಬಿಟ್ಟಿದೆ. ದೌಲತ್ತಳು ಸಿತಾರನ್ನು ಕೆಳಗಿಡುವಷ್ಟರಲ್ಲಿ ಖಾನನು ತನ್ನ ಬಾಹುಗಳಿಂದ ದೌಲತ್ತಳನ್ನು ಆಲಿಂಗಿಸಿ, ಆ ಪ್ರಸನ್ನ ಪ್ರೇಮ ಮುಖವನ್ನು ಚುಂಬಿಸಿಬಿಟ್ಟನು.

ಆ ಕೋಮಲ ಬಾಹುಲತೆಗಳು ಖಾನನ ಕಂಠವನ್ನು ಬಿಗಿದುವು. ಅವಳ ಸುಕುಮಾರ ಶರೀರವು ಖಾನನ ವಿಶಾಲ ವಕ್ಷಸ್ಥಳದಲ್ಲಿ ವಿರಾಜಿಸಿತು. ಕ್ಷಣ ಹೊತ್ತು ಆ ಪ್ರೇಮಾಲಿಂಗನ ಸುಖದಲ್ಲಿ, ಆ ಚುಂಬನದ ಉದ್ರೇಕದಲ್ಲಿ ಆ ಕೋಮಲಾಂಗಿಯ ಶರೀರವು ಕಂಪಿಸುತ್ತಿತ್ತು. ಅಂಗೈ ಬೆವರುತ್ತಿತ್ತು. ಮುಖವು ಕೆಂಪೇರಿತ್ತು. ಅಧರವು ಚಲಿಸುತ್ತಿತ್ತು. ಕಣ್ಣುಗಳು ತೇಲುತ್ತಿದ್ದುವು. ದೌಲತ್ತಳು ಮೈಮರೆತಳು.

ಗಗನಮಧ್ಯವನ್ನೇರಿದ ತಾರಾ ರಮಣನನ್ನು ನೋಡಿ ವನಾಂತರಾಳದಲ್ಲಿ ಚಕೋರ ಪಕ್ಷಿಯು ಕೂಗಿತು. ಅದು ದೌಲತ್ತಳ ಮನಸ್ಸನ್ನು ಆಕರ್ಷಿಸಿತು. ದೌಲತ್ತಳು ಖಾನನ ಬಾಹು ಬಂಧನದಿಂದ ಬಿಡಿಸಿಕೊಂಡು ನಿಂತಳು. ಅವನು ದೌಲತ್ತಳನ್ನು ತೇಲುವ ಕಣ್ಣುಗಳಿಂದ ನೋಡುತ್ತಾನೆ.

ಆ ಮಲಯಾನಿಲದಿಂದ ಹಾರಾಡುತ್ತಿರುವ ಗುಂಗುರು ಗುಂಗರಾದ ಕಪ್ಪನೆಯ ಕೇಶರಾಶಿಯನ್ನು ಮೃದುವಾದ ಬಾಹುಲತೆಯಿಂದ ಒತ್ತರಿಸಿ ಒಂದು ಕೈಯಿಂದ ಹಿಡಿದಿದ್ದಾಳೆ. ಆದರೂ ಆ ಕೇಶದಾಮವು ಭ್ರಮರಗಳ ಹಿಂಡಿನಂತೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹಾರಾಡುತ್ತಿದೆ. ಅಸ್ತ

ವ್ಯಸ್ತವಾದ ಎಣ್ಣೆಗೆಂಪು ಬಣ್ಣದ ಚೀನಾಂಬರವನ್ನು ಜಾರಿ ಬೀಳದಂತೆ ಮತ್ತೊಂದು ಕೈಯಿಂದ ಹಿಡಿದಿದ್ದಾಳೆ. ಆದರೂ ಮಲಯಾನಿಲವು ಆ ಸೂಕ್ಷ್ಮವಸನವನ್ನು ಓರೆಮಾಡಿ ಶರೀರ ಕಾಂತಿಯನ್ನು ಹೊರಸೂಸುತ್ತದೆ. ಪುನಃ ಆ ವಸನವು ಶರೀರವನ್ನು ಅಲಂಕರಿಸುತ್ತದೆ. ಹಾರುವ ಕಬರಿಯು— ಜಾರುವದುಕೂಲದ ಎಡಗಡೆಗೆ ವಾಲಿದ ಆಲಸವಾದ ಆ ಕೋಮಲ ಗಾತ್ರ! ಲಜ್ಜಾನ್ವಿತವಾದ ಮುಖದಲ್ಲಿ ಪ್ರೇಮದ ಕಿಡಿಗಳನ್ನು ಚಲ್ಲುತ್ತಿರುವ ಆ ವಿಶಾಲ ನೇತ್ರಗಳು ಪ್ರಣಯಪಾಶದಂತಿರುವ ಆ ಭ್ರೂಭಂಗಿ, ಮೊಗ್ಗುಗಳಂತಹ ದಂತ ಪಂಗ್ತಿಯಿಂದ. ಕಚ್ಚಿದ ಆ ಕೆಂದುಟಿ. ಮನೋಹರವಾದ ಆ ಮಂದಹಾಸ! ಈ ಭಾವವನ್ನು ನೋಡಿ ನೋಡಿ ಖಾನನು ಉನ್ಮತ್ತನಾದನು. ದೌಲತ್ತಳು ಹೊರಟುಹೋಗುವಳೆಂದು ಅವಳನ್ನು ಹಿಡಿದುಕೊಳ್ಳುತ್ತೇನೆಂದು ಅಂದು ಕೊಂಡು ಖಾನನು ಎದ್ದು ಬಂದನು. ಕೈ ಹಿಡಿಯುವಷ್ಟರಲ್ಲಿ ದೌಲತ್ತಳು ಫಣಿನಿಯಂತೆ ಭ್ರೂಭಂಗಮಾಡಿ ಎರಡು ಹೆಜ್ಜೆ ಹಿಂದಕ್ಕೆ ಸರಿದು ನಿಂತಳು. ಖಾನನು ಭಯದಿಂದ ಚಕಿತನಾದನು.

ದೌಲತ್:—"ಖಾನನೇ! ನನಗೆ ಕೊಟ್ಟ ವಾಗ್ದಾನವೆಲ್ಲಿ? ದೊಡ್ಡ ಸುಲ್ತಾನರು ನಿನ್ನಲ್ಲಿಟ್ಟ ನಂಬಿಕೆ ಎಲ್ಲಿ? ನಿನ್ನ ಈ ಉನ್ಮಾದಾವಸ್ಥೆಯಲ್ಲಿ ಯಾರಾದರೂ ಕಂಡರೆ ಏನಂದಾರು? ನಮ್ಮ ಏಕಾಂತವನ್ನು ರಾಧೆಯು ಏನೆಂದುಕೊಂಡಾಳು?

ಖಾ:—ದೌಲತ್! ದೌಲತ್! ಮನ್ನಿಸು! ಈ ಪ್ರಪಂಚವೆಲ್ಲವೂ ನನಗೆ ಜಡ! ನೀನೊಬ್ಬಳು ನನ್ನ ಮನಸ್ಸಿಗೆ ಚೇತನಸ್ವರೂಪಳು. ನಿನ್ನ ಮನಸ್ಸು ಖತಿಗೊಂಡರೆ ನನಗೆ ಸಹಸ್ರ ಸಹಸ್ರ ಫಣಿಗಳು ಕಡಿದಂತೆ. ದೌಲತ್! ನಾನು ತಪ್ಪು ಮಾಡಿದೆ. ಹತ್ತು ವರ್ಷಗಳಿಂದ ಕಾದ ಮನಸ್ಸು ಇಂದು ಉಕ್ಕಿ ಮೇರೆ ಮೀರಿತು. ನೀನು ಇಂದು ನನ್ನಲ್ಲಿ ಕರುಣಿಸಿದೆ. ನನ್ನ ದೌಲತ್ತಳ ಅದೇ ಪ್ರಣಯ ಮೂರ್ತಿಯನ್ನೇ ಮನಸ್ಸಿನಲ್ಲಿ ಪ್ರತಿಷ್ಠಿಸಿ, ಚಿರಕಾಲ ಆನಂದಸಾಮ್ರಾಜ್ಯವನ್ನು ಅನುಭವಿಸುತ್ತೇನೆ. ನನ್ನ ಈ ಜೀವನಕ್ಕೆಲ್ಲಾ ದೇವರು ಇದೊಂದು ದಿನದ ಸ್ವರ್ಗವನ್ನು ಕರುಣಿಸಿದ್ದನು. ಅದೂ ನಿನ್ನ ಅನುಗ್ರಹದಿಂದ. ಆ ದೇವರಿಗಿಂತಲೂ ನಿನ್ನ ಕರುಣೆಯು ಮಿಗಿಲಾದುದು. ನಾನು ತಪ್ಪು ಮಾಡಿದೆ. ವಚನಭ್ರಷ್ಟನಾದೆ ಸ್ವಾಮಿಯ ನಂಬಿಕೆಗೆ ಅಪಾತ್ರ

ನಾದೆ. ಆದರೆ ನಿನ್ನಿಂದ ಇಂದು ಪುರಸ್ಕೃತನಾಗಿದ್ದೇನೆ. ನೀನು ನನ್ನನ್ನು ಪ್ರೀತಿಸುತ್ತಿ. ನೀನಾಗಿ ಮದುವೆಗೆ ಒಪ್ಪುವವರೆಗೆ ನಿನ್ನ ಅಂಗ ಸ್ಪರ್ಶಮಾಡುವು ದಿಲ್ಲವೆಂದು ನಾನು ಮಾತುಕೊಟ್ಟಿದ್ದೆ. ನಿಜ! ಇನ್ನೆಷ್ಟು ದಿವಸಗಳು ಈ ನಶ್ವರ ಜೀವನವನ್ನು ಮರುಭೂಮಿಯಾಗಿ ಬೆಳೆಸಬೇಕೆನ್ನುವೆ? ಇಂದು ನೀನು ಪ್ರಸನ್ನಳಾಗಿದ್ದಿ! ಮದುವೆಯಾಗಲು ಅಪ್ಪಣೆಯನ್ನು ಕೊಡು. ನನ್ನ ಜೀವನವನ್ನು ಸಾರ್ಥಕಗೊಳಿಸು. ಈ ರಾಜ್ಯದ ಮಹಾರಾಣಿಯಾದ ನಿನ್ನ ಸೇವೆಯಲ್ಲಿ ಈ ಸುಖಮಯ ಜೀವಿತವನ್ನು ಕಳೆಯುವೆನು.

ದೌಲತ್ :—ನಗುತ್ತಾ; ಖಾ! ನಿನಗೆ ರಾಜ್ಯವಿಲ್ಲ, ಕೋಶವಿಲ್ಲ, ನನಗೆ ರಾಣಿಯ ಪದವಿಯು ಎಲ್ಲಿದೆ?

ಖತಿಯಿಂದ ಖಾನನ ಕಣ್ಣುಗಳು ಕೆಂಪಾದವು. ಶರೀರದಲ್ಲೆಲ್ಲಾ ಚೈತನ್ಯದ ಅಂದೋಳನವಾಯಿತು. ಬಾಹುಗಳು ನಿಟ್ಟೆರಿಸಿದವು.

ದೌಲತ್! ಏನು ಹೇಳಿದೆ? ರಾಜ್ಯವಿಲ್ಲ! ಯಾರಿಗೆ ರಾಜ್ಯವಿಲ್ಲ? ಈ ಸುವರ್ಣ ಭೂಮಿಯು ಯಾರದು? ನೀನು ಬೇಡವೆಂದೆ. ನಾನು ಬಿಟ್ಟೆ. ನಿನ್ನ ಪ್ರೇಮದ ಮುಂದೆ ನನಗೆ ಈ ರಾಜ್ಯವು ತೃಣ! ಅದು ನಿನಗೆ ಪ್ರೇಮ ಪುರಸ್ಕಾರ—ನಿನಗಾಗಿ—ನಿನ್ನ ಪ್ರೇಮಕ್ಕಾಗಿ—ಸಮಸ್ತವನ್ನೂ ತೊರೆದು ಗಿರಿ ಗುಹೆಗಳಲ್ಲಿ ವಾಸಮಾಡಬಲ್ಲೆ. ನಿನ್ನ ಸಾನ್ನಿಧ್ಯದಲ್ಲಿ ವನವಾಸವೂ ನನಗೆ ಸ್ವರ್ಗವೇ! ನಿನಗೆ ಬೇಕೆಂದರೆ ನಿನ್ನ ಮನಸ್ಸಿನ ಆರಾಧನೆಗೆ ಬೇಕೆಂದರೆ ಈ ಕತ್ತಿಯ ಧಾರೆಯಲ್ಲಿ ಸೆಳೆದು, ಈ ಅಖಂಡ ಮೈಸೂರನ್ನು ನಿನ್ನ ಪಾದಕ್ಕೊಪ್ಪಿಸ ಬಲ್ಲೆ! ಅದನ್ನೆದರಿಸಬಲ್ಲವರು ಅಖಂಡ ಭೂಮಂಡಲದಲ್ಲಿ ಯಾರಿದ್ದಾರೆ?

ದೌಲತ್ :—ನಗುತ್ತಾ ನಾನು ಬಲ್ಲೆ! ಆ ಪರಾಕ್ರಮವು ನಿನ್ನಲ್ಲಿದೆ ಯೆಂದೇ ದೌಲತ್ತಳು ಖಾನನ ಸಮೀಪಕ್ಕೆ ಬಂದು ಅವನ ಭುಜದಮೇಲೆ ಕೈಯಿಟ್ಟು—ಇಯಾಜ್ ಖಾ! ನೀನು ಅಂತಹ ಪರಾಕ್ರಮಶಾಲಿಯೆಂದು ನಾನು ಬಲ್ಲೆ. ಅದರಿಂದಲೇ ನಾನು ನಿನ್ನನ್ನು ಪ್ರೇಮಿಸುತ್ತೇನೆ. ನನ್ನಲ್ಲಿ ನಿನಗಿರುವ ಪ್ರೇಮವು ಅಮೋಘವಾದುದು. ನನ್ನ ಅಂತರಾತ್ಮವನ್ನು ನಿನ್ನಲ್ಲಿ ಸಮರ್ಪಿಸಿದ್ದೇನೆ. ಮೈಸೂರಿನಲ್ಲಿ ಸುಲ್ತಾನೀ ಸಾಮ್ರಾಜ್ಯವು ಸ್ಥಾಪಿಸಲ್ಪಟ್ಟ ಲ್ಲದೇ ನಾನು ಮದುವೆಯಾಗುವುದಿಲ್ಲವೆಂದು ಶಪಥಮಾಡಿದ್ದೇನೆ. ದೊಡ್ಡ

ನವಾಬರಿಗೆ ಅವರ ಮರಣ ಶಯ್ಯೆಯಲ್ಲಿ—ಪ್ರಮಾಣಮಾಡಿಕೊಟ್ಟಿದ್ದೇನೆ. ಸುಲ್ತಾನರ ಪಾದವನ್ನು ಮುಟ್ಟಿ ಪ್ರಮಾಣ ಮಾಡುವಾಗ—ಪ್ರಣಯಬದ್ಧ ವಾದ ನಮ್ಮಿಬ್ಬರ ಅಂತರಾತ್ಮ ಸಾಕ್ಷಿಯನ್ನು ಪಣವಾಗಿಟ್ಟೇ ಪ್ರಮಾಣ ಮಾಡಿದ್ದೇನೆ. ಅದು ನಿನಗೂ ಅನ್ವಯಿಸುತ್ತದೆ. ಈ ಸಾಮ್ರಾಜ್ಯವು ಸ್ಥಾಪಿತ ವಾಗುವವರೆಗೆ ಆ ಶಪಥವನ್ನು ನೀನೂ ಸಾಧಿಸಬೇಕು. ಆ ಪ್ರಮಾಣವನ್ನು ನೀನೂ ಪಾಲಿಸಬೇಕು.

ಖಾ :—ದೇವಿ ! ನಿನ್ನ ಪ್ರೀತಿಯೊಂದಿದ್ದರೆ—ಸಾಮ್ರಾಜ್ಯಸ್ಥಾಪನೆಯ ವರೆಗೇ ಏಕೆ—ಆಮರಣಾಂತವಾಗಿ ಈ ಕಠಿಣವ್ರತವನ್ನು ಪಾಲಿಸಬಲ್ಲೆ ! ನಿನ್ನ ಪ್ರಣಯ ಪಾಶಬದ್ಧನಾಗಿ—ನಿನ್ನ ಪ್ರೇಮಾಮೃತವನ್ನು ಹೃದಯದಲ್ಲಿಟ್ಟು ಕೊಂಡು, ನಿನ್ನ ಆಜ್ಞೆಯನ್ನು ಪಾಲಿಸುತ್ತೇನೆ.

ದೌಲತ್ತಳು ನಕ್ಕಳು !

ಆ ನಗುವಿನಲ್ಲಿ—ಪ್ರೀತಿ ಇದೆ. ಪ್ರಣಯವಿದೆ. ಸಂಕಲ್ಪವಿದೆ. ಸಿದ್ಧಿ ಇದೆ. ಶಪತವಿದೆ. ಪ್ರತಿಜ್ಞೆ ಇದೆ. ಸಾಮ್ರಾಜ್ಯದ ಜೀವಾಳವಿದೆ. ಸುಲ್ತಾನರ ದಿವ್ಯ ಸಂದೇಶವಿದೆ. ದೌಲತ್ತಳ ಪವಿತ್ರ ಅಭಯ ವಚನವಿದೆ. ಖಾನನ ಚೈತನ್ಯದ ಆವೇಶವಿದೆ. ಮನಃಸಂಯಮವಿದೆ. ಆ ನಗುವು ಖಾನನ ಮನಸ್ಸಿನಿಂದ—ಆಮರಣಾವಧಿ ಅಳಿಸಿಹೋಗಲೇ ಇಲ್ಲ! ಖಾನನು ಅಂಥಾ ನಗುವನ್ನು ಎಂದೂ ನೋಡಲೂ ಇಲ್ಲ. ಅದನ್ನು ಎಂದಿಗೂ ಮರೆಯಲೂ ಇಲ್ಲ !

ರಾಜ್ಯಭ್ರಷ್ಟನಾದ ಖಾನನು ಇಂದು ಸುಖಿ! ದೌಲತ್ತಳು ಅವನ ಪ್ರಣಯಿನಿ! ಅವನ ದೃಷ್ಟಿಯಿಂದ ದೌಲತ್ತಳು ಅವನ ಸಹಧರ್ಮಿಣಿ! ರಾಜ್ಯವು ಇದ್ದರೇನು ಹೋದರೇನು ? ಸಿಂಹಾಸನವು ಇಂದು ಟಿಪ್ಪುಸುಲ್ತಾನ ನದೂ ಅಲ್ಲ! ಇಯಜ್‌ಖಾನನದೂ ಅಲ್ಲ. ಅದು ವಿಧಿವಿಲಾಸದಲ್ಲಿ ನರ್ತಿಸು ತ್ತಿರುವ ಮಾಯಾ ನಟಿಯಂತೆ! ಆದರೆ ದೌಲತ್ತಳ ಪ್ರಣಯವು ಅಂತಹದಲ್ಲ ! ಅದು ಸ್ಥಿರ ಲಕ್ಷ್ಮಿಯಂತೆ ಇಯಜ್‌ಖಾನನದು. ಅದಕ್ಕಾಗಿ ಇಂದು ಅವನು ಸುಖಿ! ರಾಜ್ಯದ ರಾಜತ್ವವು ಅವನಲ್ಲಿಲ್ಲ. ಆದರೆ ರಾಜ್ಯ ನೌಕೆಯನ್ನು ರಕ್ಷಿಸಬಲ್ಲ—ಮುಳುಗಿಸಬಲ್ಲ ಹುಟ್ಟು ಅವನ ಕೈಯ್ಯಲ್ಲಿದೆ.

# ವೇಷಾಂತರದಲ್ಲಿ ಸುಲ್ತಾನರು.

ಶ್ರೀರಂಗಪಟ್ಟಣದಿಂದ ಸೈನ್ಯವು ಹೊರಟೇಬಿಟ್ಟಿತು. ಐವತ್ತು ಸಹಸ್ರ ಸೈನ್ಯ. ಮಹಮ್ಮದಾಲಿಯವರು ಮುಖ್ಯ ಸೇನಾಪತಿ! ದಾರಿಯುದ್ದಕ್ಕೂ ಅಷ್ಟೊಂದು ಸೈನ್ಯಕ್ಕೂ ಅಪಾರವಾದ ಸರಪರಾಜಾಗಲು ಏರ್ಪಾಡು ನಡೆದಿತ್ತು. ಮಹಮ್ಮದಾಲಿಯವರು ದಾರಿಯಲ್ಲಿ ಎಲ್ಲಿಯೂ ಸೈನಿಕರೂ ಕೊಳ್ಳೆ ಹೊಡೆಯ ಕೂಡದೆಂದೂ, ಸೂರೆ ಮಾಡಕೂಡದೆಂದೂ ಕಟ್ಟಾಜ್ಞೆ ಮಾಡಿದ್ದರು. ಅಗಾಧ ವಾದ ಸೈನ್ಯವು ಭೂಮಿಯ ಮೇಲೆ ನಡೆದುಹೋದಂತೆ, ಶ್ರೀರಂಗಪಟ್ಟಣದ ಸೈನ್ಯವು ನಗರದ ಕಡೆಗೆ ಹರಿಯುತ್ತಿತ್ತು. ಈ ಸೈನ್ಯವು ಇಪ್ಪತ್ತು ದಿವಸಗಳಲ್ಲಿ ಚಿತ್ರದುರ್ಗದಲ್ಲಿ ಬಂದು ಬೀಡುಬಿಟ್ಟಿತು. ಚಿತ್ರದುರ್ಗದ ನವಾಬರು ಬಲು ವಿಜೃಂಭಣೆಯಿಂದ ಆತಿಥ್ಯವನ್ನು ಏರ್ಪಡಿಸಿದ್ದರು. ಟಿಪ್ಪೂಸುಲ್ತಾನರ ಈ ಪಾಳಯವು ಅಲ್ಲಿ ಬೀಡುಬಿಟ್ಟಿತು. ಅಲ್ಲಿಂದ ನಗರಕ್ಕೆ ಹತ್ತು ಸಾವಿರ ಸೈನ್ಯ ದೊಂದಿಗೆ ಮಹಮ್ಮದಾಲಿಯವರು ನಗರಕ್ಕೆ ಹೋಗಿ ಅದನ್ನು ಸ್ವಾಧೀನಪಡಿಸಿ ಕೊಂಡು ಬರಬೇಕೆಂದೂ, ಇಯಜ್‌ಖಾನನ್ನು ಸೆರೆ ಹಿಡಿದು ತರಬೇಕೆಂದೂ, ಮುಖ್ಯ ಸೇನಾನಾಯಕರಾದ ಮಹಮ್ಮದಾಲಿಯವರಿಗೆ ಸುಲ್ತಾನನು ಅಪ್ಪಣೆ ಮಾಡಿ ಕಳುಹಿಸಿದನು.

ಮಹಮ್ಮದಾಲಿಯವರು ಸೈನ್ಯ ಸಮೇತವಾಗಿ ನಗರದ ಶೀಮೆಯನ್ನು ಹೊಕ್ಕರು. ಅಲ್ಲಿಯ ಪರಿಸ್ಥಿತಿಯು ಅವರಿಗೆ ಆಶ್ಚರ್ಯವನ್ನುಂಟುಮಾಡಿತು. ಪ್ರತಿಯೊಂದು ಸ್ಥಳದಲ್ಲಿಯೂ, ಬೇಕುಬೇಕಾದ ಪದಾರ್ಥಗಳೆಲ್ಲಾ ಸರಪರಾಜಾ ಗಿತ್ತು. ಸೈನ್ಯವು ಬೀಡುಬಿಡಲು ಸ್ಥಳಗಳು ಸಿದ್ಧಮಾಡಲ್ಪಟ್ಟಿದ್ದವು. ಹೀಗೆಯೇ ಮೊಕ್ಕಾಮುಗಳನ್ನು ಮಾಡುತ್ತಾ ಮಹಮ್ಮದಾಲಿಯವರು ನಗರದ ಸಮೀಪ ವನ್ನು ಸೇರಿದರು. ನಗರಕ್ಕೆ ಐದು ಮೈಲು ದೂರದಲ್ಲಿ ಬ್ರಹ್ಮಾಂಡವಾದ ಶಿಬಿರವು ಇಳಿಯಲು ಡೇರೆಗಳು ಸಿದ್ಧವಾಗಿದ್ದವು. ಆಹಾರ ಸಾಮಗ್ರಿಗಳೆಲ್ಲಾ ಸಿದ್ಧವಾಗಿದ್ದವು. ಬೇಹುಕಾರರು ಬಂದು ಹಿಂದಿನ ಮೊಕ್ಕಾಮಿನಲ್ಲಿಯೇ ಈ ಆತಿಥ್ಯದ ಸಿದ್ಧತೆಯನ್ನು, ಸೇನಾಪತಿಗಳಿಗೆ ಅರಿಕೆ ಮಾಡಿದರು. ಅಲ್ಲಿ ದಿವಾ

ಖಾಸಿಂ ಆಲಿಯವರು ಸಕಲ ರಾಜಮರ್ಯಾದೆಗಳೊಡನೆ ಎದುರುಗೊಳ್ಳಲು ಕಾದಿದ್ದಾರೆಂದು ತಿಳಿಯಿತು. ಇದನ್ನೆಲ್ಲಾ ಕೇಳಿ ಮಹಮ್ಮದಾಲಿಯವರು ದಿಗ್ಭ್ರಾಂತರಾದರು. ನಗರದ ನವಾಬರಾದ ಇಯಜ್ ಖಾನರು ಎಂಥಾ ಚಾತುರ್ಯವನ್ನು ಮಾಡಿದ್ದಾರೆ? ನಾವು ನಗರದ ಶೀಮೆಗೆ ಕಾಲಿಟ್ಟಾಗಿನಿಂದ ಸಾಕ್ಷಾತ್ ಸುಲ್ತಾನರವರಿಗೆ ಆಗುವ ಏರ್ಪಾಡುಗಳು ನಮಗೆ ಆಗಿವೆ. ಇಷ್ಟೊಂದು ಮರ್ಯಾದೆಯಿಂದ ನಡೆದುಕೊಳ್ಳುತ್ತಿರುವ ಇಯಜ್ ಖಾನರೊಡನೆ ನಾನೆಂತು ಯುದ್ಧ ಮಾಡುವುದು? ನನ್ನ ಜನ್ಮದಲ್ಲಿಯೇ ಇಂಥಾ ಸಂದಿಗ್ಧವು ಪ್ರಾಪ್ತವಾಗಿರಲಿಲ್ಲವಲ್ಲಾ! ಸ್ವಯಂ ಸುಲ್ತಾನರೇ ಬರಲೆಂದು ಹೇಳಿಕಳುಹಿಸಿಬಿಡಲೇ? ಎಂದು ಮಹಮ್ಮದಾಲಿಯವರು ಆಲೋಚನೆ ಮಾಡತೊಡಗಿದರು. ಮುಂದೆ ಬರುತ್ತಲೇ, ಖಾಸಿಂ ಆಲಿಯವರು ಬಂದು ಸೇನಾಧಿಪತಿಗಳನ್ನು ಎದುರುಗೊಂಡರು. ಆ ಬಿಡಾರಕ್ಕೆ ಚಿತ್ತೈಸಬೇಕೆಂದು ಬಿನ್ನಯಿಸಿಕೊಂಡರು. ಸೈನ್ಯ ಸಮೇತವಾಗಿ ಮಹಮ್ಮದಾಲಿಯವರು ಅಲ್ಲಿ ಬಂದು ಬಿಡಾರ ಮಾಡಿದರು. ಖಾಸಿಂ ಆಲಿಯವರೊಡನೆ ಕುಶಲ ಪ್ರಶ್ನೆಗಳಾದ ಮೇಲೆ—ತಾವು ಈ ದಿನವೇ ಇಯಜ್ ಖಾನರ ಭೇಟಿ ಮಾಡಬೇಕೆಂದು ತಿಳಿಸಿದರು. ಖಾಸಿಂ ಆಲಿಯವರು ನಗರದ ನವಾಬರು ರಾಜ್ಯಪರಿತ್ಯಾಗ ಮಾಡಿ, ಹೊರಟುಹೋಗಿ ಒಂದು ತಿಂಗಳಾಯಿತೆಂದೂ, ತಾವು ದಯಮಾಡಿಸಿದರೆ ನಗರದ ರಾಜ್ಯವನ್ನು ತಮಗೆ ಒಪ್ಪಿಸಿಬಿಡಬೇಕೆಂದು ಅಪ್ಪಣೆಮಾಡಿ ಅವರು ಹೊರಟುಹೋದರೆಂದು ತಿಳಿಸಿದರು. ಮಹಮ್ಮದಾಲಿಯವರಿಗೆ ದಿಕ್ಕು ತೋಚದಂತಾಯಿತು. ಅವರು ಮಾತನಾಡಲಿಲ್ಲ. ಕಣ್ಣುಗಳಲ್ಲಿ ನಿರಾಶೆಯ ಚಿತ್ರವು ಕಟ್ಟಿದಂತಿತ್ತು. ಮುಖವು ಸಪ್ಪಗಾಯಿತು. ಅವರು ದೀರ್ಘ ನಿಶ್ವಾಸವನ್ನು ಬಿಟ್ಟರು. ಅದೇ ದಿನ ಮಧ್ಯಾಹ್ನ ರಾಜವೈಭವದೊಂದಿಗೆ ನಗರವನ್ನು ಪ್ರವೇಶಿಸಿದರು. ಅರಮನೆಗೆ ತಲಪಿದರು. ಖಾಸಿಂ ಆಲಿಯವರ ಪ್ರಾರ್ಥನೆಯಂತೆ ಆ ಅರಮನೆಯಲ್ಲಿಯೇ ಬಿಡಾರ ಮಾಡಿದರು. ಖಾಸಿಂ ಆಲಿಯವರು ನಗರದ ಮುದ್ರೆಯುಂಗರವನ್ನು ತಂದೊಪ್ಪಿಸಿದರು. ಮೈಸೂರು ಸುಲ್ತಾನರು ಯುದ್ಧಸನ್ನದ್ಧರಾಗಿ ಬಂದರು. ನಗರದ ನವಾಬರು ನಗರವನ್ನು ಕಾಣಿಕೆಯಾಗಿ ಒಪ್ಪಿಸಿದರು. ಮುಂದೇನು ಮಾಡಬೇಕು? ಮಾರನೆಯ ದಿನವೇ ಸುಲ್ತಾನರಿಗೆ ಬಿನ್ನವತ್ತಳೆಯನ್ನು ಬರೆದು ನಗರವು ಸ್ವಾಧೀನವಾದ ರೀತಿಯನ್ನು ತಿಳಿಸಿದರು.

ಎರಡು ಮೂರು ತಿಂಗಳಾಯಿತು. ಎಷ್ಟೋ ಶೋಧನೆ ಮಾಡಿಸಿದರು. ಇಯಜ್‌ಖಾನರ ಸುಳಿವೇ ಸಿಕ್ಕಲಿಲ್ಲ. ಸೋನಾಮಹಲಿಗೆ ಹೋಗಿ ದೌಲತ್ ರಾಣಿಯವರ ಭೇಟಿ ಮಾಡಿದರು. ಅವರಿಂದ ಏನೂ ವಿಶೇಷ ಸಮಾಚಾರ ತಿಳಿಯಲಿಲ್ಲ. ದೌಲತ್ ರಾಣಿಯ ಪ್ರಾರ್ಥನೆಯಂತೆಯೇ ಇಯಜ್‌ಖಾನರು ರಾಜ್ಯತ್ಯಾಗ ಮಾಡಿದರೆಂದು ಗೊತ್ತಾಯಿತು. ಇಯಜ್‌ಖಾನರು ನಗರದ ಶೀಮೆಯಲ್ಲಿಲ್ಲವೆಂದು ಖಚಿತವಾಯಿತು. ಇದನ್ನೆಲ್ಲಾ ಓಲೆಕಾರರ ಮೂಲಕ ಟಿಪ್ಪೂಸುಲ್ತಾನರಿಗೆ ಪುನಃ ಭಿನ್ನಹ ಮಾಡಿದರು. ಆದರೆ ಆತಂಕವಿಲ್ಲದೇ ಇರಲಿಲ್ಲ. ಇಂಗ್ಲಿಷರ ಸೈನ್ಯವು ಮಂಗಳೂರನ್ನು ವಶಪಡಿಸಿಕೊಂಡು, ನಗರವನ್ನು ಹಿಡಿಯಲು ಬರುತ್ತಿದೆಯೆಂದು ವರ್ತಮಾನ ಬಂತು. ಇಯಜ್‌ಖಾನರು ಇಂಗ್ಲಿಷರೊಡನೆ ಸೇರಿಕೊಂಡಿರಬಹುದೇ ? ಎಂಬ ಸಂದೇಹವು ತಲೆದೋರಿತು. ಅವರು ರಾಜ್ಯತ್ಯಾಗ ಮಾಡಿದ ವಿಧಾನವನ್ನು ಕೇಳಿ, ರಾಜ್ಯವನ್ನು ಒಪ್ಪಿಸಿದ ಪರಿಯನ್ನು ನೋಡಿ, ಆ ಸಂದೇಹಕ್ಕೆ ಆಸ್ಪದವಿಲ್ಲವೆಂದುಕೊಂಡರು. ನಗರದ ರಕ್ಷಣೆಗೆ ಖಾಸಿಂ ಅಲಿಯವರನ್ನೇ ನೇಮಿಸಿ ತಾವು ಇಂಗ್ಲಿಷ್ ದಂಡನ್ನು ಎದರಿಸಲು ಹೋದರು.

ಇತ್ತ ಟಿಪ್ಪೂಸುಲ್ತಾನರವರಿಗೆ ನಗರದ ಸಮಾಚಾರವೆಲ್ಲಾ ತಿಳಿಯಿತು. ಅವರು ಬಹಳ ಆಲೋಚಿಸಿದರು. ಏನೂ ಬಗೆ ಹರಿಯಲಿಲ್ಲ. ಇರಲಿ! ನಗರವು ನಮ್ಮ ಕೈವಶವಾಯಿತು. ಇಯಜ್‌ಖಾನನು ಹೇಡಿ! ಓಡಿಹೋಗಿದ್ದಾನೆ. ದೌಲತ್ತಳು ನಗರದಲ್ಲಿಯೇ ಇದ್ದಾಳೆ. ಅವಳನ್ನು ಹೇಗಾದರೂ ಮಾಡಿ ಕರತಂದರೆ ತನ್ನ ಕಾರ್ಯವಾಯಿತು ಎಂದುಕೊಂಡರು. ಆ ದಿನವೇ ಅಲ್ಲಿ ಪಾಳಯದ ವ್ಯವಸ್ಥೆಯನ್ನೆಲ್ಲಾ ಮಾಡಿ, ತಾವು ಗುಪ್ತವಾಗಿ ನಗರಕ್ಕೆ ಪ್ರಯಾಣಮಾಡಿದರು. ಅವರ ಜೊತೆಯಲ್ಲಿ ಸುಮಾರು ಐವತ್ತು ಮಂದಿ ಮಾತ್ರ ಹೊರಟರು. ಟಿಪ್ಪೂಸುಲ್ತಾನರು ವೇಷವನ್ನು ಮರಸಿಕೊಂಡು ವ್ಯಾಪಾರಿಗಳ ವೇಷದಲ್ಲಿ ನಗರಕ್ಕೆ ಹೋದರು. ನಗರದ ದಕ್ಷಿಣ ಕಡೆ ಒಂದು ಹಾಳು ಮಂಟಪ! ಈ ವ್ಯಾಪಾರಿಗಳು ಅಲ್ಲಿ ಬಿಡಾರಮಾಡಿದರು. ಸುಲ್ತಾನರು ಒಂದು ಮ್ಯಾನಾದಲ್ಲಿ ಕುಳಿತುಕೊಂಡುಹೋಗಿದ್ದರು. ಆ ಮ್ಯಾನಾವನ್ನು ಪೊದೆಯಲ್ಲಿಟ್ಟು ಸೊಪ್ಪು ಮುಚ್ಚಿದರು. ಸುತ್ತಲೂ ಕುದುರೆಗಳನ್ನು ಕಟ್ಟಿ ಹಾಕಿದರು. ಆ ಮಂಟಪದಲ್ಲಿ ಘೋಷಾ ಹೆಂಗಸರು ಇರುವಂತೆ ಘರದೆಗಳನ್ನು

ಕಟ್ಟಿದರು. ಅದರಲ್ಲಿ ಸುಲ್ತಾನರು ಹಗಲೆಲ್ಲಾ ವಿಶ್ರಮಿಸಿಕೊಂಡರು. ಸಂಧ್ಯಾಕಾಲದಲ್ಲಿ ಸುಲ್ತಾನರ ಕಡೆಯವರು ವರ್ತಕರಂತೆ ವೇಷ ಹಾಕಿಕೊಂಡು ನಗರದಲ್ಲೆಲ್ಲಾ ತಿರುಗಾಡಿದರು. ಕಾವಲುಗಾರರು ಅವರನ್ನು ಹಿಡಿದರು. ಈಗ ನಗರದಲ್ಲಿ ಯುದ್ಧ ಸಮಯ! ವರ್ತಕರಿದ್ದರೆ ಸೈನಿಕರು ಸೂರೆ ಮಾಡಬಹುದೆಂದೂ ಅವರು ಹೊರಟುಹೋಗಬೇಕೆಂದೂ, ನಗರ ರಕ್ಷಕರು ತಿಳಿಸಿದರು. ಅವರು ನಗರವಲ್ಲೆಲ್ಲಾ ಸುತ್ತಿಕೊಂಡು ರಾತ್ರಿ ತಾವು ಇಳಿದಿದ್ದ ಸ್ಥಳಕ್ಕೆ ಬಂದರು. ಊರಿನ ಸಮಾಚಾರದಲ್ಲಿ ಇಯಜ್‌ಖಾನರು ನಗರ ಶೀಮೆಯಲ್ಲೇ ಇದ್ದಾರೆಂದೂ, ಅವರೇ ರಾಜ್ಯವಾಳುತ್ತಿದ್ದಾರೆಂದೂ, ನಗರವನ್ನು ಸುಲ್ತಾನರವರಿಗೆ ಒಪ್ಪಿಸಿರುವ ರಹಸ್ಯವು ಅಭೇದ್ಯವಾಗಿದೆಯೆಂದೂ ತಿಳಿಸಿದರು. ಇದೆಲ್ಲಾ ಸುಲ್ತಾನರ ಮನಸ್ಸನ್ನು ಕಲಕಿತು. ಪ್ರಾತಃಕಾಲ ಈ ವರ್ತಕರು ಜವಾಹಿರಿಗಳನ್ನು ತೆಗೆದುಕೊಂಡು ದರಿಯಾಬಾಗಿಗೆ ಹೋದರು. ಅಲ್ಲಿ ಡಳಾಯಿತರು ಎಲ್ಲರನ್ನೂ ಆದರಿಸಿ ಹಜಾರದಲ್ಲಿ ಕುಳ್ಳಿರಿಸಿದರು. ಸ್ವಲ್ಪ ಹೊತ್ತಿನೊಳಗಾಗಿ ರಾಧೆಯೂ, ಕೃಷ್ಣವೇಣಿಯೂ ಬಂದು ಈ ವ್ಯಾಪಾರಿಗಳಿಗೆ ಭೇಟಿ ಕೊಟ್ಟರು. ರಾಧೆಯು ವರ್ತಕರನ್ನು ಯಾವ ದೇಶದವರೆಂದು ಪ್ರಶ್ನೆ ಮಾಡಿದಳು. ಅವರು ತಾವು ಹೈದರಾಬಾದಿನ ವರ್ತಕರೆಂದು ತಿಳಿಸಿದರು. ಒಂದೊಂದಾಗಿ ಒಡವೆಗಳನ್ನು ಬಿಚ್ಚಿ ತೋರಿಸಿದರು. ರಾಧೆಯು ಎಲ್ಲವನ್ನೂ ನೋಡಿದಳು. ಕೆಲವು ಒಡವೆಗಳನ್ನು ಚುನಾಯಿಸಿ ತೆಗೆದಿಟ್ಟಳು. ಎಲ್ಲರನ್ನೂ ಬಹು ವಿಧವಾಗಿ ಮಾತನಾಡಿಸಿದಳು. ಒಬ್ಬ ವ್ಯಕ್ತಿಯು ಮಾತನಾಡಲಿಲ್ಲ. ಅವನ ಗಾಂಭೀರ್ಯವನ್ನೂ ಮುಖಲಕ್ಷಣವನ್ನೂ ನೋಡಿದರೆ ಸಾಮಾನ್ಯ ಪುರುಷನಂತೆ ತೋರಲಿಲ್ಲ. ರಾಧೆಯು ಅವನನ್ನು ಬಹಳವಾಗಿ ದಿಟ್ಟಿಸಿ, ನೋಡಿದಳು. ಒಂದೆರಡು ಬಾರಿ ಮಾತನಾಡಿಸಿದಳು. ಅವನು ಮಾತನಾಡಲಿಲ್ಲ. ವ್ಯಾಪಾರವೆಲ್ಲಾ ಮುಗಿಯಿತು. ಬಹಳ ಚೌಕಾಶಿ ಮಾಡಿ ಬೆಲೆಯನ್ನು ಗೊತ್ತುಮಾಡಿದಳು. ಮಾರನೆಯ ದಿನ ಬಂದು ಹಣವನ್ನು ತೆಗೆದುಕೊಂಡು ಹೋಗಬಹುದೆಂದು ಹೇಳಿ ಹಜಾರದಿಂದ ಹೊರಡಲು ಅನುವಾದಳು. ಅಷ್ಟರಲ್ಲಿ ವರ್ತಕನೊಬ್ಬನು—

ಬೇಗಂ ಸಾಹೇಬ್! ತಾವೇ ದೌಲತ್ ರಾಣಿಯವರೋ? ಎಂದು ಪ್ರಶ್ನೆ ಮಾಡಿದನು.

ಅಲ್ಲ! ನಾನು ಅವರ ಗೆಳತಿ!

ನಮಗೆ ಅವರ ಭೇಟಿ ಮಾಡಿಸಿದರೆ ಬಹಳ ಮೆಹರ್ಬಾನಿ ಆಗುತ್ತೆ.

ಅವರೇನು ನಗಗಳನ್ನು ಕೊಳ್ಳುವುದಿಲ್ಲ. ನಾನೇ ಬೇಕಾದಷ್ಟು ವ್ಯಾಪಾರ ಮಾಡಿದ್ದೇನಲ್ಲ!

ಇಲ್ಲ! ತಾಯಿ! ನಾವು ಅವರ ಭೇಟಿ ಮಾಡಬೇಕೆಂದು ಬಹಳ ಇಷ್ಟವುಳ್ಳವರಾಗಿದ್ದೇವೆ. ಅವರು ಬಹಳ ಧರ್ಮಿಷ್ಟರೆಂದೂ, ದಾನ ಮಾಡುವವರೆಂದೂ ಕೇಳಿದ್ದೇವೆ.

ದಾನಧರ್ಮಕ್ಕೆ ನೀವು ಫಕೀರರಲ್ಲ! ಸನ್ಯಾಸಿಗಳಲ್ಲ! ಭಿಕ್ಷುಕರಲ್ಲ!

ಅಲ್ಲ ತಾಯಿ! ಅವರ ದರ್ಶನ ಮಾತ್ರ!

ಇಲ್ಲ! ಅವರು ಇಲ್ಲಿ ಇಲ್ಲವೇ ಇಲ್ಲ ಎಂದು ಹೊರಟುಹೋದಳು.

ವರ್ತಕರು ನಿರಾಶರಾಗಿ ಹೊರಟರು. ಆ ಸೋನಾಮಹಲಿನ ವೈಭವವನ್ನು ನೋಡಿ ಅವರು ಬೆರಗಾಗಿಹೋದರು. ಆ ರಾಧೆಯು ವಿಭ್ರಮವಂತೂ ಅವರನ್ನು ಬೆಪ್ಪರಂತೆ ಮಾಡಿಬಿಟ್ಟಿತು. ಅವರ ಮುಖಂಡನು—ಮತ್ತಾರೂ ಅಲ್ಲ! ಸ್ವಯಂ ಟಿಪ್ಪೂಸುಲ್ತಾನ್ ಅವನ ಮನಸ್ಸಿನ ಮೇಲೆ ಎಷ್ಟೋ ಕಲ್ಪನೆಗಳು ಬಂದವು. ಆ ಮನೆಯಲ್ಲಿಯೇ ದೌಲತ್ ರಾಣಿ ಇದ್ದಾಳೆ. ಅಲ್ಲಿಯೇ ಇಯಜ್‌ಖಾನನು ಅಜ್ಞಾತವಾಸ ಮಾಡುತ್ತಿದ್ದಾನೆ. ಇಂದಿನ ದಿನವೇ ಈ ಸೋನಾಮಹಲನ್ನು ಮುತ್ತಿಬಡಬೇಕು. ಇಯಜ್‌ಖಾನನ್ನು ಸೆರೆಹಿಡಿಯಲೇಬೇಕು. ಹೀಗೆಂದುಕೊಳ್ಳುತ್ತಾ ಕಟಕಟ ಹಲ್ಲು ಕಡಿದನು. ಹೋಗಿ ಬಿಡಾರವನ್ನು ಸೇರಿದನು.

ಸಂಧ್ಯಾಕಾಲವಾಯಿತು. ಟಿಪ್ಪೂಸುಲ್ತಾನನು ಸೋನಾಮಹಲಿಗೆ ಅರ್ಧರಾತ್ರಿಯಲ್ಲಿ ಮುತ್ತಿಗೆ ಹಾಕಬೇಕೆಂದು ತನ್ನ ಅಂಗರಕ್ಷಕರನ್ನೆಲ್ಲಾ ಸಿದ್ಧಗೊಳಿಸುತ್ತಿದ್ದಾನೆ. ಅಷ್ಟರಲ್ಲಿ ನಾಲ್ಕು ವಂಟೆಗಳು ಬಂದವು. ರಾಧೆಯು ಸರದಾರನಂತೆ ಉಡುಪು ಧರಿಸಿ ಕುದುರೆಯ ಮೇಲೆ ಕುಳಿತು ಬಂದಳು. ಮಂಟಪದ ಬಳಿ—ಒಂಟೆಗಳು ನಿಂತವು. ರಾವುತರು ಥೈಲಿಗಳನ್ನು ಇಳಿಸಿದರು. ರಾಧೆಯು ರಾವುತರನ್ನು ಒಂಟೆಗಳನ್ನು ತೆಗೆದುಕೊಂಡು ಹೋಗುವಂತೆ ಕಣ್ಣು ಸನ್ನೆ

ಮಾಡಿದಳು. ಅವರು ಹೊರಟುಹೋದರು. ರಾಧೆಯು ಅಲ್ಲಿದ್ದ ವರ್ತಕರನ್ನು ಕುರಿತು, ನಿಮ್ಮ ಯುಜಮಾನನೆಲ್ಲಿ? ಎಂದು ಕೇಳಿದಳು. ಅಲ್ಲಿದ್ದವರಲ್ಲೊಬ್ಬನು ಬಂದು ನಾನೇ ಯುಜಮಾನ ನಿಮಗೇನು ಬೇಕು? ಇಲ್ಲಿಗೇಕೆ ಬಂದಿರಿ? ಎಂದು ಗದ್ದರಿಸಿದನು. ರಾಧೆಯು ನಗುತ್ತಾ "ನೀನು ಯುಜಮಾನನೇ! ಹಾಗಾದರೆ ಈ ಹಣವನ್ನು ಒಪ್ಪಿಸಿಕೊಂಡು ರಶೀದಿಯನ್ನು ಕೊಡು!"

ಯಾವ ಹಣ? ರಶೀದಿ ಯಾತಕ್ಕೆ?

ಈ ದಿನ ಬೆಳಿಗ್ಗೆ ಸೋನಾಮಹಲಿಗೆ ಮಾರಿದ ಜವಾಹಿರಿಗಳ ಬೆಲೆ. ದೌಲತ್ ರಾಣಿಯವರು ಕಳಿಸಿದ್ದಾರೆ.

ನಾವೇ ಸೋನಾಮಹಲಿಗೆ ಬಂದು ನಾಳೇ ದಿನ ಹಣ ತೆಗೆದುಕೊಳ್ಳುತ್ತೇವೆ.

ನೀವೇಕೆ ಬರಬೇಕು? ನಾನು ಸೋನಾಮಹಲಿನ ಅಧಿಕಾರಿಣಿ! ಹಣವನ್ನು ಸಲ್ಲಿಸಿದ್ದೇನೆ.

ನಮ್ಮ ಯುಜಮಾನರನ್ನು ಕೇಳುತ್ತೇವೆ.

ಕೇಳು! ನಾನೂ ಒಂದುಬಾರಿ ನಿಮ್ಮ ಯುಜಮಾನರನ್ನು ನೋಡಬೇಕೆಂದಿದ್ದೇನೆ. ಅವರು ಬಲು ಪರಾಕ್ರಮಶಾಲಿಗಳಂತೆ!

ಅಷ್ಟರಲ್ಲಿ ಸುಲ್ತಾನನು ಬಂದು ರಾಧೆಯ ಎದುರಿಗೆ ನಿಂತನು. ರಾಧೆಯು ಕುದುರೆಯಿಂದ ಇಳಿದಳು. ಸುಲ್ತಾನನು ಕಣ್ಣು ಸನ್ನೆ ಮಾಡಿದನು. ಎಲ್ಲರೂ ದೂರ ಹೊರಟುಹೋದರು. ರಾಧೆಯು—

ಸೇಟರೇ! ನಿಮ್ಮ ಹಣ ತೆಗೆದುಕೊಳ್ಳಿರಿ!

ಹಣವೆಷ್ಟಿದೆ?

ಒಂದು ಲಕ್ಷವರಹಗಳು!

ನಮ್ಮ ನಗಗಳು ಅಷ್ಟಿಲ್ಲವಲ್ಲ!

ನಮ್ಮ ರಾಣಿಯವರು ಇಷ್ಟು ಹಣವನ್ನೂ ತಮಗೊಪ್ಪಿಸಿ ಬರಬೇಕೆಂದು ಅಪ್ಪಣೆ ಮಾಡಿದ್ದಾರೆ.

ಈ ಹಣವನ್ನು ನಾವು ಈಗ ತೆಗೆದುಕೊಂಡು ಹೋಗುವುದಿಲ್ಲ. ಇದು ತಮ್ಮ ಅರಮನೆಯಲ್ಲೇ ಇರಲಿ! ಬೇಕಾದಾಗ ಬಂದು ತೆಗೆದುಕೊಳ್ಳುತ್ತೇವೆ.

ಏಕೆ? ಈಗ ತೆಗೆದುಕೊಳ್ಳಲು ತೊಂದರೆಯೇನಿದೆ. ಅಪಾರ ಹಣವು ಬಂದಾಗ ಬಿಡುವವರು ವ್ಯಾಪಾರಿಗಳೇ?

ಹಾಗಲ್ಲ! ಈಗ ಪ್ರಾಂತದಲ್ಲೆಲ್ಲಾ ಸೈನಿಕರು ತುಂಬಿದ್ದಾರೆ. ಅವರು ನಮ್ಮನ್ನು ಸೂರೆಮಾಡಬಹುದು.

ರಾಧೆಯು ನಗುತ್ತಾ ಟಿಪ್ಪೂಸುಲ್ತಾನರ ಸೈನ್ಯದಲ್ಲಿ—ಅದರಲ್ಲಿಯೂ ಮುಹಮ್ಮದಾಲಿಯವರ ಸೇನಾಧಿಪತ್ಯದಲ್ಲಿ ಅಂಥಾ ಅವಿನಯಕ್ಕೆ ಎಡೆ ಇಲ್ಲ!

ಆದರೂ ಭಾರೀ ಹಣವನ್ನು ತೆಗೆದುಕೊಂಡು ಹೋಗಲು ನಮಗೆ ಭಯ ವಾಗುತ್ತೆ. ಹಣವು ನಿಮ್ಮಲ್ಲಿದ್ದರೆ ನಮಗೆ ಧೈರ್ಯ!

ಭಯಪಡಬೇಕಾಗಿಲ್ಲ! ನಾನು ಈ ಹಣಕ್ಕೆ ರಹದಾರಿ ತಂದಿದ್ದೇನೆ.

ಸೇಟ್ :—ಆಶ್ಚರ್ಯದಿಂದ ಹಾಗಾದರೆ ತಮ್ಮಲ್ಲಿರುವ ರಹದಾರಿಯು— ಟಿಪ್ಪೂಸುಲ್ತಾನರವರದೋ?

ಸರದಾರ್ :—ಅಲ್ಲ! ನಮ್ಮದು.

ಸೇಟ್ :—ಸುಲ್ತಾನರ ರಾಜ್ಯದಲ್ಲಿ—ಸುಲ್ತಾನರ ಸೇನೆಯಲ್ಲಿ—ನಿಮ್ಮ ರಹದಾರಿಯು ಸಲ್ಲುತ್ತದೋ?

ಸರದಾರ :—ಅಲ್‌ಬತ್! ಸಲ್ಲುತ್ತದೆ. ಸೋನಾಮಹಲಿನ ದ್ರವ್ಯ ವನ್ನು ಮುಟ್ಟುವುದಕ್ಕೆ ಯಾರಿಗೂ ಅಧಿಕಾರವಿಲ್ಲ.

ಸೇಟ್ :—ಹಾಗಾದರೆ ರಹದಾರಿಯನ್ನು ಕೊಡಿ!

ಸರದಾರನು ಲಕ್ಕೋಟೆಯನ್ನು ಕೊಟ್ಟನು. ಸೇಟನು ಲಗುಬಗೆಯಿಂದ —ಲಕ್ಕೋಟೆಯನ್ನು ಬಿಚ್ಚಿ ನೋಡಿದನು.

ಈ ಧನವೆಲ್ಲಾ ನಗರದ ಸೋನಾಮಹಲಿನದು. ಇದನ್ನು ಮೈಸೂರು ರಾಜ್ಯದಲ್ಲಿ ಯಾರೂ ನಿರೋಧಿಸಕೂಡದು.

ದೌಲತ್

ಸೇಟ್ :—ಈ ರುಜು ಯಾರದು ?

ಸರದಾರ :—ದೌಲತ್‌ರಾಣಿಯವರದು.

ಸೇಟ್ :—ಈ ಮೊಹರು ಯಾರದು ?

ಸರದಾರ :—ದೊಡ್ಡ ನವಾಬರದು.

ಸೇಟ್ :—ಈಗ ಹೈದರಲ್ಲೀಖಾನರ ಮೊಹರು ಜಾರಿಯಲಿಲ್ಲ.

ಸರದಾರ: —ಆ ಮಾತು ನಗರದ ಶೀಮೆಯಲ್ಲಿ ಆಡಿದರೆ—ನಾಲಿಗೆ ಯನ್ನು ತುಂಡಾಗಿ ಸೀಳಬೇಕಾಗುತ್ತದೆ. ಸೇಟನು ಕೋಪದಿಂದ ದುರದುರನೆ —ನೋಡುತ್ತಾನೆ. ಒಳ್ಳೆಯದು—ಈ ರಹದಾರಿಯು ನನ್ನಲ್ಲಿರಲಿ! ಸರ ದಾರನು ಕುದುರೆಯನ್ನು ಹತ್ತಿ ನಗರಾಭಿಮುಖವಾಗಿ ಹೊರಟನು. ಯಾರೂ ಮಾತನಾಡಲಿಲ್ಲ. ಸ್ವಲ್ಪ ದೂರ ಹೋಗುವಷ್ಟರಲ್ಲೇ ಹಿಂದುಗಡೆಯಿಂದ ಯಾರೋ ಕುದುರೆಯನ್ನು ಓಡಿಸುತ್ತಾ ಬಂದು-ಒಂದೇ ಹಾರಿನಲ್ಲಿ ಮುಂದಕ್ಕೆ ಹಾರಿ—ಸರದಾರನ ಕುದುರೆಯನ್ನು ಅಡ್ಡಗಟ್ಟಿದನು—ಸರದಾರನು—ಧೈರ್ಯ ದಿಂದ ಕುದುರೆಯನ್ನು ನಿಲ್ಲಿಸಿ—ಒರೆಯಿಂದ ಕತ್ತಿ ಹಿರಿದು ಎತ್ತಿದನು. ಅಷ್ಟ ರಲ್ಲಿ ಎದುರಿಸಿದ ವ್ಯಕ್ತಿಯು ಸೇಟನೇ ಆಗಿದ್ದನು. ಆಗ ಸರದಾರನು ನಗುತ್ತಾ ಏನು ಸೇಟರೇ—ಮತ್ತೇನು ಬೇಕು ತಮಗೆ ?

ಸೇಟ್ :—ತಮ್ಮ ನಿಜವಾದ ಪರಿಚಯವು ಬೇಕು! ತಾವು ರಾಧಾ ರಾಣಿಯವರೋ ?

ಸರದಾರ :—ಹೌದು!

ಸೇಟ್ :—ತಾವೇಕೆ ವೇಷದಿಂದ ಬಂದಿರಿ ? ಶ್ರೀರಂಗಪಟ್ಟಣದ ಸೈನಿಕರ ಕೈಗೆ ಸಿಕ್ಕಬಹುದೆಂಬ ಭಯದಿಂದಲೋ ?

ರಾಧಾರಾಣಿ :—ಭಯವೆಲ್ಲಿ ಬಂತು! ಸೈನಿಕರು ನನ್ನನ್ನೇನು ಮಾಡ ಬಲ್ಲರು ?

ಸೇಟ್ :—ಟಿಪ್ಪೂಸುಲ್ತಾನರ ಸೈನಿಕರು ತಮ್ಮನ್ನು ಸೆರೆಹಿಡಿದರೆ—

ರಾಧಾರಾಣಿ :—ಸುಲ್ತಾನರ ಬುದ್ಧಿಗೆ ಅಷ್ಟು ಗ್ರಹಣ ಹಿಡಿಯಲಾರದು!

ಈ ನಾಡಿನಲ್ಲಿ ನನ್ನನ್ನು ಸೆರೆಹಿಡಿದರೆ—ಸುಲ್ತಾನರ ಐವತ್ತು ಸಹಸ್ರ ದಂಡು ಧೂಳೀಪಟವಾಗಿ ಹೋದೀತು? ಸೇಟನು ಅಪ್ರತಿಭನಾದನು.

ಸೇಟ್ :—ಆ ಮಾತು ನಮಗೇಕೆ? ಅಂಥಾ ವೀರ ರಮಣಿಯು ಈ ವೇಷಾಂತರವನ್ನು ಧರಿಸಿದ್ದೇಕೆ?

ರಾಧಾ :—ತಮ್ಮಲ್ಲಿ ಸಂದೇಹದಿಂದ—

ಸೇಟ್ :—ನನ್ನಲ್ಲಿ ಸಂದೇಹವೇಕೆ?

ರಾಧಾ :—ತಾವು ಸೋನಾಮಹಲಿನಲ್ಲಿ ಮೌನವಾಗಿದ್ದುದಕ್ಕೆ—

ಸೇಟ್ :—ನಾನು ಮತ್ತೊಮ್ಮೆ ದರಿಯಾಬಾಗಿಗೆ ಬರಬೇಕೆಂದಿದ್ದೇನೆ.

ರಾಧಾ :—ಬರುವ ಕೆಲಸವಿಲ್ಲ!

ಸೇಟ್ :—ನಾನು ಬಂದೇ ಬರುತ್ತೇನೆ. ದೌಲತ್ ರಾಣಿಯವರನ್ನು ನೋಡಬೇಕೆಂದು ಬಂದಿದ್ದೇನೆ.

ರಾಧಾ :—ಅವರನ್ನು ನೀವು ಈಗ ನೋಡಲಾರರಿ!

ಸೇಟ್ :—ಯಾರ ಅಡ್ಡಿ! ಇಯಜ್ ಖಾನರದೋ?

ರಾಧಾ :—ನಸುನಕ್ಕು—ಅಲ್ಲ! ದೊಡ್ಡ ನವಾಬರದು!

ಸೇಟ್ :—ಯಾರ ಮೇಲೆ ಅಂಥಾ ಪ್ರತಿರೋಧದ ಆಜ್ಞೆ?

ರಾಧಾ :—ತಮ್ಮ ಮೇಲೆ!

ಸೇಟ್ :—ನಾನಾರು ಬಲ್ಲಿರಾ?

ರಾಧಾ :—ಗಹಗಹಿಸಿ ನಕ್ಕು—ಯಾವಾಗಲೋ ಬಲ್ಲೆ! ಖುದ್ದು ಟಿಪ್ಪೂಸುಲ್ತಾನರೆಂದು!

ಟೀಪ್ಪೂಸುಲ್ತಾನನು ಅವಾಕ್ಕಾದನು!

ರಾಧಾರಾಣಿಯು ಕುದುರೆಯಿಂದಿಳಿದು ನಿಂತಳು. ಟೀಪುವೂ ಕುದುರೆ ಯಿಂದಿಳಿದನು.

ಟಿಪ್ಪೂ :—ನಾನು ನನ್ನ ಅಧಿಕಾರದಿಂದ—ಒಂದು ದೇವಿಯ ದರ್ಶನ ಮಾಡಿ ಬರುತ್ತೇನೆ.

ರಾಧಾ :—ನೀವು ಅಲ್ಲಿಗೆ ಬರಕೂಡದೆಂದು ನಾನು ಆಜ್ಞೆ ಮಾಡುತ್ತೇನೆ.

ಟಿಪ್ಪೂ :—ಏಕೆ ? ನೀವು ಅಲ್ಲಿ ಇಯಜ್‌ಖಾನನನ್ನು ಬಚ್ಚಿಟ್ಟಿದ್ದೀರೋ ?

ರಾಧಾ :—ಇಯಜ್‌ಖಾನನು ಹೆಂಗಸರ ಸೆರಗಿನಲ್ಲಿ ಔತುಕೊಳ್ಳುವ ಹೇಡಿಯಲ್ಲ !

ಟೀಪ್ರೂ :—ಹಾಗಾದರೆ ನಗರವನ್ನು ಬಿಟ್ಟು ಪಲಾಯನವೇಕೆ ?

ರಾಧಾ :—ಇಯಜ್‌ಖಾನರು ಪಲಾಯನವನ್ನು ಮಾಡಿಲ್ಲ ! ಅವರು ದೊಡ್ಡ ನವಾಬರ ಋಣಕ್ಕೆ ಋಣಿಯಾಗಿ ನಿಮ್ಮ ಮೇಲೆ ಕತ್ತಿ ಕಟ್ಟಲಿಲ್ಲ.

ಟಿಪ್ಪೂ :—(ಕೋಪೋದ್ರೇಕದಿಂದ) ಕತ್ತಿ ಕಟ್ಟಿದ್ದರೆ—

ರಾಧಾ :—ಕಟ್ಟಿದ್ದರೆ–ನಗರದ ಕುರುಕ್ಷೇತ್ರದಲ್ಲಿ ಐವತ್ತು ಸಹಸ್ರ ಸೈನ್ಯದೊಂದಿಗೆ ಪೂರ್ಣಾಹುತಿಯಾಗುತ್ತಿತು !

ಟಿಪ್ಪೂ :—ರಾಧಾರಾಣಿಯವರೇ ! ನಾನು ತಮ್ಮಲ್ಲಿ ವಾದಕ್ಕೆ ಬಂದಿಲ್ಲ. ತಮ್ಮೊಡನೆ ವೀರವಾದವನ್ನಾಡಿ ಯುದ್ಧಮಾಡಲು ಬಂದವನಲ್ಲ! ನಾನು ದೌಲತ್ ರಾಣಿಯವರ ದರ್ಶನಮಾಡಿ ಅವರ ಪ್ರಣಯ ಭಿಕ್ಷೆಯನ್ನು ಬೇಡುವುದಕ್ಕೆ ಬಂದಿರುವೆನು ? ತಾವು ದಯವಿಟ್ಟು ಅವರ ದರ್ಶನಮಾಡಿಸಿರಿ. ನಾನು ಆಮರಣಾಂತ ತಮ್ಮ ಋಣಿಯಾಗಿರುವೆನು.

ರಾಧಾ :—ಸುಲ್ತಾನರವರೇ ಮೈಸೂರು ರಾಜ್ಯದಲ್ಲಿ ಅಖಂಡವಾದ ಸುಲ್ತಾನೀ ರಾಜ್ಯವು ಸ್ಥಾಪಿಸಲ್ಪಟ್ಟಲ್ಲದೇ—ದೌಲತ್‌ರಾಣಿಯವರನ್ನು ವಿವಾಹ ಮಾಡಿಕೊಳ್ಳುವ ಹಂಬಲವು ಸಾರ್ಥಕವಾಗದು ।

ಸುಲ್ತಾನ್:—ವಿವಾಹವು ಹಾಗಿರಲಿ ! ತಮ್ಮ ಅನುಗ್ರಹವಿದ್ದರೆ ರಾಣಿಯವರ ದರ್ಶನ ಮಾಡಬಹುದಲ್ಲ !

ರಾಧಾ :—ಸುಲ್ತಾನರೇ ! ಅದಕ್ಕೆ ಬಲವಾದ ಅಡ್ಡಿಯಿದೆ.

ಸುಲ್ತಾನ್ :—ಯಾರ ಅಡ್ಡಿ !

ರಾಧ :—ದೊಡ್ಡ ನವಾಬರದು.

ಸುಲ್ತಾನ್ :—ಅದಕ್ಕೆ ಗುರುತೇನು ?

ರಾಧಾ :—ಇದೋ ತೆಗೆದುಕೊಳ್ಳಿ ! ಎಂದು ಲಕೋಟೆಯನ್ನು ಕೈಗೆ ಕೊಟ್ಟಳು.

ಸುಲ್ತಾನನು ಬಿಚ್ಚಿ ಓದಿದನು.

ಅದು ಬಡಾ ಫಕೀರರ ಕಾಗದ.

ಪ್ರಿಯ ಚಿಕ್ಕ ಸುಲ್ತಾನರೇ ! ದೌಲತ್ತಳು ನಿಮ್ಮವಳೇ ಇದ್ದಾಳೆ. ಮೈಸೂರಿನಲ್ಲಿ ಸುಲ್ತಾನೀ ರಾಜ್ಯವು ಸ್ಥಾಪಿತವಾದುದಲ್ಲದೇ ಅವರ ದರ್ಶನ ಮಾಡುವ ಸಾಹಸವನ್ನು ನೀವು ಮಾಡಕೂಡದು. ಅದು ದೊಡ್ಡ ನವಾಬರ ಆಜ್ಞೆ !

ತಮ್ಮ ಫಕೀರ.

ಅದನ್ನು ಓದಿ ಸುಲ್ತಾನನು ನಿರ್ವಿಣ್ಣನಾದನು. ರಾಧೆಯನ್ನು ಎಷ್ಟೋ ಮರ್ಯಾದೆಯಿಂದ ಕೇಳಿಕೊಂಡನು. ಅವರವರಿಗೆ—ಎಷ್ಟೋ ಮಾತುಕಥೆ ಗಳಾದವು. ಇಷ್ಟರಲ್ಲಿ ಅವರಿಬ್ಬರೂ ಸ್ನೇಹಿತರೇ ಆಗಿಹೋದರು. ಈಗ ಟಿಪ್ಪೂಸುಲ್ತಾನನಿಗೆ ಏಕಮಾತ್ರ ಅಂತರಂಗ ಸ್ನೇಹಿತಳೆಂದರೆ ರಾಧಾರಾಣಿಯೇ! ಅವಳು ದೌಲತ್ತಳ ಆಪ್ತ ಸಚಿವಳು. ಆದ್ದರಿಂದ ಅಷ್ಟು ಓಲೈಸಿ ಸುಲ್ತಾನನು ಸ್ನೇಹಮಾಡಿಕೊಂಡನು. ಅವಳಲ್ಲಿ ತನ್ನ ಮನಸ್ಸಿನ ಎಷ್ಟೋ ಕಲ್ಪನೆಗಳನ್ನು ಹೇಳಿಕೊಂಡನು. ದೌಲತ್ತಳು ತನ್ನವಳೇ ಎಂದುಕೊಂಡು—ಎಷ್ಟೋ ಮಾತನಾಡಿದನು. ಮಾತನಾಡುತ್ತ—ಆಡುತ್ತ ಇಯುಜ್ ಖಾನನ ಮಾತು ಬಂತು. ರಾಧೆಯು ಇಯುಜ್ ಖಾನನ್ನು ಬಹಳವಾಗಿ ಹೊಗಳಿದಳು. ಅದನ್ನು ಸುಲ್ತಾನನು ಕೇಳಲಾರ ! ಕೇಳಿ ಸಹಿಸಲಾರ !

ಸುಲ್ತಾನನು—ಅವನೊಬ್ಬ—ನಮ್ಮ ರಾಜ್ಯದಲ್ಲಿ ಪ್ರತಿದಂದ್ವಿ ! ಇದನ್ನು ನಾನು ಬಲ್ಲೆ. ಅವನನ್ನು ಹಿಡಿದು ಸಂಹರಿಸಬೇಕೆಂದೇ—ಇಷ್ಟು ಸನ್ನಾಹ ದಿಂದ ಬಂದೆ. ಕೊನೆಗೂ ಅವನು ತಪ್ಪಿಸಿಕೊಂಡ.

ರಾಧಾ :—ಇಯುಜ್ ಖಾನರು ಈ ರಾಜ್ಯದಲ್ಲಿ ನಿಮಗೆ ಪ್ರತಿಸ್ಪಂದ್ವಿ ಯಲ್ಲ ! ನಿಮ್ಮಿಬ್ಬರ ವೈರವು ದೌಲತ್ತಳಿಗಾಗಿ ! ನೀವಿಬ್ಬರೂ ದೌಲತ್ತಳ ಪ್ರಣಯಾಕಾಂಕ್ಷಿಗಳು ! ಯಾರು ಮೈಸೂರಿನಲ್ಲಿ ಸುಲ್ತಾನೀ ರಾಜ್ಯವನ್ನು

ಕಟ್ಟುವರೋ ಅವರನ್ನು ದೌಲತ್ತಳು ವಿವಾಹಮಾಡಿಕೊಳ್ಳುವಳು. ಅದೇ ತನ್ನಿಬ್ಬರ ಮುಂದಿರುವ ಪಣ !

ಸುಲ್ತಾನ್ :—ಈ ಪಣವನ್ನು ಗೊತ್ತುಮಾಡಿದವರಾರು ?

ರಾಧಾ :—ಅಲ್ಲಾನು ಗೊತ್ತು ಮಾಡಿದ್ದು !

ಸುಲ್ತಾನ್:—ಹಾಗಿದ್ದರೆ ದೌಲತ್ತಳು ಶ್ರೀರಂಗಪಟ್ಟಣದಲ್ಲಿಯೇ ಇರ ಬಾರದೇಕೆ ?

ರಾಧಾ :—ಅದು ದೊಡ್ಡ ನವಾಬರ ಇಚ್ಛೆ !

ಸುಲ್ತಾನ್ :—ಆ ಕಾಲವು ಕಳೆದುಹೋಯಿತು. ಈಗ ದೊಡ್ಡ ನವಾ ಬರೂ ಇಲ್ಲ ! ಅವರ ಅಜ್ಞೆಯೂ ಇಲ್ಲ !

ರಾಧಾ :—ಅವರ ಆಜ್ಞೆಯು ಅಪ್ರತಿಹತವಾದ್ದು ! ಸುಲ್ತಾನರೇ! ನಗರವು ಧನಕನಕ ಸಮೃದ್ಧವಾದ ಸೀಮೆ. ಇಲ್ಲಿ ಅತುಳೈಶ್ವರ್ಯವಿದೆ. ಇದು ವೀರಭೂಮಿ. ಅಸಮ ಸಾಹಸಿಗಳಾದ ವೀರಭಟರಿದ್ದಾರೆ. ಅವೆಲ್ಲವನ್ನು ತಮ್ಮ ಸಮಯಕ್ಕೆ ಒದಗಿಸುವುದಕ್ಕಾಗಿ ದೌಲತ್ತರವರು ನಗರದಲ್ಲಿಯೇ ಇರ ಬೇಕಾಗಿದೆ.

ಸುಲ್ತಾನನು ಆ ಸೋನಾಮಹಲನ್ನು ತನಗೆ ತೋರಿಸಬೇಕೆಂದು ರಾಧಾ ರಾಣಿಯನ್ನು ಬೇಡಿಕೊಂಡನು. ರಾಧೆಯು ಜೊತೆಯಲ್ಲಿ ಸುಲ್ತಾನನ್ನು ಕರೆದುಕೊಂಡು, ದರಿಯಾಬಾಗಿಗೆ ಹೋದಳು. ಸುಲ್ತಾನನಿಗೆ ಆ ಸೋನಾ ಮಹಲೆಲ್ಲವನ್ನೂ ತೋರಿಸಿದಳು. ಮೇಲಂತಸ್ತಿಗೆ ಕರದುಕೊಂಡು ಹೋದಳು. ಮೇಲೆ—ಅಮೃತಶಿಲಾ ಮಂಟಪಕ್ಕೆ ಕರದೊಯ್ದಳು. ಅಲ್ಲಿ ಸುಲ್ತಾನನನ್ನು ಆಸನದಲ್ಲಿ ಕುಳ್ಳಿರಿಸಿದಳು. ಹುಕ್ಕಾವನ್ನು ತಂದಿಟ್ಟು ಸ್ವೀಕರಿಸಬೇಕೆಂದು ವಿನಯಾವನತವಾದ ನಗುಮೊಗದಿಂದ ಪ್ರಾರ್ಥಿಸಿದಳು. ಸುಲ್ತಾನನು ಹುಕ್ಕಾ ವನ್ನು ಸೇವಿಸುತ್ತಾ ಎಷ್ಟೋಮಾತನಾಡಿದನು. ಬಾಲ್ಯದಲ್ಲಿ ತಾನೂ, ದೌಲತ್ತಳೂ ಆಟವಾಡುತ್ತಿದ್ದ ಕಥೆಯನ್ನು ಹೇಳಿದನು. ರಾಧೆಯನ್ನು ಬೇಡಿ, ಕಾಡಿ ದೌಲತ್ತಳ ದರ್ಶನ ಮಾಡಿಸಬೇಕೆಂದು ಕೇಳಿಕೊಂಡನು. ಕೊನೆಗೆ ರಾಧೆಯು ಟಿಪ್ಪೂಸುಲ್ತಾನನ ಶಿಬಿರದಲ್ಲಿಯೇ ದೌಲತ್ತಳನ್ನು ಕರತಂದು ಭೇಟಿ ಮಾಡಿಸುವು ದಾಗಿ ಅಭಿವಚನವಿತ್ತಳು. ಸುಲ್ತಾನನು ದೌಲತ್ತಳಿಲ್ಲದ ಆ ಶೂನ್ಯಗಾರದಿಂದ

ಶೂನ್ಯ ಹೃದಯನಾಗಿ ಕೆಳಗಿಳಿದು ಬಂದು ಕುದುರೆಯನ್ನು ಹತ್ತಿದನು. ರಾಧೆಯೂ ಸ್ವಲ್ಪ ದೂರ ಹೋದಳು. ಆ ವನಮಧ್ಯದಲ್ಲಿ ರಾಧೆಯು ಅಪ್ಪಣೆಯನ್ನು ಪಡೆದು ಹಿಂದಿರುಗಿದಳು. ಸುಲ್ತಾನನು ನಿರ್ವಿಣ್ಣನಾಗಿ ಕಣ್ಣಿಗೆ ಕಾಣುವವರೆಗೆ ರಾಧೆಯನ್ನು ನೋಡುತ್ತಿದ್ದನು. ಕಿವಿಗೆ ಕೇಳುವವರೆಗೆ ಕುದುರೆಯ ಖುರಪುಟವನ್ನು ಆಲೈಸಿ ಕೇಳುತ್ತಿದ್ದನು. ಬಾಯಿಯಲ್ಲಿ ದೌಲತ್ತಳನ್ನು ಕರತರುತ್ತೇನೆ ಎಂದು ರಾಧೆಯು ಹೇಳಿದ ಮಾತುಗಳನ್ನೇ ಹುಚ್ಚನಂತೆ ಉಚ್ಚರಿಸುತ್ತಿದ್ದನು. ಅದೇ ರಾತ್ರಿಯೇ ಅಲ್ಲಿಂದ ಹೊರಟು ಶಿಬಿರಕ್ಕೆ ತಲಪಿದ ಮೇಲೆ ನಗರಕ್ಕೆ ತಕ್ಕ ಬಂದೋಬಸ್ತು ಇಟ್ಟು ಖಾಸಿಂಖಾನನನ್ನು ಜೊತೆಯಲ್ಲೇ ಕರತರಬೇಕೆಂದು ಮಹಮ್ಮದಾಲಿಗೆ ರಾಯಸವನ್ನು ಬರೆದು ಕಳಿಸಿದನು.

ಹೀಗೆ ಸುಲ್ತಾನನು ಗುಪ್ತವಾಗಿ ನಗರಕ್ಕೆ ಬಂದು ಹೋದ ಸಮಾಚಾರವು ಮಹಮ್ಮದಾಲಿಗೆ ತಿಳಿಯಲೇ ಇಲ್ಲ. ಅವನು ಇಂಗ್ಲೀಷರ ಸೈನ್ಯವನ್ನು ಸದೆಬಡಿದು ಓಡಿಸಿ ಖಾಸಿಂಖಾನನನ್ನು ಬಹಳ ವಿಶ್ವಾಸದಿಂದ ಜೊತೆಯಲ್ಲಿ ಕರೆದುಕೊಂಡು ಸುಲ್ತಾನನ ಶಿಬಿರಕ್ಕೆ ಬಂದು ಸೇರಿದನು.

## ಖಾಸಿಂಖಾನನು ಮೃತ್ಯು ಮುಖದಲ್ಲಿ

ಟಿಪ್ಪೂಸುಲ್ತಾನನು ಉದ್ವಿಗ್ನನಾಗಿ ಕುಳಿತಿದ್ದಾನೆ. ಕಾದ ಕಬ್ಬಿಣದ ರಸದಂತೆ ಕುದಿಯುತ್ತಿರುವ ಅವನ ಮನಸ್ಸು ಗಂಟು ಬಿಗಿದಿರುವ ಅವನ ಭ್ರೂಭಂಗಿ; ಆ ರಕ್ತವಾದ ಅವನ ಕಣ್ಣುಗಳು, ಕೆಂಪೇರಿದ ಮುಖ, ಅದುರುತ್ತಿರುವ ತುಟಿಗಳು ಇವೆಲ್ಲವೂ ಪ್ರಳಯವನ್ನು ಸೂಚಿಸುತ್ತಿವೆ. ಸುಲ್ತಾನನಿಗೆ ದಿಕ್ಕು ತೋಚದು. ಇಯುಜ್‌ಖಾನನಿಂದ ವಂಚಿತನಾಗಿದ್ದಾನೆ. ಆಹಾ! ಇಯುಜ್‌ಖಾನನು ಎಂಥಾ ವಂಚಕ. ದೌಲತ್ತಳನ್ನು ಎಲ್ಲಿಯೋ ಮಾಯಮಾಡಿದ್ದಾನೆ. ನಗರವನ್ನು ತೆರೆದ ಬಾಗಿಲಾಗಿ ಒಪ್ಪಿಸಿದ್ದರ ಅರ್ಥವೇನು? ಇದೂ ಒಂದು ಪ್ರಲೋಭ! ಎಷ್ಟು ಅಪಮಾನವಾಯಿತು.

ತನ್ನಷ್ಟಕ್ಕೆ ತಾನೇ ಮಾತನಾಡಿಕೊಳ್ಳುತ್ತಾನೆ. ಇಯಜ್‌ಖಾ! ನೀನು ಈ ಟಿಪ್ಪುವಿನ ಕೈಯಿಂದ ತಪ್ಪಿಸಿಕೊಳ್ಳಲಾರೆ, ದೌಲತ್ತಳನ್ನು ಬಚ್ಚಿಟ್ಟು ದಕ್ಕಿಸಿಕೊಳ್ಳಲಾರೆ! ಎಂದು ಹಲ್ಲುಹಲ್ಲು ಕಡಿಯುತ್ತಾನೆ. ಆದರೆ ನಮ್ಮ ಕೈಗೆ ಖಾಸಿಂಖಾನನು ಸಿಕ್ಕಿದ್ದಾನೆ. ಅವನನ್ನು ಹಿಂಡಿದರೆ ಎಲ್ಲಾ ಸಮಾಚಾರವನ್ನು ಕಕ್ಕಲೇಬೇಕು. ಮುಹಮ್ಮದಾಲಿಯವರ ಸಮಾಚಾರವೇನು? ನಿಜವಾಗಿಯೂ ಅವರಿಗೆ ಇಯಜ್‌ಖಾನರಿರುವ ಸ್ಥಳವು ಗೊತ್ತೇ ಇಲ್ಲವೇ? ಅಥವಾ ಅವರೂ ಈ ಛದ್ಮನೆಯಲ್ಲಿ ಸೇರಿರಬಹುದೋ? ಮುಹಮ್ಮದಾಲಿಯು ಮಹಾಪರಾಕ್ರಮಶಾಲಿ! ಆದರೆ ಒಂದು ವಿಧವಾಗಿ ಹುಚ್ಚುವೇದಾಂತಿ! ಒಂದೊಂದು ಬಾರಿ ದೊಡ್ಡ ನವಾಬರ ಪ್ರೀತಿಪಾತ್ರನೆಂದು ಹೆಮ್ಮೆಯಿಂದ ನಮಗೆ ಎದುರು ಹೇಳುತ್ತಾನೆ. ಅವನಿಗೂ ಇಯಜ್‌ಖಾನರಲ್ಲಿ ಪಕ್ಷಪಾತ ಉಂಟು. ಈ ಸಂದರ್ಭದಲ್ಲೇನಾದರೂ ಅವನು ಗುಪ್ತಸಂಧಾನ ನಡೆಸಿದ್ದರೆ ಅವನ ತಲೆಯು ಸಹಸ್ರ ಸಹಸ್ರ ಹೋಳಾದೀತು. ಹೀಗೆಯೇ ಯೋಚನೆ ಮಾಡುತ್ತಾ ಸುಲ್ತಾನನು ಏನೇನೋ ಚಿಂತಿಸತೊಡಗಿದನು. ದೌಲತ್ತಳು ಎಲ್ಲಿ ಹೋಗಿರಬೇಕು, ಇಯಜ್‌ಖಾನನು ದೌಲತ್ತಳನ್ನು ಬಲಾತ್ಕಾರದಿಂದ ಬಚ್ಚಿಟ್ಟಿದ್ದರೆ ಆ ಸೋನಾಮಹಲಿನಲ್ಲಿ ಅಷ್ಟು ಸಂತೋಷ ಸಂಭ್ರಮಗಳು ಇರುತ್ತಿದ್ದವೆ? ರಾಧಾರಾಣಿಯು ಎಷ್ಟು ದಿಟ್ಟತನದ ಹುಡುಗಿ! ಎಂಥಾ ಲೋಕೋತ್ತರ ಸೌಂದರ್ಯ! ಎಷ್ಟು ಲಾವಣ್ಯವತಿಯವಳು! ಎಂಥಾ ಧೀರ ರಮಣಿ! ಅವಳು ನನ್ನಲ್ಲಿ ಎಷ್ಟು ಸೌಜನ್ಯವನ್ನು ತೋರಿದಳು. ದೌಲತ್ತಳು ನನ್ನಲ್ಲಿಟ್ಟಿರುವ ಪ್ರೇಮದ ಪ್ರತಿಬಿಂಬವೇ ಆ ರಾಧೆಯ ಸೌಜನ್ಯ! ರಾಧೆಯು ದೌಲತ್ತಳನ್ನು ದರ್ಶನ ಮಾಡಿಸುವುದಾಗಿ ಮಾತು ಕೊಟ್ಟಿದ್ದಾಳೆ. ಅಂತಹ ಸುಂದರಿಯು ಮಾತಿನಲ್ಲಿ ಸುಳ್ಳುಂಟೆ! ದೌಲತ್ತಳು ಒಂದುಬಾರಿ—ನನ್ನ ಸಮ್ಮುಖದಲ್ಲಿ ದರ್ಶನವಿತ್ತರೆ ದೌಲತ್ತಳು ಶ್ರೀರಂಗಪಟ್ಟಣದ ರಾಣಿಯಾದರೆ ನಗರದ ಸಿಂಹಾಸನದ ಪಟ್ಟವನ್ನು ರಾಧಾರಾಣಿಗೆ ಕಟ್ಟುವೆನು. ಅವಳು ರಾಣಿಗಿರಿಗೆ ಲಾಯಖ್ಖಾದ ವೀರರಮಣಿ! ನಗರಕ್ಕೆ ಹಿಂದೂ ರಾಣಿಯೇ ಆದರೆ ಈ ಮಂಕು ಪಾಳಯಗಾರರು ಶ್ರೀರಂಗಪಟ್ಟಣಕ್ಕೆ ಎಂದೆಂದಿಗೂ ಅಧೀನರಾಗಿಯೇ ಇರುತ್ತಾರೆ. ದೌಲತ್ತಳು ದರ್ಶನವಿತ್ತು ಹೊರಟುಹೋಗುತ್ತೇನೆಂದರೆ ನನ್ನ ಸರ್ವಸ್ವವನ್ನು ಅವಳಿಗೆ ಅರ್ಪಣಮಾಡಿ ಬೇಡಿಕೊಳ್ಳುವೆನು.

ಕೋಮಲ ಪಾದಾರವಿಂದಗಳಿಗೆರಗಿ ಕೇಳಿಕೊಳ್ಳುವೆನು. ಶ್ರೀರಂಗಪಟ್ಟಣದ ಸಾಮ್ರಾಜ್ಯವನ್ನೇ ಅವಳ ಪಾದಗಳಿಗೆ ಕಾಣಿಕೆಯಾಗಿ ಒಪ್ಪಿಸುವೆನು. ಈ ಐಶ್ವರ್ಯ—ಈ ಸಾಮ್ರಾಜ್ಯ—ಈ ಪ್ರೇಮ ಇವೆಲ್ಲವನ್ನೂ ಒದ್ದು, ಆ ರಾಜ್ಯ ಭ್ರಷ್ಟನಾದ; ಜಾತಿಭ್ರಷ್ಟನಾದ ತಲೆತಿರುಕ ಇಯಜ್‌ಖಾನನ ಮೇಲೆ ಪ್ರೀತಿ ಮಾಡಲು ಅವಳೇನು ಹುಚ್ಚಳೇ? ಇರಲಿ! ಒಂದುಬಾರಿ ದೌಲತ್ತಿಳ ದರ್ಶನ ವಾದರೆ ಆ ಮೇಲೆ ನನ್ನ ಭುಜಗಳ ಬಂಧನದಿಂದ ಹೇಗೆ ತಪ್ಪಿಸಿಕೊಂಡಾಳು? ನೋಡೋಣ!

ಇಷ್ಟರಲ್ಲಿ ಪ್ರತೀಹಾರಿಯು ಒಳಗೆ ಬಂದು ಮುಜರೇ ಮಾಡಿದನು. ಸುಲ್ತಾನರು ತಲೆ ಎತ್ತಿ ನೋಡಿದರು. ಖಾವಿಂದ್ ಮಂತ್ರಿ ಮುಹಮ್ಮದಾಲಿ ಯವರು ಬಂದಿದ್ದಾರೆ ಎಂದು ಅರಿಕೆಮಾಡಿದನು. ಒಳಗೆ ಕರತರುವಂತೆ ಸುಲ್ತಾನನು ಸನ್ನೆಮಾಡಿದನು. ಪ್ರತೀಹಾರಿಯು ಮಂತ್ರಿ ಮುಹಮ್ಮದಾಲಿ ಯವರನ್ನು ಒಳಕ್ಕೆ ಕರತಂದು ಬಿಟ್ಟು ಹೊರಗೆಹೋದನು. ಸುಲ್ತಾನನೆದ್ದು ಮುಹಮ್ಮದಾಲಿಯವರನ್ನು ಆದರಿಸಿ ಆಸನದಲ್ಲಿ ಕುಳ್ಳಿರಿಸಿದನು. ಮುಹಮ್ಮ ದಾಲಿಯವರು ಮುಜರೆಮಾಡಿ ಕುಳಿತುಕೊಂಡರು.

ಸುಲ್ತಾನ್:—ನಗರದ ಸಮಾಚಾರವೇನು?

ಮುಹಮ್ಮದಾಲಿ:—ಯುದ್ಧವಿಲ್ಲದೇ ನಗರವನ್ನು ಇಯುಜ್‌ಖಾನರು ಸನ್ನಿಧಾನಕ್ಕೆ ಒಪ್ಪಿಸಿದ್ದಾರೆ.

ಸುಲ್ತಾನ್:—ಖಾಸಿಂಖಾನರನ್ನು ಕರತಂದಿದ್ದೀರೋ?

ಮುಹಮ್ಮದಾಲಿ;—ಹೌದು! ಹುಜೂರು.

ಸುಲ್ತಾನ್:—ನಗರವನ್ನು ಒಪ್ಪಿಸಿದ್ದರಲ್ಲಿ ಛದ್ಮನೆಯೇನೂ ಇಲ್ಲವೆನ್ನು ತ್ತೀರಾ?

ಮುಹಮ್ಮದಾಲಿ:—ಛದ್ಮನೆಯ ಸುಳಿವೇ ಇರಲಿಲ್ಲ.

ಸುಲ್ತಾನ್:—ಆಮೇರೆಗೆ ಆಧಾರವೇನು?

ಮುಹಮ್ಮದಾಲಿ:—ಛದ್ಮನೆಯಿದ್ದಿದ್ದರೆ ಖಾಸಿಂಖಾನರು ಇಷ್ಟು ಸರಾಗ ವಾಗಿ ಸನ್ನಿಧಾನಕ್ಕೆ ಬರುತ್ತಿರಲಿಲ್ಲ.

ಸುಲ್ತಾನ್ :–ಹಾಗಾದರೆ ಅವರನ್ನು ಬಂದಿಗಳಾಗಿ ಇಲ್ಲಿಗೆ ಕರತಂದಿಲ್ಲವೋ?

ಮುಹಮ್ಮದಾಲಿ :—ಸನ್ನಿಧಾನದ ಸೇವೆ ಮಾಡುವ ಮಿತ್ರರಾಗಿ ಅವರು ಇಲ್ಲಿ ಬಂದಿದ್ದಾರೆ.

ಇಯಜ್ ಖಾನರ ವಿಷಯವೇನೂ ತಿಳಿಯಲಿಲ್ಲವೋ ?

ಇಲ್ಲಾ ! ಹುಜೂರು ! ಅವರು ಮಕ್ಕಾ ಯಾತ್ರೆಗೆ ಹೋದರೆಂದು ಜನ ರಾಡಿಕೊಳ್ಳುತ್ತಾರೆ.

ದೌಲತ್ ರಾಣಿಯುವರೋ ?

ಅವರದೂ ಸಮಾಚಾರವಿಲ್ಲ. ಅವರು ಬಾಬಾಬುಡನಗಿರಿಗೆ ಪ್ರಯಾಣ ಮಾಡಿದ್ದಾರಂತೆ.

ತಮಗೆ ಮತ್ತೇನು ಸಮಾಚಾರವು ತಿಳಿಯಿತೋ ?

ಇಲ್ಲಾ.

ಒಳ್ಳೆಯದು ! ದಿವಾನರವರೇ ! ತಾವು ವಿಶ್ರಮಿಸಿಕೊಳ್ಳಿ. ಖಾಸಿಂ ಖಾನರನ್ನು ಆದರಿಸಿ ತಮ್ಮ ಜೊತೆಯಲ್ಲೇ ಇಟ್ಟುಕೊಂಡಿರಿ. ನಾಳೆ ದರಬಾರಿ ನಲ್ಲಿ ಅವರನ್ನು ಕರತರೋಣವಾಗಲಿ.

ಖಾವಿಂದ್ ! ಅವರಿಗೆ ನಗರದ ದಿವಾನಗಿರಿಯನ್ನು ಕೊಡುವುದಾಗಿ ವಾಗ್ದಾನಮಾಡಿ ಕರತಂದಿದ್ದೇನೆ.

ಅವರು ರಾಜಭಕ್ತಿಯನ್ನು ತೋರ್ಪಡಿಸಿದರೆ ಅವರಿಗೆ ನಗರದ ದಿವಾನ ಗಿರಿಯನ್ನು ಕೊಡಬಹುದು. ಅವರಂಥಾ ಸಮರ್ಥರು ಮತ್ತಾರಿದ್ದಾರೆ. ಇಷ್ಟು ಮಾತುಕಥೆಗಳಾಗಿ ಮುಹಮ್ಮದಾಲಿಯವರು ತಮ್ಮ ಬಿಡಾರಕ್ಕೆ ತೆರಳಿದರು.

ಸುಲ್ತಾನನು ಹೊರಗೆ ಬಂದು ನೋಡಿದನು. ಮೇಲೆ ನಕ್ಷತ್ರ ಪೂರ್ಣ ವಾದ ನೀಲಾಕಾಶ ! ನಿಶಾನಾಥನು ಪೂರ್ಣ ಕಳೇಬರದಿಂದ ಗಗನದಲ್ಲಿ ವಿರಾಜಿ ಸುತ್ತಿದ್ದಾನೆ. ತಾರಾರಮಣಿಯರು ಕಿಲಕಿಲ ನಗುತ್ತಾ ನಾಥನಿಗೆ ಸುಖಾ ಗಮನವನ್ನು ಬಯಸುತ್ತಿದ್ದಾರೆ. ಪಶ್ಚಿಮ ಘಟ್ಟಗಳನ್ನು ಹಾದು ಬಂದ ಮಲಯಾನಿಲವು ಬೀಸುತ್ತಿದೆ. ಸುಲ್ತಾನನು ಪ್ರಕೃತಿಯ ಗಾಂಭಿರ್ಯವನ್ನು

ನೋಡುತ್ತ ನಿಂತಿದ್ದಾನೆ. ಈ ಪ್ರಶಾಂತ ವಾತಾವರಣದಲ್ಲಿ ಮನಸ್ಸು ಎಲ್ಲ ವನ್ನೂ ಮರೆತುಬಿಟ್ಟಿದೆ. ತಾನು ನಗರದ ಪ್ರಾಂತದಲ್ಲಿ ಇದ್ದೇನೆಂಬುದನ್ನೇ ಮರೆತಿದ್ದಾನೆ. ಮಹಮ್ಮದಾಲಿಯನ್ನು ಮರೆತಿದ್ದಾನೆ, ತನ್ನನ್ನೇ ತಾನು ಮರೆತಿದ್ದಾನೆ. ಆದರೂ ಯಾವುದೋ ಒಂದು ಜ್ವಾಲಮಾಲೆಯು ಹೃದಯ ದಲ್ಲಿ ಅಡಗಿದೆ. ಶಾಂತಿಯಿಲ್ಲ. ಸಮಾಧಾನವಿಲ್ಲ. ಸುಲ್ತಾನನು ದೀರ್ಘ ನಿಶ್ವಾಸವನ್ನು ಬಿಟ್ಟನು. ಆ ನಿಶಾ ಸೌಂದರ್ಯವನ್ನು ನೋಡುವುದು ಅವನಿಂದ ಆಗಲಿಲ್ಲ. ಆ ಪೂರ್ಣ ಚಂದ್ರನನ್ನು ನೋಡಿ ಅವನಿಗೆ ಸಹಿಸಿಯಿರಲಿಲ್ಲ. ಆ ತಾರಾಮಂಡಲದಿಂದ ವಿರಾಜಮಾನವಾದ ನಭೋಮಂಡಲವನ್ನು ನೋಡುವ ಶಕ್ತಿಯು ಅವನ ಮನಸ್ಸಿಗಿಲ್ಲ. ಹಾಗೆಯೇ ನೀರವವಾಗಿ ನಿಂತನು. ನಿಲ್ಲು ವುದಕ್ಕಾಗಲಿಲ್ಲ. ಅವನ ಕಾಲುಗಳು ಶಯನಾಗಾರಕ್ಕೆ ಕೊಂಡುಹೋದವು. ಅಲ್ಲಿ ಸಜ್ಜಾಗಿದ್ದ ಹಂಸತೂಲಿಕಾತಲ್ಪದ ಮೇಲೆ ಅವನ ಶರೀರವು ಬಿದ್ದಿತ್ತು. ಇದೊಂದು ಅವನಿಗೆ ಬೋಧೆಯಾಗುತ್ತಿರಲಿಲ್ಲ. ಅಷ್ಟರಲ್ಲಿ ಮನಸ್ಸಿಗೆ ಸ್ವಲ್ಪ ಶಕ್ತಿ ಬಂದಿತೆಂದು ಕಾಣುತ್ತದೆ. ಅಲ್ಲಿ ಆ ಮನಸ್ಸಿನ ಮೇಲೆ ಆ ದೌಲತ್ತಳ ದಿವ್ಯ ಸುಂದರ ವಿಗ್ರಹವು ಆವಿರ್ಭವಿಸಿತು. ಅವಳ ಪಕ್ಕದಲ್ಲಿಯೇ ರಾಧೆಯ ನೀರವಮೂರ್ತಿಯು ಬಂದು ನಿಂತಿತು. ಆ ರಾಧೆಯು ಪ್ರಸನ್ನವದನಗಳಾಗಿ ಅಮೃತವಾಣಿಯಿಂದ ಟಿಪ್ಪು! ಇದೋ ನಿನ್ನ ದೌಲತ್ತಳನ್ನು ಕರತಂದಿದ್ದೇನೆ ಸಂಗ್ರಹಿಸು! ಎಂದು ಹೇಳಿದ ಹಾಗಾಯಿತು. ಆ ಸ್ವರ್ಣ ಪುತ್ಥಳಿಯಂತಿದ್ದ ದೌಲತ್ತಳು ನಸುನಗುವನ್ನು ನಗುತ್ತಾ ಸಮೀಪಕ್ಕೆ ಬಂದು ಬಾಹುಗಳಿಂದ ತನ್ನನ್ನು ಆಲಿಂಗಿಸಿದಂತೆ ಅಧರದ ಮೇಲೆ ತನ್ನ ಮಧುರಾಧರವನ್ನಿಟ್ಟು ಚುಂಬಿಸಿದಂತೆ— ಬೋಧೆಯಾಯಿತು. ಆ ಆನಂದದಲ್ಲಿ ಆ ದರ್ಶನದ ಪ್ರಭೆ ಯಲ್ಲಿ ಆ ಸ್ಪರ್ಶದ ಭ್ರಾಂತಿಯಲ್ಲಿ ಆ ಚುಂಬನದ ಮಾಧುರ್ಯದಲ್ಲಿ ಮೈ ರೋಮಾಂಚವಾಯಿತು. ತಂಗಾಳಿಯು ಬೀಸಿತು. ಸುಲ್ತಾನನು ಕಣ್ಣು ಬಿಟ್ಟನು. ಅವನು ತನ್ನ ಶಯನ ಗೃಹದಲ್ಲಿದ್ದಾನೆಂದು; ತನ್ನ ಹಂಸ ತೂಲಿಕಾತಲ್ಪದಲ್ಲಿ ಮಲಗಿದ್ದಾನೆಂದು ಪ್ರಬೋಧೆಯಾಯಿತು. ಆ ಮನ ಮೋಹಿನಿಯಾದ ದೌಲತ್ತಳೆಲ್ಲಿ! ಆ ಅಭಿಸಾರಿಕೆಯಾದ ರಾಧೆಯೆಲ್ಲಿ! ಎಲ್ಲವೂ ಆ ದಗ್ಧಹೃದಯದ ಮೇಲೆ ಪ್ರತಿಬಿಂಬಿಸಿದ ಮರುಮರೀಚಿಕೆ!

ಅಷ್ಟರಲ್ಲಿ ಅರ್ಧರಾತ್ರಿಯ ತುತ್ತೂರಿಯಾಯಿತು. ಪಹರಿಗಳು ಪಹರೆ ಕೂಗಿದರು. ಸುಲ್ತಾನರು ಎದ್ದು ನೀರವವಾಗಿ ತನ್ನ ಹಾಸಿಗೆಯ ಮೇಲೆ ಕುಳಿತರು. ಆ ಸುಡುವ ಮನಸ್ಸು ಅಲ್ಲಿ ಕೂತುಕೊಳ್ಳಲು ಬಿಡಲಿಲ್ಲ. ಎದ್ದು ಹೊರಟನು. ಶಿಬಿರವನ್ನೆಲ್ಲಾ ಒಂದು ಸುತ್ತು ಬಂದನು. ಎಲ್ಲರೂ ಗಾಢ ನಿದ್ರೆಯಲ್ಲಿದ್ದಾರೆ. ಪಹರೆಯವರು ಮಾತ್ರ ತಿರುಗಾಡುತ್ತಿದ್ದಾರೆ. ಸುಲ್ತಾನನ್ನು ಕಾಣುತ್ತಲೇ ಪಕ್ಕಕ್ಕೆ ಸರಿದು ನಿಂತು ಮುಜರೆ ಮಾಡುತ್ತಾರೆ. ಸುಲ್ತಾನನು ದಿವಾನ್ ಮಹಮ್ಮದಾಲಿಯವರ ಡೇರೆಯ ಹಿಂಭಾಗಕ್ಕೆ ಬಂದನು. ಅಲ್ಲಿ ಇನ್ನೂ ದೀಪವು ಉರಿಯುತ್ತಿತ್ತು. ಒಳಗೆ ಮಾತಿನ ಶಬ್ದವು ಕೇಳಿಸಿತು. ಆ ಮಾತುಗಳನ್ನು ಸುಲ್ತಾನನು ಕಿವಿಗೊಟ್ಟು ಕೇಳುತ್ತ ನಿಂತನು.

ಖಾಸಿಂಖಾನರೇ! ಇಯಜ್‌ಖಾನರು ನಗರವನ್ನು ಏಕೆ ಬಿಟ್ಟುಬಿಟ್ಟರು?

ಟಿಪ್ಪೂಸುಲ್ತಾನರೊಡನೆ ಯುದ್ಧ ಮಾಡಕೂಡದೆಂದು.

ಸುಲ್ತಾನರು ಯುದ್ಧಕ್ಕೆ ಬಾರದಿದ್ದರೆ ಇಯಜ್‌ಖಾನರು ನಗರವನ್ನು ಪರಿತ್ಯಾಗ ಮಾಡುತ್ತ ಇರಲಿಲ್ಲವೋ?

ಇಲ್ಲ! ಅದರಲ್ಲೇನೋ ಒಂದು ಗೂಢ ರಹಸ್ಯವಿರುವಂತಿದೆ. ದೊಡ್ಡ ನವಾಬರು ಮೃತರಾದಂದಿನಿಂದ ಖಾನ್ ಸಾಹೇಬರವರು ರಾಜ್ಯಭಾರದಲ್ಲಿ ವಿಮುಖರಾಗಿಯೇ ಇದಾರೆ.

ಕಾರಣವೇನು?

ಅದನ್ನರಿಯುವುದು ಕಷ್ಟ.

ಈಗ ಅವರು ನಗರದ ಶೀಮೆಯ ಗಡಿಯನ್ನು ದಾಟಿ ಹೋಗಿರಬಹು ದೆಂದೇ ತಾವು ನಿಶ್ಚಯವಾಗಿ ಹೇಳಬಲ್ಲಿರಾ?

ನಿಶ್ಚಯವಾಗಿಯೂ ಅವರು ನಗರದ ಶೀಮೆಯಲಿಲ್ಲವೆಂದು ಪ್ರಮಾಣ ಮಾಡಬಲ್ಲೆ.

ದೌಲತ್‌ರಾಣಿಯವರು ಎಲ್ಲಿ ಹೋಗಿದ್ದಾರೆ?

ಅವರು ಬಾಬಾಬುಡನ್‌ಗಿರಿಗೆ ಹೋಗಿದ್ದಾರೆಂದು ಹೇಳುತ್ತಾರೆ,

ಅವರೂ ಮರೆಯಾಗಿರುವುದರಲ್ಲಿ ರಾಜಕಾರಣವೇನಾದರೂ ಉಂಟೋ?

ಅವರ ವಿಷಯದಲ್ಲಿ ರಾಜಕಾರಣ ಉಂಟೋ ಇಲ್ಲವೋ ಹೇಳಲಾಗುವು ದಿಲ್ಲ. ಇಯುಜ್‌ಖಾನರವರು ರಾಜ್ಯಪರಿತ್ಯಾಗ ಮಾಡುವುದಕ್ಕೆ ದೌಲತ್ ರಾಣಿಯವರೇ ಕಾರಣಕರ್ತರೆಂದು ಕೆಲವರ ಊಹೆ ಉಂಟು.

ಇಯುಜ್‌ಖಾನರವರೂ ದೌಲತ್ ರಾಣಿಯವರೂ ಒಂದೇ ಕಡೆಗೆ ಪ್ರಯಾಣ ಮಾಡಿದ್ದಾರೆಂದು ಊಹಿಸಬಹುದಲ್ಲವೇ ?

ಹಾಗೆ ಊಹಿಸಿದರೂ ಊಹಿಸಬಹುದು. ಅವರಿಬ್ಬರೂ ಇಂಗ್ಲೀಷರೊಡನೆ ಸಂಧಿಗಾಗಿ ಬೊಂಬಾಯಿಗೆ ಹೋಗಿರಬಹುದೆಂದು ಒಂದು ವರ್ತಮಾನವಿದೆ.

ದಿವಾನರೇ! ನಾಲಿಗೆಯನ್ನು ಹಿಡಿದು ಮಾತನಾಡಬೇಕು. ಇಯುಜ್ ಖಾನರ ರೋಮಕೂಪಗಳಲ್ಲೆಲ್ಲಾ ಇಂಗ್ಲೀಷರ ದ್ವೇಷವು ಉರಿಯುತ್ತಿದೆ. ಅಂಥಾವರು ಸಂಧಿಗಾಗಿ ಬೊಂಬಾಯಿ ಕೋಟೆಗೆ ಹೋಗುತ್ತಾರೆಯೋ ?

ಇಲ್ಲಾ ಖಾನರೇ ಮಾಫ್‌ಮಾಡಿರಿ. ಇಲ್ಲಿಗೆ ಬಂದ ಬೇಹುಗಾರರು ಹಾಗೆ ಸುದ್ದಿಯನ್ನು ತಂದಿದ್ದಾರೆ.

ಆ ಬೇಹುಗಾರರ ನಾಲಿಗೆಯನ್ನು ಶೀಳಿಸಿ ಅವರನ್ನು ತೂಗುಮರಕ್ಕೆ ಕಟ್ಟಿಸಬೇಕು.

ದಿವಾನರೇ! ಸಂಧಿಯ ಪ್ರಮೇಯವು ತಾನೇ ಎಲ್ಲಿದೆ? ನಮ್ಮ ಸೈನ್ಯ, ನಮ್ಮ ಫಿರಂಗಿಗಳು ಇವುಗಳ ಮುಂದೆ ಇಂಗ್ಲೀಷ್ ಸೈನ್ಯವು ಧೂಳೀಪಟವಾಗಿ ಹೋದೀತು. ನಗರದ ಶೀಮೆಗೆ ಕಾಲಿಡುವ ಎದೆಗಾರತನವು ಯಾವ ಸರದಾರ ನಿಗೂ ಇಲ್ಲ.

ಹಾಗಾದರೆ ಮೈಸೂರಿನ ಸೈನ್ಯವನ್ನು ಎದುರಿಸದಿದ್ದುದೇಕೆ?

ದಿವಾನರೇ! ಇಯುಜ್‌ಖಾನರು ಎದುರಿಸಿ ನಿಂತಿದ್ದರೆ–ನಿಮ್ಮ ಮೈಸೂರಿನ ಸಮಸ್ತ ಸೈನ್ಯವೂ ಪೂರ್ಣಾಹುತಿಯಾಗುತ್ತಿತ್ತು. ಟಿಪ್ಪೂಸುಲ್ತಾನರ ಮೇಲೆ ಕತ್ತಿ ಕಟ್ಟುವುದಿಲ್ಲವೆಂದು ಇಯುಜ್‌ಖಾನರು ಶಪಥಮಾಡಿ ಇಂದು ಇಂತಹ ಅಪಮಾನಕರವಾದ ಸಂದೇಹಗಳಿಗೆ ಆಸ್ಪದವಾಯಿತು.

ಇಯುಜ್‌ಖಾನರೇಕೆ ಈ ಶಪಥಮಾಡಿದರು? ದೌಲತ್ ರಾಣಿಯವರಿ ಗಾಗಿ ಮಾಡಿದರೆಂದು ನನ್ನ ಊಹೆ. ನವಾಬರೂ ದೌಲತ್ ರಾಣಿಯವರಿ

ಗಾಗಿಯೇ ಯುದ್ಧವನ್ನು ಬಿಟ್ಟರು. ಅವರಿಗಾಗಿಯೇ ರಾಜ್ಯವನ್ನೂ ಬಿಟ್ಟು ಕೊಟ್ಟರು.

ಅವೇನು, ದೌಲತ್ ರಾಣಿಯವರಿಗೂ; ಈ ರಾಜ್ಯಪರಿತ್ಯಾಗಕ್ಕೆ ಸಂಬಂಧವೇನು ?

ಹೌದು ! ದೌಲತ್ ರಾಣಿಯವರೊಬ್ಬರು, ಬಾಬಾಬುಡನ್‌ಗಿರಿಗೆ ಹೊಸ ದಾಗಿ ಬಂದಿರುವ ಫಕೀರರೊಬ್ಬರು ಇವರ ಮಾತಿನಂತೆಯೇ ಈ ರಾಜ್ಯಪರಿ ತ್ಯಾಗ ಪ್ರಕರಣವು ನಡೆದಿದೆ.

ಇದರಲ್ಲೇನೋ ಒಂದು ಗೂಢ ತಂತ್ರವಿರಬೇಕು.

ಗೂಢ ತಂತ್ರವೇ ? ಅದು ಎಳ್ಳಷ್ಟೂ ಇಲ್ಲ. ಸುಲ್ತಾನರೂ—ಇಯಾಜ್ ಖಾನರೂ ರಣದಲ್ಲಿ ನಿಂತು ಹೋರಾಡಕೂಡದೆಂಬುದೇ ಇದರ ರಹಸ್ಯ.

ಆಹಾ ! ಎಂತಹ ಸಂಧಿ ಎಷ್ಟು ಉದಾತ್ತ ರಾಜನೀತಿ. ಅಲ್ಲಾನು ಇದೊಂದು ಸಂಧಿಯನ್ನು ತಂದೊಡ್ಡದಿದ್ದರೆ ಮೈಸೂರು ರಾಜ್ಯವು ಮಣ್ಣು ಪಾಲಾಗುತ್ತಿತ್ತು.

ಖಾನರೇ ನಾಳೇ ದಿನದ ದರಬಾರಿನಲ್ಲಿ ನಿಮಗೆ ನಗರದ ದಿವಾನಗಿರಿ ಯನ್ನು ದಯಪಾಲಿಸುತ್ತಾರೆ. ನಾಳೆಯಿಂದ ನೀವು ಇಯಾಜ್ ಖಾನರ ನೌಕರರಲ್ಲ. ಸ್ವಯಂ ಟಿಪ್ಪೂಸುಲ್ತಾನರ ಕರ್ಮಚಾರಿಗಳು. ನಮ್ಮ ಭರ ವಸೆಯೆಲ್ಲಾ ನಿಮ್ಮ ಮೇಲೆಯೇ ಇದೆ. ನಾನು ದಿವಾನಗಿರಿಯನ್ನು ಒಪ್ಪಿ ಕೊಳ್ಳುವುದಿಲ್ಲ. ನನ್ನ ಈ ಶರೀರವು ಇಯಾಜ್ ಖಾನರ ಸೇವೆಗಾಗಿ ಮೀಸ ಲಾಗಿಟ್ಟಿದೆ. ಅದರ ಮೇಲೆ ಯಾರ ಅಧಿಕಾರವೂ ಇಲ್ಲ. ನಾನು ಟಿಪ್ಪೂ ಸುಲ್ತಾನರ ಕರ್ಮಚಾರಿಯೂ ಅಲ್ಲ. ಚಾಕರನೂ ಅಲ್ಲ.

ಹಾಗಾದರೆ ಇಲ್ಲಿಗೇಕೆ ಬಂದಿರಿ ?

ತಮ್ಮ ಅಪ್ಪಣೆಯನ್ನು ಪಾಲಿಸಬೇಕೆಂದೂ ಇಯಾಜ್ ಖಾನರ ಆಜ್ಞೆ.

ಇಲ್ಲಿ ತಮಗೇನೂ ಭಯವಿಲ್ಲವೋ ?

ನನ್ಗೆ ಭಯವೇ ಅದರ ನೆರಳೂ ಇಲ್ಲ. ತಮ್ಮ ರಕ್ಷಣೆಯಲ್ಲಿರುವಾಗ ನನಗೆ ಭಯವೆಂದರೇನು ?

ತಮಗೆ ಇಲ್ಲೇನೂ ಕೆಲಸವಿಲ್ಲವೋ?

ಉಂಟು ಸುಲ್ತಾನರನ್ನು ನೋಡಿ ಮುಖಾಮುಖಿ ಎರಡು ಮಾತನಾಡಿ ಹೋಗಬೇಕೆಂದು.

ನಗರದ ನವಾಬಗಿರಿಯನ್ನು ಯಾರಿಗೆ ಕೊಡಬೇಕೆಂದು ತಮ್ಮ ಅಭಿಪ್ರಾಯ.

ತಮಗೆ ಸ್ವಯಂ ದಿವಾನ ಸಾಹೇಬರಿಗೆ.

ಅಲ್ಲಿಗೆ ಮಾತು ಪೂರೈಸಿತು. ಹೊರಗೆ ಕಿವಿಗೊಟ್ಟು ಆಲೈಸುತ್ತಾ ಇದ್ದ ಸುಲ್ತಾನನು ಅಪ್ರತಿಭನಾದನು. ಅಲ್ಲಿಂದ ಮೆಲ್ಲಗೆ ಸರಿದು ಹೊರಟು ಹೋದನು.

ಸುಲ್ತಾನನು ಅಲ್ಲಿಂದ ಹೋಗಿ ತನ್ನ ಶಯನದ ಗುಡಾರವನ್ನು ಹೊಕ್ಕನು ಹಾಸಿಗೆಯ ಮೇಲೆ ಬಿದ್ದು ಹೊರಳುತ್ತಿದ್ದನು. ಸ್ವಲ್ಪ ಸ್ವಲ್ಪ ನಿದ್ದೆ, ಸ್ವಲ್ಪ ಸ್ವಲ್ಪ ಎಚ್ಚರ. ಎಷ್ಟೋ ಸ್ವಪ್ನಗಳು. ಅವುಗಳಲ್ಲಿ ಕೆಲವು ಆಶಾರ್ಜಕವಾದುವು. ಕೆಲವು ನಿರಾಶಾಭೂಯಿಷ್ಠವಾದುವು. ಹೀಗೆ ಬೆಳಗಾಯಿತು.

ಪ್ರಾತಃಕಾಲ ಎಂಟು ಗಂಟೆಗೆ ದರಬಾರಿನ ಮಂಟಪದಲ್ಲಿ ದರಬಾರಿಗಳೆಲ್ಲ ನೆರೆದಿದ್ದಾರೆ. ಹೊರಗಡೆ ಅಂಗಳದಲ್ಲಿ ಎಲ್ಲ ಸರದಾರರೂ ಸಾಲುಗಟ್ಟಿ ನಿಂತಿದ್ದಾರೆ. ಮಹಮ್ಮದ್ ಆಲಿಯವರು ಖಾಸಿಂಖಾನರನ್ನು ಜೊತೆಯಲ್ಲಿ ಕರೆದುಕೊಂಡು, ತಮ್ಮ ಗುಡಾರದಿಂದ ಹೊರಟರು. ಅವರ ಹಿಂದುಗಡೆ ನಜರುಗಳನ್ನು ತೆಗೆದುಕೊಂಡು, ನಗರದ ಗಿರಿಜಾಮಿಾಶೆಯ ಸರದಾರರು ಬರುತ್ತಿದ್ದಾರೆ ಮಹಮ್ಮದಾಲಿಯವರಿಗೆ ಎಲ್ಲ ಪಟಾಲಂಗಳ ಸರದಾರರೂ ಕವಾಯಿತ್ ಮುಜರೆ ಮಾಡುತ್ತಿದ್ದಾರೆ. ಅವರ ಪಕ್ಕದಲ್ಲಿ ದಿವಾನ್ ಖಾಸಿಂಖಾನರು ಬರುತ್ತಿದ್ದಾರೆ. ಆ ಸೈನಿಕರೆಲ್ಲರೂ ಎಂಥಾ ವೀರಪುರುಷ, ಎಂಥಾ ಕಡುಗಲಿ ಎಂದು ತಮ್ಮ ತಮ್ಮಲ್ಲೇ ಮಾತನಾಡಿಕೊಳ್ಳುತ್ತಿದ್ದಾರೆ. ಮಹಮ್ಮದಾಲಿಯವರು ಸಭಾಂಗಣಕ್ಕೆ ಪ್ರವೇಶ ಮಾಡಿದರು. ಅಲ್ಲಿದ್ದವರೆಲ್ಲಾ ಅದಬ್ಬಿನಿಂದ ಮುಜರೆ ಮಾಡುತ್ತಿದ್ದರು. ಎಲ್ಲರ ದೃಷ್ಟಿಯೂ ಖಾಸಿಂಖಾನರ ಮೇಲೆ ಬಿದ್ದಿದೆ. ಮಹಮ್ಮದಾಲಿಯವರು ಸಿಂಹಾಸನದ ಸಮಿಾಪದಲ್ಲಿ ಹೋಗಿ ಕುಳಿತುಕೊಂಡರು. ಅವರ ಎಡಪಾರ್ಶ್ವದಲ್ಲಿ ಖಾಸಿಂಖಾನರು ಕುಳಿತುಕೊಂಡರು.

ದರಬಾರಿಗಳೆಲ್ಲರ ದೃಷ್ಟಿಯೂ ಖಾಸಿಂಖಾನನ ಕಡೆಗೇ ಇತ್ತು. ಇಷ್ಟರಲ್ಲಿ ಚೋಪುದಾರರ ಕೂಗು ಕೇಳಿಸಿತು. ವಂದಿಮಾಗಧರು ಪರಾಕು ಹೇಳಿದರು. ಸುಲ್ತಾನರು ಸಭಾಮಂಟಪಕ್ಕೆ ಬಿಜಯಮಾಡಿದರು. ಸಿಂಹಾಸನದ ಮೇಲೆ ಬಂದು ಕುಳಿತರು. ದರಬಾರಿಗಳೆಲ್ಲರೂ ಮುಜರೆ ಮಾಡಿದರು. ಖಾಸಿಂಖಾನರು ನಜರುಗಳನ್ನು ಸಮರ್ಪಿಸಿ ಮುಜರೆ ಮಾಡಿದರು. ಸುಲ್ತಾನರು ಅತ್ತ ಕಡೆಗೆ ನೋಡಿ—ಮಂದಹಾಸದಿಂದ ಮನ್ನಿಸಿದರು. ಅನಂತರ ಮಹಮ್ಮದಾಲಿ ಯವರ ಕಡೆ ತಿರುಗಿ ನೋಡಿದರು. ಆ ಮಂತ್ರಿಗಳು ಎದ್ದು ನಗರದ ವೃತ್ತಾಂತವನ್ನು ಸಂಗ್ರಹವಾಗಿ ಬಿನ್ನಯಿಸಿದರು.

ಸುಲ್ತಾನ್ :—ನಗರದ ನವಾಬರು ರಾಜ್ಯವನ್ನು ನಮಗೆ ಒಪ್ಪಿಸಿ ದ್ದಾರೆಯೋ?

ದಿವಾನ್ :—ಹೌದು ಹುಜೂರು, ಸನ್ನಿಧಾನಕ್ಕೆ ಒಪ್ಪಿಸಿದ್ದಾರೆ. ನಗರದ ನವಾಬರು ಅಪಚಾರವನ್ನು ಮಾಡಿದ್ದಾರೆಂದು ಇಷ್ಟು ಸೈನ್ಯ ಸನ್ನಾಹದೊಡನೆ ಬರಬೇಕಾಯಿತು.

ಖಾಸಿಂಖಾನ್ :—ಹುಜೂರು ಬೇ ಅದಬ್ ಕ್ಷಮಿಸಬೇಕು. ಸನ್ನಿಧಾನಕ್ಕೆ ನಗರದಲ್ಲಿ ಎಳ್ಳಷ್ಟಾದರೂ ಅಪಚಾರವು ನಡೆದಿಲ್ಲ. ನಗರದ ನವಾಬರವರು ತಮ್ಮ ರಾಜ್ಯವನ್ನು ತಮಗೆ ಒಪ್ಪಿಸಿದ್ದಾರೆ.

ಸುಲ್ತಾನ್ :—ಸಂತೋಷ! ಅವರು ಬಿಟ್ಟು ಹೋದರೆಂದು ನಾವು ಬಿಟ್ಟುಬಿಡುವುದಕ್ಕಾಗುತ್ತದೆಯೋ? ನಾವು ಎಲ್ಲ ಸಮಾಚಾರವನ್ನು ದಿವಾನ ರಿಂದ ಕೇಳಿದ್ದೇವೆ. ನಗರದ ದಿವಾನಗಿರಿಯನ್ನು ನಿಮಗೆ ದಯಪಾಲಿಸ ಬೇಕೆಂದು ಮಹಮ್ಮದಾಲಿಯವರು ಶಿಫಾರಸು ಮಾಡಿದ್ದಾರೆ.

ಖಾಸಿಂ :—ಜಹಾಪನಾ! ನಾನು ಚಿಕ್ಕ ವಯಸ್ಸಿನವನು. ನಗರವು ದೊಡ್ಡ ರಾಜ್ಯ! ಯಾರಾದರೂ ಅನುಭವಸ್ಥರಾದ ಸರದಾರರನ್ನು ನೇಮಿಸು ವುದೇ ಒಳ್ಳೆಯದು.

ದಿವಾನ್ :—ಹುಜೂರಿನ ಅನುಗ್ರಹ? ಚಿಕ್ಕವರಾದರೇನು? ದೊಡ್ಡ ವರಾದರೇನು? ಖಾವಂದರು ತಮ್ಮ ಮೇಲೆ ಪೂರ್ಣಾನುಗ್ರಹಮಾಡಿದ್ದಾರೆ. ತಮಗೆ ದಯಪಾಲಿಸಿರುವುದು ದಿವಾನಗಿರಿಯಾದರೂ ನಗರದ ನವಾಬಗಿರಿಯು

ಸರ್ವಾಧಿಕಾರವನ್ನು ಚುನಾಯಿಸುವ ಹುಕ್ಕುಂ ನಿಮಗೆ ಆಗಿರುತ್ತೆ ಎಂದು ಹೇಳಿದರು. ಬಿಚ್ಚುಕತ್ತಿ-ಖಿಲ್ಲತ್ತುಗಳನ್ನು ತಂದು ಸುಲ್ತಾನರ ಕರಸ್ಪರ್ಶ ಮಾಡಿಸಿ ಖಾಸಿಂಖಾನರಿಗೆ ಕೊಟ್ಟರು. ಅವರು ಆ ಸಭಾಮಂಟಪದಲ್ಲಿ ಸುಲ್ತಾನರ ಸನ್ನಿಧಾನದಲ್ಲಿ ಅವಾಕ್ಕಾಗಿ ತಲೆಬಾಗಿ ಸ್ವೀಕರಿಸಿದರು. ಸುಲ್ತಾನರು ಸಿಂಹಾಸನದಿಂದ ಎದ್ದು ವಿಶ್ರಾಂತಿ ಗೃಹವನ್ನು ಹೊಕ್ಕರು.

ದಿವಾನ್ ಖಾಸಿಂಖಾನರಿಗಾಗಿ ಬೇರೊಂದು ಭವ್ಯ ಮಂಟಪವು ಅಣಿಯಾಗಿದೆ. ಬಾಗಿಲುನಲ್ಲಿ ಬಿಚ್ಚು ಕತ್ತಿ ಪಹರ ಕೊಡುತ್ತಿದ್ದಾರೆ. ಅತಂಸ್ತಿಗೆ ತಕ್ಕ ಐಶಕ್ಕುಗಳೆಲ್ಲಾ ಸಜ್ಜಾಗಿದೆ. ದಿವಾನ್ ಮಹಮ್ಮದಾಲಿಯವರು ಖಾಸಿಂಖಾನರನ್ನು ಜೊತೆಯಲ್ಲಿ ಕರತಂದು ಅವರ ಬಿಡಾರಕ್ಕೆ ಬಿಟ್ಟು ಖಾಸಿಂಖಾನರ ಅಪ್ಪಣೆ ಪಡೆದು ತಮ್ಮ ಬಿಡಾರಕ್ಕೆ ತೆರಳಿದರು. ಖಾಸಿಂಖಾನನು ಒಳಗೆ ಕುಳಿತಿದ್ದಾನೆ. ಏಕಾಂತವಾಗಿ ಕುಳಿತಿದ್ದಾನೆ. ಅವನ ಕಡೆಯುವರು ಯಾರೂ ಇಲ್ಲ. ಈ ದೊಡ್ಡ ಮೈಸೂರು ಶಿಬಿರದಲ್ಲಿ ಇಂದು ಖಾಸಿಂಖಾನನಿಗೆ ದೊರೆತ ಗೌರವವು ಮತ್ತಾರಿಗೂ ಇಲ್ಲ. ದೊಡ್ಡದೊಡ್ಡ ದಿವಾನರಿಗೆ ದೊರೆಯುವ ಮಹೋನ್ನತ ಸ್ಥಾನ. ಆದರೂ ಖಾಸಿಂಖಾನನು ಸುಖಿಯಲ್ಲ. ಅವನಿಗೆ ಸುಲ್ತಾನರಿಂದ ಅಂಕಿತನಾದದ್ದು ಅಪಮಾನವೆಂದು ತೋರಿತು. ತನ್ನ ಸ್ವಾಮಿಯಾದ ಇಯಜ್‌ಖಾನನ ಮೇಲೆ ಸುಲ್ತಾನನ ಭೃತ್ಯನೆಂದರೆ- ಇನ್ನು ಅದಕ್ಕಿಂತಲೂ ಸ್ವಾಮಿದ್ರೋಹವು ಬೇರೊಂದಿಲ್ಲವೆಂದು ತೋರಿತು. ಮಹಮ್ಮದಾಲಿಯವರು ನನ್ನನ್ನೇಕೆ ಕರತಂದರು. ಸುಲ್ತಾನರೇಕೆ ದಿವಾನಗಿರಿಯನ್ನು ಕೊಟ್ಟರು. ಆ ಸಭಾ ಮಧ್ಯದಲ್ಲಿ ಸಹಸ್ರ ಸರದಾರರ ಸಮ್ಮುಖದಲ್ಲಿ ನಾನೇಕೆ ಭ್ರಾಂತನಾಗಿ ಈ ಗುಲಾಮಗಿರಿಯನ್ನು ಒಪ್ಪಿಕೊಂಡೆ! ಆಹಾ! ಎಂಥಾ ಮೂರ್ಖನು ನಾನು. ಅಧಿಕಾರಲೋಭವು ಎಂತಹವನನ್ನಾದರೂ ಮರುಳು ಮಾಡುವುದಲ್ಲವೇ? ನನ್ನ ಈ ಬಾಲ ಬುದ್ಧಿಯನ್ನು ನೋಡಿ ಇಯಜ್ ಖಾನರೂ ನಗದಿರುವರೇ ? ಅಯ್ಯೋ! ಅವರೇಕೆ ರಾಜ್ಯವನ್ನು ಬಿಟ್ಟು ಹೋಗಬೇಕು. ಈ ಮೈಸೂರಿನ ಸೈನ್ಯವನ್ನು ಧೂಳೀಪಟವೆಬ್ಬಿಸುವ ತ್ರಾಣವು ನಮಗಿದೆ. ಇಂಥಾದ್ದರಲ್ಲಿ ಖಾನರವರು ಹೊರಟುಹೋದ್ದು ನಮಗೆಷ್ಟು ಅಪಮಾನಕರ. ಆ ದೌಲತ್ ರಾಣಿಯವರ ಮಾತುಕೇಳಿ ಖಾನರು ಇಷ್ಟು ಅಪಮಾನವನ್ನು ಹೊಂದಿದರು. ರಾಜ್ಯಭ್ರಷ್ಟರಾದರು. ನಮ್ಮೆಲ್ಲರನ್ನು

ನಿರ್ವೀರ್ಯರಾಗಿ ಮಾಡಿದರು. "ಸ್ತ್ರೀ ಬುದ್ಧಿ ಪ್ರಳಯಾಂತಕಃ" ಎಂದು ದೊಡ್ಡವರು ಹೇಳುವುದು ಸುಳ್ಳಾದೀತೆ? ಪರಾಕ್ರಮಶಾಲಿಯಾಗ ಖಾನನು ಸ್ತ್ರೀಯ ಮಾತು ಕೇಳಿ ರಾಜ್ಯವನ್ನು ಬಿಡಬಹುದೇ? ಅಯ್ಯೋ! ಆ ದೌಲತ್ತಳು ನಗರಕ್ಕೆ ಮೃತ್ಯು ದೇವತೆಯಂತೆ ಬಂದವಳಲ್ಲಾ! ಅವರ ಮಾತು ಹಾಗಿರಲಿ. ನಾನೆಂಥಾ ಸ್ವಾಮಿದ್ರೋಹಿ! ಟಿಪ್ಪೂಸುಲ್ತಾನರ ಕೈಯಿಂದ ಅಧಿಕಾರವನ್ನು ಪಡೆಯುವುದೇ! ಈ ನಗರದ ಶೀಮೆಯ ಪಾಳಯಗಾರರೆಲ್ಲಾ ಏನೆಂದಾರು? ಹೇಡಿಯೆನ್ನಲಾರರೇ। ನಾನೆಂದಿಗೂ ಈ ಅಧಿಕಾರವನ್ನು ಸ್ವೀಕರಿಸುವುದಿಲ್ಲ. ಇಲ್ಲಿಯೇ ಬಿಸಾಡಿ ಹೋಗುತ್ತೇನೆ. ಸುಲ್ತಾನನಿಗೆ ಒಂದು ಕೈ ತೋರಿಸುತ್ತೇನೆ. ಹೀಗೆಂದುಕೊಳ್ಳುತ್ತಿದ್ದನು. ಅಷ್ಟರಲ್ಲಿ ಆರೋಗಣೆಯ ಸಮಯ ಬಂತು. ಆರೋಗಣೆಗೆ ಎಲ್ಲವೂ ಸಿದ್ಧಮಾಡಲ್ಪಟ್ಟಿತ್ತು. ಒಳಗೆ ಹೋಗಿ ನೋಡಿದನು. ಪೀಠದಮೇಲೆ ಕುಳಿತನು. ಎದುರಿನಲ್ಲಿ ಬೆಳ್ಳಿಯ ಮಣೆಯಮೇಲೆ ಅಗಲವಾದ ಚಿನ್ನದ ತಟ್ಟೆಯಲ್ಲಿ ರಾಜಯೋಗ್ಯವಾದ ಭೋಜನವು ಬಡಿಸಿತ್ತು. ಖಾಸಿಂಖಾನನು ಎದುರಿಗೆ ಕುಳಿತಿದ್ದಾನೆ. ಅವನ ಕಣ್ಣುಗಳಲ್ಲಿ ನೀರು ತುಂಬಿತು. ಊಟಮಾಡಲಾಗಲಿಲ್ಲ. ಆ ಭೋಜನವನ್ನು ನೋಡುವುದಕ್ಕೂ ಸಾಧ್ಯವಾಗಲಿಲ್ಲ.

'ಇದು ಟಿಪ್ಪೂಸುಲ್ತಾನನ ಅನ್ನ! ಎಂದು ಹೇಳುತ್ತಾ ಎದ್ದನು. ಹೊರಗೆ ಬಂದು ವಿಶ್ರಾಂತಿಗೃಹದಲ್ಲಿ ಕುಳಿತನು. ಅಲ್ಲಿಂದ ಹೊರಟು ಹೋಗಬೇಕೆಂದು ನಿಶ್ಚಯಿಸಿದನು. ಅವನಿಗೆ ಹೊರಟುಹೋಗುವುದೇನೂ ಕಷ್ಟವಾಗಿರಲಿಲ್ಲ. ಅವನು ನಗರದ ದಿವಾನ, ಅವನನ್ನು ಯಾರೂ ನಿರ್ಬಂಧಪಡಿಸುತ್ತಿರಲಿಲ್ಲ. ಆದರೆ ಮಹಮ್ಮದಾಲಿಯವರು ಕರತಂದರು. ಅವರಿಗೆ ಒಂದು ಮಾತು ಹೇಳಿ ಹೋಗಬೇಕೆಂದು ಯೋಚಿಸಿದನು. ಸಾಮಾನ್ಯ ಮನುಷ್ಯನಂತೆ ಎದ್ದು ಥಟ್ಟನೆ ಮಹಮ್ಮದಾಲಿಯವರ ಬಿಡಾರಕ್ಕೆ ಹೋದನು. ಅಲ್ಲಿ ಅವರಿರಲಿಲ್ಲ. ಅವರು ಸೈನ್ಯವಿರುವ ಸ್ಥಳಕ್ಕೆ ಹೋಗಿದ್ದರು. ಪುನಃ ಬಂದು ತನ್ನ ವಾಸಗೃಹದಲ್ಲೇ ಕೂತುಕೊಂಡನು. ಸುಲ್ತಾನರ ಸೈನ್ಯದ ಸರದಾರರು ಒಬ್ಬೊಬ್ಬರಾಗಿ ಬಂದು ನಗರದ ಹೊಸ ದಿವಾನರನ್ನು ಭೇಟಿ ಮಾಡಿದರು. ಎಲ್ಲರೊಡನೆಯೂ ಯಥೋಚಿತವಾಗ ಸಂಭಾಷಣೆ ಮಾಡಿ ಕಳುಹಿಸನು. ಇಷ್ಟು ಹೊತ್ತಿಗೆ ಮೂರು ಝಾವವಾಯಿತು. ಹುಜೂರಿನ ಓಲೇ

ಕಾರನು ಒಂದು ಅದಬ್ಬಿನಿಂದ ಮುಜರೆಮಾಡಿ "ಸನ್ನಿಧಾನದ ಅಪ್ಪಣೆಯಾಗುತ್ತದೆ" ಎಂದು ಅರಿಕೆಮಾಡಿದನು. ಖಾಸಿಂಖಾನನಿಗೆ ಏನೋ ಸ್ಫೂರ್ತಿ ಬಂದಹಾಗಾಯಿತು. ಒಳ್ಳೆಯ ಸನ್ನಿವೇಶ! ನಾವೇಕೆ ಹಿಂದೆಮುಂದೆ ನೋಡಬೇಕು. ಸುಲ್ತಾನರಿಗೇ ಹೇಳಿ ನಗರಕ್ಕೆ ಹೊರಟುಹೋಗುತ್ತೇನೆ ಎಂದು ತನ್ನಷ್ಟಕ್ಕೆ ತಾನೇ ಹೇಳಿಕೊಂಡನು. ಸುಲ್ತಾನರಲ್ಲಿ ಏನು ಹೇಳಬೇಕೆಂಬುದನ್ನು ಗುಣಿಸಿ ಮನಸ್ಸಿನಲ್ಲಿ ಖಚಿತಮಾಡಿಟ್ಟುಕೊಂಡನು. ಮಹಾಪ್ರಭುಗಳಲ್ಲಿ ಏನಾದರೂ ಸಂಪಾದನೆ ಮಾಡಬೇಕೆಂದಿರುವವನಿಗೆ ಬಹಳ ಮಂತ್ರಾಲೋಚನೆಗಳು ಬೇಕು. ಬಿಟ್ಟು ಹೋಗುವವನಿಗೇನು ಬೇಕು? ಅಷ್ಟೇ ಯೋಚಿಸಿದನು ಬಿಳಿಯ ಸಿಲುವಂಗಿ ಪಾಯಿಜಾಮುಗಳನ್ನು ತೊಟ್ಟಿದ್ದನು. ತಲೆಯ ಮೇಲೆ ಟರ್ಕಿ ಟೋಪಿಯನ್ನಿಟ್ಟಿದ್ದನು. ಹಾಗೆಯೇ ಓಲೆಕಾರನ ಜೊತೆಯಲ್ಲಿ ಹೊರಟನು. ಡೇರೆಯನ್ನು ಬಿಟ್ಟು ಹೊರಡುತ್ತಲೇ ಅನುಭವಸ್ಥನಾದ ಓಲೇಕಾರನು "ಬೇ ಅದಬ್ ಮನ್ನಿಸಬೇಕು. ಖಾಸ್ ಸವಾರಿ ಕಛೇರಿಯಲ್ಲಿ ಬಿಜಮಾಡಿವೆ. ಅಲ್ಲಿಗೆ ದಿವಾನರು ಈ ದಿರಸಿನಲ್ಲಿ ಬರುವ ಪದ್ಧತಿ ಇಲ್ಲ. ಮೊದಲು ಅರಿಕೆ ಮಾಡಿದ್ದೇನೆ ಎಂದು ಹೇಳಿದನು. ಖಾಸಿಂಖಾನನು ತಿರಸ್ಕಾರಪೂರ್ಣವಾದ ನಗುವನ್ನು ನಕ್ಕು 'ನಾನು ದಿವಾನನಲ್ಲ' ಎಂದು ಮುಂದಕ್ಕೆ ಎರಡು ಹೆಜ್ಜೆ ಇಟ್ಟನು. ಹಿಂತಿರುಗಿ ಡೇರೆಯೊಳಕ್ಕೆ ಪ್ರವೇಶ ಮಾಡಿದನು. ಹೊರಗೆ ಬರುವಾಗ ನಡುಕಟ್ಟನ್ನು ಕಟ್ಟಿಕೊಂಡಿದ್ದನು. ಅದರಲ್ಲಿ ಆ ದಿನ ಪ್ರಾತಃಕಾಲ ದರಬಾರಿನಲ್ಲಿ ಕೊಟ್ಟಿದ್ದ ಕತ್ತಿಯು ನೇತಾಡುತ್ತಿತ್ತು. ಹೊರಗೆ ಬರುತ್ತಲೇ ಓಲೇಕಾರನಿಗೆ ಅರ್ಧ ಸಮಾಧಾನವಾಯಿತು. ತಲೆಯಲ್ಲಿ ಟೋಪಿ ಇದೆ. ಬಿಳಿಯ ದಿರಸು! ಪರವಾಗಿಲ್ಲ. ದರಬಾರಿ ಮರ್ಯಾದೆ ಗೊತ್ತಿಲ್ಲ. ಹೊಸ ದಿವಾನರು! ಸುಲ್ತಾನರು ವಿಶ್ವಾಸದಿಂದ ಕ್ಷಮಿಸುತ್ತಾರೆ ಎಂದು ಅವನಷ್ಟಕ್ಕವನು ಗೊಣಗುಟ್ಟಿಕೊಂಡನು. ಅದೆಲ್ಲಾ ಖಾನರ ಕಿವಿಗೆ ಹತ್ತಲೇ ಇಲ್ಲ. ಅವನು ಬೇಗಬೇಗ ಮುಂದುವರಿದು ಕಛೇರೀ ಮಹಲಿಗೆ ಹೋದನು. ಓಲೇಕಾರನು ಮುಂದೆಮುಂದೆ ದಾರಿ ತೋರಿಸುತ್ತಾ ಹೋದನು.

ಕಛೇರಿಯಲ್ಲಿ ಆಸನದಮೇಲೆ ಸ್ವಯಂ ಟಿಪ್ಪೂಸುಲ್ತಾನರು ಕುಳಿತಿದ್ದಾರೆ ಸಮೀಪದಲ್ಲಿ ಒಂದು ಆಸನವು ಇಡಲ್ಪಟ್ಟಿದೆ. ಸರ್ ನೌಕ್ತೇಸರ್ ಸರದಾರರು

ಕೈಕಟ್ಟಿ ನಿಂತಿದ್ದಾರೆ. ರಾಜಭಟರು ಬಾಗಿಲಿನಲ್ಲಿ ಹುಷಾರಿನಿಂದ ನಿಂತಿದ್ದಾರೆ. ಖಾಸಿಂಖಾನನು ದೂರದಲ್ಲಿ ನಿಂತು ಮುಜರೆ ಮಾಡಿದನು. ಸಮೀಪಕ್ಕೆ ಬರುವಂತೆ ಸುಲ್ತಾನರು ಸನ್ನೆ ಮಾಡಿದರು. ಖಾಸಿಂಖಾನನು ನಾಲ್ಕು ಹೆಜ್ಜೆ ಮುಂದೆ ಸರಿದು ನಿಂತನು. ಸುಲ್ತಾನರು .ಸಮೀಪದಲ್ಲಿದ್ದ ಆಸನದ ಮೇಲೆ ಕುಳಿತುಕೊಳ್ಳುವಂತೆ ಅಪ್ಪಣೆಮಾಡಿದರು. ಖಾಸಿಂಖಾನನು ಆಸನದ ಸಮೀಪದಲ್ಲಿ ನಿಂತುಕೊಂಡನು. ಕುಳಿತುಕೊಳ್ಳಲಿಲ್ಲ. ಸುಲ್ತಾನರು ಸುತ್ತಲೂ ನೋಡಿದರು. ಅಲ್ಲಿದ್ದವರೆಲ್ಲಾ ಎದ್ದು ಮುಜರೆ ಮಾಡಿ ಹೊರಗೆ ಹೋದರು. ಒಳಗೆ ಯಾರೂ ಇಲ್ಲ. ಎಲ್ಲಾ ಗಪ್ ಚಿಪ್. ಸುಲ್ತಾನರು ಏಕಾಂತದಲ್ಲಿ ಮಾತನಾಡುತ್ತಿದ್ದಾರೆ. ಖಾಸಿಂಖಾನರು ಪಕ್ಕದಲ್ಲಿಯೇ ನಿಂತು ಮಾತನಾಡಲು ಸಿದ್ಧರಾಗಿದ್ದಾರೆ.

ಖಾಸಿಂಖಾನ್, ನಿಮಗೆ ನಗರದ ದಿವಾನಗಿರಿಯನ್ನು ಕೊಟ್ಟಿದೆ. ನೀವು ತಾಜಾ ಮುಸಲ್ಮಾನರು. ಅದು ನಿಮ್ಮ ಜ್ಞಾಪಕದಲ್ಲಿರಲಿ. ನಾವು ಶ್ರೀರಂಗ ಪಟ್ಟಣದ ಸಾಮ್ರಾಜ್ಯವನ್ನು ಕಟ್ಟುತ್ತಿರುವುದು ಮುಸಲ್ಮಾನ್ ಧರ್ಮವನ್ನು ಸುರಕ್ಷಿಸುವುದಕ್ಕಾಗಿ. ಆದ್ದರಿಂದ ನೀವು ಮುಸಲ್ಮಾನ್ ಧರ್ಮಸ್ಥಾಪನೆಗೆ ನೆರವಾಗಬೇಕು. ನಾವು ನಿಮ್ಮಲ್ಲಿ ಕೆಲವು ರಹಸ್ಯಗಳನ್ನು ಕೇಳಬೇಕೆಂದಿದ್ದೇವೆ. ಅದರಲ್ಲಿ ಮೊದಲನೆಯದು—ಇಯಜ್ ಖಾನರು ನಗರದ ರಾಜ್ಯವನ್ನು ಯುದ್ಧ ಮಾಡದೇ ಏಕೆ ಬಿಟ್ಟುಕೊಟ್ಟರು ?

ಸುಲ್ತಾನರವರೇ, ನಾನು ಶುದ್ಧ ಮುಸಲ್ಮಾನ. ಖುದಾನಿನ ಮೇಲೆ ಆಣೆಯಿಟ್ಟು ಹೇಳುತ್ತೇನೆ. ಕೇಳೋಣಾಗಲಿ, ನಾನು ಈಗ ತಮ್ಮಲ್ಲಿ ನಗರದ ದಿವಾನನಂತಲ್ಲ. ಶುದ್ಧ ಮುಸಲ್ಮಾನ್ ಬಂಧುವು ಮಾತನಾಡುವಂತೆ ಮಾತಾಡುತ್ತೇನೆ.

ಸುಲ್ತಾನನು ಮುಗುಳು ನಗುವನ್ನು ನಕ್ಕನು. ಅದು ಕಳಕಳನೆ ಕಾದ ಕೆಂಡವನ್ನು ಊದಿದರೆ ಹೇಗೆ ಸಣ್ಣ ಉರಿಯೇಳುವುದೋ ಹಾಗಿತ್ತು. ಅದನ್ನು ನೋಡಿ ಸುಲ್ತಾನನ ಹೃದಯವನ್ನು ತಿಳಿದವರಾಗಿದ್ದರೆ ನಡುಗುತ್ತಿದ್ದರು. ದಿಟ್ಟತನದ ಖಾನನು ಅದನ್ನು ಲೆಕ್ಕಿಸಲೇ ಇಲ್ಲ.

ಈ ನಗರದ ರಾಜ್ಯವು ಮೈಸೂರು ಸಾಮ್ರಾಜ್ಯದವರದು. ಇಯಜ್ ಖಾನರು ತಮ್ಮ ರಾಜ್ಯವನ್ನು ತಮಗೆ ಒಪ್ಪಿಸುವುದರಲ್ಲಿ ಆಶ್ಚರ್ಯವೇನು ?

ಇಷ್ಟೆಯೋ? ಇದರಲ್ಲಿ ಮತ್ತೇನೂ ಗೂಢ ತಂತ್ರವಿಲ್ಲವೋ?

ಖಾನನು ಗಹಗಹಿಸಿ ನಕ್ಕನು. ನಕ್ಕು, ಗೂಢ ತಂತ್ರವೇ! ಅದು ಇಯಜ್‌ಖಾನರಲ್ಲಿ ಇಲ್ಲವೇ ಇಲ್ಲ. ಇದರಲ್ಲಿ ಮತ್ತೊಂದು ಔದಾರ್ಯ ಉಂಟು.

ಏನದು?

ತಮ್ಮ ಮೇಲೆ ಅವರು ಕತ್ತಿ ಕಟ್ಟುವುದಿಲ್ಲವೆಂದು ಶಪಥ ಮಾಡಿದ್ದಾರೆ.

ಓಹೋ, ಅದು ನಮ್ಮ ಮೇಲಿನ ಅನುಗ್ರಹವೋ? ಅವರು ಅಂಜಿ ಓಡಿಹೋಗಿದ್ದಾರೆಂದು ನಾವು ತಿಳಿದಿದ್ದೆವು. ಅವರು ಯುದ್ಧ ಮಾಡಿದ್ದರೆ ಏನಾಗುತ್ತಿತ್ತು?

ಸುಲ್ತಾನರೇ, ಅದು ತಮ್ಮ ಮೇಲಿನ ಪರಮಾನುಗ್ರಹ. ಹಾಗಿಲ್ಲದೆ ನಗರದ ಶೀಮೆಯಮೇಲೆ ಯುದ್ಧವು ನಡೆದಿದ್ದರೆ ತಮ್ಮ ಈ ಐವತ್ತು ಸಹಸ್ರ ದಂಡು ಧೂಳಿಯಾಗಿ ಹೋಗುತ್ತಿದ್ದಿತು.

ನಿಲ್ಲು, ನಿಲ್ಲಿಸು, ಯಾರೊಡನೆ ಮಾತನಾಡುತ್ತಿದ್ದೀಯೆಂದು ಎಚ್ಚರವಿದೆಯೋ?

ಖಾನನು ನಗುತ್ತಾ ಮೈಸೂರಿನ ಹುಲಿಯೆಂದು ಖ್ಯಾತಿ ಪಡೆದ ಸುಲ್ತಾನರೊಡನೆ. ಬಲ್ಲೆ, ಆದರೆ ವೀರರಿಗೆ ಕೋಪವೇಕೆ? ಯುದ್ಧ ವಿದ್ಯೆಯ ಮರ್ಮವನ್ನರಿತ ನಾನು ತಮ್ಮ ಮತ್ತು ಇಯಜ್‌ಖಾನರ ಪರಾಕ್ರಮವನ್ನು ತುಲನೆ ಮಾಡಿ ಅರಿಕೆ ಮಾಡುತ್ತಿದ್ದೇನೆ.

ಸುಲ್ತಾನನು ಸಮಾಧಾನ ಮಾಡಿಕೊಂಡು—ಅದಿರಲಿ, ನಿಮಗೆ ಗೊತ್ತಿದೆ. ಇಯಜ್‌ಖಾನರೆಲ್ಲಿದ್ದಾರೆಂದು ಅದನ್ನು ಮರೆಮಾಚದೆ ತಿಳಿಸುವಿರಾ?

ಸುಲ್ತಾನರೇ, ಏಕೆ ಮರೆಮಾಚಬೇಕು. ನನಗೆ ತಿಳಿದಿದ್ದರೆ ನಾನು ತಿಳಿಸುತ್ತಲೇ ಇದ್ದೆ. ನನಗೂ ಅದೇ ಆಶೆ. ನೀವು ಅವರನ್ನು ಎದುರಿನಲ್ಲಿ ಕೆಣಕಿದ್ದರೆ ನಿಮಗೂ ಅವರಿಗೂ ಘನವಾದ ಯುದ್ಧವಾಗುತ್ತಿತ್ತು. ನಾನೂ ಒಂದು ಕೈ ನೋಡಬಹುದಾಗಿತ್ತು.

ಇಷ್ಟು ವೀರರಾಗಿದ್ದು ಮಂಗಳೂರನ್ನೇಕೆ ಇಂಗ್ಲೀಷರಿಗೆ ಬಿಟ್ಟು ಕೊಟ್ಟರಿ?

ಇಯುಜ್ ಖಾನರ ಅಧಿಕಾರದಲ್ಲಿ ಒಂದು ಇಂಗ್ಲೀಷ್ ಪಿಳ್ಳೆಗೂ ತಲೆ ಯೆತ್ತುವ ಧೈರ್ಯವಿಲ್ಲ. ಕುಂಪಣಿಯವರನ್ನು ತೃಣಕ್ಕಿಂತಲೂ ಕಡೆಯಾಗಿ ಕಾಣುತ್ತಿದ್ದರು. ಅವರನ್ನು ನೋಡಿ ಇಂಗ್ಲೀಷರು ನಡುಗುತ್ತಿದ್ದರು. ಇಯುಜ್ ಖಾನರು ನಗರವನ್ನು ಪರಿತ್ಯಾಗ ಮಾಡಿದ ಸುದ್ದಿಯನ್ನು ಕೇಳಿ, ತಾವು ಇಲ್ಲಿಗೆ ಬಂದ ಸಮಾಚಾರವನ್ನೂ ತಿಳಿದು, ತಮ್ಮಮೇಲೆ ಒಂದು ಕೈ ತೋರಿಸೋಣ ವೆಂದು ಇಂಗ್ಲೀಷರು ಹಠತ್ತಾಗಿ ಒಂದೇ ದಿನದಲ್ಲಿ ಮಂಗಳೂರನ್ನು ಆಕ್ರಮಿ ಸಿದರು. ಈಗ ಸುಲ್ತಾನರು ಪರಾಕ್ರಮವನ್ನು ತೋರಿಸಬೇಕು.

ನಾವು ಮೊದಲು ಇಯುಜ್ ಖಾನರನ್ನು ಹಿಡಿದು ಶಿಕ್ಷಿಸಿ, ಅನಂತರ ಇಂಗ್ಲೀಷರನ್ನು ವಿಚಾರಿಸುತ್ತೇವೆ.

ಅದು ಬರೀ ಬಡಾಯಿ ಮಾತು, ಇಯುಜ್ ಖಾನರನ್ನು ಹಿಡಿದು ತರುವ ಶಕ್ತಿಯು ತಮಗಿಲ್ಲ.

ಇಯುಜ್ ಖಾನರು ನಗರದ ಶೀಮೆಯಲ್ಲಿಲ್ಲವೋ?

ಇಲ್ಲ.

ಅವರೆಲ್ಲಿ ಹೋಗಿದ್ದಾರೆ?

ಯಾರಿಗೂ ಗೊತ್ತಿಲ್ಲ.

ಅದು ಸುಳ್ಳು, ನಿಮಗೆ ಗೊತ್ತಿದೆ. ನಮಗೂ ವರ್ತಮಾನವು ಬಂದಿದೆ. ಇಯುಜ್ ಖಾನರು ಅಪಾರವಾದ ದ್ರವ್ಯವನ್ನು ತೆಗೆದುಕೊಂಡು ಬೊಂಬಾಯಿಗೆ ಹೋಗಿ ಅಲ್ಲಿ ಇಂಗ್ಲೀಷರ ಶರಣು ಹೊಕ್ಕಿದ್ದಾರೆ. ಇಲ್ಲಿ ಮಂಗಳೂರನ್ನು ಅವ ರಿಗೆ ಒಪ್ಪಿಸಿದ್ದಾರೆ. ಓಡಿಹೋಗಿ ಶತ್ರುಗಳ ಮರೆಹೊಕ್ಕ ಆ ಹೇಡಿಯ ಪರಾಕ್ರಮವನ್ನು ಹೊಗಳುತ್ತಾ ನಮ್ಮ ಎದುರಿನಲ್ಲಿ ನಾಲಿಗೆಯನ್ನು ಅಪವಿತ್ರ ಮಾಡಿಕೊಳ್ಳುತ್ತಿದ್ದಿ.

ಅಯ್ಯೋ? ದೇವರೇ? ಎಂಥಾ ಆಘಾತ, ಎಷ್ಟು ಕರ್ಣಕಠೋರವಾದ ಮಾತುಗಳು. ಇಯುಜ್ ಖಾನರಿಗೆ ಇದಕ್ಕಿಂತಲೂ ಅಪಮಾನ ಉಂಟೇ?

ಆ ಹಾಳು ದೌಲತ್ತಳ ಮಾತು ಕೇಳಿ ಯುದ್ಧಮಾಡದೇ ಎಷ್ಟು ಅಪದೂರಿಗೆ ಗುರಿಯಾದರು.

ಆ ದೌಲತ್ತು ರಾಣಿಯು ಎಲ್ಲಿದ್ದಾಳೆಂದು ನಿನಗೆ ಗೊತ್ತಿದೆಯೋ?

ಇಲ್ಲ.

ನಿನಗೆ ಗೊತ್ತಿದೆ. ಇಯಜ್‌ಖಾನರು ಅವಳನ್ನು ಬಂಧನದಲ್ಲಿಟ್ಟು ನಿನ್ನ ಅಧೀನಪಡಿಸಿದ್ದಾರೆ.

ಬಂಧನವೂ ಇಲ್ಲ, ಅಧೀನವು ಮೊದಲೇ ಇಲ್ಲ. ಎಲ್ಲವೂ ಸುಳ್ಳೇ, ತಾವು ಹೇಳುವುದೆಲ್ಲಾ ಸುಳ್ಳು, ಅದು ಹೋಗಲಿ ನನಗೇನು? ನನ್ನನ್ನೇಕೆ ಕರೆಸಿದ್ದು.

ಇದನ್ನೆಲ್ಲಾ ವಿಚಾರಣೆ ಮಾಡುವುದಕ್ಕೆ ಇಲ್ಲಿ ಕರೆಸಿದ್ದೇವೆ.

ನಾನು ನಿಮ್ಮ ವಿಚಾರಣೆಗೆ ಒಳಗಾಗುವುದಿಲ್ಲ.

ಖಾಸಿಂಖಾ ಕೇಳು, ಕಡೆಯ ಮಾತು. ಹುಚ್ಚನಾಗಿ ಕೆಡಬೇಡ. ನೀನು ಮುಸಲ್ಮಾನ. ಇಯಜ್‌ಖಾನನು ಜಾತಿ ಕೆಟ್ಟ ಹಿಂದೂ ಕಾಫರ. ರಾಜ್ಯಭ್ರಷ್ಟನಾಗಿ ಓಡಿಹೋಗಿರುವ ಹೇಡಿ. ಅವನ ಪಕ್ಷವನ್ನು ನೀನೇಕೆ ವಹಿಸುತ್ತಿ. ಅವನು ರಾಜದ್ರೋಹಿ. ಇಂಗ್ಲೀಷರೊಡನೆ ಸಂಧಿಮಾಡಿಕೊಂಡು ಮಂಗಳೂರನ್ನು ಅವರಿಗೊಪ್ಪಿಸಿದ್ದಾನೆ. ಅವನು ದ್ರೋಹಿ. ಕೋಟಿಕೋಟಿ ದ್ರವ್ಯವನ್ನಪಹರಿಸಿಕೊಂಡು ಬೊಂಬಾಯಿಗೆ ಓಡಿಹೋಗಿದ್ದಾನೆ. ಅವನು ಕಳ್ಳ. ನಮ್ಮ ಶತ್ರುಗಳಾದ ಇಂಗ್ಲೀಷರನ್ನು ಮರೆಹೊಕ್ಕಿದ್ದಾನೆ. ಅವನು ಹೇಡಿ, ದೌಲತ್ತಳನ್ನು ಬಂಧಿಸಿ ಮಾಯಮಾಡಿದ್ದಾನೆ. ಅವನು ಘಾತುಕ. ಅವನಿಗೆ ತಕ್ಕ ರಾಜದಂಡವಾಗುವುದು. ಅವನು ನಮ್ಮ ಕೈಯಿಂದ ತಪ್ಪಿಸಿಕೊಳ್ಳಲಾರ.

ಇಯಜ್‌ಖಾನರ ಮೇಲೆ ನೀವು ಸುಳ್ಳುಸುಳ್ಳು ದೋಷಗಳನ್ನು ಕಟ್ಟಿ ದೂರುತ್ತಿದ್ದೀರಿ. ನೀವು ಅವರನ್ನು ಹಿಡಿಯಲಾರಿರಿ! ಅವರಿಗೆ ವಿರುದ್ಧವಾಗಿ ಈ ವೀರಭೂಮಿಯಲ್ಲಿ ನೀವು ಏನು ಮಾಡುವುದೂ ಸಾಧ್ಯವಿಲ್ಲ. ಇಲ್ಲಿರುವ ಪಾಳಯಗಾರರೆಲ್ಲರೂ ಇಯಜ್‌ಖಾನರ ಸ್ನೇಹಿತರು. ಅವರಲ್ಲಿ ಭಕ್ತಿಯುಳ್ಳವರು. ಇಯಜ್‌ಖಾನರು ಒಂದು ಕುರುಡು ಕಾಸನ್ನೂ ತೆಗೆದುಕೊಂಡು

ಹೋಗಿರುವುದಿಲ್ಲ. ಅವರು ಬೇಕೆಂದು ಬಯಸಿದರೆ ಈ ನಗರದ ಶೀಮೆಯಲ್ಲಿ ಸ್ವರ್ಣ ವರ್ಷವು ಕರೆಯುತ್ತದೆ. ಅವರಿಗೇಕೆ ತಮ್ಮ ಹಣ. ಮಂಗಳೂರನ್ನು ಇಯಜ್‌ಖಾನರು ಬಿಟ್ಟುಕೊಟ್ಟರೆಂಬುದೂ ! ಅವರು ಇಂಗ್ಲೀಷರ ಮರೆಹೊಕ್ಕ ರೆಂಬುದೂ, ಅವರಕೀರ್ತಿ, ಪರಾಕ್ರಮಿಗಳಿಗೆ ಕಳಂಕವನ್ನು ತರುವು ದಕ್ಕಾಗಿ ನೀವು ಕಟ್ಟಿರುವ ಕಟ್ಟು ಕಥೆ. ದೌಲತ್ತು ರಾಣಿಯವರನ್ನು ಬಂಧಿಸಿ ಮುಚ್ಚಿಟ್ಟಿದ್ದಾರೆಂಬುದಂತೂ ಸೋಜಿಗದ ಸುದ್ದಿ. ದೌಲತ್ ರಾಣಿ ಯವರನ್ನು ಬಂಧಿಸುವ ಕಾರಣವೇನು ? ಮುಚ್ಚಿಡುವ ಅವಶ್ಯವೇನು ? ಅವರು ಸ್ವತಂತ್ರರು. ಇಯಜ್‌ಖಾನರೂ ಅವರೂ ಪರಸ್ಪರ ಸಹೋದರ ಸಹೋದರಿಗಳಂತೆ ಪ್ರೇಮಮಾಡುತ್ತಾರೆ. ಆ ದೌಲತ್ ರಾಣಿಯೇ ಇಷ್ಟು ಅನರ್ಥಕ್ಕೆ ಕಾರಣ. ಈ ಯುದ್ಧವನ್ನು ನಿಲ್ಲಿಸಿದವರು ಅವರೇ. ಇಯಜ್ ಖಾನರನ್ನು ರಾಜ್ಯಭ್ರಷ್ಟರಾಗಿ ಮಾಡಿಧವರು ಅವರೇ. ನಮಗೆಲ್ಲಾ ಇಷ್ಟು ಸಂಕಟವು ಅವರಿಂದಲೇ. ನೀವು ಇಯಜ್‌ಖಾನರನ್ನು ಹುಡಿಕಿ ಶಿಕ್ಷಿಸುತ್ತೀ ನೆಂಬ ಭ್ರಾಂತಿಯನ್ನು ಹಚ್ಚಿಕೊಂಡು ತಿರುಗಿದರೆ ಈ ನಗರದ ರಾಜ್ಯದಲ್ಲಿ ಕತ್ತಲು ಕೋಣೆಯಲ್ಲಿ ಬಂಧಿತರಾಗಿ ನೂರು ವರ್ಷಗಳನ್ನು ಇಲ್ಲೇ ಕಾಣ ಬೇಕಾಗುವುದು.

ಖಾಸಿಂಖಾ ! ಬಾಯಿ ಮುಚ್ಚು ! ಇನ್ನು ನಿನಗೆ ಕ್ಷಮಾಪಣೆಯಿಲ್ಲ. ನೀನು ರಾಜದ್ರೋಹಿ. ನಿನ್ನನ್ನು ಈಗಲೇ ಗಲ್ಲಿಗೇರಿಸುತ್ತೇನೆ. ಇಯಜ್ ಖಾನನ್ನು ಹುಡುಕಿ ಹಿಡಿತರಿಸಿ ಶೀಳಿ ಸಿಗಿದು ಈ ನಗರದ ಹೆಬ್ಬಾಗಿಲಿಗೆ ತೋರ ಣಕಟ್ಟಿಸಿ ಇಲ್ಲ ರಣ ಹಬ್ಬವನ್ನು ಮಾಡಿಕೊಂಡು ಹಿಂತಿರುಗುತ್ತೇನೆ. ನೀನು ಈಗ ದಿವಾನನಲ್ಲ. ಬಂದಿ.

ನಾನು ದಿವಾನನೂ ಅಲ್ಲ ! ಬಂದಿಯೂ ಅಲ್ಲ ! ನಾನು ನಿನ್ನ ಭಾಗದ ಶತೃ ! ಹೀಗೆಂದು ಹೇಳಿ ಕತ್ತಿಯನ್ನು ಹಿರಿದು ಸಮಿಪಕ್ಕೆ ಹಾರಿ ಟಿಪ್ಪೂ ಸುಲ್ತಾನನ್ನು ಕೆಳಕ್ಕೆ ತಳ್ಳಿ ಆಕ್ರಮಣ ಮಾಡಿದನು. ಎತ್ತಿದ ಕತ್ತಿಯನ್ನು ಸುಲ್ತಾನನ ವಕ್ಷಸ್ಥಳದಲ್ಲಿ ನೆಡುತ್ತಿದ್ದನು. ಅಷ್ಟರಲ್ಲಿ ಹಿಂದಿನಿಂದ ನಾಲ್ವರು ಅಂಗರಕ್ಷಕರು ಹಾರಿಬಂದು ಖಾನನ್ನು ಹಿಡಿದುಕೊಂಡರು. ಖಾನನು ಬಿಡಿಸಿ ಕೊಳ್ಳಲು ಸಾಹಸ ಮಾಡಿದನು, ಅಷ್ಟರಲ್ಲಿ ಬಂಧಿತನಾಗಿ ಬಿಟ್ಟಿದ್ದನು. ಟಿಪ್ಪು ಸುಲ್ತಾನನು ಚೇತರಿಸಿಕೊಂಡಿದ್ದನು. ಖಾನನ ಶಕ್ತಿ ಸಾಹಸಗಳಿಗೆ ಮೆಚ್ಚಿ

ಆಶ್ಚರ್ಯಚಕಿತನಾದನು. ಅಷ್ಟರಲ್ಲಿ ಬಂಧನದಲ್ಲಿದ್ದ ಖಾನನು ಸುಲ್ತಾನರೇ! ಇಂದು ಬದುಕಿಕೊಂಡಿರಿ! ಇಂದಲ್ಲದಿದ್ದರೆ ಮತ್ತೊಂದು ದಿನ ಯುದ್ಧಭೂಮಿಯಲ್ಲಿ ನನ್ನ ಕೈ ತೋರಿಸುತ್ತೇನೆ.

ಟಿಪ್ಪುವು ಖತಿಗೊಂಡು ಇಂದೇ ನಿನ್ನ ಕಡೆಯ ದಿನ.

ಈ ಸಮಾಚಾರವು ಶಿಬಿರದಲ್ಲೆಲ್ಲಾ ಕಾಡುಕಿಚ್ಚಿನಂತೆ ಹರಡಿತು. ಸೈನಿಕರು, ಸರದಾರರು ಎಲ್ಲರೂ ಮಾತನಾಡಿಕೊಳ್ಳುವವರೇ! ನೋಡಿದವರು ನಿಜವಾದ ಕಥೆಯನ್ನು ಹೇಳುವುದಕ್ಕೆ ಹೆದರುತ್ತಾರೆ. ಎಲ್ಲರೂ ಬಲು ಗುಟ್ಟು ಗುಟ್ಟು ಎಂದೇ ಒಬ್ಬರಿಗೊಬ್ಬರು ಕಿವಿಯಲ್ಲಿ ಹೇಳಿಬಿಡುತ್ತಾರೆ. ಸುಲ್ತಾನರನ್ನು ಸಿಂಹಾಸನದಿಂದ ಎಳೆದು ಕೆಡವಿದ ಮಾತು ಬಂದಾಗ ಎಲ್ಲರ ಮುಖವೂ ವಿವರ್ಣವಾಗುತ್ತದೆ. ಎಂತಹ ಧೀರ! ಎಂತಹ ಸಾಮರ್ಥ್ಯಶಾಲಿ! ಎಂದು ಅವರವರ ಮನಸ್ಸೇ ಮೆಚ್ಚುತ್ತದೆ. ಆದರೆ ಅದನ್ನು ಉಚ್ಚಾರ ಮಾಡುವ ಧೈರ್ಯವು ಯಾರ ನಾಲಿಗೆಗೂ ಇಲ್ಲ. ಸುಲ್ತಾನನ ಎದೆಯಲ್ಲಿ ಕತ್ತಿಯನ್ನು ನೆಡುತ್ತಿದ್ದನು ಎಂಬ ಮಾತು ಕಿವಿಗೆ ಬೀಳುತ್ತಲೇ ಎಲ್ಲರ ತಲೆ ತಿರುಗಿ ಕಣ್ಣು ಕತ್ತಲೆ ಕಟ್ಟಿ ಬರುತ್ತದೆ. ಎಲ್ಲರೂ ಅವಾಕ್ಕಾಗಿ ಹೋಗುತ್ತಾರೆ. ಅವನಿಗೆ ಮರಣವು ಸಿದ್ಧವೆಂದುಕೊಳ್ಳುತ್ತಾರೆ. ಅವರಲ್ಲೇ ಇನ್ನೂ ಕೆಲವರು ಬುದ್ಧಿವಂತರು ಅಂಥಾ ಧೀರನನ್ನು ಸುಲ್ತಾನನು ಕೊಲ್ಲಿಸುವುದಿಲ್ಲ. ಅವನ ಅಪರಾಧವನ್ನು ಕ್ಷಮಿಸಿ ಅವನನ್ನು ಗೌರವಿಸಿ ಇಟ್ಟುಕೊಳ್ಳುತ್ತಾರೆ, ಎಂದುಕೊಳ್ಳುತ್ತಾರೆ. ಖಾಸಿಂಖಾನನನ್ನು ಬಂಧನದಲ್ಲಿಟ್ಟಿದ್ದ ಪಂಜರದ ಬಳಿಗೆ ಎಲ್ಲರೂ ಬಂದು ಆ ವೀರಪುರುಷನನ್ನು ನೋಡುತ್ತಾರೆ. ಅದೇ ಒಂದು ಜಾತ್ರೆಯಾಗಿ ಹೋಯಿತು. ಎಲ್ಲರಿಗೂ ಕಾವಲಿದ್ದ ಸರದಾರರ ಭಯ. ಅವರುಗಳು ಹತ್ತಿರ ಯಾರೂ ಸೇರದಿದ್ದಂತೆ ಗದರಿಸುತ್ತಾರೆ.

ಅವನ ಮುಖದಲ್ಲಿ ಅಪಮಾನ ಚಿಹ್ನೆಯಾಗಲಿ ಭಯದ ಚಿಹ್ನೆಯಾಗಲಿ ಎಳ್ಳಷ್ಟೂ ಕಾಣುವುದಿಲ್ಲ. ಪಂಜರದಲ್ಲಿ ಕುಳಿತು ಸೂರ್ಯಮಂಡಲವನ್ನು ನೋಡುತ್ತಿದ್ದಾನೆ. ಸೂರ್ಯಾಸ್ತವಾದರೆ ಈ ಪಂಜರದಿಂದ ತಪ್ಪಿಸಿಕೊಂಡು ಹಾರಿ ಹೋಗುತ್ತೇನೆಂದು ಯೋಚಿಸುತ್ತಿದ್ದಾನೆ. ಅಷ್ಟರಲ್ಲಿ ಸುಲ್ತಾನರ ಶಾಸನ ಬಂತು.

ತಕ್ಷಣ ದರಬಾರನ್ನು ಕೂಡಿಸಬೇಕೆಂದು ಹುಜೂರಿನಿಂದ ಹುಕುಂ ಬಂತು. ದರಬಾರ್ ಬಕ್ಷಿಗಳು ದರಬಾರಗಳಿಗೆಲ್ಲಾ ಹೇಳಿಕಳುಹಿಸಿದರು. ದರಬಾರು ಮಂಟಪದಲ್ಲಿ ಎತ್ತರವಾಗಿ ಸಿಂಹಾಸನವು ಅಲಂಕರಿಸಲ್ಪಟ್ಟಿದೆ. ಪಕ್ಕದಲ್ಲಿ ದಿವಾನರ ಆಸನ. ಎಡಗಡೆ ಮಂತ್ರಾಲೋಚನೆಯು ನ್ಯಾಯುವಾದಿಗಳ ಆಸನ. ಬಲಗಡೆ ಖಾಜಿಗಳ ಆಸನ. ಎದುರಿಗೆ ಕಛೇರಿ ಭಕ್ಷಿಗಳೂ, ಸೇನಾನಾಯಕರೂ, ಫೌಜುದಾರರುಗಳೂ, ಮುಂದುಗಡೆ ಸಾಲಾಗಿ ನಿಂತಿದ್ದಾರೆ. ಹಿಂದುಗಡೆ ಅಂಗರಕ್ಷಕರ ಪಡೆ. ದರಬಾರು ಮಂಟಪದ ಮುಂದುಗಡೆ ರಿಸಾಲ್‌ದಾರರುಗಳು, ಜಮೇದಾರರುಗಳೂ, ಹವಾಲ್‌ದಾರರುಗಳೂ, ನಿಂತುಕೊಂಡಿದ್ದಾರೆ. ದರಬಾರಿನ ಶಿಸ್ತು ಸಿದ್ಧವಾಗಿದೆ. ದರಬಾರು ಭಕ್ಷಿಗಳು ಹುಜೂರಿಗೆ ಅರಿಕೆ ಮಾಡಿದರು. ಖಾಸ್ ಸವಾರಿಯು ಬಂದೇಬಿಟ್ಟಿತು. ಟಿಪ್ಪೂಸುಲ್ತಾನನು ಸಿಂಹಾಸನದ ಮೇಲೆ ಮಂಡಿಸಿದ ನಂತರ ಎಲ್ಲರೂ ಮುಜರೆ ಮಾಡಿದರು. ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡರು. ದರಬಾರಿಗಳ ಮುಖದಲ್ಲೆಲ್ಲಾ ಆಶೆಪ್ರತ್ಯಾಶೆಗಳು. ಏನೋ ಒಂದು ವಿಧವಾದ ಕುತೂಹಲ! ಇವೆಲ್ಲವೂ ಎದ್ದು ಕಾಣುತ್ತಿವೆ. ಮುಹಮ್ಮದಾಲಿಯುವರೊಬ್ಬರು ಮಾತ್ರ ಗಂಭೀರ ಭಾವದಿಂದ ಗಂಭೀರ ಮುದ್ರೆಯಿಂದ ವಿಷಣ್ಣವದನರಾಗಿ ಕುಳಿತಿದ್ದಾರೆ. ಮುಖ್ಯಮುಖ್ಯ ಸರದಾರರೆಲ್ಲಾ ಒಂದುಬಾರಿ ಸುಲ್ತಾನರ ಮುಖವನ್ನೂ ನೋಡುತ್ತಾರೆ. ಮತ್ತೊಂದು ಬಾರಿ ಮುಹಮ್ಮದಾಲಿಯುವರ ಮುಖವನ್ನು ನೋಡುತ್ತಾರೆ. ಏನೇನೋ ಗುಣಾಕಾರ ಹಾಕಿಕೊಳ್ಳುತ್ತಾರೆ. ಅಷ್ಟರಲ್ಲಿ ಕಛೇರೀ ಭಕ್ಷಿಯರಾದ ಜನಾಲುದ್ದೀನರು ಖಾಸಿಂಖಾನರನ್ನು ಬಿಚ್ಚುಕತ್ತಿ ಪಹರೆಯಲ್ಲಿ ಸಭೆಗೆ ಕರತಂದರು. ಸಭಾ ಮಧ್ಯದಲ್ಲಿ ಸುಲ್ತಾನರ ಸಿಂಹಾಸನದ ಎದುರಿನಲ್ಲಿ ನಿಲ್ಲಿಸಿದರು. ಆ ತರುಣನು ಗಂಭೀರಭಾವದಿಂದ ನಿಂತಿದ್ದಾನೆ. ಎಲ್ಲರೂ ಅವನ ಕಡೆ ನೋಡಲಾರಂಭಿಸಿದರು. ಖಾಸಿಂಖಾನನ ವಿಚಾರಣೆಗೆ ಆರಂಭವಾಯಿತು. ಸ್ವಯಂ ಸುಲ್ತಾನರೇ ಮಾತನಾಡಲಾರಂಭಿಸಿದರು.

ಈ ಖಾಸಿಂಖಾನನು ನಗರದ ದಿವಾಣಗಿರಿಯಲ್ಲಿದ್ದವನು.. ನಗರದ ನವಾಬನಾಗಿದ್ದ ಇಯಜ್‌ಖಾನನು ರಾಜದ್ರೋಹಿ. ಅವನು ನಮ್ಮರಮನೆಯ ಗುಲಾಮ. ಅವನನ್ನು ದೊಡ್ಡ ನವಾಬರು ಅಭಿಮಾನದಿಂದ ನಗರದ ನವಾಬಗಿರಿಯೇರಿಸಿದರು. ಆ ಪರದೇಶಿಗೆ ಅತುಲೈಶ್ವರ್ಯವನ್ನು ಕೊಟ್ಟರು. ಅಧಿ

ಕಾರವನ್ನು ಕೊಟ್ಟರು. ಆ ಅಲ್ಪನು ತಿಂದಮನೆಗೆ ಎರಡು ಬಗೆದು ಸ್ವಾಮಿ ದ್ರೋಹಿಯಾದ. ಅವನು ನನ್ನ ಮೇಲೆ ನಗರದ ಸೀಮೆಯ ಪಾಳಯಗಾರ ರನ್ನು ದಂಗೆ ಎಬ್ಬಿಸಲು ಪಿತೂರಿ ನಡೆಸಿದ್ದಾನೆ. ಅವನು ಈ ನಗರದ ಭಂಡಾರ ದಲ್ಲಿದ್ದ ಧನಕನಕಗಳನ್ನು ಸಾಗಿಸಿಕೊಂಡು ಬೊಂಬಾಯಿಗೆ ಓಡಿಹೋಗಿ ಇಂಗ್ಲೀಷರ ಶರಣಾಗತನಾಗಿದ್ದಾನೆ. ನಮ್ಮ ಮೇಲೆ ಒಳಸಂಚು ನಡೆಸುತ್ತಾ ಇದ್ದಾನೆ. ಇಂಥಾ ರಾಜದ್ರೋಹಿಯ ಪ್ರತಿಯೊಂದು ಕಾರ್ಯದಲ್ಲಿಯೂ ಮದತ್ ಮಾಡಿದವನು ಈ ಖಾಸಿಂಖಾನ್. ಮತ್ತು ಇವನೇ ಮಂಗಳೂರನ್ನು ಇಂಗ್ಲೀಷರ ವಶಮಾಡಿಕೊಟ್ಟಿರುತ್ತಾನೆ. ಇದನ್ನೆಲ್ಲಾ ನಾವೇ ಖುದ್ದಾಗಿ ವಿಚಾರಿಸಿರುತ್ತೇವೆ. ಇದಕ್ಕೆ ಬೇರೆ ರುಜುವಾತಿನ ಅಗತ್ಯವೇ ಇಲ್ಲ. ಇವನಿಗೆ ಏನು ಶಿಕ್ಷೆಯಾಗಬೇಕೋ; ನ್ಯಾಯವಾದಿಗಳೂ, ಖಾಜಿಗಳೂ ಹೇಳಿರಿ.

ನ್ಯಾಯವಾದಿಗಳೂ, ಖಾಜಿಗಳೂ :–ಎದ್ದು ಅಪರಾಧಿಗೆ ಮರಣದಂಡನೆ ಯಾಗಬೇಕು. ಗಲ್ಲಿಗೆ ಹಾಕಿಸಬೇಕು.

ಸುಲ್ತಾನನು :—ಖಾಸಿಂಖಾನನ ಕಡೆಗೆ ನೋಡುತ್ತಾ ನೀನೇನು ಹೇಳುವೆ ?

ನಾನು ಹೇಳಬೇಕಾದುದನ್ನೆಲ್ಲಾ ಚೆನ್ನಾಗಿ ಹೆಳಿದ್ದೇನೆ. ನಿಮ್ಮಲ್ಲಿ ಹೇಳತಕ್ಕದ್ದೇನೂ ಇಲ್ಲ. ನಾನು ಸತ್ಯದ ಬಗ್ಗೆ ಈ ಸಭೆಯಲ್ಲಿ ಹೇಳುವ ಮಾತು ಒಂದು ಉಂಟು.

ನೀನು ಬೇಕಾದದ್ದು ಹೇಳಬಹುದು ಹೇಳು. ಏನು ಹೇಳಬೇಕೆಂದಿರು ವೆಯೋ ಹೇಳಿಕೋ.

ನವಾಬ್ ಇಯುಜ್‌ಖಾನರು ವೀರಾಗ್ರೇಸರು. ದೊಡ್ಡ ನವಾಬರ ಪ್ರಿಯ ಪುತ್ರರು. ಅವರಿಗೆ ಮೈಸೂರಿನಲ್ಲಿರುವ ಅಭಿಮಾನವೂ ಹೈದರಾಲಿ ಯವರ ರಾಜ್ಯದಲ್ಲಿರುವ ಮಮತೆಯೂ ಅನಾದೃಶವಾದುದ್ದು. ದೊಡ್ಡ ನವಾ ಬರ ಮಕ್ಕಳೆಂದು ಈ ಟಿಪ್ಪುಸುಲ್ತಾನರ ಸರ್ವಾಧಿಕಾರವನ್ನು ಒಪ್ಪಿಕೊಂಡಿ ದ್ದಾರೆ. ಆ ಭಕ್ತಿಯಿಂದಲೇ ಈ ನಗರದ ರಾಜ್ಯವನ್ನು ಸುಲ್ತಾನರಿಗೆ ಒಪ್ಪಿ ಸಿದ್ದಾರೆ. ಅವರು ರಾಜದ್ರೋಹಿಗಳು, ಪಿತೂರಿಕೋರರು ಎಂಬುದು ಅಸೂಯೆ ಯಿಂದ ಹುಟ್ಟಿಸಿದ ಕಲ್ಪನೆ. ಟಿಪ್ಪೂಸುಲ್ತಾನರು ದಂಡೆತ್ತಿ ಬರುತ್ತಲೇ ಅವರ

ಮೇಲೆ ಕತ್ತಿ ಕಟ್ಟುವುದಿಲ್ಲವೆಂದು ಶಪಥಮಾಡಿ ರಾಜ್ಯತ್ಯಾಗ ಮಾಡಿದರು. ಅವರು ರಾಜ್ಯತ್ಯಾಗ ಮಾಡುವಾಗ ಒಂದು ಕುರಡು ಕವಡೆಯನ್ನೂ ಕೊಂಡು ಹೋಗಲಿಲ್ಲ. ಅವರು ಧನಕನಕಗಳನ್ನು ಅಪಹರಿಸಿಕೊಂಡು ಹೋದರೆಂಬುದು ಅನ್ಯಾಯವಾದ ಅಪದೂರು.

ಮಂಗಳೂರನ್ನು ಇಯಜ್‌ಖಾನರು ಇಂಗ್ಲೀಷರಿಗೆ ಕೊಡಲಿಲ್ಲ. ಇಯಜ್‌ಖಾನರು ರಾಜ್ಯತ್ಯಾಗಮಾಡಿದ ಸಮಾಚಾರವನ್ನು ಕೇಳಿ ಟಿಪ್ಪೂಸುಲ್ತಾನರ ಮೇಲೆ ಒಂದು ಕೈ ತೋರಿಸಬೇಕೆಂದು ಒಂದೇ ದಿವಸದಲ್ಲಿ ಮಂಗಳೂರನ್ನು ಹಿಡಿದರು. ಇಯಜ್‌ಖಾನರವರು ಇಂಗ್ಲೀಷರ ಮರೆಹೊಕ್ಕಿದ್ದಾರೆಂಬುದು, ಹೈದಿರಲ್ಲಿಖಾನರ ಮೆಚ್ಚಿಗೆಯ ಪುತ್ರರಾದ ಆ ಮಹಾವೀರರಿಗೆ ಕಳಂಕವನ್ನು ಹಚ್ಚುವ ಕುತಂತ್ರವೇ ಹೊರತು ಬೇರೆಯೇನೂ ಇಲ್ಲ. ಈ ರಾಜ್ಯದಲ್ಲಿ ಇಂಗ್ಲೀಷರ ಪಿಳ್ಳೆ ಇರಕೂಡದೆಂಬುದೇ ಇಯಜ್‌ಖಾನರ ಸ್ಥಿರ ಸಂಕಲ್ಪ.

ಇಯಜ್‌ಖಾನರು ಪಾಳಯಗಾರರನ್ನು ಎತ್ತಿಕಟ್ಟಿ ನೈಸೂರು ರಾಜ್ಯದ ಮೇಲೆ ದಂಗೆ ಎಬ್ಬಿಸುತ್ತಾರೆಂಬ ಕಲ್ಪನೆಯು ಬುಡವಿಲ್ಲದ್ದು. ಇಯಜ್‌ಖಾನರು, ಯಾರನ್ನು ಎತ್ತುಕಟ್ಟುವ ಕಾರಣವಿಲ್ಲ. ಪಾಳಯಗಾರರು ಸುಲ್ತಾನರು ಮಾಡಿರುವ ಅಪಮಾನದಿಂದ ಕ್ರೋಧೋದ್ದೀಪಿತರಾಗಿ ಕತ್ತಿ ಮಸೆಯುತ್ತಿದ್ದಾರೆ. ಅವರೆಲ್ಲರೂ ಇಯಜ್‌ಖಾನರ ಪರಮ ಮಿತ್ರರು. ನಗರದಲ್ಲಿ ಎರಡು ಲಕ್ಷ ಸೈನ್ಯದ ಸಿದ್ಧತೆ ಇದೆ. ಇಯಜ್‌ಖಾನರು ಕತ್ತಿಯನ್ನು ಎತ್ತಿದ್ದರೆ ಈ ಸುಲ್ತಾನರು ಇಂದು ಸಿಂಹಾಸನದಮೇಲೆ ಕುಳಿತು ಅಪವಿತ್ರವಾದ ನಾಲಿಗೆಯಿಂದ ಆ ಮಹಾ ವೀರಾಗ್ರೇಸರರನ್ನು ದೂರುತ್ತಿರಲಿಲ್ಲ. ನಗರದಲ್ಲಿ ರಾಜರನ್ನಿಡುವ ಕತ್ತಲೆ ಅರಮನೆಯಲ್ಲಿ ಬಂಧಿಯಾಗುತ್ತಿದ್ದರು. ಅಲ್ಲೇ ಅವರ ಆಯುಷ್ಯವು ಪೂರ್ತಿಯಾಗುತ್ತಿತ್ತು. ಈ ರಾಜ್ಯದ ಪರ್ವತಶ್ರೇಣಿಗಳ ಮಧ್ಯದಲ್ಲಿ ಧಾರಾತೀರ್ಥದಲ್ಲಿ ನಿಮ್ಮೆಲ್ಲರನ್ನೂ ಬಲಿಕೊಡುತ್ತಿದ್ದರು. ಅವರ ಔಧಾರ್ಯದಿಂದ ಅವರ ನಿಸ್ಸೀಮ ಸ್ವಾಮಿಭಕ್ತಿಯಿಂದ ಇಂದು ಈ ಸಿಂಹಾಸನ; ಈ ದೌಲತ್ ಎಲ್ಲಾ ಉಳಿದಿದೆ.

ದೊಡ್ಡ ನವಾಬ್ ಹೈದರಾಲಿಯವರ ಮಗನಾಗಿ—ಈ ಪವಿತ್ರ ಸಿಂಹಾಸನದ ಮೇಲೆ ಕುಳಿತು ತಿಳಿದುತಿಳಿದು ಸುಳ್ಳು ಹೇಳುವ ಟಿಪ್ಪೂಸುಲ್ತಾನರು

ಮೈಸೂರು ರಾಜ್ಯಕ್ಕೆ ಒಪ್ಪುವ ರಾಜರಲ್ಲವೆಂದು ಈ ಸಭೆಯಲ್ಲಿ ಹೇಳುತ್ತೇನೆ. ಇದು ಪ್ರಪಂಚದಲ್ಲೆಲ್ಲಾ ಪ್ರತಿಧ್ವನಿಯಾಗಲಿ. ಈ ಟಿಪ್ಪುವಿನ ರಾಜಪಂಡನೆಗೆ ನಾನು ಅಧೀನನಲ್ಲ. ನಾನೇ ನನ್ನ ಸ್ವಂತ ಮರಣವನ್ನು ಸ್ವೀಕರಿಸುತ್ತೇನೆ ಎಂದು ಸರ್ರನೆ ಸೊಂಟದಲ್ಲಿದ್ದ ಕಠಾರಿಯನ್ನು ಎಳೆದು ಹೃದಯಕ್ಕೆ ಚುಚ್ಚಿ ಕೊಳ್ಳುವಷ್ಟರಲ್ಲಿ ಕಾವಲಿದ್ದ ಫೌಜುದಾರರು ಬಲವಾಗಿ ಹಿಡಿದುಕೊಂಡರು. ಬಲಾತ್ಕಾರವಾಗಿ ಕಠಾರಿಯನ್ನು ಕಿತ್ತುಕೊಂಡರು. ಅಪರಾಧಿಯನ್ನು ಪಂಜರ ದೊಳಕ್ಕೆ ಸೇರಿಸಿದರು.

ಟಿಪ್ಪೂಸುಲ್ತಾನರು ಪದಾಘಾತದಿಂದ ಕೃದ್ಧವಾದ ಮಹಾ ಸರ್ಪದಂತೆ ಬುಸುಗುಟ್ಟುತ್ತಾ ಕರ್ಕಶ ಕಂಠದಿಂದ ಇವನು ರಾಜದ್ರೋಹಿ. ಇವನನ್ನು ಗಲ್ಲಿಗೆ ಹಾಕಿರಿ ಎಂದು ಕೂಗಿ ಅಪ್ಪಣೆಮಾಡಿದನು.

ಟಿಪ್ಪೂಸುಲ್ತಾನರು ಆಸನದಿಂದ ಏಳುವಷ್ಟರಲ್ಲಿ ಮೌನದಿಂದ ಮುಖ ತಗ್ಗಿಸಿಕೊಂಡು ಕುಳಿತಿದ್ದ ದಿವಾನ್ ಮಹಮ್ಮದಾಲಿಯು ಮುಜುರೆ ಮಾಡಿ ನಿಂತುಕೊಂಡರು. ಆಸನದಿಂದ ಅರ್ಧ ಎದ್ದಿದ್ದ ಸುಲ್ತಾನರು ಪುನಃ ಕುಳಿತು ಕೊಂಡರು. ದರಬಾರೆಲ್ಲಾ ಸ್ತಬ್ಧತೆಯಿಂದ ನಿಶ್ಶಬ್ಧವಾಗಿತ್ತು. ದಿವಾನರು ಖಾವಿಂದ್. ಈ ಗರೀಬನದು ಒಂದು ಅರಿಕೆ ಇದೆ. ಅದನ್ನು ಸ್ವಲ್ಪ ಲಾಲಿ ಸೋಣವಾಗಲಿ. ಅದು ಈ ಅಪರಾಧಿಯ ಸಂಬಂಧವಾದದ್ದು.

ಸುಲ್ತಾನರು :—ಆಗಬಹುದು. ಸ್ವಯಂ ದಿವಾನರು ಪ್ರತಿವಾದ ಮಾಡುವಾಗ ಕೇಳುವುದು ನಮ್ಮ ಕರ್ತವ್ಯವೇ ಇದೆ.

'ಹುಜೂರು! ಪ್ರತಿವಾದವಲ್ಲ. ಸನ್ನಿಧಾನದಲ್ಲಿ ಅರಿಕೆ. ಈ ಅಪ ರಾಧಿಯು ನನ್ನ ರಕ್ಷಣೆಯ ವಾಗ್ದಾನವನ್ನು ಪಡೆದು ಈ ಶಿಬಿರಕ್ಕೆ ಬಂದಿದ್ದಾನೆ. ಅವನ ಜೀವರಕ್ಷಣೆಮಾಡುವುದು ನನ್ನ ಧರ್ಮ. ಅವನಿಗೆ ಜೀವದಾನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅತ್ತಲಾಗಿ ಅಪರಾಧಿಯಿದ್ದ ಪಂಜರದ ಸರಳುಗಳೆಲ್ಲಾ ಝಲ್ಲೆಂದು ಶಬ್ದ ವಾಯಿತು. ಖಾಸಿಂಖಾನನು ಪಂಜರವು ಶಿಡಿದು ಬೀಳುವಂತೆ ಮುಷ್ಟಿಯಿಂದ ಹೊಡೆದು, "ದಿವಾನರೇ! ಈ ಪಾಪಿ, ಸುಳ್ಳು, ಘಾತುಕನನ್ನು ನನ್ನ ಜೀವ ಕ್ಕಾಗಿ ತಾವು ದಯಭಿಕ್ಷೆಯನ್ನು ಕೇಳಕೂಡದು. ನಾನು ತಮ್ಮ ರಕ್ಷಣೆಯಲ್ಲಿ

ಇಲ್ಲಿಗೆ ಬಂದಿಲ್ಲ. ಈ ಟಿಪ್ಪೂಸುಲ್ತಾನನಿಗೆ ಎರಡು ಮಾತು ಹೇಳಿ, ಹೋಗೋಣ ವೆಂದು ಬಂದೆ. ನನ್ನ ಪ್ರಾಣವನ್ನು ಅವರು ತೆಗೆದುಕೊಳ್ಳಲಿ. ಈ ನಗರದ ದ್ವೇಷಾನಲವು ಆರದೇ ಉರಿಯೇಳುವುದು " ಎಂದು ಘರ್ಜಿಸಿದನು.

ಈ ಮಾತು ಕೇಳಿ ಸುಲ್ತಾನನ ಕ್ರೋಧವು ಇಮ್ಮಡಿಯಾಯಿತು.

ದಿವಾನರೇ ! ಆ ಖಾಸಿಂಖಾನನಿಗೆ ಕ್ಷಮೆಯಿಲ್ಲ. ಇದೇ ಅಖೈರು ಆಜ್ಞೆ.

ಜಹಾಪನ ! ಅದು ಆಗದು. ಇವನಿಗೆ ಪ್ರತಿಯಾಗಿ ನನ್ನನ್ನು ಗಲ್ಲಿಗೆ ಹಾಕೋಣವಾಗಲಿ. ಇವನಿಗೆ ಪ್ರತಿಯಾಗಿ ನಾನು ಪ್ರಾಣ ಕೊಡುತ್ತೇನೆ.

ಇಲ್ಲಾ ! ಅದಾಗಲಾರದು. ರಾಜಭಕ್ತರಾದ ತಾವು ಸಿಂಹಾಸನದ ಅಪ್ಪಣೆಯನ್ನು ಪಾಲಿಸಬೇಕು.

ಹುಜೂರು ! ನನ್ನ ಮಾತುಗಳನ್ನು ಆಲಿಸಬೇಕು. ಈ ಅಪರಾಧಿಯು ಹೇಳಿರುವುದೆಲ್ಲಾ ನಿಜಾಂಶ ! ಇಯಜ್‌ಖಾನರು ರಾಜದ್ರೋಹಿಗಳಲ್ಲ. ಅವರು ತಮ್ಮ ವಿಶ್ವಾಸದ ಭ್ರಾತೃಗಳು. ಅವರು ಭಂಡಾರದ ಒಂದು ಕಾಸನ್ನೂ ಕೊಂಡುಹೋಗಲಿಲ್ಲ. ಅವರು ಇಂದು ಕಾಸಿಲ್ಲದ ದರಿದ್ರರಾಗಿ ಅಲೆಯುತ್ತಿದ್ದಾರೆ. ಅವರು ಬೊಂಬಾಯಿಗೆ ಹೋಗಿಲ್ಲ. ಅವರು ಈ ಶೀಮೆಯಲ್ಲಿಯೋ ಎಲ್ಲಿಯೋ ಇದ್ದಾರೆ. ಮಂಗಳೂರು ಇಂಗ್ಲೀಷರ ವಶವಾಗಿಲ್ಲ. ಇಂಗ್ಲೀಷರು ಅಲ್ಲಿ ಹಲ್ಲಾಮಾಡಿದ್ದಾರೆ. ನಾವು ಅವರನ್ನು ಹೊಡೆದೋಡಿಸಬಹುದು.

ಇಯಜ್‌ಖಾನನು ಇಲ್ಲೇ ಇದ್ದರೆ ಪತ್ತೇ ಮಾಡಲು ಸಾಧ್ಯವಾಗಲಿಲ್ಲವೇಕೆ ?

ಅವರನ್ನು ಹಿಡಿಯುವುದು ಅಸಾಧ್ಯ. ಈ ನಗರದ ಶೀಮೆಯು ಬೆಟ್ಟ ಬೆಟ್ಟವೂ ಒಂದು ಅಭೇಧ್ಯವಾದ ಕೋಟೆಯಂತಿದೆ.

ಪಂಜರದಿಂದ—

ನೀವು ಮೂರು ಕಣ್ಣಿಟ್ಟುಕೊಂಡು ಬಂದರೂ ಇಯಜ್‌ಖಾನರನ್ನು ಹಿಡಿಯಲಾರಿರಿ. ನೀವು ಇಯಜ್‌ಖಾನರ ಅನ್ವೇಷಣದಲ್ಲಿ ತೊಡಗಿದರೆ ಈ ಐವತ್ತು ಸಹಸ್ರ ಸೇನೆಯೂ ನುಚ್ಚುನುಚ್ಚಾಗಿ ಹೋಗುವುದು.

ಸುಲ್ತಾನ್:—ಹಲ್ಲು ಕಡಿಯುತ್ತಾ, 'ಈ ದ್ರೋಹಿಯನ್ನು ಗಲ್ಲಿಗೆ ಹಾಕಲೇಬೇಕು. ರಾಜಾರೋಷಾಗಿ ಗಲ್ಲಿಗೇರಿಸಬೇಕು. ಈ ನಗರದ ಶೀಮೆಯು ಸತ್ವವೆಷ್ಟಿದೆಯೋ ನೋಡಲೇಬೇಕು. ಇವನಿಗೆ ಕ್ಷಮೆ ಇಲ್ಲ.

ಹುಜೂರು! ಶಾಂತರಾಗಬೇಕು. ಈ ಒಬ್ಬನಿಗಾಗಿ ನಗರದ ಮೇಲೆ ಏಕೆ ಇಷ್ಟು ಕ್ರೋಧ. ಮಲಗಿರುವ ನಗರವನ್ನು ಪೂರ್ಣ ನಮ್ಮ ವಶವರ್ತಿಯಾಗಿರುವ ನಗರವನ್ನು ಹೊಡೆದು ಎಬ್ಬಿಸುವುದು ಉಚಿತವಲ್ಲ. ಈ ಗರೀಬ ಮುಹಮ್ಮದಾಲಿಯು ಸಹಸ್ರಸಹಸ್ರ ಪ್ರಣಾಮಗಳನ್ನು ಮಾಡಿ ಸನ್ನಿಧಾನದಲ್ಲಿ ಬೇಡಿಕೊಳ್ಳುತ್ತಾನೆ. ಖಾಸಿಂಖಾನನ್ನು ವಧೆಮಾಡುವುದರಿಂದ ಮೈಸೂರಿಗೆ ಎಂದಿಗೂ ಅಳಿಸಲಾಗದ ಕಳಂಕವು ತಟ್ಟುವುದು. ಖಾವಂದರವರು ನಗರಕ್ಕೆ ದಯಮಾಡಿಸಿದ ಮೊಟ್ಟಮೊದಲನೆಯ ರಾಜಶಾಸನವು ಒಬ್ಬ ಮುಸಲ್ಮಾನ್ ಸರದಾರನ ವಧೆಯೆಂಬುದು ದೊಡ್ಡ ಅಪಖ್ಯಾತಿ. ಮುಸಲ್ಮಾನ್ ಪ್ರಪಂಚದಲ್ಲೆಲ್ಲಾ ಇದೊಂದು ಆಡುಗಾರಿಕೆಯ ಮಾತಾಗಿ ಎಂದೆಂದಿಗೂ ಉಳಿಯುತ್ತದೆ ನಾನು ಹುಟ್ಟಿದಂದಿನಿಂದ ಸನ್ನಿಧಾನದ ಸೇವೆಮಾಡಿದ್ದೇನೆ. ಈ ರಾಜ್ಯದಲ್ಲಿ ದರಬಾರಿನಲ್ಲಿ ದೊಡ್ಡ ದಿವಾನಗಿರಿಯನ್ನು ಗರೀಬನಿಗೆ ದಯಪಾಲಿಸೋಣವಾಗಿದೆ. ಇಷ್ಟು ಸೇವೆಗೆ ಇದೊಂದು ಪುರಸ್ಕಾರವನ್ನು ದಯಪಾಲಿಸೋಣವಾಗಲಿ. ಈ ಖಾಸಿಂಖಾನನ ಅಪರಾಧವನ್ನು ಮನ್ನಿಸೋಣವಾಗಲಿ. ದೊಡ್ಡ ನವಾಬ್ ಹೈದರಾಲಿಯವರ ಪಾದದ ಆಣೆಯಿಟ್ಟು ಹೇಳುತ್ತೇನೆ ಎಂದು ಆರ್ತಧ್ವನಿಯಿಂದ ಘಟ್ಟಿಯಾಗಿ ಕೇಳಿಕೊಂಡು ಸಿಂಹಾಸನದ ಮುಂದೆ ಅಡ್ಡಬಿದ್ದನು.

ಸುಲ್ತಾನರು ಏನು ಹೇಳಲಾರದೇ ಹೋದರು. "ದೊಡ್ಡ ದಿವಾನರಾದ ಮುಹಮ್ಮದಾಲಿಯವರ ಮಾತಿಗಾಗಿ ಈ ರಾಜದ್ರೋಹಿಯನ್ನು ಈಗ ಮನ್ನಿಸಿದ್ದೇವೆ" ಎಂದು ಸುಲ್ತಾನರು ಹೇಳಿದರು. ದಿವಾನರು ಕೈಮುಗಿದು ಎದ್ದು ನಿಂತರು. ಸಭೆಯೆಲ್ಲಾ ಅಪ್ರತಿಭವಾಗಿ ನಿಂತಿದೆ. ಖಾಸಿಂಖಾನರನ್ನು ಪಂಜರದಿಂದ ಬಿಚ್ಚಿಬಿಡಿ ಎಂದು ಸುಲ್ತಾನರ ಆಜ್ಞೆಯಾಯಿತು. ಖಾನನು ಪಂಜರದಿಂದ ಹೊರಗೆ ಬಂದು ಹಸಿದ ಹುಲಿಯಂತೆ ದುರದುರನೆ ನೋಡುತ್ತಾ ನಿಂತನು. ಸುಲ್ತಾನರು ಅವನ ಕಡೆ ತಿರುಗಿ ನೋಡಿ ನಕ್ಕು, ವಿಶ್ರಾಂತಿ ಗೃಹಕ್ಕೆ ತೆರಳಿದರು. ದಿವಾನರು ಖಾಸಿಂಖಾನನ್ನು ಜೊತೆಯಲ್ಲಿ ಕರೆದುಕೊಂಡುಹೋದರು.

ಆ ದಿನವೆಲ್ಲಾ ಹಾಗೆಯೇ ಕಳೆದುಹೋಯಿತು. ಎಲ್ಲರಿಗೂ ಒಂದು ವಿಧವಾದ ಆಶ್ಚರ್ಯ. ವಿಚಾರವ್ಯಗ್ರತೆಗಳು. ಕೆಲವರು ಆವತ್ತಿನ ನಡವಳಿಕೆಗಳನ್ನೆಲ್ಲಾ ಸರಿ ಎನ್ನುವರು. ಮತ್ತೆ ಕೆಲವರು ಬಹಳ ತಪ್ಪು. ಅಷ್ಟುಮಾಡಿ ಹಿಂದೆಗೆಯಬಾರದಿತ್ತು ಎನ್ನುವರು. ಅಂತೂ ಆ ದಿನವೆಲ್ಲಾ ಖಾಸಿಂಖಾನನ ಮಾತುಗಳೇ. ಖಾಸಿಂಖಾನನಿಗೆ ಮಾತ್ರ ಕಿಂಚತ್ತೂ ವಿಷಾದವಿಲ್ಲ. ಅವನು ಟಿಪ್ಪೂಸುಲ್ತಾನನ ದಿವಾನಗಿರಿಯನ್ನು ಮಹೋನ್ನತವಾದುದೆಂದು ಬಗೆದಿದ್ದರೆ ಇದನ್ನೆಲ್ಲಾ ಅವಮಾನವೆಂದು ಭಾವಿಸುತ್ತಿದ್ದನು. ಅವನ ಮನಸ್ಸಿನಲ್ಲಿ ಇಷ್ಟೆ. ಪ್ರಾತಃಕಾಲದ ದರಬಾರಿನಲ್ಲಿ ನಾನು ಮೂಢನಾದುದೇಕೆ? ಸಂಧ್ಯಾಕಾಲದ ಕೆಲಸವನ್ನು ನಾನು ಪ್ರಾತಃಕಾಲವೇ ಮಾಡಲಿಲ್ಲವೇಕೆ ? ಎಂದುಕೊಳ್ಳುವನು. ಟಿಪ್ಪುವಿಗೆ ಹೇಳಬೇಕಾದುದ್ದನ್ನೆಲ್ಲಾ ಸರಿಯಾಗಿ ಹೇಳಿದೆನೋ ಇಲ್ಲವೋ ಎಂದು ಲೆಖ್ಖಹಾಕಿಕೊಳ್ಳುವನು. ಎಲ್ಲವೂ ಸರಿಯಾಗಿ ಆಗಿದೆ ಎಂದುಕೊಳ್ಳುವನು. ಆದರೆ ಮುಹಮ್ಮದಾಲಿಯವರ ಗುಣಕ್ಕಾಗಿ ಸಾವಿರಸಾರಿ ಮೆಚ್ಚಿಕೊಳ್ಳುವನು. ಸುಲ್ತಾನನ ದರಬಾರಿನಲ್ಲಿ ಈ ಮುದಾವನಿಗೆ ಎಷ್ಟು ಗೌರವವಿದೆಯೆಂದುಕೊಳ್ಳುವನು.

ಮುಹಮ್ಮದಾಲಿಯವರ ಯೋಚನೆಗಳೇ ಬೇರೆ. ಎಂತಹ ಅಧರ್ಮಕಾರ್ಯ. ಟಿಪ್ಪುವು ಎಷ್ಟು ಸಣ್ಣ ಮನುಷ್ಯ. ನಮ್ಮ ಮಾತಿನ ಮೇಲೆ ನಂಬಿಕೆಯಿಟ್ಟು ಏಕಾಂಗಿಯಾಗಿ ನಮ್ಮ ಶಿಬಿರಕ್ಕೆ ಬಂದ ಖಾಸಿಂಖಾನನ ಮೇಲೆ ಎಷ್ಟು ಕ್ರೂರವಾದ ಅತ್ಯಾಚಾರ. ಪಾತ್ರಃಕಾಲ ತುಂಬಿದ ಸಭೆಯಲ್ಲಿ ನಗರದ ದಿವಾನಗಿರಿಯನ್ನು ಕೊಡುವುದೇನು? ಮಧ್ಯಾಹ್ನ ಅದೇ ರಾಜಸಭೆಯಲ್ಲಿ ಅಪಮಾನಪಡಿಸಿ ಗಲ್ಲು ಶಿಕ್ಷೆಯನ್ನು ವಿಧಿಸುವುದೆಂದರೇನು? ಇದೊಂದು ಹುಚ್ಚು ದರಬಾರಾಗಿಬಿಟ್ಟಿತಲ್ಲಾ. ಲೋಕದಲ್ಲಿ ರಾಜರುಗಳು ಎನೆಂದಾರು. ಎಂತಹ ಪ್ರಮಾದ. ಮೈಸೂರಿಗೆ ಎಂಥಾ ದುಷ್ಕಾಲ. ಈ ಹುಡುಗನಾದರೂ ಎಷ್ಟು ದುಡುಕು. ಶ್ರಿರಂಗಪಟ್ಟಣದ ಸಿಂಹಾಸನದ ಅಧಿಪತಿಯನ್ನು, ತುಂಬಿದ ಸಭೆಯಲ್ಲಿ ಐವತ್ತು ಸಹಸ್ರ ಸೈನ್ಯದ ಶಿಬಿರದಲ್ಲಿ ಎಷ್ಟು ತುಚ್ಛವಾಗಿ ಮಾತನಾಡಿದ. ಇದೇನೋ ಬಹಳ ಸಾಹಸ. ಆದರೂ ಒಳ್ಳೆಯ ವೀರಪುರುಷ. ನಮ್ಮ ಟಿಪ್ಪುವು ಆ ತುಂಬಿದ ಸಭೆಯಲ್ಲಿ ಹೈದರಾಲಿಯವರ ಪ್ರಿಯ ಪುತ್ರ ಇಯುಜ್‌ಖಾನರ ಮೇಲೆ ಎಷ್ಟು ತಿರಸ್ಕಾರದ ಮಾತುಗಳನ್ನಾಡಿದ. ಅದನ್ನೂ

ಸಭೆಯಲ್ಲಿ ಒಬ್ಬನಾದರೂ ನಂಬಿದರೆ. ಇಯಜ್‌ಖಾನರ ಮೇಲೆ ಎಷ್ಟೊಂದು ಭಯಂಕರವಾದ ಸುಳ್ಳು ಆರೋಪಗಳು. ಛೀ! ಛೀ! ಎಷ್ಟು ಅನ್ಯಾಯ. ಎಷ್ಟು ಪ್ರಮಾದ. ಆ ಮಹಾಪುರುಷನು ಸುಲ್ತಾನನಮೇಲೆ ಕತ್ತಿ ಎತ್ತುವುದಿಲ್ಲವೆಂದು ಈ ನಗರದ ರಾಜ್ಯವನ್ನು ತೆರೆದ ಬಾಗಿಲಾಗಿ ಬಿಟ್ಟುಕೊಟ್ಟ. ಅವನ ಮೇಲೆ ಎಂಥಾ ತುಚ್ಛವಾದ ಅಭಿಯೋಗ. ಈಗ ನಾನು ಈ ಖಾಸಿಂಖಾನನಿಗೆ ಮುಖ ತೋರಿಸುವುದು ಹೇಗೆ? ಹೀಗೆ ಯೋಚನೆ ಮಾಡುತ್ತಾ ಖಾಸಿಂಖಾನ ನಿದ್ದೆಡೆಗೆ ಬಂದನು. ಖಾಸಿಂಖಾನನು ನಿರಾಲೋಚನೆಯಿಂದ ಪ್ರಸನ್ನವದನನಾಗಿ ಕುಳಿತಿದ್ದನು. ಮಹಮ್ಮದಾಲಿಯವರು ಬರುತ್ತಲೇ ಖಾಸಿಂಖಾನನೆದ್ದು ಸಲಾಂಮಾಡಿ ಅವರ ಕೈಹಿಡಿದು ಆಸನದ ಮೇಲೆ ಕೂಡಿಸಿ ತಾನೂ ಕೂತನು.

ಖಾಸಿಂಖಾ್ ನನ್ನ ಮಾತನ್ನು ಕೇಳುವೆಯಾ?

ತಮ್ಮ ಮಾತಿಗೆ ಪ್ರತಿಯುಂಟೆ. ಅಪ್ಪಣೆ ಮಾಡೋಣವಾಗಲಿ.

ಈಗ ಶಿಬಿರವನ್ನು ದಾಟಿಸಿ ಬರುತ್ತೇನೆ ನೀನು ಹೊರಟುಹೋಗು.

ಅದಾಗದು ನಾನು ಕಳ್ಳತನದಿಂದ ಹೋಗುವುದಿಲ್ಲ.

ಕಳ್ಳತನವೆಲ್ಲಿ ಬಂತು? ನಾನು ನಿನ್ನನ್ನು ಇಲ್ಲಿಗೆ ಕರತಂದೆ. ನಾನೇ ರಾಜಾರೋಷಾಗಿ ಕಳುಹಿಸಿಕೊಡುತ್ತೇನೆ.

ನನಗಿನ್ನೂ ಇಲ್ಲಿ ಸ್ವಲ್ಪ ಕೆಲಸವಿದೆ.

ಆಶ್ಚರ್ಯದಿಂದ—ಇಲ್ಲೇನು ಕೆಲಸ ನಿನಗೆ?

ನಾನು ಮತ್ತೊಂದುಬಾರಿ ಟಿಪ್ಪೂಸುಲ್ತಾನರನ್ನು ನೋಡಬೇಕು.

ನಾನು ದಿವಾನಗಿರಿಯನ್ನು ಕೊಡಿಸುವುದಾಗಿ ನಿನ್ನನ್ನು ಕರತಂದೆ. ನಾನು ಸುಳ್ಳು ಹೇಳಿದಹಾಗಾಯಿತು. ಮೋಸ ಮಾಡಿದಹಾಗಾಯಿತು. ನೀನು ಇಷ್ಟು ಅಪಮಾನವನ್ನು ಅನುಭವಿಸಬೇಕಾಯಿತು. ಆ ಹುಲಿಯೊಡನೆ ನಿನಗೇಕೆ ಸರಸ.

'ಹುಲಿ' ಎಂಬ ಹೆಸರು ನೀವೆಲ್ಲಾ ಸುಲ್ತಾನರಿಗೆ ಮುದ್ದಿಗೆ ಇಟ್ಟು ಕೊಂಡಿರುವ ಹೆಸರು. ನನಗೆ—ಮೋಸವೆಲ್ಲಿ ಬಂತು. ನಾನು ದಿವಾನ

ಗಿರಿಯ ಸಂಪತ್ತಿಗಾಗಿ ಬರಲಿಲ್ಲ. ಸುಲ್ತಾನರನ್ನು ಭೇಟಿಯಾಗಿ ಹೋಗ ಬೇಕೆಂದೇ ತಮ್ಮೊಡನೆ ಬಂದೆ.

ಇರಲಿ ! ಈಗ ಹೊರಟುಹೋಗು. ಸುಲ್ತಾನನು ಬಹಳ ಘಾತುಕ ಅವನ ಬುದ್ಧಿ ಕೆಟ್ಟುಹೋಗಿದೆ. ಪುನಃ ನಿನ್ನಮೇಲೆ ಆಗ್ರಹವಿರಬಹುದು.

ಅವನ ಆಗ್ರಹದ ಪರಮಾವಧಿಯನ್ನು ನೋಡಬೇಕೆಂದಿದ್ದೇನೆ. ಅವರಲ್ಲಿ ಮತ್ತೊಂದು ಮಾತು ಹೇಳಿಯೇ ಹೋಗಬೇಕು. ಮತ್ತೊಮ್ಮೆ ಅವರ ಭೇಟಿಮಾಡಿಸಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ನಾನು ಅವರ ಭೇಟಿಮಾಡಿಸಿ ಅಪ್ಪಣೆ ಕೊಡಿಸುತ್ತೇನೆ. ನೀನು ಅವ ರೆದುರಿಗೆ ಮೀರಿ ಮಾತನಾಡಕೂಡದು.

ಆಗಬಹುದು.

ದಿವಾನರು ಹೊರಟರು. ಖಾಸಿಂಖಾನನು ಮರ್ಯಾದೆಯಿಂದ ಬಗ್ಗಿ ಸಲಾಂಮಾಡಿದನು. ದಿವಾನರು ಗುಡಾರದಿಂದ ಹೊರಗೆಹೋದರು.

ಇರಲಿ ! ಸುಲ್ತಾನನಿಗೆ ಇನ್ನೊಂದು 'ಸಹಾ' ಕೊಡುತ್ತೇನೆ ಎಂದು ಕೊಂಡನು. ಖಾಸಿಂಖಾ‌ನ್.

ಬೆಳಗಾಯಿತು. ನೌಪತ್ತು ನಗಾರಿಯಾಯಿತು. ಸುಪ್ತವಾಗಿದ್ದ ಆ ವಾಹಿನಿಯು ಎದ್ದು ನಿತ್ಯಕರ್ಮಗಳಲ್ಲಿ ತೊಡಗಿದೆ. ಆಮೇಲೆ ಸೈನಿಕರೆಲ್ಲಾ ದಿರಸುಗಳನ್ನು ಹಾಕಿಕೊಂಡು ಕವಾಯಿತು ಮಾಡಿದರು. ದರಬಾರು ಮಂಟಪದ ಮುಂದಿನ ಅಂಗಳದಲ್ಲಿ ಸರದಾರರೆಲ್ಲಾ ಬಂದು ಎತ್ತಿ ಕಟ್ಟಿದರು. 'ಇಂದು ಧ್ವಜಕ್ಕೆ' ಮುಜರೆ ಮಾಡಿದರು. ಈ ದಿನ ಈ ಕವಾಯಿತು ಮುಜರೆಗೆ ಸುಲ್ತಾನರು ಬಂದಿಲ್ಲಾ. ದಿವಾ‌ನ್ ಮಹಮ್ಮದಾಲಿಯವರು ಬಂದಿಲ್ಲಾ. ಕಛೇರಿಯ ಭಕ್ಷಿಗಳಾದ ಜನಾಲುಬುದ್ದೀನರೇ ಮುಜರೆಯ ಮರ್ಯಾದೆ ಯನ್ನೂ ಸ್ವೀಕರಿಸಿದರು. ಖಾಸಿಂಖಾನನೆದ್ದು ಪ್ರಾತಃವಿಧಿಗಳನ್ನು ತೀರಿಸಿ ಅಂಗರೇಕನ್ನು ಧರಿಸಿದನು. ಉಷ್ಣೀಷವನ್ನುಟ್ಟುಕೊಂಡನು. ನಡುಕಟ್ಟು ಕಟ್ಟಿದನು. ಅದರಲ್ಲಿ ದೀರ್ಘವಾದ ಕತ್ತಿಯು ಪ್ರಕಾಶಮಾನವಾಗಿದೆ. ಆತ್ಮತೆ ಯಿಂದ ಬಂದು ತನ್ನ ಡೇರೆಯ ಬಾಗಿಲಿನಲ್ಲಿ ನಿಂತನು. ಈ ಕವಾಯಿತು

ಮುಜರೆಯನ್ನು ನೋಡುತ್ತ ನಿಂತನು. ಮೊದಲು ಫೌಜುದಾರರ ಮುಜರೆಯಾಯಿತು. ಅನಂತರ ಸೈನಿಕರು ಗುಂಪುಗುಂಪಾಗಿ ಸಾಲುಗಟ್ಟಿ ಬಂದು ಮುಜರೆಮಾಡಿ ಆ ಮಂಟಪವನ್ನು ಸುತ್ತುಕಟ್ಟಿ ಹೋಗುತ್ತಿದ್ದರು. ಇದನ್ನು ನೋಡುತ್ತ ನಿಂತನು. ಎಲ್ಲರೂ ಖಾಸಿಂಖಾನನ್ನು ನೊಡುತ್ತ ಹೋದರು. ಕೆಲವರು ಅವನನ್ನು ನೋಡಿ ಗೌರವದ ಸಲಾಂಮಾಡಿ ಹೋದರು. ಕೆಲವರು ನಗುಮುಖಮಾಡಿ ಹೋದರು. ಅಂತೂ ಎಲ್ಲರೂ ಈ ವ್ಯಕ್ತಿಯ ಕಡೆಗೆ ಒಂದು ವಿಶೇಷ ದೃಷ್ಟಿಯಿಂದ ನೋಡುತ್ತಾ ಹೋದರು. ಖಾಸಿಂಖಾನನು ಎಲ್ಲವನ್ನೂ ನೋಡಿದನು. 'ಸೈನ್ಯವು ಚೆನ್ನಾಗಿದೆ. ಸೈನ್ಯದಲ್ಲಿ ಶಿಸ್ತು ಇದೆ' ಎಂದುಕೊಂಡನು. ಮುಜರೆಯು ಮುಗಿಯುತ್ತಲೇ ತುತುರಿಯಾಯಿತು. ಸರಿಯಾಗಿ ಪ್ರಾತಃಕಾಲ ಒಂಭತ್ತು ಗಂಟೆ, ಅಷ್ಟುಹೊತ್ತಿಗೆ ಸರಿಯಾಗಿ ಸುಲ್ತಾನರು ಮಂತ್ರಾಲೋಚನೆಯ ಡೇರೆಗೆ ಬಿಜಯಮಾಡಿದರು. ಅಲ್ಲಿ ಬಹಳ ಶಿಸ್ತು ಬಹಳ ಕಟ್ಟಿಟ್ಟಿನಿಟ್ಟು. ಆಪ್ತ ಸೇವಕರು ಬಿಚ್ಚುಕತ್ತಿ ಪಹರೆ ಕೊಡುತ್ತಿದ್ದಾರೆ. ಒಳಗೆ ಸುಲ್ತಾನರ ಮಂತ್ರಾಲಾಚನೆಯ ನಾಲ್ಕು ಮಂತ್ರಿಗಳು, ಸೇನಾಧಿಪತಿಗಳು, ಕಛೇರಿ ಭಕ್ಷಿಗಳು, ದರಬಾರು ಭಕ್ಷಿಗಳು ಹೀಗೆ ಎಂಟು ಹತ್ತು ಜನ ಸಮೀಪದ ಆಪ್ತಾಲೋಚನೆಯವರು ಕುಳಿತಿದ್ದಾರೆ. ಸುಲ್ತಾನರ ಸಮೀಪದಲ್ಲಿ ಸಮುಗದ್ದುಗೆಯಲ್ಲಿ ದಿವಾನ್ ಮಹಮ್ಮದಾಲಿಯವರು ಕುಳಿತಿದ್ದಾರೆ.

ಸುಲ್ತಾನರು :—ದಿವಾನರೇ ! ಮೈಸೂರು ರಾಜ್ಯದಲ್ಲಿ ತಾವು ಸುಪ್ರತಿಷ್ಠಿತ ಸರದಾರರು. ದೊಡ್ಡ ನವಾಬರ ಆದರ ವಿಶ್ವಾಸಗಳಿಗೆ ಪಾತ್ರರು. ನಮ್ಮ ರಾಜ್ಯದ ಸರದಾರರಿಗೆಲ್ಲಾ ತಮ್ಮಲ್ಲಿ ಬಹಳ ಗೌರವ. ನಮಗಂತೂ ತಮ್ಮಲ್ಲಿ ಪೂಜ್ಯ ಬುದ್ಧಿ. ಆದರೂ ನಿನ್ನೆಯ ದರಬಾರಿನಲ್ಲಿ ನಿಮ್ಮ ಪ್ರತಿರೋಧವು ಬಹಳವಾಯಿತು. ನಮ್ಮ ಗೌರವಕ್ಕೆ ಅದು ಸ್ವಲ್ಪ ಕುಂದಕವನ್ನುಂಟುಮಾಡುತ್ತದೆ.

ಖಾವಿಂದ್ ! ಈ ಗರೀಬನ ವರ್ತನದಿಂದ ಹುಜೂರಿನ ಗೌರವಕ್ಕೆ ಕುಂದು ಬರುವುದೆಂದರೆ ಈ ಶಿರಸ್ಸನ್ನು ಕತ್ತರಿಸಿ ಪಾದಕ್ಕೊಪ್ಪಿಸಬಲ್ಲೆ. ದೊಡ್ಡ ನವಾಬರು ಎಂಥಾ ಕಠಿಣ ಪ್ರಸಂಗದಲ್ಲಿಯೂ, ನನ್ನ ಮಾತಿಗೆ ಬೆಲೆಕೊಡು

ತ್ತಿದ್ದರು. ಬೂದನೂರು ಕಾಳಗದಲ್ಲಿ ಗೋಪಾಲನಾಯಕರು ಒಂದು ಭಾರಿ ನನ್ನ ಕೈಗೆ ಸಿಕ್ಕಿಬಿದ್ದರು. ಆಗಲೂ ಇಂಥದೇ ಒಂದು ಧರ್ಮ ಸಂಕಟವು ಬಂತು. ಆಗ ಅವರನ್ನು ಬಿಡಕೂಡದೆಂದು ನವಾಬರ ಇಚ್ಛೆ. ಬಿಟ್ಟುಬಿಡ ಬೇಕೆಂದು ನನ್ನ ಹಠ. ನಾನು ಅವರನ್ನು ಬಿಟ್ಟೆಬಿಟ್ಟೆ. ನವಾಬರು ಕೋಪ ದಿಂದ ಕೈ ಬೆರಳು ಕಡಿದರು. ಛಿಲ್ಲೆಂದು ರಕ್ತವು ಬಂತು. ಅಷ್ಟು ಪ್ರಳಯ ಕೋಪ. ಅದೇ ಕೋಪದಿಂದ ಅದೇ ಕೈಯಿಂದ ನನ್ನ ತಲೆಯನ್ನು ಹಾರಿಸಿ ಬಿಟ್ಟಿದ್ದರೆ ಇಂದು ಈ ಸನ್ನಿಧಾನಕ್ಕೆ ಈ ಗರೀಬನಿಂದ ಅಪಚಾರವಾಗುತ್ತಿರು ಲಿಲ್ಲ. ನವಾಬರು ನಕ್ಕು ಬೇಕುಫ್. ಹೋಗು. ಇಂದಿನ ಯುದ್ಧವನ್ನು ನೀನೇ ಮಾಡು ಎಂದು ಹೇಳಿದರು. ಅಂದಿನ ಯುದ್ಧದಂಥಾ ತುಮುಲ ಯುದ್ಧವನ್ನು ನನ್ನ ಜನ್ಮದಲ್ಲಿ ನಾನು ನೋಡಿಲ್ಲ. ಹಗಲೇ ಕತ್ತಲಾಗಿ ಹೋಗಿತ್ತು. ಹೈದರಲ್ಲೀಖಾನರ ಶರೀರದಲ್ಲಿ ಮುವತ್ತು ಗಾಯಗಳಾಗಿತ್ತು. ಕಟ್ಟಕಡೆಯಲ್ಲಿ ಅವರು ತಲೆತಿರುಗಿ ಕುದುರೆಯಿಂದ ಬೀಳಬೇಕು, ಅಷ್ಟರಲ್ಲಿ ನನ್ನ ಕುದುರೆ ಯನ್ನು ಚುಕಾಯಿಸಿ ಅವರನ್ನು ಹಿಡಿದುಕೊಂಡೆ ಕುಗ್ಗಿದ ಧ್ವನಿ, ಒಣಗಿದ ಗಂಟಲು, ಬೇಕುಪ್! ಅಲ್ಲಿ ಗೋಪಾಲನಾಯಕರ ಶರೀರವು ಬಿದ್ದಿದೆ ಎಂದು ಕತ್ತಿಯಿಂದ ತೋರಿಸಿದರು. ಅದರ ಸಮೀಪಕ್ಕೆ ಅವರನ್ನೂ ಕರೆದುಕೊಂಡು ಹೋಗಿ ನಿಲ್ಲಿಸಿದೆ. ಹೈದರಲ್ಲಿಯವರ ಕೈ ನಡುಗುತ್ತಿತ್ತು. ಆ ಕೈಯಿಂದಲೇ ಗೋಪಾಲನಾಯಕನ ಕೈ ಎತ್ತಿ ಚುಂಬಿಸಿದರು. ಗೋಪಾಲನಾಯಕನ ಶರೀರ ದಲ್ಲಿ ಬಹಳ ಯಾತನೆ ಇತ್ತು. ಆಗಲೂ ಕಣ್ಣು ಬಿಟ್ಟು ನೋಡಿದ. ಆ ವಿಶಾಲವಾದ ರೌದ್ರ ನೇತ್ರಗಳಲ್ಲಿ ನೀರು ಬಂತು. ಮತ್ತೊಂದು ಕೈ ನನ್ನ ಮೇಲೆ ಹಾಕಿದ. ಆ ಯಾತನೆಯಲ್ಲಿಯೂ ಒಂದು ನಗುವನ್ನು ನಕ್ಕ! ಏನೋ ಹೇಳಬೇಕೆಂದು ತುಟಿ ಅಲ್ಲಾಡಿತು. ಪ್ರಾಣವು ಹಾರಿಹೋಯಿತು. ನಾನು ಹೈದರಲ್ಲಿಯವರನ್ನು ಅರ್ಧ ಜ್ಞಾನಾವಸ್ಥೆಯಲ್ಲಿ ಶಿಬಿರಕ್ಕೆ ತಂದೆ. ರಾತ್ರಿ ಹತ್ತು ಗಂಟೆಗೆ ಸರಿಯಾಗಿ ಜ್ಞಾನ ಬಂತು. 'ಗೋಪಾಲನಾಯಕರು ಸತ್ತುಹೋದರೆ?' ಎಂದು ಕೇಳಿದರು. 'ಹೌದು ಹುಜೂರು' ಎಂದು ಉತ್ತರ ಕೊಟ್ಟೆ. ಅವರ ಕಣ್ಣಿನಲ್ಲಿ ನೀರು ಬಂತು. 'ಅವನೊಬ್ಬ ಮಹಾ ವೀರ. ಇಂದಿನ ಜಯವು ನಿಜವಾದ ಜಯ' ಎಂದರು. ಅಂತಹ ಜಯ

ವನ್ನು ನಾವು ಆಶಿಸಬೇಕು. ಹುಜೂರು ! ಅಂದಿನ-ಪ್ರಕರಣವನ್ನೂ ಇಂದಿನ ಪ್ರಕರಣವನ್ನೂ ತಾವು ಹೋಲಿಸಿ ನೋಡೋಣಾಗಲಿ.

ದಿವಾನರೆ, ನಾವು ವಿಶಾಲವಾದ ದೊಡ್ಡ ರಾಜ್ಯವನ್ನು ಕಟ್ಟಿದ್ದೇವೆ. ಆಯಾ ಪ್ರಾಂತದಲ್ಲಿ ಅನೇಕ ದಿವಾನರನ್ನು ನೇಮಿಸಿದ್ದೇವೆ. ಇನ್ನೂ ರಾಜ್ಯ ಭಾರದ ಮೊದಲು. ಈಗಲೇ ಬಿಕ್ಕಟ್ಟು ತಪ್ಪಿಹೋದರೆ ಹೇಗೆತಾನೇ ಅಧಿಕಾರ ನಡಿಯುಬೇಕು. ನಮ್ಮ ಭೀತಿಯು ಎಲ್ಲರಿಗೂ ಇರಬೇಕು. ಅದಕ್ಕಾಗಿ ತಪ್ಪು ಮಾಡಿದ ಖಾಸಿಂಖಾನನಿಗೆ ತಕ್ಕ ಶಿಕ್ಷೆ ವಿಧಿಸಿದೆವು. ಅದರಲ್ಲಿ ತಪ್ಪೇನಿದೆ.

ನಗರಕ್ಕೆ ಸುಲ್ತಾನರು ಬರುತ್ತಲೇ ಮೊದಲು ಅಧಿಕಾರಿಯನ್ನು ಗಲ್ಲಿಗೆ ಹಾಕುವುದೇ ರಾಜಕಾರ್ಯವೇ ? ಇಲ್ಲಿ ನಾವು ಗಳಿಸಿರುವ ಜಯವಾದರೂ ಏನು ? ನಿಮ್ಮನ್ನು ಸೈನ್ಯ ಸಮೇತ ಕಳಿಸಿದ್ದೇಕೆ ? ನೀವು ನಗರವನ್ನು ಜಯಿಸಿಬರಲಿಲ್ಲವೇ ?

ನಗರದಲ್ಲಿ ಯುದ್ಧ ಪ್ರಮಯವೇ ಇಲ್ಲ. ಅಲ್ಲಿ ಜಯಿಸುವದೆಂದರೇನು? ನಮ್ಮ ರಾಜ್ಯವನ್ನು ನಾವು ಒಪ್ಪಿಸಿಕೊಂಡೆವು. ಅಷ್ಟೆ.

ಹಾಗಾದರೆ ನಗರವನ್ನು ನಾವು ಈಗ ಪರಾಕ್ರಮದಿಂದ ಜಯಿಸ ಲಿಲ್ಲವೇ ?

ಇಲ್ಲ ? ನಗರದಲ್ಲಿ ಪರಾಕ್ರಮವು ಅಷ್ಟು ಸುಲಭವಾಗಿ ಹಾಯು ವುದಿಲ್ಲ.

ನಗರದ ಮೇಲೆ ಯುದ್ಧಮಾಡಲು ನೀವು ಹಿಂಜರಿಯುವಿರಾ ? ಯುದ್ಧ ಮಾಡಲಾರರಿರಾ ?

ಅಲ್‌ಬತ್—ಯುದ ಪ್ರಸಂಗವು ಬಂದರೆ ಯುದ್ಧಮಾಡುತ್ತೇನೆ. ಈ ಶರೀರದಲ್ಲಿ ರಕ್ತಬಿಂದುವಿರುವವರೆಗೆ, ಈ ಮುಂಡದ ಮೇಲೆ ರುಂಡವಿರುವ ವರೆಗೆ ತಮ್ಮ ಸೇವೆಗಾಗಿ ಈ ಗರೀಬನು ಯುದ್ಧ ಮಾಡುತ್ತಾನೆ.

ಇಯಜ್‌ಖಾನರಮೇಲೆ ಯುದ್ಧ ಬಂದರೂ ತಾವು ಯುದ್ಧ ಮಾಡು ವಿರಾ ?

ಸನ್ನಿಧಾನದ ಮೇಲೆ ಕೈಯೆತ್ತಿದರೆಂದರೆ ಈ ಜಗತ್ತಿನ ಮೇಲೆಲ್ಲಾ ಒಂದು ಸಾರಿ ನನ್ನ ಕತ್ತಿಯನ್ನು ಬೀಸಬಲ್ಲೆ.

ಇಯುಜ್‌ಖಾನರು ಹೇಡಿಗಳಂತೆ ಓಡಿಹೋಗಲಿಲ್ಲವೋ? ಅವರನ್ನು ನಾವು ಗೆದ್ದಿಲ್ಲವೋ ?

ಇಲ್ಲ. ಅವರನ್ನು ತಾವು ಗೆದ್ದಿಲ್ಲ.

ನಾವು ಇಯುಜ್‌ಖಾನರನ್ನು ಗೆದ್ದಿಲ್ಲ. ನಗರವನ್ನು ಜಯಿಸಲಿಲ್ಲ. ಹಾಗಾದರೆ ಇಷ್ಟು ಸೈನ್ಯ ಸನ್ನಾಹದೊಂದಿಗೆ ಇಲ್ಲಿಗೆ ಬಂದುದೇಕೆ ?

ನಮ್ಮ ರಾಜ್ಯವನ್ನು ನಾವು ಒಪ್ಪಿಸಿಕೊಳ್ಳುವುದಕ್ಕೆ.

ನನಗೆ ಅದು ಇಷ್ಟವಿಲ್ಲ ನಗರವನ್ನು ಗೆದ್ದು, ಇಯುಜ್‌ಖಾನರನ್ನು ಜಯಿಸಿ ನಾವು ರಾಜಧಾನಿಗೆ ಹಿಂದಿರುಗಬೇಕು.

ಹಾಗಾದರೆ ನಗರದ ರಾಜ್ಯದಿಂದ ಶಿಬಿರವನ್ನು ಹೊರಗೆ ಹೂಡಿರಿ. ನಗರದ ಶೀಮೆಯಲ್ಲೆಲ್ಲಾ ಯುದ್ಧದ ಡಂಗೂರವನ್ನು ಹೊಡೆಸಿರಿ. ಇಯುಜ್ ಖಾನರು ವೀರರಾದರೆ ಯುದ್ಧಕ್ಕೆ ಬರಬೇಕೆಂದು ಸಾರಿಸಿರಿ.

ಯುದ್ಧವು ಪ್ರಾಪ್ತವಾಗುವುದು. ನನ್ನ ಕಡೆಯ ಈ ವಯಸ್ಸಿನಲ್ಲಿ ಒಂದು ಮಹಾ ಕುರುಕ್ಷೇತ್ರವನ್ನು ನೋಡಿಬಿಡುತ್ತೇನೆ.

ಇಯುಜ್‌ಖಾನರು ತಮ್ಮ ಕೈಯಿಂದಲೇ ಮೃತಿಹೊಂದುವ ಪ್ರಸಂಗವು ಬಂದರೆ ?

ಈ ಗರೀಬಸಿಗೆ ಅದೊಂದು ಅಜರಾಮರವಾದ ಕೀರ್ತಿ.

ದಿವಾನರೇ! ಮಂತ್ರಿಗಳೇ, ಸರದಾರರೇ, ಎಲ್ಲರೂ ಕೇಳಿರಿ, ಇದು ನನ್ನ ಪ್ರತಿಜ್ಞೆ! ಇಯುಜ್‌ಖಾನರನ್ನು ಜಯಿಸದೇ ನಗರವನ್ನು ನಾನು ತೆಗೆದುಕೊಳ್ಳುವುದಿಲ್ಲ. ನಾವು ಇಯುಜ್‌ಖಾನರನ್ನು ಜಯಿಸಿಲ್ಲವೆಂಬುದು ನಿಜ. ನಗರವು ನಮ್ಮದಲ್ಲವೆಂಬುದು ಸತ್ಯ. ನಾನು ಇಟ್ಟ ಹೆಜ್ಜೆಯನ್ನು ಹಿಂದಕ್ಕೆ ತೆಗೆಯುವುದಿಲ್ಲ. ಈ ಸ್ಥಳದಿಂದ ಶಿಬಿರವನ್ನು ಹಿಂದಕ್ಕೆ ಕೊಂಡು ಹೋಗುವುದಿಲ್ಲ. ಇಯುಜ್‌ಖಾನರನ್ನು ಜಯಿಸಿದಲ್ಲದೇ ಇಲ್ಲಿಂದ ಬೀಡು ಎತ್ತುವುದಿಲ್ಲ. ದಿವಾನರು ಹೇಳಿದಂತೆ ನಗರದ ಶೀಮೆಯಲ್ಲೆಲ್ಲಾ ಡಂಗೂರ ಹೊಡೆಸಿರಿ.

ಈ ಖಾಸಿಂಖಾನನ್ನು ಪ್ರಾಣಸಹಿತ ಬಿಡುವುದಿಲ್ಲ. ಇವನನ್ನು ಗಲ್ಲಿಗೇರಿಸಿ. ಇಯಜ್‌ಖಾನರು ರೋಷದಿಂದ ಯುದ್ಧಕ್ಕೆ ಬರುವಂತೆ ಮಾಡುತ್ತೇನೆ. ನೋಡೋಣ! ಈ ನಗರದ ಸತ್ವವೆಷ್ಟಿದೆಯೆಂದು? ನಗರದ ದಿವಾನನಾದ ಖಾಸಿಂಖಾನನ್ನು ಗಲ್ಲಿಗೇರಿಸುವುದರಿಂದಲೇ—ಇಯಜ್‌ಖಾನರಿಗೆ ರಣವೀಳಯವನ್ನು ಕೊಡುತ್ತೇನೆ.

ದಿವಾನ್:—ಅದು ಹೇಡಿಗಳ ಲಕ್ಷಣ! ಮೂರ್ಖರ ಲಕ್ಷಣ! ಮಿತ್ರನಾಗಿ ನಮ್ಮಲ್ಲಿ ಬಂದ ಖಾಸಿಂಖಾನನ್ನು ಕೊಲ್ಲುವುದು ಅಲ್ಲಾನ ರಾಜ್ಯದಲ್ಲಿ ದೊಡ್ಡ ಹರಾಂ! ನಾನು ಖಡಾಖಡಿ ಯುದ್ಧಕ್ಕೆ ಒಪ್ಪುತ್ತೇನೆ. ಈ ಹೇಡಿತನದ ಕೊಲೆಗೆ ನಾನು ಒಪ್ಪುವುದಿಲ್ಲ. ದೊಡ್ಡ ನವಾಬರ ಯಶಸ್ಸಿನಮೇಲೆ ಆಣೆಯಿಟ್ಟು ಹೇಳುತ್ತೇನೆ. ಮೈತ್ರಿಯಿಂದ ಸಮೀಪಕ್ಕೆ ಬಂದವರನ್ನು ಕೊಲ್ಲಿಸುವುದು ಕೊಲೆಗಡುತನ. ಅದರಿಂದ ಮೈಸೂರಿಗೆ ಎಂದಿಗೂ ಮಾಸದ ಅಪಕೀರ್ತಿಯು ಬರುತ್ತದೆ ಎಂದು ಉದ್ವೇಗದಿಂದ ನುಡಿದು; ಕೈಯ್ಯಲ್ಲಿದ್ದ ಕತ್ತಿಯನ್ನು ಬಿಸಾಡಿ ಹೊರಟುಹೋದನು. ಅಲ್ಲಿದ್ದವರೆಲ್ಲಾ ಕ್ಷಣಹೊತ್ತು ದಿಗ್ಭ್ರಮೆಗೊಂಡರು. ಟಿಪ್ಪುವು ತುಟಿ ಕಚ್ಚಿದನು. ಆ ಕ್ರೋಧವು ಮಹಮ್ಮದಾಲಿಯವರನ್ನು ಸುಟ್ಟುಬಿಡುವ ಕೋಪ. ಹೈದರಾಲಿಯವರ ನೆನಪು ಬಂತು. ಟಿಪ್ಪುವು ಕೈ ಕೈ ಹಿಸುಕಿಕೊಂಡು; ಮುದುಕ! ಮೈಸೂರು ರಾಜ್ಯಕ್ಕೆ ಬಹಳ ಸೇವೆಮಾಡಿದವ. ಇವನನ್ನು ಕ್ಷಮಿಸದಿದ್ದರೆ ಮತ್ತಾರನ್ನು ಕ್ಷಮಿಸುವುದು. ಎಂದು ಹೇಳಿದನು. ಖಿನ್ನವದನನಾಗಿ ಎದ್ದು ಹೊರಟುಹೋದನು. ಶಿಬಿರದಲ್ಲೆಲ್ಲಾ ಸಮಾಚಾರವು ಹರಡಿತು.

ಮಧ್ಯಾಹ್ನ ಮೂರುಗಂಟೆ ಸಮಯದಲ್ಲಿ ಮಂಗಳೂರು ಪ್ರಾಂತ್ಯವು ಪೂರ್ತಿಯಾಗಿ ಇಂಗ್ಲೀಷರ ಕೈವಶವಾಯಿತೆಂದು ವರ್ತಮಾನವು ಬಂತು. ಆ ಪ್ರಾಂತ್ಯದ ಖಿಲ್ಲೇದಾರ್ ಹುಸೇನಾಲಿಯು ಬರೆದು ಕಳುಹಿಸಿದ್ದನು. ಅವನ್ನು ಕಿಲ್ಲೇಭಕ್ಷಿಯವರು ತಂದು ಸುಲ್ತಾನರಲ್ಲಿ ಸುಲಾವಣೆಮಾಡಿದರು.

ಈ ಸಮಾಚಾರವು ತಿಳಿಯಿತು. ಇಪ್ಪತ್ತು ಸಾವಿರ ದಂಡು ಮಂಗಳೂರಿಗೆ ಹೊರಡಬೇಕೆಂದು ಸುಲ್ತಾನರ ಅಪ್ಪಣೆಯಾಯಿತು. ಫೌಜುದಾರ್ ಬದರುಜುಮಿರ್‌ಖಾನರು ಸೇನಾಪತಿಗಳಾಗಿ ಹೋಗಬೇಕೆಂದು ಅಪ್ಪಣೆಯಾಯಿತು.

ಸೈನ್ಯವು ಹೊರಟೇಬಿಟ್ಟಿತು. ಸುಮಾರು ಐದು ಗಂಟೆ ಸಮಯ. ಸುಲ್ತಾನರು ದಿವಾನರಿಗೆ ಕರೇಕಳಿಸಿದರು. ದಿವಾನರಿಲ್ಲ! ಬೇಹುಕಾರರು ಎಲ್ಲೆಲ್ಲಿಯೂ ಹುಡುಕಿದರು. ದಿವಾನರ ಸುಳಿವೇ ಇಲ್ಲ. ಸುಲ್ತಾನನು ಕೇಳಿ ಗಾಬರಿಯಾದನು. ಈ ಹಾಳು ಮುದುಕನು ಎಲ್ಲಾದರೂ ಹೋಗಿ ಪ್ರಾಣ ಕಳೆದುಕೊಂಡಿರಬಹುದೇ? ಹಾಗಾದರೆ ಎಷ್ಟು ಅಪಕ್ರಾಂತಿ! ಇಲ್ಲ ಹಾಗಿರಲಾರದು. ಗಟ್ಟಿ ಮುದುಕ! ವೀರಪುರುಷ. ದುರ್ಮರಣವನ್ನು ಮಾಡಿಕೊಳ್ಳುವ ಹೇಡಿಯಲ್ಲ. ಪಾಪ! ಅವನಂಥಾ ಸ್ವಾಮಿಭಕ್ತರ್ಯಾರಿದ್ದಾರೆ. ಈ ಖಾಸಿಂಖಾನನ್ನು ಬಿಟ್ಟುಬಿಟ್ಟರೆ ಆ ಮುದುಕನಿಗೆ ಸಮಾಧಾನವಾಗುತ್ತೆ.

ಖಾಸಿಂಖಾನನನ್ನು ಇಷ್ಟು ರೇಗಿಸಿ ಬಿಟ್ಟುಬಿಟ್ಟರೆ ಅಪಾಯವು ಹೆಚ್ಚು. ಅವನು ನಮ್ಮ ಮೇಲೆ ಛಡಾಯಿಸಿದ್ದಾನೆ. ಆ ಇಯಜ್‌ಖಾನನು ಈ ಹುಡುಗನಿಗೆ ಇಷ್ಟು ತಲೆ ತಿರುಗುವಂತೆ ಮಾಡಿದ್ದಾನೆ. ಅವನು ಸ್ವಲ್ಪ ಬಗ್ಗಿ ನಡೆದರೆ ಎಷ್ಟೋ ಉನ್ನತ ಸ್ಥಿತಿಗೆ ತರಬಲ್ಲೆ. ಕೆಲವು ದಿವಸಗಳು ನಮ್ಮ ಶಿಬಿರದಲ್ಲೇ ಇದ್ದರೆ ಮುಹಮ್ಮದಾಲಿಯವರು ಈ ಹುಡುಗನನ್ನು ಪಳಗಿಸುತ್ತಾರೆ. ಯುದ್ಧದಲ್ಲಿ ಇವನೊಬ್ಬ ಪ್ರಚಂಡ ಸೇನಾಪತಿಯಾಗುತ್ತಾನೆ. ಅದರಿಂದಲೇ ಮುಹಮ್ಮದಾಲಿಗೆ ಇಷ್ಟು ಅಭಿಮಾನ.

ಆದರೆ—ಆದರೆ--ನಗರವೋ! ಇಯಜ್‌ಖಾನನು ಇಲ್ಲೇ ಇದ್ದಾನೆ. ಪಾಳೆಯಗಾರರನ್ನೆಲ್ಲಾ ಸೇರಿಸಿಕೊಂಡಿದ್ದಾನೆ. ಇಂಥಾ ಸ್ವರ್ಣಭೂಮಿ. ಇದು ಈಗ ಪೂರ್ಣವಾಗಿ ನಮ್ಮ ಸ್ವಾಧೀನವಾಗದಿದ್ದರೆ ಎಂದೆಂದಿಗೂ ಈ ರಾಜ್ಯದ ಆಶೆಯು ನಮಗೆ ಇಲ್ಲವೇ ಇಲ್ಲ. ಅದನ್ನು ಬಿಟ್ಟುಹೋಗುವುದೆಂತು. ಮುಹಮ್ಮದಾಲಿಯವರು ನಿಸ್ಸೀಮ ರಾಜಭಕ್ತರು. ಅವರನ್ನೇ ನಗರದ ನವಾಬರಾಗಿ ಮಾಡಿದರೆ ಸದ್ಯಕ್ಕೆ ನಗರವು ನಮ್ಮ ಕೈಯಲ್ಲೇ ಇದ್ದಂತಾಗುತ್ತದೆ.

ದೌಲತ್ತಳೋ? ನಗರವನ್ನಾದರೂ ಬಿಟ್ಟುಹೋಗಬಲ್ಲೆ. ದೌಲತ್ತಳನ್ನು ಬಿಟ್ಟು ಹೋಗಲಾರೆ. ಇಯಜ್‌ಖಾನನಿಗೂ ನನಗೂ ಇರುವ ವಿರೋಧವೆಲ್ಲಾ ದೌಲತ್ತಳಿಗಾಗಿಯೇ. ಅವಳನ್ನು ಗೆಲ್ಲುವುದಕ್ಕಾಗಿಯೇ ಇಷ್ಟು ಸಮರ ಸನ್ನಾಹ. ಇಯಜ್‌ಖಾನನು ಅದನ್ನು ತಿಳಿದೇ ದೌಲತ್ತಳನ್ನು ಬಚ್ಚಿ ಬಂಧನ

ದಲ್ಲಿಟ್ಟು ಬೀಡದ ನಗರವನ್ನು ಬಿಟ್ಟುಕೊಟ್ಟಿದ್ದಾನೆ. ಇಯಜ್‌ಖಾನನು ಶೂರನೇ ಹೌದು! ಆದರೆ ಯುದ್ಧದಲ್ಲೇಕೆ ತಪ್ಪಿಸಿಕೊಳ್ಳುತ್ತಾನೆ. ಒಂದು ಬಾರಿ ಎದುರಿಗೆ ಬಂದುಬಿಟ್ಟರೆ ಇತ್ಯರ್ಥವಾಗಿಬಿಡುತ್ತದೆ. ಇರಲಿ! ಈ ನಗರದ ನವಾಬಗಿರಿಯನ್ನು ಮಹಮ್ಮದಾಲಿಯವರಿಗೊಪ್ಪಿಸಿ ಮಂಗಳೂರಿನ ಯುದ್ಧದ ನೆವದಿಂದ ಈ ಶಿಬಿರವನ್ನೆತ್ತದೆ ಇಲ್ಲೇ ಕೆಲವು ದಿವಸ ಕಳೆಯುತ್ತೇನೆ. ಅಷ್ಟರಲ್ಲಿ ದೌಲತ್ತಿನ ಸಮಾಚಾರವು ಗೊತ್ತಾಗುವುದು. ಇಯಜ್‌ಖಾನನೂ ಒಂದು ಬಾರಿ ಸಂಧಿಸಿದರೂ ಸಂಧಿಸಬಹುದು. ಈ ಖಾಸಿಂಖಾನನು ಕ್ಷಮಾಪಣೆಯನ್ನು ಬೇಡಿದರೆ ಬಿಟ್ಟುಬಿಡಬಹುದು ಎಂದು ಯೋಚನೆಮಾಡುತ್ತಿದ್ದನು. ಅಷ್ಟರಲ್ಲಿ ಸನ್ನಿಧಾನದ ಕರೀಂಭಕ್ಷನು ಬಂದು 'ಕುರ್ನಿಸಾತ್' ಮಾಡಿದನು. ಮಹಮ್ಮದಾಲಿಯವರನ್ನು ಹುಡುಕುವುದಕ್ಕೆ ಹೋಗಿದ್ದ ಚಾರರು ಬಂದು ಮಹಮ್ಮದಾಲಿಯವರು ಇಲ್ಲಿಯೇ ಸಮೀಪದಲ್ಲಿರುವ ಮಶೀದಿಗೆ ಹೋಗಿದ್ದಾರೆಂದೂ, ನವಾಜಿನಲ್ಲಿದ್ದಾರೆಂದೂ ಅವರು ಹೊರಗೆ ಬರುತ್ತಲೇ ಹುಜೂರಿನ ಅಪ್ಪಣೆಯನ್ನು ತಿಳಿಸುವಂತೆ ಒಬ್ಬನನ್ನು ಅಲ್ಲೇ ಬಿಟ್ಟು ಬಂದಿದ್ದಾರೆ ಎಂದು ಅರಿಕೆ ಮಾಡಿದನು.

ಸುಲ್ತಾನರು, ಹೌದು! ಶುಕ್ರವಾರ ದೊಡ್ಡ ದಿವಾನರು ದೊಡ್ಡ ಫಕೀರರೇ ಎಂದರು.

ಅಷ್ಟರಲ್ಲಿ ಪ್ರತೀಹಾರಿಯು ಒಳಗೆ ಬಂದು ಮುಜರೆ ಮಾಡಿದನು. ಸುಲ್ತಾನರು ಕಣ್ಣೆತ್ತಿ ನೋಡಿದರು. ಖಾಸಿಂಖಾನನು ಬಾಗಿಲಿನಲ್ಲಿ ಬಂದು ಭೇಟಿಗಾಗಿ ಕಾದಿದ್ದಾನೆಂದು ಅರಿಕೆಮಾಡಿದನು. ಸುಲ್ತಾನರಿಗೆ ಆಶ್ಚರ್ಯವಾಯಿತು. ಖಾಸಿಂಖಾನನನ್ನು ಕರೆಕಳುಹಿಸದೇ ಬಾಗಿಲಲ್ಲಿ ಬಂದು ಕಾದಿದ್ದಾನೆ. ತಮ್ಮ ಭೇಟಿಯನ್ನು ಅಪೇಕ್ಷಿಸುತ್ತಾನೆ. ಸಾಮಾನ್ಯ ಮನುಷ್ಯನಂತೆ ಖಾಸಿಂಖಾನನು ಬರುವುದೆಂದರೆ ಸೋಜಿಗವಾಗಿದೆ ಎಂದುಕೊಂಡು ಮರ್ಯಾದೆಯಿಂದ ಒಳಗೆ ಕರತರುವಂತೆ ಕರೀಂಭಕ್ಷನಿಗೆ ಆಜ್ಞಾಪಿಸಿದನು.

ಕರೀಂಭಕ್ಷನು ಹೊರಗೆ ಬಂದು ಖಾಸಿಂಖಾನನಿಗೆ ಬಗ್ಗಿ ಸಲಾಂ ಮಾಡಿ ಒಳಗೆ ಬರುವಂತೆ ತಿಳಿಸಿದನು. ಖಾಸಿಂಖಾನನು ಒಳಗೆ ಬಂದನು. ಟಿಪ್ಪೂ ಸುಲ್ತಾನನು ಹಸನ್ಮುಖದಿಂದ ಅವನನ್ನು ಸ್ವಾಗತೀಕರಿಸಿ ಸಮೀಪದಲ್ಲಿದ್ದ ಆಸನದಲ್ಲಿ ಕುಳಿತುಕೊಳ್ಳುವಂತೆ ಸನ್ನೆ ಮಾಡಿದನು.

ಖಾನನು ಕುಳಿತುಕೊಳ್ಳಲಿಲ್ಲ. ಆದರೆ ಮುಖಭಾವದಲ್ಲೇನೂ ವ್ಯಗ್ರತೆ ಇರಲಿಲ್ಲಿ.

ಸುಲ್ತಾನರೇ! ನಾನು ಸ್ವತಂತ್ರನಾಗಿದ್ದರೆ ತಮ್ಮನ್ನು ಬೀಳ್ಕೊಂಡು ಹೊರಡುತ್ತೇನೆ.

ಖಾಸಿಂಖಾನ್! ನೀನು ಪೂರ್ಣ ಸ್ವತಂತ್ರನು. ಆದರೆ ನಮ್ಮಲ್ಲೇ ಕೆಲವು ದಿವಸಗಳು ನಿನ್ನನ್ನು ಇಟ್ಟುಕೊಂಡಿರಬೇಕೆಂದು ನಮ್ಮ ಆಶೆ.

ಏನು! ಸನ್ನಿಧಾನದ ನೌಕರನಾಗಿಯೇ?

ನಸುನಗುತ್ತಾ—ಅಲ್ಲ! ಮಿತ್ರರಾಗಿ.

ರಾಜಾಧಿರಾಜರಾದ ಮೈಸೂರಿನ ಸುಲ್ತಾನರಿಗೂ ರಾಜದ್ರೋಹಿಯಾದ ಈ ದಂಗೆಕೋರನಿಗೂ ಮೈತ್ರಿಯೆಂದರೇನು? ತಾವು ನನ್ನನ್ನು ಹಾಸ್ಯ ಮಾಡೋಣಾಗುತ್ತಿದೆಯೇ!

ನೀನು ರಾಜದ್ರೋಹಿಯೆಂದು ಒಪ್ಪಿಕೊಳ್ಳುವೆಯಾ?

ಹೌದು! ನೂರುಬಾರಿ ಒಪ್ಪಿಕೊಳ್ಳುವೆನು.

ನಿನಗೆ ಈ ದುರ್ಬುದ್ಧಿಗಳನ್ನು ಉಪದೇಶಮಾಡಿದವರಾರು?

ತಾವು! ಖುದ್ದು ಶ್ರೀರಂಗಪಟ್ಟಣದ ಸುಲ್ತಾನರವರು.

ನಿನಗೆ ನಿನ್ನಿನ ಪ್ರಕರಣದಿಂದ ಬೇಧವಾಗಿದೆಯೋ?

ಇಲ್ಲ! ನಿನ್ನಿನ ಪ್ರಕರಣವು ಸಹಜವಾದದ್ದೇ ಆದರೆ ನಿನ್ನೆ ಪ್ರಾತಃಕಾಲ ದಲ್ಲಿ ತಾವು ಮಾಡಿದ ಪ್ರಲೋಭದಿಂದ ಮನಸ್ಸಿನಲ್ಲಿ ಛಲ ಹುಟ್ಟಿದೆ.

ಛಲವೇ! ನೀನು ಇಲ್ಲಿ ಬಂದಿ ಎಂಬುದನ್ನು ಅರಿತಿರುವೆಯಾ? ಎಂದು ಘರ್ಜಿಸಿದರು.

ಬಲ್ಲೆ! ಸುಲ್ತಾನರೇ ನಾನು ಈ ಶಿಬಿರದಲ್ಲಿ ಬಂಧಿಯೆಂದು ತಾವು ಭಾವಿಸಿದ್ದರೆ ಈ ನಗರದ ಶೀಮೆಯ ಮಧ್ಯದಲ್ಲಿ ತಾವು ಅಸಹಾಯವಾದ ಬಂಧಿಗಳಾಗಿದ್ದೀರಿ. ತಮ್ಮನ್ನು ಮೈಸೂರಿನ ಹುಲಿ ಎನ್ನುತ್ತಾರೆ. ಆ ಹುಲಿಯು ಬಂದು ನಗರದ ಅರಣ್ಯದಲ್ಲಿ ನಮ್ಮ ಬಲೆಯಲ್ಲಿ ಸಿಕ್ಕಿಕೊಂಡಿದೆ. ಇಯಜ್ ಖಾನನು ನಗರವನ್ನು ಒಪ್ಪಿಸಿ ಹೇಗೆ ತೆಗೆದುಕೊಳ್ಳುತ್ತೀರೋ ನೋಡೋಣ

ವೆಂದು ತಮಾಷೆ ನೋಡುತ್ತಿದ್ದಾರೆ. ತಾವು ನಗರವನ್ನು ಕಟ್ಟಿ ಆಳಲಾರಿರೆಂದೇ. ಅವರು ಇಥಾ ರಾಜತಂತ್ರವನ್ನು ಹೂಡಿದ್ದಾರೆ. ಹಿಂದೂಗಳು ಕಲ್ಲು ದೇವರಿಗೆ ನೇವೇದ್ಯಮಾಡಿದಂತೆ ನಾನು ನಗರವನ್ನು ತಮಗೆ ನೈವೇದ್ಯಮಾಡಿದ್ದೇನೆ. ಸುಲ್ತಾನರೇ! ತಾವು ಇಷ್ಟು ದೊಡ್ಡ ಸೈನ್ಯವನ್ನು ತಂದಿದ್ದಕ್ಕೆ ಇಯುಜ್‌ಖಾನರು ಈ ತಂತ್ರವನ್ನು ಹೂಡಿದರು. ಯುದ್ಧವಾಗಿದ್ದರೆ ಮೈಸೂರಿಗೆ ಹಾನಿ ತಟ್ಟುತ್ತ ದೆಂದು. ಮಹಮ್ಮದಾಲಿಯವರೇ ಮುಂತಾದ ವೃದ್ಧರ ಮಾತು. ಯುದ್ಧ ವಾದರೆ ವೀರರಿಗೆ ಒಂದು ಹಬ್ಬವಾಗುತ್ತದೆಂದು ನಮ್ಮಂಥಾ ತರುಣರ ಆಶೆ.

ಖಾಸಿಂಖಾ! ಯುದ್ಧವಾಗುತ್ತದೆ, ಚಿಂತಿಸಬೇಡ. ಇಯುಜ್‌ಖಾನರು ಈ ನಗರದ ಶೀಮೆಯಲ್ಲೇ ಇದ್ದಾರೆಂದು ನಾನು ಬಲ್ಲೆ. ನಾನು ಯುದ್ಧ ಮಾಡದೆ ಹೋಗುವುದಿಲ್ಲ. ಈ ಭೂಮಿಯಮೇಲೆ ಟಿಪ್ಪೂಸುಲ್ತಾನನೋ ಇಯುಜ್‌ಖಾನನೋ ಇಬ್ಬರಲ್ಲೊಬ್ಬರು ಬದುಕಿರಬೇಕು. ಈ ಜಗತ್ತಿನಲ್ಲಿ ನಮ್ಮಿಬ್ಬರಿಗೂ ಸ್ಥಳವಿಲ್ಲ. ಆದರೆ ಇಯುಜ್‌ಖಾನರು ತಪ್ಪಿಸಿಕೊಂಡಿದ್ದಾರೆ. ಅವರನ್ನು ಯುದ್ಧಕ್ಕೆ ನಿಲ್ಲುವಂತೆ ಮಾಡಬೇಕು. ಅಂಥದೊಂದು ಕಾರ್ಯವನ್ನು ಮೊದಲು ಮಾಡಬೇಕೆಂದಿದ್ದೇನೆ.

ತಾವು ಅಷ್ಟು ಶ್ರಮವಹಿಸಬೇಕಾಗಿಲ್ಲ. ನಾಳೇ ಮಧ್ಯಾಹ್ನದೊಳಗಾಗಿ ತಮ್ಮ ಸೈನ್ಯವೆಲ್ಲವೂ ತಲ್ಲಣಿಸುವಂತಹ ಯುದ್ಧವನ್ನು ಕಟ್ಟುತ್ತೇನೆ.

ಇಲ್ಲ ಖಾಸಿಂಖಾ! ನಿನ್ನನ್ನು ಇಂದೇ ಗಲ್ಲಿಗೆ ಕಟ್ಟಿಸಿ ಯುದ್ಧಭೂಮಿ ಯನ್ನು ನಾನೇ ನಿರ್ಮಾಣಮಾಡುತ್ತೇನೆ.

ಇಲ್ಲ! ನೀವು ಸುಳ್ಳು ಹೇಳುತ್ತೀರಿ. ನನ್ನನ್ನು ಹೆದರಿಸುತ್ತೀರಿ. ನಾನು ಇದಕ್ಕೆಲ್ಲಾ ಬೆದರುವವನಲ್ಲ. ನನ್ನನ್ನು ಗಲ್ಲಿಗೆ ಹಾಕಿಸಬಲ್ಲ ಸುಲ್ತಾನರು ನಿನ್ನೆ ಏಕೆ ಅಷ್ಟೊಂದು ಸಭೆಯಲ್ಲಿ ಅಟ್ಟಹಾಸಮಾಡಿ ಸುಮ್ಮನಾದಿರಿ?

ದಿವಾನರ ಮಾತಿಗಾಗಿ ಒಂದು ದಿನ ನಿನಗೆ ಪ್ರಾಣದಾನ ಮಾಡಿದೆ.

ಖಾಸಿಂಖಾ ನಿನ್ನಂತಹ ವೀರಪುರುಷನಿಗೆ ಪ್ರಾಣದಾನಮಾಡಲು ನನಗೆ ಬಹಳ ಸಂತೋಷ. ನಿನ್ನನ್ನು ಬಿಟ್ಟುಬಿಡುತ್ತಿದ್ದೆ. ನೀನು ನಮ್ಮ ಕಡೆಯೇ ಯುದ್ಧಮಾಡಿದರೂ ವಿರೋಧವಾಗಿ ನಿಂತು ಯುದ್ಧಮಾಡಿದರೂ ಅದೊಂದು ಸಂತೋಷದ ವಿಷಯವೇ. ನಿನ್ನ ತಪ್ಪುಗಳನ್ನೆಲ್ಲಾ ಮನ್ನಿಸುತ್ತಿದ್ದೆ. ನಿನ್ನ

ಮೇಲೆ ದಯೆಯಿಂದಲ್ಲ. ನೀನು ವೀರಪುರುಷನೆಂದು. ಈಗೊಂದು ರಾಜ ಕಾರಣಕ್ಕಾಗಿ ನಿನ್ನನ್ನು ಗಲ್ಲಿಗೇರಿಸಬೇಕಾಗಿದೆ. ಇಯಜ್‌ಖಾನನನ್ನು ರೇಗಿ ಸುವುದಕ್ಕೆ ನಿನ್ನನ್ನು ಬಲಿ ಕೊಡಬೇಕಾಗಿದೆ. ಈ ನಗರದ ಶೀಮೆಲ್ಲಿ ಕಿಚ್ಚೆ ಬ್ಬಿಸುವುದಕ್ಕೆ ನಿನ್ನನ್ನು ಗಲ್ಲಿಗೇರಿಸಬೇಕಾಗಿದೆ. ಇದು ರಾಜಕಾರಣಕ್ಕಾಗಿ ನಿನ್ನನ್ನು ವಧೆಮಾಡಿಸುತ್ತೇನೆ. ಅದರಿಂದ ಈ ನಗರದ ಶೀಮೆಯು ಪ್ರಕ್ಷುಬ್ಧ ವಾಗುತ್ತದೆಂದು ನಾನು ಬಲ್ಲೆ. ಅಂತಹ ಕ್ಷೋಭೆಯನ್ನೆಬ್ಬಿಸಿ ಈ ರಾಜ್ಯವನ್ನು ಕಲಕಿ ಯುದ್ಧವನ್ನೆಬ್ಬಿಸುತ್ತೇನೆ. ಆಗ ಇಯಜ್‌ಖಾನನೂ ಬಂದು ಯುದ್ಧಕೆ ನಿಲ್ಲಲೇಬೇಕು.

ನೀವು ಈ ವೀರಭೂಮಿಯನ್ನು ಕಲಕಿದರೆ ಈ ಐವತ್ತು ಸಹಸ್ರ ಸೈನ್ಯ ವನ್ನು ಬಲಿ ಕೊಡುತ್ತೀರಿ.

ಮೊದಲು ನಿನ್ನನ್ನು ಬಲಿಕೊಡುತ್ತೇನೆ. ಆಮೇಲೆ ಮುಂದಿನ ಮಾತು.

ಅಷ್ಟರಲ್ಲಿ ಅಂಗರಕ್ಷಕರು ನಾಲ್ಕು ಕಡೆಯಿಂದ ಹಗ್ಗವನ್ನು ಬೀಸಿ ಹಠಾ ತ್ತಾಗಿ ಖಾಸಿಂಖಾನನ್ನು ಕೆಡವಿದರು. ಕೈಕಾಲುಗಳಿಗೆ ಬೇಡಿಗಳನ್ನು ಹಾಕಿ ಪಂಜರದಲ್ಲಿ ಬಂಧಿಸಿದರು.

ಟಿಪ್ಪೂಸುಲ್ತಾನನು ಕ್ರೋಧಾವಿಷ್ಟನಾಗಿ ಮರಣದ ಆಜ್ಞೆಯನ್ನು ಸ್ವದಸ್ತೂರು ಬರೆದು ಕಳುಹಿಸಿದನು. ಕಛೇರಿಯ ಭಕ್ಷಿಗಳಾದ ಜನಾಲ ಉದ್ದೀನ್‌ರವರೇ ಖುದ್ದಾಗಿ ಇದ್ದು, ಖಾಸಿಂಖಾನನ್ನು ಗಲ್ಲಿಗೆ ಹಾಕಿಸಬೇಕೆಂದು ಅಪ್ಪಣೆಮಾಡಿದರು. ಅಸ್ತಮಾನವಾಗುವುದರೊಳಗಾಗಿ ಖಾಸಿಂಖಾನನ ತಲೆ ಯನ್ನು ತಂದು ತೋರಿಸಬೇಕೆಂದು ಹುಕ್ಕುಂ ಮಾಡಿದನು.

ಅವಸರದಿಂದ ಓಲೇಕಾರನು ತಂದು ಭಕ್ಷಿಗಳಿಗೆ ಒಪ್ಪಿಸಿದನು. ಅದು ತಕ್ಷಣ ಜಾರಿ ಆಗಬೇಕಾದ ಹುಕುಂ. ಶಿಬಿರದ ಹೊರಗಡೆ ಹೆಬ್ಬಾಗಿಲಿನ ಮುಂದುಗಡೆ ಕುದುರೆಯ ರಾಹುತರು ಸಾಲಾಗಿ ನಿಂತರು. ಅದರ ಒಳ ಸುತ್ತಿ ನಲ್ಲಿ ಕಾಲಾಳುಗಳ ಸೈನ್ಯವು ನಿಂತಿತು. ಅದರ ಒಳಸುತ್ತಿನಲ್ಲಿ ಸರದಾರರು ಶಸ್ತ್ರರಾಗಿ ನಿಂತರು. ಶೂಲದ ಮರವನ್ನು ಎತ್ತರವಾದ ಮಧ್ಯ ಪ್ರದೇಶದಲ್ಲಿ ತಂದು ಸ್ಥಾಪಿಸಿದರು. ಅದರ ಸುತ್ತಲೂ ಬಿಚ್ಚುಕತ್ತಿಯ ಪಹರೆಯವರು ನಿಂತರು. ಇಷ್ಟೆಲ್ಲಾ ಶಿಸ್ತು ಒಂದು ಕ್ಷಣದಲ್ಲಿ ಭಕ್ಷಿಯವರ ಹುಕುಂ ಮೇರೆ

ಸಜ್ಜಾಯಿತು. ನಾಲ್ಕು ಕಡೆಯೂ ಸರದಾರರುಗಳು ಬಿಚ್ಚುಕತ್ತಿಯ ಪಹರೆಯಿಂದ ರಾಜದ್ರೋಹಿಯನ್ನು ಕರತಂದರು. ವಧ್ಯಸ್ಥಾನಕ್ಕೆ ತರುವಾಗ ರಕ್ತವಸ್ತ್ರಗಳನ್ನು ಹೊದ್ದಿಸಿದ್ದರು. ರಕ್ತಮಾಲೆಯನ್ನು ಕೊರಳಿಗೆ ಹಾಕಿದ್ದರು. ಬೇಡಿಗಳಿಂದಲೇ ವಧ್ಯಸ್ಥಾನಕ್ಕೆ ಕರತಂದರು. ಅವನ ಧೈರ್ಯಸ್ಥೈರ್ಯಗಳನ್ನು ನೋಡಿ ಅಲ್ಲಿದ್ದವರಿಗೆಲ್ಲಾ ಆಶ್ಚರ್ಯವಾಯಿತು. ಆ ವೀರನ ಮುಖದಲ್ಲಿ ಸ್ವಲ್ಪವೂ ಕಳೆಗುಂದಿರಲಿಲ್ಲ. ಅವನು ಗಂಭೀರಮುದ್ರೆಯಿಂದ ಗಂಭೀರವಾಗಿ ಅಡಿ ಇಡುತ್ತ ವಧ್ಯಭೂಮಿಗೆ ಬಂದನು. ಕಛೇರಿ ಭಕ್ಷಿಗಳು ಮುಂದೆ ಬಂದರು. ಗಲ್ಲು ಮರದ ಕೆಳಗೆ ನಿಲ್ಲಿಸಿದರು. ಗಲ್ಲಿಗೆ ಹಾಕುವ ಭಟರು ಕಪ್ಪು ಬಟ್ಟೆಯನ್ನು ಧರಿಸಿದ್ದಾರೆ. ಅವರ ಮುಖಗಳೂ ಮುಸುಕಿನಿಂದ ಮುಚ್ಚಲ್ಪಟ್ಟಿವೆ. ಕಣ್ಣುಗಳು ಮಾತ್ರ ಕಾಣುವಂತೆ ಕರೀ ಕುಲಾವಿಯನ್ನು ಧರಿಸಿದ್ದಾರೆ. ಗಲ್ಲುಮರದ ಎರಡು ಪಾರ್ಶ್ವದಲ್ಲಿಯೂ ನಿಂತಿದ್ದಾರೆ. ಬಿಚ್ಚುಕತ್ತಿಯ ಸರದಾರರು ಅವರ ಮಧ್ಯದಲ್ಲಿ ಖಾಸಿಂಖಾನನನ್ನು ಕರೆದು ನಿಲ್ಲಿಸಿದರು. ಮೇಲೆ ರಕ್ತತೃಷೆಯಿಂದ ಪಾಶವು ನೇತಾಡುತ್ತಿದೆ. ಅಲ್ಲಿ ನೆರೆದಿದ್ದ ಸೈನಿಕರ ಸಂಖ್ಯೆಯು ಹತ್ತು ಸಾವಿರಕ್ಕೆ ಮೀರಿದೆ. ಅಷ್ಟು ಜನರೂ ಆ ವೀರಾಗ್ರೇಸರನ ವೀರ ಮರಣವನ್ನು ನೋಡುತ್ತಿದ್ದಾರೆ. ಕೆಲವರು ತಮ್ಮತಮ್ಮಲ್ಲೇ ವಿಧಿ ಸಂಕಲ್ಪವು ಎಷ್ಟು ವಿಚಿತ್ರವಾದುದು. ನಿನ್ನೆ ದಿನ ರಾಜಸಭೆಯಲ್ಲಿ ದಿವಾನಗಿರಿಯ ಮರ್ಯಾದೆಯನ್ನು ಪಡೆದ ವೀರನು ಈ ದಿನ ಗಲ್ಲುಮರದ ಶಿಕ್ಷೆಗೆ ಅಣಿಯಾಗಿ ಬಂದಿರುವನಲ್ಲಾ ಎಂದುಕೊಳ್ಳುತ್ತಾರೆ. ದಿವಾನಗಿರಿಯನ್ನು ಸ್ವೀಕರಿಸುವಾಗಲೂ ಗಲ್ಲಿಗೇರುವಾಗಲೂ ಆ ವೀರನಲ್ಲಿ ಒಂದೇ ದಿಟ್ಟತನವಿತ್ತು. ಅದನ್ನು ನೋಡಿ ದರಬಾರಿನ ಸರದಾರರೆಲ್ಲಾ ಆಶ್ಚರ್ಯಚಕಿತರಾಗಿಹೋಗಿದ್ದಾರೆ.

ಸೂರ್ಯನು ಅಸ್ತಾಚಲವನ್ನು ಏರುತ್ತಿದ್ದಾನೆ. ಆ ರಕ್ತ ಕಿರಣಗಳಿಂದ ಭೂಮ್ಯಾಕಾಶಗಳೆಲ್ಲಾ ರಕ್ತಮಯವಾಗಿದೆ. ಈ ಭೂಮಿಯಲ್ಲಿ ನಡೆಯುತ್ತಿರುವ ಸುಖಗಳನ್ನು ಲೆಕ್ಕಿಸದೇ ದಿನಮಣಿಯು ತನ್ನ ವಿಶ್ರಾಂತಿ ಗೃಹಾಭಿಮುಖನಾಗಿದ್ದಾನೆ. ಈ ಉದ್ವಿಗ್ನವಾದ ಯೋಧವೃಂದವು ಸೂರ್ಯದೇವನ ಅಸ್ತವನ್ನು ಮರೆತು ಆ ವೀರನ ಗತಿಯಲ್ಲಿ ವ್ಯಗ್ರಚಿತ್ತವಾಗಿದೆ. ಭಕ್ಷಿಯವರು ಬಂದು ಅಪರಾಧಿಯ ಹತ್ತಿರ ನಿಂತುಕೊಂಡರು. ಆಗ ಆ ಜನಸಾಗರವು ನಿಶ್ಶಬ್ದವಾಯಿತು. ಅವರ ಕೈಯಲ್ಲಿ ಒಂದು ಲಕ್ಕೋಟೆಯಿತ್ತು ಆ ಲಕೋಟೆ

ಯಿಂದ ಒಂದು ಕೆಂಪು ಕಾಗದವನ್ನು ತೆರೆದರು. ಅದರಲ್ಲಿ ಮರಣದಂಡನೆಯು ವಿಧಿಸಲ್ಪಟ್ಟಿತ್ತು. ಒಕ್ಕಣೆಯು ಈ ಪರಿಯಾಗಿತ್ತು.

ಷರ್ಹಾಷಹಾ ಶ್ರೀರಂಗಪಟ್ಟಣದ ಸುಲ್ತಾನರು ಆಜ್ಞಾಪಿಸುವುದೇನೆಂದರೆ :—

ನಗರದ ಖಾಸಿಂಖಾನರು ದಂಗೆಕೋರರಾದ ಇಯುಜ್‌ಖಾನರಿಗೆ ಬೆಂಬಲವಾಗಿ ಸಹಾಯಮಾಡಿದ್ದಾರೆ. ನಗರದ ಸೀಮೆಯ ಪಾಳಯಗಾರರನ್ನು ದಂಗೆ ಎಬ್ಬಿಸಲು ಮಸಲತ್ತುಮಾಡಿರುತ್ತಾರೆ. ನಮ್ಮ ಶತೃಗಳಾದ ಇಂಗ್ಲೀಷರಿಗೆ ಮಂಗಳೂರನ್ನು ವಶಮಾಡಿಕೊಟ್ಟಿರುತ್ತಾರೆ. ಇಯುಜ್‌ಖಾನರು ಸರ್ಕಾರೀ ಹಣವನ್ನು ಅಪಹರಿಸಿಕೊಂಡುಹೋಗಲು ಮದತ್‌ಮಾಡಿರುತ್ತಾರೆ. ಹೀಗೆ ರಾಜದ್ರೋಹ ಮಾಡಿರುವುದು ನಮ್ಮ ಸಮ್ಮುಖದಲ್ಲಿ ರುಜುವಾತಾಗಿರುತ್ತದೆ. ಆದ್ದರಿಂದ ಇವರಿಗೆ ಗಲ್ಲಿಗೆ ಹಾಕಲು ಅಪ್ಪಣೆಮಾಡಿರುತ್ತದೆ. ರಾಜದ್ರೋಹಿಗಳಿಗೆಲ್ಲಾ ಇದೇ ಶಿಕ್ಷೆಯಾಗಿರುತ್ತದೆಂದು ರಾಜದಂಡದ ಎಚ್ಚರಿಕೆಯಾಗಿರುತ್ತದೆ.

ಟಿಪ್ಪೂಸುಲ್ತಾನ್.

ಈ ರಾಜಶಾಸನದ ಪ್ರತಿ ವಾಕ್ಯವನ್ನು ಎರಡೆರಡು ಬಾರಿ ಭಕ್ಷಿಯವರು ಉಚ್ಚರಿಸಿ ಉಚ್ಚಕಂಠದಿಂದ ಓದಿ ತಿಳಿಸಿದರು. ಅನಂತರ ಖಾಜಿಯವರು ಖುರ್ರಾನ್ ಪುಸ್ತಕವನ್ನು ಖಾಸಿಂಖಾನನ ಕೈಗೆ ಕೊಟ್ಟು ನಿನ್ನ ಪಾಪಕ್ಕೆ ಅಲ್ಲಾನಲ್ಲಿ ಕ್ಷಮಾಪಣೆ ಕೇಳಿಕೋ! ಎಂದು ಹೇಳಿದರು.

ಖಾಸಿಂಖಾನನು ಪುಸ್ತಕವನ್ನು ಕಿತ್ತೊಗೆದು ನೀವು ಪಾಪಿಗಳು. ಘಾತುಕತನದ ಟಿಪ್ಪೂಸುಲ್ತಾನರ ಗುಲಾಮರು. ಗುಲಾಮರ ಪುಸ್ತಕದಲ್ಲಿ ಖುರಾನಿನ ದೈವೀಪ್ರಕಾಶವಿಲ್ಲ. ಅಲ್ಲಾನ ಸತ್ಯಪ್ರಕಾಶವು ನನ್ನ ಹೃದಯದಲ್ಲಿ ತುಂಬಿದೆ. ನಾನು ಎಂದಿಗೂ ಸಾಯುವುದಿಲ್ಲ ಎಂದು ಘಟ್ಟಿಯಾಗಿ ಹೇಳಿದನು. ಎಲ್ಲರೂ ಅಪ್ರತಿಭರಾಗಿ ನೋಡುತ್ತಿದ್ದರು.

ಭಕ್ಷಿಯವರು ಖಾಸಿಂಖಾನರೇ! ತಮ್ಮ ಆಯುಷ್ಯದ ಅವಧಿಯು ಪೂರ್ತಿಯಾಗಿದೆ. ತಮ್ಮ ಅಪೇಕ್ಷೆಯೇನಾದರೂ ಉಂಟೋ?

ಇದೆ! ಸತ್ಯದ ಬಗ್ಗೆ ಎರಡು ಮಾತುಗಳನ್ನು ಹೇಳುವುದಿದೆ. ಈ ಹತ್ತುಸಾವಿರ ಜನರೆದುರಿಗೆ ಅದನ್ನೂ ಹೇಳುತ್ತೇನೆ. ಅದರಿಂದ ಪ್ರಪಂಚಕ್ಕೆಲ್ಲವೂ ಸತ್ಯವು ಬಯಲಾಗುತ್ತದೆ. ಅಷ್ಟೇ ನನ್ನ ಅಪೇಕ್ಷೆ.

ಖಾನರೇ ಹೇಳಬಹುದು

ಇಯಜ್‌ಖಾನರು ದಂಗೆಕೋರರಲ್ಲ. ಅವರು ಹೈದರಲ್ಲೀಖಾನರವರ ಸತ್ಪುತ್ರರು. ಮೈಸೂರಿನ ಕ್ಷೇಮಕ್ಕಾಗಿ ಪ್ರಾಣ ಕೊಡುವ ಮಹಾ ವೀರ ಪುರುಷರು. ಅವ ಮೇಲೆ ಟಿಪ್ಪುಸುಲ್ತಾನರು ಮಾಡಿರುವ ದೋಷಾರೋಪಣೆಗಳೆಲ್ಲಾ ಸುಳ್ಳು. ನಾನು ಈ ಮರಣೋನ್ಮುಖವಾದ ನನ್ನ ಪಂಚಪ್ರಾಣಗಳಿಂದ ಈ ಬಗ್ಗೆ ಸಾಕ್ಷಿ ಹೇಳಬಲ್ಲೆ. ನಾನು ನನ್ನ ಈ ಮರಣಕ್ಕಾಗಿ ಅಂಜುವುದಿಲ್ಲ. ಆದರೆ ಈ ಸುಲ್ತಾನನ ದುಷ್ಟವರ್ತನೆಗಳಿಂದ ಮೈಸೂರು ರಾಜ್ಯವು ಹಾಳಾಗಿ ಹೋಗುತ್ತದೆಂದೂ ಕೈ ಎತ್ತಿ ಹೇಳುತ್ತೇನೆ ಎಂದು ಹೇಳಿದನು. ಅಲ್ಲಿದ್ದವರೆಲ್ಲಾ ಹಾಹಾಕಾರಮಾಡಿದರು. ಖಾಸಿಂಖಾನನು ಗಂಭೀರ ಧ್ವನಿಯಿಂದ ಅಲ್ಲಾ–ಹೋ–ಅಕ್ಬರ್ ಎಂದು ಕೂಗಿದನು. ಹತ್ತುಸಹಸ್ರ ಕಂಠಗಳಿಂದಲೂ ಅಲ್ಲಾ–ಹೋ–ಅಕ್ಬರ್ ಎಂದು ಜಯಧ್ವನಿಯಾಯಿತ. ಖಾಸಿಂಖಾನನು ವಧ್ಯವೇದಿಕೆಯಮೇಲೆ ನಿಂತು ತಾನೇ ಗಲ್ಲಿನ ಹಗ್ಗವನ್ನು ಕೊರಳಿಗೆ ಹಾಕಿಕೊಂಡು ಎಳೆಯಿರಿ, ಎಂದು ಘಾತುಕರಿಗೆ ಸಂಜ್ಞೆ ಮಾಡಿದನು. ಘಾತುಕರು ಭಕ್ಷಿಗಳ ಕಡೆಗೆ ನೋಡಿದರು. ಭಕ್ಷಿಯವರು ಅಪ್ಪಣೆ ಕೊಡುವಷ್ಟರಲ್ಲಿ ಒಂದು ಅಘಟನಾಘಟನೆಯು ನಡೆಯಿತು.

## ದಿವಾನರು ಬಂಧನದಲ್ಲಿ

ಶಿಬಿರದ ಕಡೆಯಿಂದ ಪಟ್ಟದಾನೆಯು ಭರದಿಂದ ಬಂದಿತು. ಅದರ ಮೇಲೆ ಸುಲ್ತಾನರ ಹೌದಾ. ಹೌದಾದಲ್ಲಿ ಮಹಾಪುರುಷನೊಬ್ಬನು ಕುಳಿತಿದ್ದಾನೆ. ಆನೆಯು ಅತಿ ರಭಸದಿಂದ ಆ ಸೈನ್ಯಸಮುದ್ರವನ್ನು ಶೀಳಿಕೊಂಡು ಬರುತ್ತಿದೆ. ಎಲ್ಲರೂ ಘಾಬರಿಯಿಂದ ದಾರಿಬಿಟ್ಟು ಸರಿದು ನಿಂತರು. ಪಟ್ಟದಾನೆಯು ಬರುವುದನ್ನು ನೋಡಿ, ಖಾಸ್ ಸವಾರಿಯೇ ಬರುತ್ತಿದೆಯೆಂದು

ಆ ಸೈನ್ಯದ ಭಾವನೆ. ವಧ್ಯಸ್ಥಾನದಲ್ಲಿ ಮಹಾಗಜವು ನಿಂತಿತು. ಗಜಾರೋಹಿಯು ಧೀರ್ಘವಾದ ಕರತಾಳವನ್ನು ಬೀಸಿದನು. ಗಲ್ಲಿನ ಹಗ್ಗವು ಕಡಿದು ಬಿತ್ತು. ಇವೆಲ್ಲಾ ಮಿಂಚಿನ ವೇಗದಲ್ಲಿ ನಡೆದುಹೋಯಿತು. ಖುದ್ದು ಸುಲ್ತಾನರವರ ಸವಾರಿಯೇ ದಯಮಾಡಿಸಿದೆಯೇ ಎಂದು—ಎಲ್ಲರಿಗೂ ಘಾಬರಿ. ಭಕ್ಷಿಯವರು ತಲೆಯೆತ್ತಿ ನೋಡಿದರು. ಆ ಮಹಾಪುರುಷನು ಮತ್ತಾರೂ ಅಲ್ಲ. ಸ್ವಯಂ ಮಹಮ್ಮದಾಲಿ. ಆನೆಯ ಮೇಲೆ ಇದ್ದ ಮಹಮ್ಮದಾಲಿಯವರು ಹಸ್ತಲಾಗವನ್ನು ಕೊಟ್ಟು ಖಾಸಿಂಖಾನನನ್ನು ಆನೆಯ ಮೇಲೆ ಹತ್ತಿಸಿಕೊಂಡು ಹೌದಾದಲ್ಲಿ ಕುಳ್ಳಿರಿಸಿದನು. ಕೆಳಗಿಳಿದು ಬಂದು ಕೈಯಿಂದ ಆನೆಯ ಸೊಂಡಲನ್ನು ಸವರುತ್ತಾ ಮತ್ತೊಂದು ಕೈಯಲ್ಲಿ ಕತ್ತಿಯನ್ನು ಹಿಡಿದು ನಿಂತರು.

ಭಕ್ಷಿಯವರು 'ಸಲಾಂ' ಮಾಡಿ ಖಾಸ್ ಹುಕುಂ ಆಗಿದೆಯೋ? ಎಂದು ವಿನಯದಿಂದ ಕೇಳಿದರು.

ಇಲ್ಲ, ಸುಲ್ತಾನರ ಅಪ್ಪಣೆಗೆ ವಿರೋಧವಾಗಿ ನಾನೇ ಈ ಖಾಸಿಂಖಾನನಿಗೆ ಪ್ರಾಣಭಿಕ್ಷೆಯನ್ನು ಕೊಟ್ಟಿದ್ದೇನೆ. ಇವರಿಗೆ ಪ್ರತಿಯಾಗಿ ನನ್ನನ್ನು ಗಲ್ಲಿಗೇರಿಸಬಹುದು. ಅಥವಾ ಈ ಹತ್ತು ಸಹಸ್ರ ಸೈನ್ಯವೂ ನಮ್ಮಿಬ್ಬರೊಡನೆ ಯುದ್ಧ ಮಾಡಬಹುದು.

ಸುಲ್ತಾನರವರ ಅಪ್ಪಣೆಯಿಲ್ಲದೇ ನಾನು ಅಪರಾಧಿಯನ್ನು ಖುಲಾಸೆ ಮಾಡುವುದಕ್ಕಾಗುವುದಿಲ್ಲ. ತಾವು ಇದಕ್ಕೆ ಅಡ್ಡಿ ಬಂದರೆ ತಮ್ಮ ತಲೆ ಹೋದೀತು ಎಂದು ಆಗ್ರಹದಿಂದ ನುಡಿಯುತ್ತಾ ಒರೆಯಿಂದ ಕತ್ತಿಯನ್ನು ಹಿರಿದು ಎತ್ತಿದನು.

ನಿನಗೆ ಸುಲ್ತಾನರ ಅಪ್ಪಣೆಯು ಬೇಕು. ಕೇಳಿಕೋ! ನಾನು ಈ ಪ್ರಸಂಗದಲ್ಲಿ ಸುಲ್ತಾನರ ಅಪ್ಪಣೆಯನ್ನು ವಿರೋಧಿಸುತ್ತೇನೆ ಎಂದು ಹೇಳಿ ಮಹಮ್ಮದಾಲಿಯವರು ವಧ್ಯವೇದಿಕೆಯ ಮೇಲೆ ಹತ್ತಿ ನಿಂತು, ಕತ್ತಿಯನ್ನು ನಾಲ್ಕು ಕಡೆಯೂ ಬೀಸುತ್ತಾ—ನಾನು ಸುಲ್ತಾನರ ಅಪ್ಪಣೆಯನ್ನು ವಿರೋಧಿಸುತ್ತೇನೆ. ಖಾಸಿಂಖಾನರಿಗೆ ಅಭಯಪ್ರದಾನ ಮಾಡಿರುತ್ತೇನೆ. ನನ್ನ ಮೇಲೆ ಯುದ್ಧಮಾಡುವ ವೀರರು ಈ ಸೈನ್ಯದಲ್ಲಿ ಯಾರಾದರೂ ಇದ್ದರೆ ಬನ್ನಿ ಎಂದು

ಘರ್ಜಿಸಿದರು. ಹತ್ತು ಸಾವಿರ ಸೈನ್ಯದ ಮುಂದೆ ಒಬ್ಬನೇ ವೀರನು ನಿಂತು ಯುದ್ಧಕ್ಕೆ ಕರೆಯುತ್ತಿರುವ ದಿಟ್ಟತನವನ್ನು ನೋಡಿ ಖಾಸಿಂಖಾನನು ದಿಗ್ಭ್ರಾಂತನಾದನು. ಅವನೂ ಥಟ್ಟನೆ ಕೆಳಕ್ಕೆ ಧುಮುಕಿ, ಪಕ್ಕದಲ್ಲಿ ನಿಂತಿದ್ದ ಯೋಧನ ಕೈಯಿಂದ ಕತ್ತಿಯನ್ನು ಕಸಿದುಕೊಂಡು, ಮುಹಮ್ಮದಾಲಿಯವರ ಪಕ್ಕದಲ್ಲಿ ನಿಂತು ಕೊಂಡನು. ಮುಹಮ್ಮದಾಲಿಯ ಘರ್ಜನೆಯು ಸೈನ್ಯದಲ್ಲೆಲ್ಲಾ, ವಿದ್ಯು ದ್ವೇಗದಿಂದ ಪ್ರವಹಿಸಿತು. ಆ ಹತ್ತು ಸಾವಿರ ಸೈನಿಕರೂ ಒರೆಗಳಿಂದ ಕತ್ತಿಗಳನ್ನು ಹಿರಿದರು. ಕತ್ತಿಗಳ ಝುನಝುನಾ ಶಬ್ದವು ನಭೋಮಂಡಲವನ್ನು ವ್ಯಾಪಿಸಿತು. ಹತ್ತುಹತ್ತು ಸಹಸ್ರ ಕಂಠಗಳಿಂದ "ಮುಹಮ್ಮದಾಲೀಕು-ಜೈ" ಎಂಬ ಜಯಧ್ವನಿ ಎದ್ದಿತು. ಭಕ್ಷಿ ಜುನಾಲುಬುದ್ಧೀನ್ ಸಾಹೇಬರು ಕೈಯಿಂದ ಕತ್ತಿಯನ್ನು ಬಿಸುಟು ಕುದುರೆಯನ್ನು ಹತ್ತಿ ಸುಲ್ತಾನರ ಶಿಬಿರಕ್ಕೆ ಪಲಾಯನ ಮಾಡಿದರು. ಮುಹಮ್ಮದಾಲಿಯವರು ಖಾಸಿಂಖಾನನ್ನು "ಆನೆಯಮೇಲೆ ಹತ್ತು" ವೆಂದು ಅಪ್ಪಣೆಮಾಡಿದರು.

ಅವನು ತಟ್ಟನೆ ಆನೆಯನ್ನು ಹತ್ತಿದನು. ಮುಹಮ್ಮದಾಲಿಯವರೂ ಹತ್ತಿದರು. ಆನೆಯು ವೇಘದಿಂದ ನಗರಾಭಿಮುಖವಾಗಿ ಹೊರಟಿತು. ಸೈನ್ಯ ವೆಲ್ಲವೂ ಶಿಬಿರಕ್ಕೆ ಹೊರಟುಹೋಯಿತು. ಅಧಿಕಾರಿಗಳೆಲ್ಲಾ ವಿಷಣ್ಣವದನ ರಾಗಿ ಬಿಡಾರಗಳಿಗೆ ತೆರಳಿದರು. ಹೀಗೆ ಖಾಸಿಂಖಾನನು ಜೀವದಿಂದ ಪಾರಾದನು.

ಸೂರ್ಯಾಸ್ತಮಯವಾಯಿತು. ನಾಲ್ಕು ಕಡೆಯೂ ನಿಶಾದೇವಿಯು ಆಕ್ರಮಿಸಿದ್ದಾಳೆ. ಆಕಾಶದಲ್ಲಿ ಜಿಗಿಜಿಗಿ ನಕ್ಷತ್ರಗಳು. ಸುಲ್ತಾನನು ತನ್ನ ಗುಡಾರದ ಹೊರಗಿನ ಪ್ರಶಸ್ತವಾದ ಅಂಗಳದಲ್ಲಿ ನಿಂತಿದ್ದಾನೆ. ಆಕಾಶದ ಕಡೆ ತಲೆ ಎತ್ತಿ ನೋಡಿದನು. ಇಷ್ಟು ನಕ್ಷತ್ರಗಳೇಕೆ ಆಕಾಶದಲ್ಲಿ? ಎಂದು ಕೊಂಡನು. ಇನ್ನೂ ಖಾಸಿಂಖಾನನ ವಧೆಯವಾರ್ತೆಯು ಬರಲಿಲ್ಲವೇಕೆಂದು ಕೊಂಡನು. ಹೀಗೆ ಆಲೋಚನೆ ಮಾಡುತ್ತಿರುವಷ್ಟರಲ್ಲಿ ಸೈನಿಕರು ಗುಂಪು ಗುಂಪಾಗಿ ಪಾಳಯಕ್ಕೆ ಬರುತ್ತಿರುವುದು ಕಾಣಿಸಿತು. ಅಧಿಕಾರಿಗಳಾರೂ ಬರ ಲಿಲ್ಲ. ಸುಲ್ತಾನನು ಆತುರದಿಂದ ಕಾತುರನಾಗಿ ಎದುರು ನೋಡುತ್ತಿರುವಷ್ಟ ರಲ್ಲಿಯೇ ಕಛೇರಿ ಭಕ್ಷಿಯವರು ಬಂದು ದೂರದಲ್ಲಿ ನಿಂತು ಮುಜರೆಮಾಡಿದರು. ಸುಲ್ತಾನನು ವ್ಯಗ್ರನಾಗಿ ಖಾಸಿಂಖಾನನ ತಲೆಯನ್ನು ತಂದಿದ್ದೀರೋ?

ಎಂದು ಕೇಳಿದನು. ಭಕ್ಷಿಯವರು ತಲೆಬಾಗಿ ನಿಂತುಕೊಂಡರು. ಮಾತ ನಾಡುವುದಕ್ಕೆ ಹೋಗುತ್ತಾರೆ. ಬಾಯಿಬಾರದು. ಅತಿ ಕಷ್ಟದಿಂದ ಅರ್ಧ ಅರ್ಧ ಮಾತುಗಳಿಂದ "ವಧ್ಯವೇದಿಕೆಯಮೇಲೆ ನಿಲ್ಲಿಸಿ ನೇಣುಹಾಕಿದ್ದ ಖಾಸಿಂಖಾನನನ್ನು ದಿವಾನ್ ಮುಹಮ್ಮದಾಲಿಯವರು ಬಂದು—ಬಿಡಿಸಿ ಕೊಂಡುಹೋದರು" ಎಂದು ಭೀತಿಯಿಂದ ತಿಳಿಸಿದನು.

ಸುಲ್ತಾನರಿಗೆ ಆ ಮಾತು ಮರ್ಮಾಹತವಾದಂತಾಯಿತು. ಅವರು ಭಕ್ಷಿಯವರ ಕಡೆ ಬಿರುಗಣ್ಣು ಬೀರಿ ಕಟಕಟನೆ ಹಲ್ಲು ಕಡಿದು ನಿಟ್ಟುಸಿರು ಬಿಟ್ಟರು. ಇಷ್ಟು ಸೈನ್ಯದ ಮಧ್ಯದಲ್ಲಿ ಮುಹಮ್ಮದಾಲಿಯವರು ನಮ್ಮ ಅಪ್ಪಣೆಯನ್ನು ವಿರೋಧಿಸಿದರೇ ?

ಹೌದು, ಹುಜೂರು. ಬಹಳ ದರುಳತನಮಾಡಿದರು.

ನೀವು ಅವರನ್ನು ವಿರೋಧಿಸಿ ನಮ್ಮ ಅಪ್ಪಣೆಯನ್ನು ಜಾರೀ ಮಾಡ ಲಿಲ್ಲವೇಕೆ?

ಪಟ್ಟದಾನೆ ವಧ್ಯಸ್ಥಾನಕ್ಕೆ ಬಂದಿತು. ಮೇಲೆ ದೊಡ್ಡ ಹೌದಾ ಇದ್ದಿತು ಸನ್ನಿಧಾನವೇ ಬಂತೆಂದು ಸೈನ್ಯವು ದಾರಿ ಬಿಟ್ಟಿತು. ಮುಹಮ್ಮದಾಲಿಯವರು ಗಲ್ಲುಮರದ ನೇಣನ್ನು ಕಡಿದು ಖಾಸಿಂಖಾನನನ್ನು ಆನೆಯಮೇಲೆ ಹತ್ತಿಸಿ ಕೊಂಡು, ಹೊರಟುಹೋದರು. ಖಾಸಾ ಅಂಬಾರಿಯಮೇಲೆ ದೊಡ್ಡ ದಿವಾ ನರು ಬಂದು, ಖಾಸಿಂಖಾನನನ್ನು ಬಿಡಿಸಿಕೊಂಡಾಗ ಎಲ್ಲರೂ ಹುಜೂರಿನ ಅಪ್ಪಣೆಯೆಂದೇ ಭಾವಿಸಿದರು.

ನೀವೂ ಹಾಗೆಯೇ ಭಾವಿಸಿದಿರೋ ?

ಇಲ್ಲ, ಹುಜೂರ್, ಅವರು ಆಜ್ಞೋಲ್ಲಂಘನೆಮಾಡಿದ್ದಾರೆಂದು ಅವರ ಮೇಲೆ ಕತ್ತಿಯನ್ನೆತ್ತಿದೆ. ಅಷ್ಟರಲ್ಲಿ ಸೈನ್ಯದಲ್ಲಿ ಕೋಲಾಹಲವೆದ್ದಿತು. ಎಲ್ಲಾ ಗೊಜಗುಂಪಲಾಗಿ ಹೋಯಿತು. ಮುಹಮ್ಮದಾಲಿಯವರು ಅಪರಾಧಿ ಯೊಡನೆ ಪರಾರಿಯಾದರು.

ತಪ್ಪು ನಿಮ್ಮದು. ನಿಮ್ಮನ್ನು ಶಿಕ್ಷಿಸಬೇಕು. ಭಕ್ಷಿಯವರು ಭಯ ದಿಂದ ನಡುಗಿ ಕ್ಷಮಾ ಪ್ರಾರ್ಥನೆ ಮಾಡಿದರು.

"ಇರಲಿ, ಹೇಳಿ ಕಳುಹಿಸುತ್ತೇವೆ. ಭಕ್ಷಿಯವರು ಮುಜುರೆಮಾಡಿ, ಹಿಂದಿರುಗಿದರು. ಸುಲ್ತಾನರು ಆಗಲೇ ಆಪ್ತ ಮಂತ್ರಿಗಳನ್ನು ಕರೆಸಿ, ಆಲೋಚನೆಮಾಡಿದರು. ಆ ಮಂತ್ರಿಗಳೆಲ್ಲಾ ಮಹಮ್ಮದಾಲಿಯವರ ಅಭ್ಯುದಯದಲ್ಲಿ ಅಸೂಯೆ. ಅವರು ಸಮಯವನ್ನು ಕಾಯುತ್ತಿದ್ದರು. ಸ್ವಾಮಿ ಭಕ್ತನಾದ ಮಹಮ್ಮದಾಲಿಯಲ್ಲಿ ತಪ್ಪು ಸಿಕ್ಕಲಿಲ್ಲ. ಈಗ ತಪ್ಪಿನಮೇಲೆ ತಪ್ಪು ಸಿಕ್ಕಿದೆ. ಸುಲ್ತಾನರ ಮನಸ್ಸು ಕ್ಷುಬ್ಧವಾಗಿದೆ. ಇದೇ ಸಮಯವೆಂದು ಬೆಂಕಿಯನ್ನು ಉರಿಸಿದರು. ಭಕ್ಷಿಯವರದು ಏನೂ ತಪ್ಪಿಲ್ಲವೆಂದು ತೀರ್ಮಾನವಾಯಿತು. ಸ್ವಯಂ ದೊಡ್ಡ ದಿವಾನರೇ ಬಂದರೆ ಪಾಪ, ಭಕ್ಷಿಯವರೇನು ಮಾಡಾರು? ಅದರಲ್ಲಿಯೂ ಖಾಸ್ ಆನೆ ಅಂಬಾರಿಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಇವೆಲ್ಲಾ ಭ್ರಾಂತಿಯನ್ನುಂಟುಮಾಡಿವೆ. ಭಕ್ಷಿಯವರ ತಪ್ಪಿಲ್ಲ. ತಪ್ಪೆಲ್ಲಾ ಮಹಮ್ಮದಾಲಿಯವರದೇ. ಅವರೆಷ್ಟು ಸ್ವಾಮಿದ್ರೋಹ ಮಾಡಿದರು. ಎಂಥಾ ಘಾತುಕ ಕಾರ್ಯ ನಡೆಸಿದರು. ದೊಡ್ಡವರೇ ಹೀಗೆ ಮಾಡಿದ ಮೇಲೆ ಇನ್ನು ರಾಜ್ಯದಲ್ಲಿ ಹದ್ದುಬಸ್ತು ಹೇಗೆ ಉಳಿಯಬೇಕು ಎಂದು ಮಂತ್ರಿಗಳೆಲ್ಲಾ ಹೇಳಿದರು. ಇಷ್ಟುಹೊತ್ತಿಗೆ ಇಯಜ್‌ಖಾನರ ಪಿತೂರಿಯ ಕಥೆಯು ಶಾಖೋಪಶಾಖೆಯಾಗಿ ಹಬ್ಬಿಹೋಗಿತ್ತು. ಅದರ ಜೊತೆಗೆ ಮಹಮ್ಮದಾಲಿಯವರನ್ನು ಗಂಟುಹಾಕಿದರು. ಮೊದಲಿನಿಂದಲೂ, ಮಹಮ್ಮದಾಲಿಯವರು ಇಯಜ್‌ಖಾನರ ಕಡೆಗೆ ಇದ್ದಾರೆಂದು ಅನೇಕ ಸಂದರ್ಭಗಳಲ್ಲಿ ಸುಲ್ತಾನರಿಗೆ ಸಂದೇಹ ಬಂದಿತ್ತು. ಈಗ ಖಚಿತವಾಗಿಹೋಯಿತು. ಇಯಜ್ ಖಾನರು ಇಂಗ್ಲೀಷರೊಡನೆ ಸಂಧಿ ಮಾಡಿಕೊಂಡಿದ್ದಾರೆಂದು ಸುಲ್ತಾನರ ಶಿಬಿರದಲ್ಲಿ ಜನಜನಿತವಾಗಿತ್ತು. ಅವರು ಇಂಗ್ಲೀಷರ ಆಶ್ರಯವನ್ನು ಪಡೆದು ಬೊಂಬಾಯಿಗೆ ಹೊರಟೇಹೋಗಿದ್ದಾರೆಂದೂ, ಅಲ್ಲಿಂದ ಸುಲ್ತಾನರ ಕಾರ್ಯಭಾರ ನಡೆಸುತ್ತಾರೆಂದೂ, ವದಂತಿ. ಮಹಮ್ಮದಾಲಿಯೂ, ಖಾಸಿಂಖಾನನೂ ಅಲ್ಲಿಗೇ ಹೋಗಿ ಇಂಗ್ಲೀಷರ ಕಡೆ ಸೇರಿಕೊಳ್ಳುತ್ತಾರೆಂದು ಊಹೆ ಕಟ್ಟಿದರು. ಇವರಿಬ್ಬರೂ ಹೋಗಿ ಇಂಗ್ಲೀಷರೊಡನೆ ಸೇರಿಕೊಂಡರೆ ಶ್ರೀರಂಗಪಟ್ಟಣವು ಮುಳುಗಿಹೋಗುವುದೆಂದು ಸೂಚಿಸಿದರು. ಈ ಮಂತ್ರಾಲೋಚನೆಯೆಲ್ಲಾ ಘಟ್ಟಿಯಾಯಿತು. ಏನಾದರೂಮಾಡಿ, ಅವರಿಬ್ಬರೂ ಇಂಗ್ಲೀಷರ ಸೈನ್ಯವನ್ನು

ಸೇರುವುದರೊಳಗಾಗಿ ಹಿಡಿದು ತರಬೇಕೆಂದು ಸುಲ್ತಾನರು ಕಟ್ಟಪ್ಪಣೆ ಮಾಡಿದರು.

ದೊಡ್ಡದೊಡ್ಡ ಸರದಾರರೆಲ್ಲಾ ನಾಲ್ಕು ಕಡೆ ಹುಡುಕುವುದಕ್ಕೆ ಹೊರಟರು. ಸ್ವಯಂ ಸುಲ್ತಾನರೇ ಕುದುರೆಯಮೇಲೆ ಹೊರಟರು. ಅವರ ಅಂಗ ರಕ್ಷಕ ದಳವು ಹಿಂಬಾಲಿಸಿತು. ಆರ್ಕಾಟಿನ ಸೈಯ್ಯದ್ ಹಮೀದರೂ ಘಾಜೀ ಖಾನರೂ, ಶಿಬಿರಕ್ಕೆ ನಾಲ್ಕು ಕ್ರೋಶದಲ್ಲಿ ವೇಗವಾಗಿ ಹೋಗುತ್ತಿರುವ ಪಟ್ಟದಾನೆಯನ್ನು ಕಂಡರು. ಅವರ ಸೈನ್ಯದೊಡನೆ ಮುಹಮ್ಮದಾಲಿಯವರನ್ನು ಅಡ್ಡಗಟ್ಟಿ ತಡೆದರು. ಇನ್ನೇನು ಕೈಗೆ ಕೈ ಹತ್ತಬೇಕು. ಅಷ್ಟರಲ್ಲಿ ಅಶ್ವಾರೋಹಿಗಳಾದ ಸುಲ್ತಾನರೇ ಮುಂದೆ ಬಂದು ನಿಂತರು. ಸುಲ್ತಾನರನ್ನು ನೋಡುತ್ತಲೇ, ಮುಹಮ್ಮದಾಲಿಯುವರು ಕೆಳಗಿಳಿದು ತಲೆಬಾಗಿ ನಿಂತುಕೊಂಡರು. ಖಾಸಿಂಖಾನನು ಕೆಳಗೆ ಚಿಗಿದು ಕೈಯ್ಯಲ್ಲಿದ್ದ ಕತ್ತಿಯಿಂದ ಸುಲ್ತಾನರಮೇಲೆ ಒಂದೇಟು ಬೀಸಿದನು. ಹಿಂದೆ ಜಾಗರೂಕನಾಗಿ ನಿಂತಿದ್ದ ಸಿಪಾಸ್‌ದಾರ್ ಸೈಯದ್ ಹಮೀದ್‌ಖಾನನು ಹಿಂದುಗಡೆಯಿಂದ ಕತ್ತಿಯನ್ನೆತ್ತಿ ಬಲವಾಗಿ ಹೊಡೆದನು. ಖಾಸಿಂಖಾನನ ತೋಳು ಕತ್ತಿಯೊಡನೆ ಕಳಚಿ ಬಿದ್ದು ಭೂಮಿಯನ್ನು ಚುಂಬಿಸಿತು. ಖಾಸಿಂಖಾನನ ಮೈಯೆಲ್ಲಾ ರಕ್ತಮಯವಾಯಿತು. ಅಂಗರಕ್ಷಕರು ಅವನನ್ನು ಬಿಗಿದು ಬಂಧಿಸಿದರು. ಖಾಸಿಂಖಾನನ ತೋಳು ಕತ್ತರಿಸಿ ಹೋಗಿ ಬಹಳವಾಗಿ ರಕ್ತಸ್ರಾವವಾಗಿದ್ದುದರಿಂದ ಮೆತ್ತಗಾಗಿ ಹೋದನು.

ಸುಲ್ತಾನರು—ಮುಹಮ್ಮದಾಲಿಯುವರೇ ! ನಿಮ್ಮ ತಪ್ಪು ಕ್ಷಮಾತೀತವಾದುದು. ನಿಮಗೆ ಇದಕ್ಕೆ ತಕ್ಕ ಪ್ರಾಯಶ್ಚಿತ್ತವಾಗುವುದು. ಎಂದು ಹೇಳಿದರು. ಮುಹಮ್ಮದಾಲಿಯುವರು ತುಟಿಪಿಟಿಕೆನ್ನಲಿಲ್ಲ. ಅವರನ್ನು ಹಗ್ಗಗಳಿಂದ ಕಟ್ಟುವಂತೆ ಅಪ್ಪಣೆಯಾಯಿತು. ಅಂಗರಕ್ಷರು ಬಂಧಿಸಿದರು. ಇಬ್ಬರೂ ಶಿಬಿರಕ್ಕೆ ಒಯ್ಯಲ್ಪಟ್ಟರು.

ಆನೆಯು ಸುಲ್ತಾನರನ್ನು ನೋಡಿ ಸೊಂಡಲೆತ್ತಿ ' ಸಲಾಂ ' ಮಾಡಿತು. ಸುಲ್ತಾನರು ಸೊಂಡಿಲನ್ನು ಸವರಿದರು. ಸೈಯ್ಯದ್ ಹಮೀದ್‌ಖಾನರು ಆನೆಯ ಮೇಲೆ ಹತ್ತಿ ಮಾವುತನನ್ನು ಕೆಳಕ್ಕೆ ತಳ್ಳಿದರು. ಮಾವುತನು

ಅರಚುತ್ತಾ ಕೆಳಗೆ ಬಿದ್ದು ತಲೆಯೊಡೆದು ಪ್ರಾಣ ಬಿಟ್ಟನು. ಸುಲ್ತಾನರು ಆನೆಯಮೇಲೆ ಹತ್ತಿದರು. ಸೈಯ್ಯದ್ ಹಮೀದರೇ ಆನೆಯನ್ನು ಶಿಬಿರಕ್ಕೆ ನಡೆಸಿದರು. ಸುಲ್ತಾನರ ಜೊತೆಯಲ್ಲಿಯೇ ಅಪರಾಧಿಗಳನ್ನು ತಂದರು. ಶಿಬಿರಕ್ಕೆ ಬಂದ ತಕ್ಷಣ ಖಾಸಿಂಖಾನನ್ನು ತೋಪಿನ ಬಾಯಿಗೆ ಕಟ್ಟಿಸಿದರು. ಅವನ ಅವತಾರವು ಅಲ್ಲಿಗೆ ಪೂರ್ತಿಯಾಯಿತು.

ಮಹಮ್ಮದಾಲಿಯವರನ್ನು ಸರಪಣಿಗಳಿಂದ ಕಟ್ಟಿಸಿ ಪಂಜರದಲ್ಲಿಡಿಸಿದರು. ಭಕ್ಷಿ ಜನಾಲುಬುದ್ದೀನ್‌ರೇ ಮೇಲುಗಾವಲನ್ನು ನೋಡಿಕೊಳ್ಳಬೇಕೆಂದು ಹುಕ್ಕುಂ ಆಯಿತು. ಈಗ ದಿವಾನ್ ಮಹಮ್ಮದಾಲಿಯು ತನ್ನ ವಿರೋಧಿಗಳ ಕೈಯ್ಯಲ್ಲಿ ಬಂದಿಯಾಗಿದ್ದಾನೆ.

ಸಮಾಚಾರವು ಶ್ರೀರಂಗಪಟ್ಟಣಕ್ಕೆ ತಲುಪಿತು. ಪಟ್ಟಣದ ಶ್ರೀಮಂತರು ಬಡವರು ; ದೊಡ್ಡ ಸರದಾರರು ನೌಕರರು ಎಲ್ಲರಿಗೂ ಈ ವರ್ತಮಾನವು ಸಿಡಿಲು ಬಡಿದಂತೆ ಆಯಿತು. ಸುಲ್ತಾನರ ಮಹಾಮಾತುಶ್ರೀಯವರು ಈ ಹೊಸ ಸಮಾಚಾರವನ್ನು ಕೇಳಿ ಪರಿತಪಿಸಿದರು. ಈ ವಾರ್ತೆಯನ್ನು ಕೇಳುತ್ತಲೇ ಮಂತ್ರಿ ಪೂರ್ಣಯ್ಯನವರು ಸ್ಥಂಭೀಭೂತರಾಗಿ ಎಂಥಾ ಪ್ರಮಾದವಾಯಿತು ಎಂದುಕೊಂಡರು. ಪಟ್ಟಣದಲ್ಲಿ ಯಾರಿಗೂ ಪೂರಾ ವಿದ್ಯಮಾನಗಳು ಗೊತ್ತಿಲ್ಲ. ಮಹಮ್ಮದಾಲಿಯವರನ್ನು ಬಂಧಿಸಿದ್ದು ಯಾರಿಗೂ ಸಮಾಧಾನವಿಲ್ಲ. ಈಗ ಶ್ರೀರಂಗಪಟ್ಟಣದಲ್ಲಿ ಮೀರ್‌ಸಾದಕನೊಬ್ಬನು ಮಹಾವ್ಯಕ್ತಿ. ಅವನಿಗೂ ಈ ಸಮಾಚಾರವು ತಿಳಿಯಿತು. ಅವನಿಗೆ ಇದರಿಂದ ದುಃಖವೂ ಇಲ್ಲ. ಅವನೊಬ್ಬ ಭೋಗಲೋಲುಪನಾದ ವ್ಯಕ್ತಿ. ಸುಲ್ತಾನರ ಆಪ್ತಮಿತ್ರನಾದುದರಿಂದ ಸಕಲರಿಗೂ ಗೌರವಾಸ್ಪದನಾದವನು. ಸುಲ್ತಾನನ ಅನುಗ್ರಹದಿಂದ ಅತುಲೈಶ್ವರ್ಯವಿದೆ. ಸಕಲವೂ ಭೋಗಕ್ಕಾಗಿಯೇ! ಭೋಗವಿಲಾಸಗಳನ್ನು ಬಿಟ್ಟು ಈ ಜಗತ್ತಿನಲ್ಲಿ ಅವನಿಗೆ ಬೇರೊಂದು ಇಲ್ಲವೇ ಇಲ್ಲ. ಅವನ ದೇವರು, ಅವನ ದೈವ, ಅವನ ಮತ, ನೀತಿ ಎಲ್ಲವೂ ಭೋಗ ಸಾಮ್ರಾಜ್ಯದಲ್ಲಿಯೇ. ಈಗ ಶ್ರೀರಂಪಟ್ಟಣದಲ್ಲಿ ಸುಖಿ ಎಂದರೆ ಅವನೊಬ್ಬನೇ ಅವನು ಮಹಮ್ಮದಾಲಿಯವರಿಗೂ ಪ್ರಿಯ ಶಿಷ್ಯ.

ದಿವಾನ್ ಮಹಮ್ಮದಾಲಿಯವರ ಮನೆಗೂ ಈ ಸಮಾಚಾರವು ತಲಪಿತು. ಅಲ್ಲಿ ಸಂಪೂರ್ಣವಾಗಿ ಯಾರಿಗೂ ತಿಳಿಯದು. ಅರ್ಧಂಪರ್ದವಾಗಿ ತಿಳಿಯಿತು.

ಎಲ್ಲರಿಗೂ ಗೊತ್ತಿದೆ. ಮಹಮ್ಮದಾಲಿಯವರಿಗೆ ಎರಡು ಮದುವೆ. ಮೊದಲನೆಯ ಹೆಂಡತಿಯಲ್ಲಿ ಇಬ್ಬರು ಮಕ್ಕಳು. ಆಕೆಯು ಕಾಲವಾಗಿ ಹದಿನೆಂಟು ವರ್ಷಗಳಾಗಿಹೋದವು. ಮಹಮ್ಮದಾಲಿಯವರು ವಿಧಾರರಾಗುತ್ತಲೇ; ಹೈದರಾಲಿಯವರು ಆರ್ಕಾಟಿನಲ್ಲಿ ದೊಡ್ಡಮನೆತನದಿಂದ ಚಲುವೆಯೊದ ಹೆಣ್ಣೊಬ್ಬಳನ್ನು ತಂದು ಮಹಮ್ಮದಾಲಿಯವರಿಗೆ ಮದುವೆಮಾಡಿಸಿದ್ದರು. ಈ ವಿವಾಹದಲ್ಲಿ ಮಹಮ್ಮದಾಲಿಯವರು ಅತ್ಯಾಸಕ್ತರಾಗಿರಲಿಲ್ಲ. ದೊಡ್ಡ ನವಾಬರ ಆಜ್ಞೆಯನ್ನು ಮೀರಲಾರದೆ ಮದುವೆಯಾದರು. ಮದುವೆಯಾದ ಹೆಣ್ಣನ್ನು ಅತಿ ಪ್ರೀತಿಯಿಂದ ಕಾಣುತ್ತಿದ್ದರು. ಈ ಚಿಕ್ಕ ಹೆಂಡತಿಯ ಹೆಸರು ಫಾತಿಮಾಬಿ. ಆ ಯುವತಿಯು ಶ್ರೀಮಂತರ ಮನೆಯ ಹೆಣ್ಣು. ಪತಿ ಗೃಹಕ್ಕೆ ಬರುವಾಗ, ಬಲು ಅಟ್ಟಹಾಸದಿಂದ ಬಂದಳು. ಆದರೆ ವಯಸ್ಸಾದ ಗಂಡ! ಮನವಲಿಯಲಿಲ್ಲ. ಒಂದೆರಡು ವರ್ಷಗಳು ಹಾಗೆಯೇ ಕಳೆದವು. ಮಹಮ್ಮದಾಲಿಯವರು ಸದಾ ರಾಜಕಾರಣದಲ್ಲಿ ಮಗ್ನರಾಗಿರುತ್ತಿದ್ದರು. ಯುದ್ಧದ ಮೇಲೆ ಯುದ್ಧ! ಆದರೂ ಮಹಮ್ಮದಾಲಿಯವರು ಫಾತಿಮಳನ್ನು ಬಹುವಾಗಿ ಪ್ರೀತಿಸುತ್ತಿದ್ದರು. ಅವರ ಅವ್ಯಾಜಿತವಾದ ಮಧುರ ಪ್ರೇಮ! ಯುದ್ಧಗಳಲ್ಲಿ ಅವರ ಅಪ್ರತಿಹತವಾದ ಪರಾಕ್ರಮ! ದರಬಾರಿನಲ್ಲಿ ಅದ್ವಿತೀಯವಾದ ಅಂತಸ್ತು. ಅಪಾರವಾದ ಐಶ್ವರ್ಯ ಇವೆಲ್ಲಕ್ಕಿಂತಲೂ, ಅತಿಶಯವಾದ ಅವರ ಮೃದುಹೃದಯ! ಇವೆಲ್ಲವೂ ಫಾತಿಮಳನ್ನು ದಿನದಿನಕ್ಕೆ ಆಕರ್ಷಿಸಿದುವು. ಸ್ವಲ್ಪಕಾಲದಲ್ಲಿಯೇ ಫಾತಿಮಳಿಗೆ ಪತಿಗಿಂತಲೂ ಪರವಸ್ತುವೇ ಇಲ್ಲವೆನ್ನುವಂತಾಯಿತು. ಅವಳು ಪತಿಯನ್ನು ಪ್ರೀತಿಸಲಾರಂಭಿಸಿದಳು, ಅಲ್ಲಾನು ಕರುಣಿಸಿ ಈ ಪ್ರೇಮಪುತ್ಥಳಿಯನ್ನು ದಯಪಾಲಿಸಿದ್ದಾನೆಂದು ಮಹಮ್ಮದಾಲಿಯವರ ಸಂತೋಷಕ್ಕೆ ಪಾರವಿಲ್ಲ. ಹೈದರಾಲಿಯವರು ಆಕೆಯನ್ನು ಮಗಳಂತೆ ವಿಶ್ವಾಸಮಾಡುತ್ತಿದ್ದರು. ಎಷ್ಟೋ ಮುಕ್ತಾಹಾರಗಳನ್ನೂ ರತ್ನಾಭರಣಗಳನ್ನೂ ಫಾತಿಮಳಿಗೆ ತಂದುಕೊಟ್ಟಿದ್ದರು. ಫಾತಿಮಳು ಅಪ್ರತಿಮ ಸುಂದರಿಯೆಂದು ಶ್ರೀರಂಗಪಟ್ಟಣದಲ್ಲೆಲ್ಲಾ ಪ್ರಖ್ಯಾತಿಯಾಗಿತ್ತು. ಹೈದರಾಲಿಯವರೊಬ್ಬರು ಹೊರತಾಗಿ ಮತ್ತಾವ ಪುರುಷನೂ, ಆಕೆಯ ಮುಖವನ್ನು ನೋಡಿರಲಿಲ್ಲ. ಆ ಸುಂದರಿಯನ್ನು ಕಣ್ಣಾರ ನೋಡಬೇಕೆಂದು ಒಂದೆರಡು ಬಾರಿ ಟಿಪ್ಪೂಸುಲ್ತಾನರಿಗೆ ಚಪಲಹುಟ್ಟಿದ್ದಿತು. ಒಂದುಕಡೆ

ಹೈದರಾಲಿಯವರ ಭೀತಿ. ಮತ್ತೊಂದು ಕಡೆ—ಮಹಮ್ಮದಾಲಿಯವರಲ್ಲಿದ್ದ ಪೂಜ್ಯ ಬುದ್ಧಿ. ಇವೆರಡು ಪ್ರತಿಬಂಧಕಗಳಿಂದ ಚಿಕ್ಕ ನವಾಬರು ಫಾತಿಮಳನ್ನು ನೋಡುವ ಸಾಹಸಕ್ಕೆ ಹೋಗಲಿಲ್ಲ. ಫಾತಿಮಳು ಮಹಮ್ಮದಾಲಿಯವರ ಪ್ರಾಣಪ್ರಿಯಳಾದ ಧರ್ಮಪತ್ನಿ! ಮೊದಲು ಹೆಂಡತಿಯ ಮಕ್ಕಳಿಬ್ಬರೂ, ಫಾತಿಮಳೂ ಹೊರತಾಗಿ ಮಹಮ್ಮದಾಲಿಯವರಿಗೆ ಮತ್ತಾರೂ ಆತ್ಮೀಯರಿಲ್ಲ. ಮಕ್ಕಳಿಬ್ಬರೂ ಪ್ರಾಪ್ತ ವಯಸ್ಕರು. ದರಬಾರಿನಲ್ಲಿ ಸುಲ್ತಾನರ ಅನುಗ್ರಹಕ್ಕೆ ಪಾತ್ರರು. ಸುಲ್ತಾನರು ಟರ್ಕಿ ಬಾದಷರವರಲ್ಲಿಗೆ ಕಳುಹಿಸಿರುವ ರಾಯಭಾರ ದೊಂದಿಗೆ ಆ ಸಹೋದರರಿಬ್ಬರನ್ನೂ ಕಳುಹಿಸಿದ್ದಾರೆ. ಈಗ ಶ್ರೀರಂಗಪಟ್ಟಣ ದಲ್ಲಿ ಮಹಮ್ಮದಾಲಿಯವರಿಗೆ—ಸುಖದಲ್ಲೂ ದುಃಖದಲ್ಲೂ ಸಮಭಾಗಿನಿ ಯಾದವಳು ಫಾತಿಮಳೊಬ್ಬಳೇ! ಮಹಮ್ಮದಾಲಿಯವರ ಬಂಧನದ ಸಮಾ ಚಾರವು ಫಾತಿಮಳಿಗೆ ಅಶನಿಪಾತದಂತಾಯಿತು. ಸ್ವಲ್ಪ ಹೊತ್ತಾದ ಮೇಲೆ ಅವಳ ಬುದ್ಧಿಗೆ ಆಲೋಚನೆಮಾಡುವ ಶಕ್ತಿಯು ಬರುತ್ತಲೇ ಈ ವರ್ತಮಾನವು ನಿಜವಿರಬಹುದೇ ಎಂದು ಚಿಂತಿಸಿದಳು. ನಿಜವೆಂದು ನಂಬುವುದಕ್ಕೆ ಆಧಾರವೇ ಇಲ್ಲ. ಯುದ್ಧದಲ್ಲಿ ಮಹಮ್ಮದಾಲಿಯವರು ಏನಾದರೂ ತಪ್ಪುಮಾಡಿರ ಬಹುದೇ? ಯುದ್ಧದ ಆಚಾರ್ಯರಾದ ಮಹಮ್ಮದಾಲಿಯವರು ತಪ್ಪುವುದೆಲ್ಲಿ ಬಂತು? ರಾಜಸಭಾಮರ್ಯಾದೆಯನ್ನು ಅತಿಕ್ರಮಿಸಿರಬಹುದೇ? ಸುಲ್ತಾನರ ರಾಜ್ಯಕ್ಕೆ ಆಧಾರಭೂತರಾದವರು ಮರ್ಯಾದಾತಿಕ್ರಮಣಮಾಡುವುದುಂಟೆ? ಅಥವಾ ರಾಜದ್ರೋಹವೇ? ನಿಸ್ಸೀಮ ರಾಜಭಕ್ತರಲ್ಲಿ ರಾಜದ್ರೋಹವೆಂದ ರೇನು? ಒಂದೂ ತೋರಲಿಲ್ಲ. ಒಂದೂ ತಿಳಿಯಲಿಲ್ಲ. ದಿಕ್ಕು ತೋರದೆ ದುಃಖಪಡುತ್ತಿದ್ದಳು.

ಸುಮಾರು ಮೂರು ಜಾವದ ಹೊತ್ತು. ಹುಚ್ಚಿ ಸಾವಿತ್ರಿಯು ದಿವಾನರ ಮಹಲಿಗೆ ಬಂದಳು. ಅವಳನ್ನು ಪಹರೆಯವರು ತಡೆಯುತ್ತಿರಲಿಲ್ಲ. ಆದರೆ ಸ್ವಲ್ಪ ತಮಾಷೆ ಮಾಡುತ್ತಿದ್ದರು. ದಿವಾನರು ಮನೆಯಲ್ಲಿ ಇಲ್ಲದಿದ್ದ ರೆರಡು ಹಾಡು ಹೇಳಿಸಿ ಕೇಳುತ್ತಿದ್ದರು. ಅವಳೊದೊಂದುಬಾರಿ ಪಹರೆಯವ ರಿಗೆ ಎಲಡಿಕೆ ಕಡ್ಡೀಪುಡಿಯನ್ನು ಕೊಡುವಳು. ಹುಚ್ಚಿಯ ಕೈಯಿಂದ ತಾಂಬೂಲವನ್ನು ತೆಗೆದುಕೊಳ್ಳುವುದು ಪಹರೆಯವರಿಗೆ ಮಹಾಪ್ರಸಾದ!

ಇಂದು ಅವಳೊಡನೆ ಯಾರೂ ಮಾತನಾಡಲಿಲ್ಲ. ಅದರಿಂದ ನನಗೇನು ಹೋಯಿತು ಎಂದುಕೊಂಡು ಒಳಗೆ ಹೋದಳು.

ಮಹಮ್ಮದಾಲಿಯವರ ಮನೆಯು ಶ್ರೀರಂಗಪಟ್ಟಣದಲ್ಲಿ ಪ್ರಶಸ್ತವಾದ ಮನೆ. ಅರಮನೆಯ ಬಲಭಾಗದಲ್ಲಿದೆ. ಬೀದಿಯ ಬಾಗಿಲಿನಲ್ಲಿ ದೊಡ್ಡ ದೊಡ್ಡ ಪಡಸಾಲೆಗಳು. ಭಾರೀ ಆನೇ ಗಾತ್ರದ ತರಾಯಿ ಕಂಭಗಳು. ಮುಂಬಾಗಿಲು ದೊಡ್ಡ ಮಹಾದ್ವಾರ. ತರಾಯಿ ತುರಾಯಿಗಳನ್ನು ಕೆತ್ತಿದ ಮರದ ನಿಲುಬಾಗಿಲು. ಅದರ ಮೇಲೆ ಬೆಳ್ಳಿಯ ಸಣ್ಣ ಗಂಟೆಗಳು ಸಾಲಾಗಿ ಕಟ್ಟಲ್ಪಟ್ಟಿವೆ. ಮೇಲೆ ಮೂರು ಅಂತಸ್ತುಗಳು. ಮೂರನೆಯ ಮಹಡಿಯ ಮೇಲೆ ಮೂರು ಚಿನ್ನದ ಕಳಸಗಳು. ಇದು ಹೊರಗಿನ ನೋಟಕ್ಕೆ ಕಾಣುವ ಆಯಕಟ್ಟು! ಬೀದಿಯ ಪಹರೆ ಹೆಬ್ಬಾಗಿಲನ್ನು ದಾಟಿಹೋಗುತ್ತಲೇ ದೊಡ್ಡ ಚೌಕಿ. ನಾಲ್ಕು ಕಡೆಯೂ ವಿಶಾಲವಾದ ಪಡಸಾಲೆಗಳು. ಉದ್ದಕ್ಕೂ ಸಾಲಾಗಿ ತರಾಯಿಕಂಭಗಳು. ಆ ಕಂಬಗಳಿಗೆಲ್ಲಾ ಬಣ್ಣ ಹಾಕಿ, ಬೆಳ್ಳಿಯ ವರಕು ಬಂಗಾರದ ವರಕಿನ ನಕಾಶೆ ಕೆಲಸ ಮಾಡಿದೆ. ಆ ಥಳಥಳನೆ ಹೊಳೆ ಯುವ ಕಂಬಗಳ ಮಧ್ಯದಲ್ಲಿ ಕಂದೀಲುಗಳು. ಗೋಡೆಗಳ ಮೇಲೆ ಚಿತ್ರ ಕಾರರು ಅನೇಕ ಚಿತ್ರಗಳನ್ನು ಬರೆದಿದ್ದಾರೆ. ನಾಲ್ಕು ಪಡಸಾಲೆಗಳಿಗೆ ಸ್ವಲ್ಪ ತಗ್ಗಾಗಿ ಕೆಳಗಿನ ಪಡಸಾಲೆಗಳು. ಮಧ್ಯ ವಿಸ್ತಾರವಾದ ತೊಟ್ಟಿ! ಕೆಳಗಿನ ಪಡಸಾಲೆಯ ಕೊನೆಯಲ್ಲಿ ತೊಟ್ಟಿಯ ಅಂಚಿನಲ್ಲಿ ದೊಡ್ಡ ದೊಡ್ಡ ಹಿತ್ತಾಳೆಯ ದೀಪಸ್ತಂಭಗಳು. ತೊಟ್ಟಿಯ ನಾಲ್ಕುಕಡೆ ಹಿತ್ತಾಳೆಯ ಪೀಕುದಾನಿಗಳು. ಅದರಲ್ಲಿ ಮರಳು ತುಂಬಿದೆ. ಪಡಸಾಲೆಯ ಮೂಲೆಗಳಲ್ಲಿಯೂ ನಾಲ್ಕು ಕಡೆಯೂ, ಮೇಲಕ್ಕೆ ಹತ್ತುವ ವಿಶಾಲವಾದ ಮೆಟ್ಟಲುಗಳು. ಆ ಮೆಟ್ಟಲು ಗಳಿಗೆಲ್ಲಾ ರತ್ನಕಂಬಳಿಗಳನ್ನು ಬಡಾಯಿಸಿದೆ. ಮೇಲೆ ಹತ್ತುತ್ತಲೇ ವಿಶಾಲ ವಾದ ನಾಲ್ಕು ಕೋಣೆಗಳು. ಮಧ್ಯದಲ್ಲಿ ಪ್ರಸ್ತವಾದ ಹಜಾರ. ಸುತ್ತಲೂ ಚಂದ್ರಶಾಲೆಗಳು. ಈ ಹಜಾರವೇ ದಿವಾನರವರ ದಿವಾನಖಾನೆ. ತಖ್ತಿ ಪೋಷಾಕಿನ ಮೇಲೆ ಸೊಗಸಾದ ವಿಮಾನದ ಕೆಲಸ. ಗೋಡೆಗಳಿಗೆ ದೊಡ್ಡ ದೊಡ್ಡ ನಿಲುಗನ್ನಡಿಗಳನ್ನು ಕಟ್ಟಿದೆ. ಮಧ್ಯದಲ್ಲಿ ದೊಡ್ಡ ನವಾಬರ ತೈಲ ಚಿತ್ರ. ಎದುರಿಗೆ ಚಿಕ್ಕ ನವಾಬರ ತಸ್ವೀರು! ಮತ್ತೊಂದುಕಡೆ ಗೋಡೆ ಯಲ್ಲಿ ಬಡಾ ಫಕೀರರ ತೈಲಚಿತ್ರ! ಗೋಡೆಗಳ ಮೇಲೆ ಮಕ್ಕಾ, ಮದೀನಾ

ಗಳ ದೃಶ್ಯವು ಚಿತ್ರಿತವಾಗಿದೆ. ಇನ್ನೊಂದುಕಡೆ ಡಿಲ್ಲಿಯ ಅರಮನೆಯ ಚಿತ್ರ. ಜುಮ್ಮಾ ಮಸೀದಿಯ ಚಿತ್ರ. ಇವೆರಡರ ನಡುವೆ ಮಹಮದ್‌ಪೈಗಂಬರ ಭವ್ಯವಾದ ಭಾವಚಿತ್ರ. ಅಜಾನುಬಾಹುವಾದ ಶರೀರ. ಪ್ರಜ್ವಲಿಸುವ ಮುಖಕಾಂತಿ! ಆ ಸುಂದರ ಮುಖವನ್ನು ಮತ್ತಷ್ಟು ಸುಂದರವಾಗಿ ಪ್ರಕಾಶಮಾನವಾಗಿ ಬೆಳಗುತ್ತಿರುವ ತೇಜೋಮಯವಾದ ವಿಶಾಲ ನೇತ್ರಗಳು. ಸಾಂದ್ರವಾದ ಭ್ರೂಯುಗ್ಮ. ದೀರ್ಘವಾದ ನೊಣಚಾದ ನಾಸಿಕ. ತೆಳುವಾದ ತುಟಿಗಳು. ವಿಶಾಲವಾದ ಎತ್ತರವಾದ ಲಲಾಟ. ಆ ಪ್ರಫುಲ್ಲವದನಾರವಿಂದವನ್ನು ಶೋಭಾಯಮಾನವಾಗಿ ಮಾಡುತ್ತಿರುವ ಭವ್ಯವಾದ ಗಡ್ಡ, ಮೀಸೆಗಳು, ತಲೆಯ ಮೇಲೆ ಜಟಾಜೂಟ, ಆಪಾದಮಸ್ತಕವಾದ ನಿಲುವಂಗಿ, ಕೈಯಲ್ಲಿ ದೊಣ್ಣೆ! ಆ ಭವ್ಯಮೂರ್ತಿಯ ಮುಂದೆ ಮಹಮ್ಮದಾಲಿಯು ಮೊಣಕಾಲೂರಿ ಕುಳಿತುಕೊಂಡು, ಕೃಪಾಭಿಕ್ಷ ಬೇಡುತ್ತಿರುವ ಭಾವ. ಹುಚ್ಚಿ ಸಾವಿತ್ರಿಯು ಆ ಹಜಾರಕ್ಕೆ ಬಂದು ಅಲ್ಲಿ ಹಾಡಲಾರಂಭಿಸಿದಳು. ಅಲ್ಲಿ ಅವಳ ಹಾಡನ್ನು ಕೇಳುವರಾರು? ಅವಳು ಯಾರಾದರೂ ಕೇಳಬೇಕೆಂದು ಹಾಡುವುದೂ ಇಲ್ಲ. ತನ್ನ ಆನಂದಕ್ಕೆ ತಾನು ಹಾಡುತ್ತಾಳೆ. ಆ ಹಜಾರದ ಹಿಂದುಗಡೆ ಚಂದ್ರಶಾಲೆಯಲ್ಲಿ ನಿಂತಿದ್ದ ಬಾಂದಿಯೊಬ್ಬಳು ಹುಚ್ಚಿ! ಸದ್ದುಮಾಡಬೇಡ. ಬೇಗಂ ಸಾಹೇಬರು ದುಃಖಮಗ್ನರಾಗಿದ್ದಾರೆ ಎಂದು ಹೇಳಿದಳು. ಹುಚ್ಚಿಯು ಹಾಡುತ್ತಲೇ—ಚಂದ್ರಶಾಲೆಗೆ ಹೋಗಿ—ಅಲ್ಲಿ ಮೆಟ್ಟಲುಗಳನ್ನು ಹತ್ತಿ ಮೇಲಿನ ಹಜಾರಕ್ಕೆ ಹೋದಳು. ಆ ಅಂತಸ್ತು ಬೇಗಂ ಸಾಹೇಬಳ ಜನಾನಾ ಮಹಲ್! ಆ ಮಹಲ್ ಅತ್ಯಂತ ಮನೋಹರವಾಗಿ ಶೃಂಗರಿಸಲ್ಪಟ್ಟಿದೆ. ಕಿಟಕಿಗಳ ಬಾಗಿಲುಗಳಿಗೆಲ್ಲಾ ಕಿಂಕಾಪಿನ ಫರದೆಗಳು ಇಳಿಬಿಟ್ಟಿವೆ. ನೆಲಕ್ಕೆ ಅಂಜೂರದ ಬಣ್ಣದ ರತ್ನಕಂಬಳಿಯು ಹಾಸಲ್ಪಟ್ಟಿದೆ. ನಾಲ್ಕುಕಡೆ ಮೂಲೆಗಳಲ್ಲಿಯೂ ಅಮೃತಶಿಲೆಯ ಪುತ್ಥಳಿಗಳಿವೆ. ಅವು ಕೃತಕ ಪುಷ್ಪಗಳಿಂದ ಅಲಂಕರಿಸಲ್ಪಟ್ಟಿವೆ. ಮೇಲೆ ಭುವನೇಶ್ವರಿಯನ್ನು ಕಟ್ಟಿ ಚಿನ್ನದ ಮುಲಾಮು ಮಾಡಿದ್ದಾರೆ. ಹಜಾರದಲ್ಲಿ ಲೋಡುದಿಂಬು ಇಟ್ಟು ಸದರು ಮಾಡಿದ್ದಾರೆ. ಅದರ ಮೇಲೆ ವೀಣೆಯು ಕಲಾಪತ್ತಿನ ಗೌಸುಹಾಕಿ ಇಡಲ್ಪಟ್ಟಿದೆ. ಚಿತ್ರಪಟಗಳೂ, ಕನ್ನಡಿಗಳೂ, ಗೋಡೆಗೆ ಕಟ್ಟಲ್ಪಟ್ಟಿವೆ. ಆ ಮಹಲಿಗೆ ಹೋದರೆ—ಪನ್ನೀರು ಅತ್ತರುಗಳ ವಾಸನೆಯು ಘಮಘಮಿಸುತ್ತದೆ.

ಆ ಹಜಾರದ ಬಲಭಾಗದ ಕೋಣೆಯು ಬೇಗಂ ಸಾಹೇಬಳ ಶಯ್ಯಾಗೃಹ! ಅಲ್ಲಿ ಫಾತಿಮಳು ಅಸ್ತವ್ಯಸ್ತವಾಗಿ ಮಂಚದಮೇಲೆ ಮಲಗಿದ್ದಾಳೆ. ಮದಿರೆಯನ್ನು ಪಾನಮಾಡಿದ್ದಾಳೆ. ಮುಖವು ಕೆಂಪೇರಿ ಕಣ್ಣುಗಳು ಆರಕ್ತವಾಗಿವೆ. ಜ್ಞಾನಶೂನ್ಯತೆ ಇಲ್ಲದಿದ್ದರೂ, ಮನವು ಉತ್ತೇಜಿತವಾಗಿದೆ. ಕೋಣೆಯ ಬಾಗಿಲು ಸರಿದು ಹುಚ್ಚಿಯು ಒಳಗೆ ಕಾಲಿಟ್ಟಳು. ತಂಬೂರಿಯನ್ನು ಮೀಟುತ್ತಾ ಸಣ್ಣ ಧ್ವನಿಯಿಂದ ರಾಗವನ್ನೆತ್ತಿದಳು. ಫಾತಿಮಳು ಜಗ್ಗನೆದ್ದು "ಹರಾಂ ಮುಂಡೆ! ಏಕೆ ಹಾಡುತ್ತಿ" ಎಂದು ಬೆನ್ನಿನಮೇಲೆ ಒಂದೇಟು ಕೊಟ್ಟಳು. ಹುಚ್ಚಿಯು ಗಟ್ಟಿಯಾಗಿ ಹಾಡಿದಳು. ಬೇಗಂ ಸಾಹೇಬಳು ಬೇಸತ್ತು "ಹುಚ್ಚಿ ಹಾಡಬೇಡಮ್ಮಾ ನಿನಗೊಂದು ಬಟ್ಟಲು ಮದ್ಯವನ್ನು ಕೊಡುತ್ತೇನೆ" ಎಂದಳು. ಎಂದು ದೈನ್ಯಭಾವದಿಂದ ಬೇಡಿಕೊಂಡಳು. ಹುಚ್ಚಿಯು ಗಹಗಹಿಸಿ ನಗುತ್ತಾ ನೋಡಿದಿರಾ ನನ್ನ ಏಟು ಎಂದಳು. ಸಮೀಪದಲ್ಲಿದ್ದ ಪರ್ಯಂಕದಲ್ಲಿ ಕುಳಿತಳು. ಫಾತಿಮಳು ಬಟ್ಟಲಿನಲ್ಲಿ ಮಧ್ಯವನ್ನು ಕೊಟ್ಟಳು. ಹುಚ್ಚಿಯು ಕೊಂಚಕೊಂಚವಾಗಿ ಮಧುವನ್ನು ಸೇವಿಸುತ್ತಾ ಮಾತಿಗೆ ಮೊದಲುಮಾಡಿದಳು.

ಬೇಗಂ ಸಾಹೇಬ್! ದಿವಾನರ ಸಮಾಚಾರವು ತಿಳಿಯಿತೇನು?

ಹೌದು! ಸಾವಿತ್ರಿ. ಅದೇನೋ ದೊಡ್ಡ ಗಂಡಾಂತರವು ಬಂದಹಾಗಿದೆ.

ಸುಲ್ತಾನರು ಬಲು ಕೋಪಿಷ್ಠರು. ಸ್ವಾಭಿಮಾನಿಗಳು, ಅವರು ಏನು ಮಾಡುವುದಕ್ಕೂ ಹಿಂದು ಮುಂದು ನೋಡುವುದಿಲ್ಲ.

ನಿಜವಾದ ಸಮಾಚಾರವೇನೆಂಬುದನ್ನು ನೀನು ಬಲ್ಲೆಯಾ?

ಇಲ್ಲ ತಾಯಿ! ಕೊಂಚ ಕೊಂಚ ತಿಳಿದಿದೆ. ಇಯುಜ್‌ಖಾನರೊಡಗೂಡಿ ದಿವಾನರು ಏನೋ ದೊಡ್ಡ ಪಿತೂರಿ ನಡೆಸಿದ್ದಾರಂತೆ. ಅದೆಲ್ಲಾ ಹೊರಬಿದ್ದು ಸುಲ್ತಾನರು ಇಬ್ಬರನ್ನು ಬಂಧನದಲ್ಲಿಡಿಸಿದ್ದಾರಂತೆ.

ದಿವಾನರವರಿಗೆ ಏನಾಗಬಹುದು?

ಆಮರಣಾಂತ ಬಂಧನದಲ್ಲಿಡಬಹುದು. ಅಥವಾ ತೋಪಿನ ಬಾಯಿಗೆ ಕಟ್ಟಿಸಬಹುದು.

ನನ್ನ ಗತಿ ಏನಾಗುತ್ತೋ?

ಏನಾಗುತ್ತೆ! ದೊಡ್ಡ ಬೇಗಂ ಸಾಹೇಬರಿಗೆ ತಮ್ಮ ಮೇಲೆ ಪರಮ ವಾತ್ಸಲ್ಯ! ಅವರು ತಮ್ಮನ್ನು ಹೇಗೆಯೋ ಕಾಪಾಡಬಹುದು.

ದಿವಾನರ ಸಾನ್ನಿಧ್ಯವಿಲ್ಲದೇ ನನಗೆ ಈ ಸಂಪತ್ತು ಸೌಭಾಗ್ಯಗಳೊಂದೂ ರುಚಿಸವು.

ಹಾಗಾದರೇನು ಮಾಡುವಿರಿ? ನನ್ನಂತೆ ಹುಚ್ಚಿಯಾಗಿ ತಿರುಗುವಿರೇನು?

ಇಲ್ಲ! ದಿವಾನರನ್ನು ಬಿಡಿಸುವುದಕ್ಕೆ ನನ್ನ ಸರ್ವಸ್ವವನ್ನು ಒಪ್ಪಿಸುತ್ತೇನೆ.

ತಮ್ಮ ಸುಂದರ ಮುಖಾರವಿಂದವನ್ನು ನೋಡಿ, ದಿವಾನರನ್ನು ಬಿಟ್ಟು ಬಿಡುತ್ತಾರೇನು? ಬಿಟ್ಟರೂ ಬಿಡಬಹುದು. ನಾನು ಗಂಡಸಾಗಿದ್ದರೆ ತಮಗಾಗಿ ತಮ್ಮ ರೂಪಿಗಾಗಿ, ಏನುಬೇಕಾದರೂ ಮಾಡಿಕೊಡುತ್ತಿದ್ದೆ ಎಂದು ಹೇಳಿ ಸಾವಿತ್ರಿಯು ಫಾತಿಮಳನ್ನು ಚುಂಬಿಸಿದಳು.

ಫಾತಿಮಳು ಹುಚ್ಚಿಯ ಕೆನ್ನೆಗೆ ಒಂದು ಏಟು ಕೊಟ್ಟು ಬಾಂದಿ! ನಿನಗೆ ಮಾನವಿಲ್ಲವೇ?

ಹುಚ್ಚಿಯು ನಗುತ್ತಾ—ಬೇಗಂ ಸಾಹೇಬ್! ಇಷ್ಟೇಕೆ ಕುಪಿತರಾಗುವಿರಿ. ನಾನು ಮುತ್ತಿಟ್ಟರೆ ತಮ್ಮ ಪತಿವ್ರತಾ ಧರ್ಮವು ಮುಳುಗಿಹೋಗುವುದೇನು? ಅಕ್ಕತಂಗಿಯರು ಪರಸ್ಪರ ಚುಂಬಿಸಕೂಡದೇನು? ನಾನು ನಿಮ್ಮ ಸಹೋದರಿ ಎಂದುಕೊಳ್ಳಿ! ತಮಗಾಗಿ ಪ್ರಾಣವನ್ನೊಪ್ಪಿಸಬಲ್ಲ ಸ್ನೇಹಿತಳೆಂದುಕೊಳ್ಳಿ! ನೋಡಿ, ಆ ಮಿರ್‌ಸಾದಕನನ್ನು ಬಿಡಿಸಿದವಳು ನಾನಲ್ಲವೇ? ಇಲ್ಲದಿದ್ದರೆ ಕಾರಾಗೃಹದಲ್ಲಿ ಅವನನ್ನು ಇಲಿಗಳು ಕಿತ್ತು ತಿನ್ನುತ್ತಿದ್ದುವು. ಇವತ್ತು ನೋಡಿ, ಅವನ ಅಂತಸ್ತು ವೈಭವಗಳನ್ನು! ಸುಲ್ತಾನರು ರಾಜ್ಯಭಾರ ಮಾಡುತ್ತಾರೆ. ಈ ರಾಜ್ಯದ ಸುಖಸಾಮ್ರಾಜ್ಯವನ್ನನುಭವಿಸುವನು ಮಿರ್‌ಸಾದಕ್! ಅವನು ನನ್ನ ಸೂತ್ರದ ಗೊಂಬೆ. ಅವನು ದಿರ್ವಾರವರ ಶಿಷ್ಯ. ದಿರ್ವಾ ಸಾಹೇಬರು ಅವನಿಗೆ ಎಷ್ಟೋಬಾರಿ ಪ್ರಾಣದಾನಮಾಡಿದ್ದಾರೆ. ಇಂದು ದಿರ್ವಾರನ್ನು ಬಂಧನದಿಂದ ಬಿಡಿಸಲು ಅವನನ್ನು ಪ್ರೇರಿಸುತ್ತೇನೆ, ಬಲಾತ್ಕರಿಸುತ್ತೇನೆ.

ಇದನ್ನೆಲ್ಲಾ ಕೇಳಿ ಫಾತಿಮಳಿಗೆ ಹಿಡಿಸಲಾರದಷ್ಟು ಆನಂದವಾಯಿತು. ಶೋಕಗ್ರಸ್ತವಾಗಿದ್ದ ಅವಳ ಮುಖವು ಗ್ರಹಣವು ಬಿಟ್ಟ ಚಂದ್ರ ಬಿಂಬದಂತೆ ಪ್ರಕಾಶಿಸಿತು. ಆ ಸುಂದರ ಮುಖದಲ್ಲಿ ನಗುವಿನಧವಳ ಛಾಯೆಯು ಕಂಗೊಳಿಸಿತು. ಅರ್ಧಶಾಯಿತಾವಸ್ಥೆಯಲ್ಲಿ ಒರಗಿಕೊಂಡಿದ್ದ ಫಾತಿಮಳು, ಹುಚ್ಚಿಯನ್ನು ಬಿಗಿದಪ್ಪಿ ಚುಂಬಿಸಿ "ಸಾವಿತ್ರಿ ಇಂದು ನೀನು ನನ್ನ ಪ್ರಾಣ ದಾತ್ರಿ" ಎಂದಳು. ಅವರವರು ಬಲು ಹೊತ್ತು ಮಾತನಾಡಿದರು. ಆ ದಿನ ಸಂಧ್ಯಾಕಾಲ ಮಿರ್ ಸಾದಕ್‌ನನ್ನು ಮಹಲಿಗೆ ಕರತರುವುದಾಗಿ, ಅವನಿಂದಲೇ ಪ್ರಮಾಣಮಾಡಿಸುವುದಾಗಿ ಹುಚ್ಚಿಯು ಭರವಸೆಕೊಟ್ಟು, ಮಹಲಿನಿಂದ ತೆರಳಿದಳು.

ಫಾತಿಮಳು ಸಹಜವಾಗಿ ವಿಲಾಸಿನಿ! ವಸ್ತ್ರಾಲಂಕಾರಗಳಲ್ಲಿ ಬಲು ಆಶೆ. ತಾನು ತ್ರಿಲೋಕ ಸುಂದರಿಯೆಂದು ಅತಿ ಹೆಮ್ಮೆ. ಸದಾ ಶೃಂಗಾರಪ್ರಿಯಳು ಮಹಮ್ಮದಾಲಿಗೆ ಇದೊಂದು ಸೊಗಸದು. ಆದರೂ ಅವನು ಫಾತಿಮಳನ್ನು ದೇವರಂತೆ ಆರಾಧಿಸುತ್ತಾನೆ. ಅವಳಿಗೆ ಬೇಕಾದ ವಸ್ತ್ರಾಭರಣಗಳನ್ನು ತಂದು ಕೊಡುತ್ತಾನೆ. ಮಹಮ್ಮದಾಲಿಯ ಸರ್ವಸ್ವಕ್ಕೂ, ಅವಳೇ ಸ್ವತಂತ್ರಾಧಿ ಕಾರಿಣಿ. ಫಾತಿಮಳ ಆರಾಧನೆಗಿಂತಲೂ ಮಿಗಿಲಾದುದು ಅವನಿಗೆ ಯಾವುದೂ ಇಲ್ಲ. ಫಾತಿಮಳು ಎಷ್ಟು ಸೊಗಸುಗಾತಿಯೋ, ಅಷ್ಟೇ ಗುಣವತಿ, ಆ ಗುಣ ಲುಬ್ಧನಾಗಿ ಮಹಮ್ಮದಾಲಿಯು—ಫಾತಿಮಳಿಗೆ ಅಷ್ಟು ಒಲಿದಿದ್ದಾನೆ. ಆದರೆ ಮಹಮ್ಮದಾಲಿಯು — ಸದಾ ರಾಜಕಾರಣಸಕ್ತನಾಗಿರುತ್ತಾನೆ. ಯುದ್ಧದಮೇಲೆ ಯುದ್ಧಗಳು. ಯುದ್ಧಕ್ಕೆ ಹೋದರೆ ಗೆದ್ದು ಬರಬೇಕು. ಇಲ್ಲವೇ ರಣಕ್ಷೇತ್ರದಲ್ಲಿ ಪ್ರಾಣವನ್ನೊಪ್ಪಿಸಬೇಕು. ಇದೇ ಅವನ ಸಿದ್ಧಾಂತ! ಎಷ್ಟೋ ಸಂದರ್ಭದಲ್ಲಿ ಯುದ್ಧವು ಪ್ರಾಪ್ತವಾದಾಗ: ಹೈದರಲ್ಲೀಖಾನರೂ, ಟಿಪ್ಪೂಸುಲ್ತಾನರೂ, ಶತೃಗಳೊಡನೆ ಸಂಧಿಮಾಡಿಕೊಂಡಾಗ ಮಹಮ್ಮದಾ ಲಿಯು ಖತಿಗೊಂಡ ಗಜದಂತೆ ಉನ್ಮತ್ತನಾಗುತ್ತಿದ್ದನು. ಆಗ ಅವನನ್ನು ಸಮಾಧಾನಮಾಡುವುದು ನವಾಬರಿಗೆ ಬಹು ಪ್ರಯಾಸವಾಗುತ್ತಿತ್ತು. ಈ ಯುದ್ಧ ನಿಗ್ರಹಗಳಲ್ಲಿ ಫಾತಿಮಳಿಗೆ ಪತಿಸಾನ್ನಿಧ್ಯವಿಲ್ಲ. ಅದರಿಂದ ಅವಳು ಬಹಳ ಖಿನ್ನಳಾಗುತ್ತಿದ್ದಳು. ಯುದ್ಧವನ್ನು ಕಲಿಯಬೇಕೆಂದು ಅವಳಿಗೆ ಬಹಳ ಆಶೆ ಇತ್ತು. ಯುದ್ಧ ವಿದ್ಯೆಯು ಬಂದಿದ್ದರೆ ತಾನೂ ಮಹಮ್ಮದಾಲಿ

ಯುವರೊಡನೆ ಸಮಸಮವಾಗಿ ಯುದ್ಧಕ್ಕೆ ಹೋಗಬಹುದೆಂದೂ; ಅಲ್ಲಿ ಅವರ ಸಾನ್ನಿಧ್ಯದಲ್ಲಿರಬಹುದೆಂದೂ ಅವಳ ಕಲ್ಪನೆ. ತನಗೂ ಯುದ್ಧವನ್ನೂ ಕಲಿಸಿ ಕೊಡಬೇಕೆಂದು ಎಷ್ಟೋಸಾರಿ ಗಂಡನನ್ನು ಪ್ರಾರ್ಥಿಸುತ್ತಿದ್ದಳು. ಮಹಮ್ಮ ದಾಲಿಯೂ ಎಷ್ಟೋ ಪ್ರಯತ್ನಪಟ್ಟನು. ಫಲಿಸಲಿಲ್ಲ. ಅವನು ವಿಲಾಸಿನಿ ಯಾದ ಫಾತಿಮಳಿಗೆ ಯುದ್ಧಕ್ಷೇತ್ರವು ಹಿತವಾಗುವುದಿಲ್ಲವೆಂದು ಹೇಳುತ್ತಿ ದ್ದನು. ಕೋಮಲವಾದ ಪುಷ್ಪವು ಬಾಣದ ಕಿಡಿಯಾಗುವುದಿಲ್ಲವೆಂದು ಫಾತಿ ಮಳನ್ನು ಹಾಸ್ಯಮಾಡುತ್ತಿದ್ದನು. ವಿಲಾಸಿನಿಯಾದ ಫಾತಿಮಳು, ವಿಹರ ವನ್ನು ಸಹಿಸಲಾರದೇ ಮಧ್ಯಪಾನವನ್ನು ಕಲಿತಿದ್ದಳು. ಅದರಲ್ಲಿ ಗೋಪ್ಯ ವೇನೂ ಇರಲಿಲ್ಲ. ಅದು ಮಹಮ್ಮದಾಲಿಗೆ ಗೊತ್ತಿತ್ತು. ಅವನು ಫಾತಿಮಳ ಮೇಲಿದ್ದ ಪ್ರೀತಿಯಿಂದ ಅದನ್ನು ನಿರೋಧಿಸುತ್ತಿರಲಿಲ್ಲ. ಮಧ್ಯವನ್ನು ನಿಷೇ ಧಿಸಿದರೆ ಆ ಪುಷ್ಪವು ಬಾಡಿಹೋಗುವುದೆಂದು ಅವನು ಅಂದುಕೊಳ್ಳುತ್ತಿದ್ದನು. ಆದರೆ ಅಲ್ಲಾನ ರಾಜ್ಯದಲ್ಲಿ ಫಾತಿಮಳು ಪಾಪಿಯೆಂದು ಕಳವಳಪಡುತ್ತಿದ್ದನು. ಅದಕ್ಕಾಗಿ ತಾನೇ ಅಲ್ಲಾನಲ್ಲಿ ಪ್ರಾರ್ಥನೆ ಮಾಡುತ್ತಿದ್ದನು. ಅವಳ ಪತಿವ್ರತಾ ಧರ್ಮವು ಅಲ್ಲಾನ ರಾಜ್ಯದಲ್ಲಿಯೂ ಅವಳಿಗೆ ಸುಖವನ್ನೇ ಮಾಡುತ್ತಾರೆಂದು ನಂಬುತ್ತಿದ್ದನು. ಹೀಗೆ ಪತಿಪತ್ನಿಯರ ಮನೋವೃತ್ತಿಯು ಭಿನ್ನಭಿನ್ನವಾ ಗಿದ್ದರೂ ಮನಸ್ಸು ಏಕೀಭವಿಸಿತ್ತು. ಒಂದೇ ಗುಚ್ಛದ ಎರಡು ಪುಷ್ಪಗಳು ಒಂದು ಕೆಂಪು, ಮತ್ತೊಂದು ಬಿಳಪು, ಫಾತೀಮಳು ಸಂಗೀತಪ್ರಿಯೆ, ಸಂಗೀತ ದಲ್ಲಿ ಎತ್ತಿದ ಕೈ, ಅವಳಿರುವ ವಾತಾವರಣವೆಲ್ಲವೂ ಗಾನಸೌರಭ್ಯಮಯ ವಾದುದು. ಅವಳೊಬ್ಬ ಹಾಡುವ ಪಾಡುವ ನಕ್ಕು ನಲಿಯುವ ರಾಜಹಂಸಿ ಇಂದು ವ್ಯಾಧನ ಅಲುಗು ನೆಟ್ಟು ಪರಿತಪಿಸುತ್ತಿರುವ ಮರಾಳಿ. ಬಂಧನದಲ್ಲಿ ರುವ ಮಹಮ್ಮದಾಲಿಯ ಚಿಂತೆಯು ಅವಳನ್ನು ಕಬಳಿಸಿತ್ತು. ಇಂದು ಅವಳು ದುಃಖಿಸಿ, ದಡವನ್ನು ಕಾಣದ ದುಃಖಸಾಗರದಲ್ಲಿ ತೇಲುತ್ತಿರುವ ಸುಂದರ ಪದ್ಮ, ಈ ದುಃಖದಿಂದ ಪಾರುಮಾಡಬಲ್ಲವರಾರು? ಹುಚ್ಚಿಯು ಸಂಧ್ಯಾಕಾಲ ಮೀರ್ ಸಾದಕನನ್ನು ಕರತರುವುದಾಗಿ, ಅವನಿಂದ ವಾಗ್ದಾನ ಮಾಡಿಸುವುದಾಗಿ ಹೇಳಿ ಹೋಗಿದ್ದಾಳೆ. ಮೀರ್ ಸಾದಕನು ಈ ಕೆಲಸವನ್ನು ಮಾಡಬಲ್ಲ, ದಿವಾನರಿಗೂ ಅವನಮೇಲೆ ಬಲು ವಿಶ್ವಾಸ. ಅವನು ಬಂದರೆ, ನಿಜವಾದ ಸಮಾಚಾರವೆಲ್ಲವೂ ತಿಳಿಯುತ್ತೆ. ಮಹಮ್ಮದಾಲಿಯವರು

ಸಾಕ್ಷಾತ್ತಾಗಿ ಯಾವ ಅಪರಾಧವನ್ನೂ ಮಾಡಿರುವುದಿಲ್ಲ. ಯಾರೋ ಅವರ ದೂರುಹೇಳಿ ಸುಲ್ತಾನರನ್ನು ರೇಗಿಸಿರಬಹುದು. ನಿಜಾಂಶವನ್ನು ಹೇಳಿ ಒಪ್ಪಿಸಿ, ಮಹಮ್ಮದಾಲಿಯವರನ್ನು ಬಂಧಮುಕ್ತರನ್ನಾಗಿ ಮಾಡುವುದಕ್ಕೆ ಮಾರ್ಸಾದ ಕನೇ ಸರಿಯಾದ ಮನುಷ್ಯ. ಹೀಗೆಲ್ಲ ಗುಣಾಕಾರ ಹಾಕುತ್ತಿದ್ದಳು. ಸೂರ್ಯಾಸ್ತಮಾನವಾಯಿತು. ಹುಚ್ಚಿಯ ಸದ್ದೇ ಇಲ್ಲ. ಹುಚ್ಚಿಯು ಸುಳ್ಳು ಹೇಳಿದಳೇ ಎಂಬ ಶಂಕೆಯು ಬಂತು. ಮಾರ್ಸಾದಕನೇ ಇದು ಸಾಧ್ಯವಾಗದ ಕೆಲಸವೆಂದು ನಿರಾಕರಿಸಿದನೇ ಎಂಬ ಭಯವು ಬಂತು. ಒಂದರಮೇಲೊಂದು ಆಶೆ ನಿರಾಶೆಗಳ ಚಿಂತೆಯು ಬಂದು ಫಾತಿಮಳ ಮನಸ್ಸು ಡೋಲಾಯಮಾನ ವಾಗಿತ್ತು. ಮನಸ್ಸಿನ ಹೊರೆಯನ್ನು ಸಹಿಸಲಾರದೇ ಮದ್ಯಪಾತ್ರೆಯ ಹತ್ತಿರ ಹೋಗಿ ಸ್ವಲ್ಪ ಮದಿರೆಯನ್ನು ಪಾನಮಾಡಿದಳು. ಸಮಾಧಾನವಾಗಲಿಲ್ಲ ಪುನಃ ಪಾನಮಾಡಿದಳು. ಮೇಲೆಮೇಲೆ ಪಾನಮಾಡಿ ಪಾತ್ರೆಯು ಬರಿದಾಯಿತು. ಮುಂದಿನ ಹಜಾರಕ್ಕೆ ಬಂದಳು. ದೀಪಗಳು ಜ್ವಲಿಸುತ್ತಿದ್ದುವು. ಹೈದರಲ್ಲೀ ಖಾನರ ಪಟದ ಹತ್ತಿರಹೋಗಿ ನಿಂತು, ಅಳಲಾರಂಭಿಸಿದಳು. ಎಷ್ಟು ಅತ್ತರೂ ದುಃಖವು ಮುಗಿಯಲೇ ಇಲ್ಲ. ಪುನಃ ಅಂತಃಪುರದ ಮಹಲಿಗೆ ಹೋಗಿ ತನ್ನ ವಿಲಾಸಗೃಹಕ್ಕೆ ಹೋದಳು. ಅಲ್ಲಿ ದೊಡ್ಡ ನಿಲುಗನ್ನಡಿಯ ಮುಂದೆ ನಿಂತಳು. ತನ್ನ ಅಸ್ತವ್ಯಸ್ತವಾಗಿದ್ದ ವಸ್ತ್ರಗಳನ್ನು ನೋಡಿದಳು. ದುಃಖದಿಂದ ಕೋಪೋದ್ರಿಕ್ತವಾದ ತನ್ನ ಮುಖವನ್ನು ನೋಡಿಕೊಂಡಳು. ಬಿಚ್ಚಿ ಹಾರಾಡುತ್ತಿದ್ದ ತನ್ನ ಕೇಶಧಾಮವನ್ನು ಹಿಡಿದು ಅಸ್ತವ್ಯಸ್ತವಾಗಿ ಕೊರಳಿಗೆ ಸುತ್ತಿಕೊಂಡಳು. ಕಟಕಟನೆ ಹಲ್ಲು ಕಡಿದಳು. ಪುನಃ ಸೇವಕಳನ್ನು ಕರೆದಳು ಮದ್ಯದ ಪಾತ್ರೆಯ ಕಡೆಗೆ ಕಣ್ಣು ತೋರಿಸಿ ನೋಡು ಎಂದಳು. ಆ ಸೇವಕಳು ಓಡಿಹೋಗಿ ಆ ಪಾತ್ರೆಯಲ್ಲಿ ತುಂಬಾ ಘಮಘಮಿಸುವ ಮದ್ಯ ವನ್ನು ತಂದಿಟ್ಟಳು. ಫಾತಿಮಳು ಬಟ್ಟಲಿಗೆ ಬಗ್ಗಿಸಿಕೊಂಡು ಪುನಃ ಕುಡಿದಳು. ತೂರಾಡುತ್ತಾ ಮಂಚದ ಮೇಲೆ ಹೋಗಿ ಕುಳಿತು ಹಾಡಲಾರಂಭಿಸಿದಳು. ಆದರಿಂದಲೂ, ಶಾಂತಿಯಾಗಲಿಲ್ಲ. ಅಳಲಾರಂಭಿಸಿದಳು. ಅಳುತ್ತ ಮಲಗಿದಳು.

# ದಿವಾನರ ಮಹಲಿನಲ್ಲಿ.

ಹುಚ್ಚಿಯು ದಿವಾನ್‌ರ ಮನೆಯಿಂದ ಹೊರಟಳು--ಮಿರ್ಸಾದಕನ ಮನೆಗೆ ಹೊರಟಳು. ಮಿರ್ಸಾದಕನ ಮನೆಯು ದರಿಯಾದವಲತ್ತಿನ ಎಡ ಭಾಗದಲ್ಲಿ ಸುಮಾರು ಮುನ್ನೂರು ನಾನ್ನೂರು ಬಾರುಗಳ ದೂರದಲ್ಲಿದೆ. ಅಲ್ಲಿಂದ ಒಂದು ದೊಡ್ಡ ತೋಪನ್ನು ದಾಟಿಹೋಗಬೇಕು. ಕಾವೇರಿಯ ದಂಡೆಯಮೇಲೆ ಬಲು ಅಂದವಾಗಿ ಕಟ್ಟಲ್ಪಟ್ಟ ಚಿಕ್ಕದಾದ ಕಟ್ಟಡ. ಅಲ್ಲೇ ಮಿರ್ಸಾದಕನು ಇರುವುದು. ಅವನಿಗೆ ಕೋಟೆಯಲ್ಲಿ ಒಂದು ಮನೆ ಇದೆ. ಅಲ್ಲಿ ಅವನು ಯಾವಾಗಲೂ ಇರುವುದೇ ಇಲ್ಲ. ಕಾವೇರಿದಂಡೆಯಲ್ಲಿರುವ ಈ ಮನೆಗೆ ಮೋತೀಮಹಲ್ ಎಂದು ಹೆಸರು. ಅದು ಅವನ ವಿಲಾಸಗೃಹ. ಅವನ ಪಾಶದಲ್ಲಿ ಬಿದ್ದು ಎಷ್ಟೋ ವಿಲಾಸಿನಿಯರು ಅಲ್ಲಿ ತಮ್ಮ ಸರ್ವಸ್ವವನ್ನು ನೀಗಿದಾರೆ, ಹುಚ್ಚಿ ಸಾವಿತ್ರಿಯು ಮಹಲಿನ ಅಧಿಷ್ಠಾತ್ರಿ. ಅವಳ ಕಥೆಯು ಬಲು ದೊಡ್ಡದು. ನಿಜವಾಗಿ ಅವಳು ಹುಚ್ಚಿಯಲ್ಲ. ಸ್ವೇಚ್ಛಾಚಾರಕ್ಕೋಸ್ಕರ ಗೃಹತ್ಯಾಗಮಾಡಿ, ಹುಚ್ಚಿಯು ಸೊಗು ಹಾಕಿದ್ದಾಳೆ. ಅವಳು ಮಿರ್ ಸಾಧಕನ ಪ್ರಣಯಿನಿ ಅವಳ ಕೋಮಲಕಂಠ ಜಾಜ್ವಲ್ಯಮಾನವಾದ ರೂಪ ದಲ್ಲಿ ಮಗ್ನನಾಗಿ ಮಿರ್ಸಾಧಕನು—ಅವಳ ದಾಸಾನುದಾಸನಾಗಿ ವರ್ತಿಸು ತ್ತಾನೆ. ಮಿರ್ಸಾಧಕನ ಪ್ರಣಯದಲ್ಲಿ ಮಗ್ನಳಾದ ಸಾವಿತ್ರಿಯು ಅವನಿ ಗಾಗಿ ಪ್ರಾಣಕೊಡಬಲ್ಲಳು. ಆದರೆ ಮಿರ್ಸಾಧಕನ ಪ್ರಣಯಿನಿಯಾಗಿ ಅವ ನೊಡನೆ ಭೋಗಭಾಗದಲ್ಲಿ ಮುಳುಗಿರಲು ಒಪ್ಪಳು. ಅವಳು, ಎಲ್ಲ ಕಡೆಯೂ ಸುತ್ತುತ್ತಿರಬೇಕು. ರಾಜಕಾರ್ಯಗಳಲ್ಲಿ ಮಿರ್ಸಾಧಕನಿಗೆ ಎಷ್ಟೋ ಸಹಾಯ ಮಾಡಿದ್ದಾಳೆ. ಎಷ್ಟೋ ವಿಶ್ವಾಸಘಾತುಕರನ್ನು ಪತ್ತೇಮಾಡಿ ಕೊಟ್ಟಿದ್ದಾಳೆ, ಅವಳನ್ನು ಬೀದಿಯಲ್ಲಿ ನೋಡಿದರೆ ಹುಚ್ಚಿ ಹುಚ್ಚಿ! ಶುದ್ಧ ಹುಚ್ಚಿ ಯಾರೂ ಅವಳ ತಂಟೆಗೆ ಹೋಗುವುದಿಲ್ಲ. ಶ್ರೀರಂಗಪಟ್ಟಣದಲ್ಲಿ ಕಾಮುಕರಾದ ಪೋಕರಿಗಳೇನೂ ಕಡಿಮೆ ಇರಲಿಲ್ಲ. ಆ ಹುಚ್ಚು ವೇಶ ದಲ್ಲಿಯೂ ಸುಂದರವಾದ ಅವಳ ಮುಖವನ್ನು ನೋಡಿ ಎಷ್ಟೋ ಮಂದಿ ಎಷ್ಟೋ ಸನ್ನಾಹಗಳನ್ನು ಮಾಡಿದ್ದಾರೆ, ಅಷ್ಟು ಗಂಡಾಂತರಗಳಿಂದಲೂ, ಸುಲಭವಾಗಿ ಪಾರಾಗಿದ್ದಾಳೆ ಹುಚ್ಚು ಸಾವಿತ್ರಿ. ಹುಚ್ಚಿಯು ಸಂಧ್ಯಾಕಾಲ

ದಿವಾನ್‌ರ ಮನೆಯಿಂದ ಹೊರಟಳು. ಹಾಡುತ್ತಾ ಹಾಡುತ್ತಾ ಮೋತೀ ಮಹಲಿಗೆ ಬಂದಳು. ಅಲ್ಲಿ ಎಲ್ಲಕಡೆಯೂ ಹುಡುಕಿದಳು. ಎಲ್ಲಿಯೂ ಮೀರ್‌ಸಾಧಕನಿರಲಿಲ್ಲ. ತನ್ನ ಅಂತಃಗೃಹಕ್ಕೆ ಹೋದಳು. ಹುಚ್ಚು ವೇಶವನ್ನೆಲ್ಲಾ ತೆಗೆದಿಟ್ಟು ಸ್ನಾನಮಾಡಿದಳು. ಪಾರಶೀದೇಶದ ಸೊಗಸಾದ ಹಸರು ರೇಷ್ಮೆಯ ಪತ್ತಲವನ್ನುಟ್ಟಳು. ಬಿಳಿಯ ಕಂಚುಕವನ್ನು ತೊಟ್ಟಳು ಕೊರಳಿಗೆ ಮುಕ್ತಾಹಾರವನ್ನು ಧರಿಸಿದಳು ತಲೆಗೂದಲನ್ನು ಹೆರಳು ಕಟ್ಟಿದಳು. ತೋಟದಿಂದ ಹೂವುತಂದು ಮುಡಿದುಕೊಂಡಳು. ಜರತಾರಿಯ ಮೇಲ್ಹೊದಿಕೆ ಪನ್ನು ಹೊದ್ದಳು. ಕನ್ನಡಿಯ ಮುಂದೆ ನಿಂತು ತನ್ನ ಸೌಂದರ್ಯವನ್ನು ನೋಡಿಕೊಂಡಳು. ಅವಳಿಗೆ ನಾಚಿಕೆಯಾಯಿತು. ನಕ್ಕಳು. ಆ ನಗುವು ಅಳಸಿಹೋಗುವಷ್ಟರಲ್ಲಿ ಹಿಂದಿನಿಂದ ಯಾರೋ ಬಂದು ಬಿಗಿದಪ್ಪಿದರು. ಸ್ಪರ್ಶದಿಂದಲೇ ಅವನು ಮೀರ್‌ಸಾಧಕನೆಂದು ಸಾವಿತ್ರಿಯು ತಿಳಿದುಕೊಂಡು ಮೀರ್‌ಸಾದಕನನ್ನು ಆಲಿಂಗಿಸಿ ಚುಂಬಿಸಿದಳು, ಮೀರ್‌ಸಾಧಕನು ಆ ಮೋಹಿನಿಯ ಬಾಹುಬಂಧನದಲ್ಲಿ ಆ ಚುಂಬನಸುಧೆಯಲ್ಲಿ ಕರಣಶೂನ್ಯನಾಗಿ ಹೋಗಿದ್ದಾನೆ. ಅವನ ಮನಸ್ಸಿನಲ್ಲಿ ಈ ಜಗತ್ತೆ ಅಸ್ತವಾಗಿಹೋಗಿದೆ. ತನ್ನನ್ನೇ ಮರೆತಿದಾನೆ. ಅವನ ಮುಂದಿರುವ ಆ ದೇವಿಪ್ರತಿಮೆಯೊಂದೇ ಎಲ್ಲವನ್ನೂ ಆವರಿಸಿದೆ. ಅವರಿಬ್ಬರೂ ಒಬ್ಬರ ಭುಜದಮೇಲೆ ಒಬ್ಬರು ಕೈಹಾಕಿಕೊಂಡು ಸರಸವಾಡುತ್ತಾ ಮತ್ತೊಂದು ಕೋಣೆಗೆ ಬಂದರು. ಅಲ್ಲಿ ಏಕಾಸನದಲ್ಲಿ ಒಬ್ಬರನ್ನೊಬ್ಬರು ಕುಳ್ಳಿರಿಸಿಕೊಂಡು ಇಬ್ಬರೂ ಕುಳಿತರು. ಮೀರ್‌ಸಾಧಕನು ಸಾವಿತ್ರಿ, ಇಂದು ನೀನು ಕ್ಷೀರಸಾಗರದಿಂದ ಎದ್ದು ಬಂದ ಲಕ್ಷ್ಮಿಯಂತೆ ವಿರಾಜಿಸುತ್ತಿರುವೆ. ಎಂದೆಂದಿಗೂ ನೀನು ಹೀಗೆಯೇ ಇರಬೇಕು. ನಿನ್ನ ಹುಚ್ಚಿಯ ವೇಷವು ಇಂದಿಗೆ ಕೊನೆ ಮುಟ್ಟಲಿ, ನಡೆ. ಇಂದೇ ಮಶೀದಿಗೆ ಹೋಗಿ ನಾವಿಬ್ಬರೂ ಮದುವೆಯಾಗೋಣ ಎಂದನು. ಸಾವಿತ್ರಿಯು ನನ್ನ ಹುಚ್ಚುವೇಷವಿಲ್ಲದಿದ್ದರೆ ಶ್ರೀರಂಗಪಟ್ಟಣದ ರಾಜಕಾರಣವು ಕುರುಡಾಗಿ ಹೋದೀತು.

ರಾಜಕಾರಣವು ಯಾರಿಗೆ ಬೇಕು. ಜಗದೀಶನು ಮಾನವರನ್ನು ಸೃಷ್ಟಿಸಿರುವುದು ರಾಜಕಾರಣಕ್ಕಾಗಿ ಅಲ್ಲ. ಸುಖಸಾಮ್ರಾಜ್ಯವನ್ನನುಭವಿಸುವುದಕ್ಕೆ ವಿಲಾಸಿಗಳನ್ನು ನಿರ್ಮಾಣ ಮಾಡಿದ್ದಾನೆ. ಅವನ ಆಟದ ಪಾರಿವಾಳಗಳು ನಾವು.

ಸಾವಿತ್ರಿಯು ಫಕ್ಕನೆ ನಕ್ಕು, ಆಹಾ ಎಂತಹ ತತ್ವಜ್ಞಾನಿ, ಮಿಾರ್ ಸಾದಕ್, ನೀನು ದೇವರನ್ನು ನಂಬುವೆಯಾ ? ಮಾತಿಗಾಗಿ ದೇವರನ್ನು ಕರೆತರುವೆ, ಮೋಹಕ್ಕಾಗಿ ದೇವರನ್ನು ಅಲ್ಲಗಳೆಯುವೆ. ಕಾಮತಂತ್ರದ ಆರಾಧ್ಯ ದೇವತೆಗಳಾದ ಮದಿರಾಮಾನಿನಿಗಳ ಹೊರತು ಅನ್ಯ ದೇವರು ನಿನಗುಂಟೆ ?

ಸಾವಿತ್ರೀ, ಸಂತೋಷದಲ್ಲಿರುವ ನನ್ನ ಮನಸನ್ನು ಒಡೆದು ಹಾಕ ಬೇಡ, ನೀನು ಇಂದು ನನ್ನನ್ನು ಮದುವೆಯಾದರೆ ನಾನು ದೇವರನ್ನು ನಂಬುವೆನು.

ನನಗಾಗಿ ನೀನು ದೇವರನ್ನು ನಂಬಿದರೆ ಅದೇನು ಸುಳ್ಳುದೇವರು. ನಾನು ಎಷ್ಟೋ ದಿವಸಗಳಿಂದ ನಿನ್ನವಳೆ. ಇಂದು ಹೊಸಬಳೇ ನಾನು ? ಅಂದಿ ನಿಂದ ನಂಬದ ದೇವರನ್ನು ಇಂಥು ನೀನು ನಂಬುವೆಯ ; ನಿನ್ನಂಥ ಕಾಮಾಂಧನಾದ ಹರಾಂ ನಂಬಿದರೆ ತಾನೇ ಆ ದೇವರಿಗಾಗುವ ಲಾಭವೇನು ?

ಹಾಳಾದ ದೇವರ ಮಾತುಬೇಡ, ಹಾಗಾದರೆ ನೀನೇಕೆ ಈ ದಿವ್ಯ ಸುಂದರ ರೂಪದಿಂದ ನನ್ನನ್ನು ಹುಚ್ಚನನ್ನಾಗಿ ಮಾಡುತ್ತಿರುವೆ ?

ಕೇಳು ಸಿದ್ದಿಕ್, ನಾನು ಈ ವೇಷಭೂಷಣಗನ್ನು ಧಿಕ್ಕರಿಸುತ್ತೇನೆ. ನಿನ್ನಲ್ಲಿ ಮೋಹಗೊಂಡು ಗೃಹತ್ಯಾಗಮಾಡಿದಂದಿನಿಂದ ಇದುವರೆಗೆ—ಇಂಥಾ ವಸ್ತ್ರಾ ಭರಣಗಳನ್ನು ತೊಟ್ಟಿರಲಿಲ್ಲ. ಇಂದು ನಿನ್ನನ್ನು ತ್ಯಾಗಮಾಡಬೇಕೆಂದು ಸಂಕಲ್ಪಿಸಿದ್ದೇನೆ.

ಸಾವಿತ್ರಿ, ನನ್ನನ್ನೇಕೆ ತ್ಯಾಗಮಾಡುವೆ ?

ಹುಚ್ಚ, ನಿನ್ನನ್ನು ತ್ಯಾಗಮಾಡುವುದಕ್ಕೆ ನಾನಾರು ? ನಾನು ಇಹ ಲೋಕವನ್ನೇ ತ್ಯಾಗಮಾಡುತ್ತೇನೆ. ನಾನೊಂದು ಸಾಹಸಕಾರ್ಯದಲ್ಲಿ ತೊಡಗಿದ್ದೇನೆ. ಸುಲ್ತಾನರು ಮುಹಮ್ಮದಾಲಿಯವರನ್ನು ಬಂಧನದಲ್ಲಿಟ್ಟಿ ದ್ದಾರಂತೆ. ಅವರನ್ನು ಬಿಡಿಸುವುದಕ್ಕೆ ನಾನು ನಾಳೆದಿನ ಹೊರಡುತ್ತೇನೆ.

ಅವರ ಅಪರಾಧವು ಕ್ಷಮಾತೀತವಾದುದು. ನೀನು ಅವರನ್ನು ಬಿಡಿಸಲಾರೆ.

ನಾನು ಪ್ರಯತ್ನಮಾಡುತ್ತೇನೆ. ನನ್ನ ಪ್ರಯತ್ನಗಳೆಲ್ಲಾ ವಿಫಲವಾದರೆ—ಟಿಪ್ಪೂಸುಲ್ತಾನರ ಪ್ರಾಣಾಪಹಾರ ಮಾಡುತ್ತೇನೆ.

ಮೀರ್‌ಸಾದಕನು ನಗುತ್ತಾ ಈಗ ನೀನು ನಿಜದಾದ ಹುಚ್ಚಿ. ನೀನು ಮುಹಮ್ಮದಾಲಿಯವರನ್ನು ಬಿಡಿಸಲಾರೆ ಸುಲ್ತಾನರ ನಖವನ್ನು ತೊಡಲಾರೆ, ಹುಚ್ಚಿ ಎಂತಹ ಅಸಮಸಾಹಸದ ಮಾತನಾಡುವೆ?

ನಾನು ಮುಹಮ್ಮದಾಲಿಯವರನ್ನು ಬಂಧಮುಕ್ತಮಾಡಿಸುವುದಾಗಿ, ಫಾತಿಮಾಬೇಗಂರವರಿಗೆ ವಾಗ್ದಾನಮಾಡಿ ಬಂದಿದ್ದೇನೆ.

ಯಾವ ಭರವಸೆಯಮೇಲೆ ಈ ವಾಗ್ದಾನ ಮಾಡಿದೆ ?

ನಿನ್ನ ಭರವಸೆಯಮೇಲೆ !

ನಾನೇಕೆ ಆ ಹಾವಿನ ಹುತ್ತದಲ್ಲಿ ಕೈಹಾಕಲಿ.

ನೀನು. ನೀನು ? ನಿನ್ನನ್ನು ಬಂಧನದಿಂದ ಬಿಡಿಸಿದವರಾರು ?
ನೀನು ?

ನಾನಲ್ಲ, ಮಹಾನುಭಾವರಾದ ಮುಹಮ್ಮದಾಲಿಯವರು.

ನೀನು ಅವರನ್ನು ಬಿಡಿಸಲಾಗದಿದ್ದರೆ ಏನು ಮಾಡುತ್ತಿ. ನಾನೂ ಫಾತೀಮಳೂ ಒಬ್ಬರ ಶರಗಿಗೆ ಒಬ್ಬರು ಗಂಟುಹಾಕಿಕೊಂಡು, ಒಬ್ಬರ ಕೊರಳನ್ನು ಒಬ್ಬರು ಕಟ್ಟಿಕೊಂಡು, ಈ ಕಾವೇರಿಯ ಮಡುವಿನಲ್ಲಿ ಧುಮುಕುತ್ತೇವೆ.

ಬೇಡ, ಸಾವಿತ್ರಿ, ನಿನಗಾಗಿ ನಾನು ಏನು ಬೇಕಾದರೂ ಮಾಡುತ್ತೇನೇ. ಮುಹಮ್ಮದಾಲಿಯವರನ್ನು ಬಿಡಿಸಲು ನನ್ನ ಪ್ರಾಣವನ್ನೊಪ್ಪಿಸುತ್ತೇನೆ. ಇಷ್ಟಾದರೂ ಆ ಕಾರ್ಯವು ಸಫಲವಾಗದಿದ್ದರೆ............?

ಸಫಲವಾಗದಿದ್ದರೆ ನೀನು ನಮ್ಮೊಡನೆ ಸಾಯಬೇಕು.

ನಾನು ಸಾಯುವುದೂ ಇಲ್ಲ. ನಿಮ್ಮಿಬ್ಬರನ್ನು ಸಾಯಲು ಬಿಡುವುದೂ ಇಲ್ಲ. ಸಾವಿತ್ರಿ, ಇದೇನು ಸಾಯುವ ಹುಚ್ಚು. ಸತ್ತರೆ ದೇವರು ಇಂಥ ಸುಖ ಸೌಭಾಗ್ಯಗಳನ್ನು ಅನುಭವಿಸುವ ಜನ್ಮವನ್ನು ಕೊಡುವುದೇ ಇಲ್ಲ. ಅವನು ಶುದ್ಧ ವಂಚಕ. ಅದರಿಂದಲೇ ನಾನು ದೇವರನ್ನು ದ್ವೇಷಿಸುವುದು.

ದೇವರನ್ನೇಕೆ ದೂಷಿಸುತ್ತಿ, ನೀನು ಸಾಯಲು ಅಂಜುವ ಹೇಡಿ. ಹಾಗಿಲ್ಲದಿದ್ದರೆ ನೀನೊಬ್ಬ ಮಹಾಪುರುಷನೇ ಆಗುತ್ತಿದ್ದೆ. ಅದಿರಲಿ, ನೀನು ನನಗೆ ವಾಗ್ದಾನಮಾಡಿದ್ದಿ. ನಡೆ. ದಿವಾನರ ಮಹಲಿಗೆ ಹೋಗೋಣ. ಈ ವಾಗ್ದಾನವನ್ನು ಘಾತಿಮಾಬೇಗಂರವರಲ್ಲಿ ನೀನು ಮಾಡಬೇಕು. ವಾಗ್ದಾನ ಮಾಡಿದರೆ—ಮಾಡಿದರೆ ? ನಾನು ನಿನ್ನನ್ನು ಮದುವೆಮಾಡಿಕೊಳ್ಳುತ್ತೇನೆ. ಅಂದಿನಿಂದ—ನಾನು ನಿನ್ನ ಧರ್ಮಪತ್ನಿ, ಮೋತಿಬಿ ನಾನು ಹುಚ್ಚಿ ಸಾವಿತ್ರಿ ಯಲ್ಲ.

ಎಂದು ಹೇಳಿ-ಮೀರ್‌ಸಾಧಕನನ್ನು ಬಿಗಿದಪ್ಪಿದಳು. ಅವರಿಬ್ಬರು ಎಷ್ಟೋ ಹೊತ್ತು ಸುಖಮಗ್ನರಾಗಿ ಕಳೆದರು. ಸಾವಿತ್ರಿಯು ಮಧ್ಯವನ್ನು ತಂದಳು. ಮೀರಾಸಾದಕನು ಚಿನ್ನ ಬಟ್ಟಲಿನಲ್ಲಿದ್ದ ಮಧ್ಯವನ್ನು ಸ್ವಲ್ಪ ಕುಡಿದನು. ಸಾವಿತ್ರಿಯ ತುಟಿಗಳ ಹತ್ತಿರ ಆ ಬಟ್ಟಲನ್ನು ಹಿಡಿದನು. ಅವಳು ಸ್ವಲ್ಪ ಕುಡಿದಳು ಪುನಃ ಅದನ್ನು ಮೀರ್‌ಸಾದಕನು ಕುಡಿದನು. ಸಾವಿತ್ರಿಯ ಅಧರಾಮೃತದಿಂದ ಕೂಡಿದ ಆ ಮದಿರೆಯು ಅವನಿಗೆ ಹೊಸ ರುಚಿಯನ್ನು ಸೂಸುತ್ತಿತ್ತು. ಪಾನ ಮಾಡುತ್ತಮಾಡುತ್ತ ಸಾವಿತ್ರಿಯು ಹಾಡಲಾರಂಬಿಸಿದಳು, ಮೀರ್‌ಸಾದಕನು ಅಂದಿನ ಸಾವಿತ್ರಿಯ ಮನೋಹರ ರೂಪ, ಮದಿರಾಪಾನದಿಂದ ಕಿಂಚಿದುನ್ಮತ್ತಸ್ವರೂಪ, ಆ ಸಂಗೀತಲಹರಿಯ ದಿವ್ಯ ಪ್ರಲೋಭಗಳಲ್ಲಿ ಮುಗ್ನನಾಗಿ ಮಂತ್ರಮುಗ್ಧನಂತಾಗಿ ಮೈಮರೆತನು. ಸಾವಿತ್ರಿಯು ಅವನ ಬಾಹುಬಂಧನದಿಂದ ತಪ್ಪಿಸಿಕೊಂಡು ತನ್ನ ಕೋಣೆಗೆ ಹೋದಳು. ಅಲ್ಲಿ ತನ್ನ ಸಹಜವಾದ ಹುಚ್ಚಿಯ ವೇಷವನ್ನು ತೊಟ್ಟಳು. ಮೀರ್‌ಸಾದಕನ ಮುಂದೆ ಬಂದು ನಿಂತು ತಂಬೂರಿಯನ್ನು ಝೇಂಕರಿಸಿದಳು. ಮೀರ್‌ಸಾದಕನು ಕಣ್ಣುಬಿಟ್ಟು ನೋಡುತ್ತಾನೆ. ವಿಕಟಾಕಾರದ ಉನ್ಮತ್ತ ಭೈರವಿ. ಸಾಕ್ಷಾತ್ ಹುಚ್ಚಿ ಸಾವಿತ್ರಿ, ಸಾವಿತ್ರಿಯು "ಮೀರ್‌ಸಾದಕ್ ಏಳು-ದಿವಾನರ ಮಹಲಿಗೆ ಹೋಗೋಣ."

ಈ ನಿಶಿರಾತ್ರಿಯಲ್ಲಿ ದಿವಾನರವರಿಲ್ಲದಿರುವಾಗ ಅವರ ಮಹಲಿಗೆ ಹೋದರೆ-ಒಳಗೆ ಬಿಟ್ಟಾರೆ ?

ಬಿಡದೇ ಏನು. ನಾನು ಕರೆದುಕೊಂಡು ಹೋಗುವವಳು.

ಅಲ್ಲಿಗೆ ಹೋಗಿ ಮಾಡುವುದೇನು ?

ನನಗೆ ಮಾಡಿದ ವಾಗ್ದಾನವನ್ನು ಫಾತಿಮಾಬೇಗಂರವರ ಮುಂದೆ ಪ್ರಮಾಣ ಮಾಡಬೇಕು.

ಪ್ರಮಾಣಕ್ಕೆ ತಪ್ಪಿದರೆ ?

ತಪ್ಪಿದರೆ, ಸೊಂಟದಿಂದ ಕತ್ತಿಯನ್ನು ಹಿರಿದೆತ್ತಿ, ನಿನ್ನ ಶಿರಚ್ಛೇದ.

ವಾಗ್ದಾನವು ಫಲಿಸಿದರೆ.

ಸಾವಿತ್ರಿ ಸ್ವಯಂವರ.

ಮಿರ್‌ಸಾದಕನು ಎದ್ದು ಹೊರಟನು.

ಸಾವಿತ್ರಿಯು ಕೈ ಹಿಡಿದು ನಿಲ್ಲಿಸಿದಳು.

ಹೀಗಲ್ಲ. ದಿವಾನರ ಮಹಲಿಗೆ ಹೋಗುವುದು. ಹೆಂಗಸಿನ ವೇಷದಲ್ಲಿ ಹೋಗಬೇಕು. ಎಂದು ಹೇಳಿ, ಅವನಿಗೆ ಹೆಣ್ಣು ವೇಷವನ್ನು ಹಾಕಿದಳು. ಹಣೆಗೆ ತಿಲಕವನ್ನಿಟ್ಟಳು. ಕೈಲಿ ತಂಬೂರಿಕೊಟ್ಟಳು.

ಕನ್ನಡಿಯ ಮುಂದೆ ನಿಲ್ಲಿಸಿ ನೋಡಿಕೋ, ಎಷ್ಟು ಚೆನ್ನಾಗಿದ್ದೀಯೋ ಈಗ ನೀನು ಬೈರಾಗಿಣಿ ನಾನು ಹಾಡಲಾರಂಭಿಸಿದರೆ ನೀನು ತಂಬೂರಿಯ ಸ್ವರವನ್ನು ಮಿಾಟುತ್ತಿರಬೇಕು. ಎಂದು ಹೇಳಿ ಜೊತೆಯಲ್ಲಿ ಕರದುಕೊಂಡು ಹೊರಟಳು.

ಮಿರ್‌ಸಾದಕನು ಸಾವಿತ್ರಿಯ ನಿರ್ಬಂಧದಿಂದಲೇ ಹೊರಟವನಲ್ಲ. ಅವನಿಗೂ ಒಂದು ಸ್ವಾರ್ಥದ ಅಭಿನಿವೇಶವಿತ್ತು. ಲೋಕೋತ್ತರ ಸೌಂದರ್ಯ ವತಿಯಾದ ಫಾತಿಮಳನ್ನು ಒಂದುಬಾರಿ ನೋಡಬೇಕೆಂಬ ಆಶೆ ಇತ್ತು! ಈ ಸಂಧಾನವು ಸಾಮಾನ್ಯವಾದುದಲ್ಲ. ಫಾತಿಮಳನ್ನು ಕಣ್ಣಾರ ನೋಡುವುದು ಮಾತ್ರವೇ ಅಲ್ಲ! ಅವಳ ಮೈತ್ರಿಯೂ ಲಭಿಸುತ್ತದೆ. ಈ ಅಭಿಸಂಧಿಯಿಂದ ಮಿರ್‌ಸಾದಕನು ಸಾವಿತ್ರಿಯನ್ನು ಅನುಸರಿಸಿಹೋದನು.

ಆ ನಿಶಿರಾತ್ರಿಯಲ್ಲಿ ಅವರಿಬ್ಬರೂ ಶ್ರೀರಂಗಪಟ್ಟಣದ ಕೋಟೆಯನ್ನು ದಿಡ್ಡಿಬಾಗಿಲಿನಿಂದ ಪ್ರವೇಶಿಸಿದರು. ದಿವಾನರ ಮಹಲಿಗೆ ಹೋದರು. ಅಲ್ಲಿ ಪಹರೆಯವರು ಹುಚ್ಚಿಯನ್ನು ತಡೆಯಲಿಲ್ಲ. ಅವಳ ಜೊತೆಗಾರಳನ್ನು ಬಿಡಲು

ಹಿಂದೆಗೆದರು. ಆದರೆ ಹುಚ್ಚಿಯು ಬೇಗಂ ಸಾಹೇಬರ ಅಪ್ಪಣೆಯಾಗಿದೆ ಯೆಂದು ಹೇಳಿ ಕರೆದುಕೊಂಡುಹೋದಳು. ಅವರಿಬ್ಬರೂ ಹೇಗೋ ಪಾರಾಗಿ ಆ ಮಹಲಿನ ಒಳಗೆ ಹೋದರು. ಮಹಡಿಯ ಮೇಲೆ ಹತ್ತಿ ಅಂತಃಪುರದ ಒಳಗೆ ಪ್ರವೇಶಮಾಡಿದರು. ಅಲ್ಲಿ ಫಾತಿಮಾಬೇಗಂರವರ ಚಿಕ್ಕಮನೆಯ ಬಾಗಿಲು ತೆರೆದೇ ಇತ್ತು. ಫಾತಿಮಳು ಅಶಾಂತಚಿತ್ತಳಾಗಿ ಶಥಪಥ ತಿರುಗು ತ್ತಿದ್ದಳು. ಹುಚ್ಚಿಯು ಒಂದಳೆಂದು ಅವಳಿಗೆ ತಿಳಿಯಿತು. ಆದರೆ ಮಾರ್ ಸಾದಕನು ಬಂದಿರುವುದನ್ನು ಅವಳು ಅರಿಯಳು. ಹುಚ್ಚಿಯು ಕೋಣೆ ಯೊಳಗೆ ಕಾಲಿಟ್ಟಳು. ಅವಳ ಜೊತೆಯಲ್ಲಿ ಹೋಗಿದ್ದ ಬೈರಾಗಿಣಿಯು ಹೊರಗೇ ನಿಂತಳು. ಹುಚ್ಚಿಯು ಒಳಗೆ ಹೋಗುತ್ತಲೇ ಫಾತಿಮಳು ಗಾಬರಿ ಯಿಂದ ಸಾವಿತ್ರಿ! ಏನಾಯಿತು? ಮಾರ್‌ಸಾದಕನು ಏನು ಹೇಳುತ್ತಾನೆ? ಎಂದು ಕೇಳಿದಳು.

ಅವನು ದಿರ್ವಾರನ್ನು ಬಿಡುಗಡೆ ಮಾಡಿಸುವ ಭಾರವನ್ನು ಒಪ್ಪಿಕೊಂಡಿ ದಾನೆ. ಅಷ್ಟೇ ಅಲ್ಲ, ಅದರಲ್ಲಿ ವಿಫಲವಾದರೆ ಪ್ರಾಣತ್ಯಾಗ ಮಾಡುವ ಶಪಥ ಮಾಡಿದ್ದಾನೆ.

ಅವನನ್ನು ಕರತರುವುದಾಗಿ ಹೇಳಿಹೋದೆ. ಅವನನ್ನೇಕೆ ಕರತರಲಿಲ್ಲ. ಅವನ ಬಾಯಿಂದಲೇ ಈ ಆಶ್ವಾಸನವನ್ನು ಕೇಳಿದ್ದರೆ ನನಗೆಷ್ಟೋ ಸಮಾಧಾನ ವಾಗುತ್ತಿತ್ತು.

ಬೇಗಂ ಸಾಹೇಬ್! ಈ ನಿಶಿ ರಾತ್ರಿಯಲ್ಲಿ ಪುರುಷನನ್ನು ಅಂತಃಪುರಕ್ಕೆ ಕರತರುವುದೆಂತು? ಜನರು ಏನಂದುಕೊಂಡಾರು?

ಹುಚ್ಚಿ! ಈ ಕಷ್ಟ ಸಮಯದಲ್ಲಿ, ಅಂತಃಪುರವಾದರೂ, ಯುದ್ಧಭೂಮಿ ಯಂತೆಯೇ! ಒಬ್ಬ ಸಹೋದರನ—ಆಪದ್ಬಾಂಧವನ ದರ್ಶನದಿಂದ ಅಂತಃ ಪುರವು ಅಪವಿತ್ರವಾಗುವುದಿಲ್ಲ.

ಹುಚ್ಚಿಯು ಎರಡು ಹೆಜ್ಜೆ ಹಿಂದಕ್ಕಿಟ್ಟು ಬಾಗಿಲು ದಾಟಿ ಹೋಗಿ ಕೈ ಹಿಡಿದು ಬೈರಾಗಿಣಿಯನ್ನು ದರದರನೆ ಎಳತಂದು ಬೇಗಂ ಸಾಹೇಬರ ಮುಂದೆ ನಿಲ್ಲಿಸಿದಳು.

ಹುಚ್ಚಿ! ಇವಳಾರು?

ಸಾಕ್ಷಾತ್ ಮೀರ್‌ಸಾದಕನೇ ಇವನು ಎಂದು, ನಕ್ಕಳು. ಫಾತಿಮಳು ತಲೆಬಾಗಿ ನಿಂತು ನಿಮಗೆ ಬಹಳ ಶ್ರಮ ಕೊಟ್ಟಂತಾಯಿತು.

ಬೇಗಂ ಸಾಹೇಬ್! ದಿವಾನರವರು ನನ್ನ ಗುರುಗಳು. ತಾವು ನನ್ನ ಸಹೋದರಿಯಂತೆ! ಅವರಿಗಾಗಿ—ತಮಗಾಗಿ ನನ್ನ ಈ ತುಚ್ಛವಾದ ಪ್ರಾಣವನ್ನೊಪ್ಪಿಸಲು ಸಿದ್ಧವಾಗಿದ್ದೇನೆ. ಕಷ್ಟವಾದರೇನು?

ಮೀರ್‌ಸಾದಕ್! ದಿವಾನರ ಮೇಲಿನ ಆಪಾದನೆಯೇನು?

ಅಷ್ಟೇನೂ ದೊಡ್ಡದಲ್ಲ ತಾಯಿ! ನಗರದ ದಿವಾನ್ ಖಾಸಿಂಖಾನನು ಸನ್ನಿಧಾನದಲ್ಲಿ ಮಿತಿಮೀರಿ ನಡೆದನಂತೆ. ಅವನನ್ನು ಗಲ್ಲಿಗೇರಿಸಲು ಹುಜೂರಿನ ಹುಕ್ಕುಂ ಆಯಿತಂತೆ. ದಿವಾನರವರು ಸುಲ್ತಾನರ ಅಪ್ಪಣೆ ಪಡೆಯದೇ ಹೋಗಿ ಅವನಿಗೆ ಪ್ರಾಣದಾನ ಮಾಡಿದರಂತೆ.

ಅದು ಮಹಾಪರಾಧವೇ ಸರಿ! ಹಾಗಿಲ್ಲದಿದ್ದರೆ ದಿವಾನ್‌ಸಾಹೇಬರನ್ನು ಸೆರೆಯಲ್ಲಿಡುತ್ತಿದ್ದರೆ?

ಯಾವ ಕಾರ್ಯದಲ್ಲಿಯೂ ದಿವಾನ್ ಸಾಹೇಬರವರಿಗೆ ಸ್ವಾರ್ಥವೇ ಇಲ್ಲ. ಅವರು ಮೈಸೂರು ರಾಜ್ಯದ ಸುಲ್ತಾನರವರ ಹಿತವೃಷ್ಟಿಯಿಂದಲೇ ಹಾಗೆ ಮಾಡಿರಬೇಕು. ಅದನ್ನು ಸುಲ್ತಾನರವರಿಗೆ ಸಮಯವರಿತು ಸ್ಪಷ್ಟಪಡಿಸಿದರೆ—ದಿವಾನರವರ ತಪ್ಪನ್ನು ಕ್ಷಮಿಸುತ್ತಾರೆ.

ಲಬ್ಧಪ್ರತಿಷ್ಠರಾದ ದಿವಾನರವರಿಗೆ ಇಷ್ಟೊಂದು ಅಪಮಾನವಾದಮೇಲೆ ಅವರು ದಿವಾನಗಿರಿಯನ್ನು ಒಪ್ಪಿಕೊಳ್ಳುತ್ತಾರೆಯೇ?

ತಾಯೇ! ತಾವು ದಿವಾನರವರನ್ನು ಚೆನ್ನಾಗಿ ಅರಿಯಿರಿ. ಅವರು ದಿವಾನಗಿರಿಯ ಪ್ರತಿಷ್ಠೆಗಾಗಿ ದಿವಾನರಾಗಿಲ್ಲ. ದೊಡ್ಡ ನವಾಬರಲ್ಲಿರುವ ಭಕ್ತಿಗೌರವಗಳಿಂದಲೂ ಮೈಸೂರಿನ ಮೇಲಿನ ಅಭಿಮಾನದಿಂದಲೂ, ಅವರು ದಿವಾನಗಿರಿಯನ್ನು ವಹಿಸಿದ್ದಾರೆ. ಅದನ್ನು ಅಲ್ಲಾಡಿಸುವ ಧೈರ್ಯವು ಯಾರಿಗಿದೆ.

ಮೀರ್‌ಸಾದಕ್! ಹೇಗೋ ದೊಡ್ಡ ಗಂಡಾಂತರವು ಬಂದಿದೆ. ಇದನ್ನು ನೀನು ಪಾರುಮಾಡಬೇಕು ಎಂದು ಹೇಳುವಷ್ಟರಲ್ಲಿ ಅವಳ ಕಣ್ಣುಗಳಲ್ಲಿ ಕಂಬನಿಯು ತೊಟ್ಟಿಕ್ಕಿತು. ಕಂಠವು ಗದ್ಗದವಾಯಿತು. ಅತ್ತೇಬಿಟ್ಟಳು.

ಮಿರ್‌ಸಾದಕನು—ಬೇಗಂ ಸಾಹೇಬ್! ಇದಕ್ಕಾಗಿ ತಾವು ದುಃಖಿಸಬೇಡಿರಿ! ನಾನು ನನ್ನ ಪ್ರಾಣವನ್ನು ಪಣವಾಗಿಟ್ಟಿದ್ದೇನೆ. ಹಿಡಿದ ಕಾರ್ಯವನ್ನು ನಾನು ಎಂದಿಗೂ ಬಿಡುವವನಲ್ಲ. ಎಷ್ಟೇ ಎಡರುಗಳು ಬರಲಿ! ಇನ್ನೊಂದು ವಾರದಲ್ಲಿ ದಿವಾನರನ್ನು ಬಿಡಿಸಿಕೊಂಡು ಬರುವ ಭಾರವು ನನ್ನದು.

ಫಾತಿಮಳಿಗೆ ಸಮಾಧಾನವಾಯಿತು. ಅವಳು ಅತ್ಯಾದರದಿಂದ ಮಿರ್‌ಸಾದಕನನ್ನು ಆಸನದಲ್ಲಿ ಕುಳಿತುಕೊಳ್ಳುವಂತೆ ಹೇಳಿದಳು, ಮಿರ್ ಸಾದಕನು ಕುಳಿತನು.

ಫಾತಿಮಳು—ಮಿರ್‌ಸಾದಕ್ ನಿನಗೆ ಈ ಕೆಲಸಕ್ಕೆ ಹಣವು ಬೇಕಾದರೆ ನಾನು ಬೇಕಾದಷ್ಟು ಕೊಡುತ್ತೇನೆ.

ಬೇಗಂ ಸಾಹೇಬ್! ನನಗೆ ಹಣವೇಕೆ? ನಾನು ಯಾರಿಗೆ ಲಂಚ ಕೊಡಬೇಕು. ನಾನು ಕೊಡುವುದಾದರೆ ಸ್ವಯಂ ಸುಲ್ತಾನರಿಗೆ.

ಹಾಗಾದರೆ ನಿಮ್ಮ ಉಪಕಾರಕ್ಕೆ ನಾನೇನು ಪ್ರತ್ಯುಪಕಾರ ಮಾಡಬಲ್ಲೆ.

ಬೇಗಂ ಸಾಹೇಬ್ ತಮ್ಮ ಅನುಗ್ರಹವೇ ಸಾಕು.

ಹುಚ್ಚಿಯು ಬೇಗಂ ಸಾಹೇಬ್ ಇವನಿಗೆ ಪ್ರತ್ಯುಪಕಾರವನ್ನು ನಾನು ಮಾಡುತ್ತೇನೆ. ಇವನಿಗೆ ನಾನೊಂದು ವಾಗ್ದಾನಮಾಡಿದ್ದೇನೆ. ಇವನು ಮಂತ್ರಿಗಳನ್ನು ಬಂಧಮುಕ್ತರಾಗಿ ಮಾಡಿಸಿದ ದಿನವೇ ನಾನು ಇವನನ್ನು ಶಾಸ್ತ್ರಪ್ರಕಾರ ಮದುವೆಯಾಗುತ್ತೇನೆ ಎಂದು ಹೇಳಿ—ಮಿರ್‌ಸಾದಕನ ಭುಜವನ್ನು ತಟ್ಟಿದಳು.

ತಾಯಿ! ಬೇಗಂ ಸಾಹೇಬ್ ಆ ಹುಚ್ಚಿಯು ಮಾತಿಗೆ ಕಿವಿಕೊಡಕೂಡದು. ಇವಳು ಯಾವಾಗಲೂ ಎಲ್ಲರ ಮೇಲೊಂದು ಇಂತಹ ತುಫಾನು ಮಾಡುತ್ತಲೇ ಇರುತ್ತಾಳೆ. ಇವಳನ್ನು ಮದುವೆಯಾಗುವ ಮಹರಾಯನು ಮಣ್ಣು ತಿನ್ನಬೇಕು.

ಫಾತಿಮಳು ತಲೆಬಾಗಿ ಅವಳು ಹುಚ್ಚಿ. ಹುಚ್ಚಿಯು ಮಾತೇನು ಬಿಡಿರಿ.

ಹುಚ್ಚಿಯು ಸಾಮಾನ್ಯಳಲ್ಲ. ಸುಲ್ತಾನರಿಗೂ ಹೀಗೆಯೇ ಗಂಟು ಬೀಳುತ್ತಾಳೆ. ದಿವಾನರನ್ನು ಹಾಸ್ಯಮಾಡುತ್ತಾಳೆ. ಅವಳು ಹಾಸ್ಯವಾಯಿತು.

ಮೀರ್‌ಸಾದಕ್—ಹುಚ್ಚಿಯು ನಿಜವಾದ ಹುಚ್ಚಿಯಲ್ಲ. ಶ್ರೀರಂಗ ಪಟ್ಟಣದ ರಾಜಕಾರಣದಲ್ಲಿ ಹುಚ್ಚಿಯು ನಾರದಮಹರ್ಷಿಯಂತೆ. ಅವಳದು ನಿಸ್ವಾರ್ಥ ಕರ್ಮ. ಹುಚ್ಚುಬಿಟ್ಟರೆ—ಹುಚ್ಚಿಯು ರಾಣಿಗಿರಿಗೆ ಅರ್ಹಳು! ಎಲ್ಲಿಂದ ಬಂತು ಈ ಹಾಳು ಹುಚ್ಚು ಇವಳಿಗೆ!

ಬೇಗಂ ಸಾಹೇಬ್! ನಾನು ರಾಣಿಯಾಗಿಬಿಟ್ಟೇನೆಂದೇ ನನಗೆ ಈ ಹುಚ್ಚು ಹಿಡಿದಿದೆ. ರಾಣಿಗಿರಿಯು ಸಾಕು. ಒಬ್ಬ ದೌಲತ್ ರಾಣಿಗಾಗಿ ಈ ನಗರದ ಸಂಗ್ರಾಮವು ಬಂತು. ದಿವಾನರಿಗೆ ಗಂಡಾಂತರ ಬಂತು. ನಾನು ರಾಣಿಯಾದರೆ ಸುಲ್ತಾನರಿಗೇ ಗಂಡಾಂತರ ಬಂದೀತು.

ಫಾತಿಮಳು—ಹುಚ್ಚಿ! ಸಾಕು. ನೀನು ಮಾತಿನ ಮಳೆಗರೆಯಬೇಡ.

ನಾನೇಕೆ ಮಾತನಾಡಲಿ! ನೀವೇ ಮಾತನಾಡಿಕೊಳ್ಳಿರಿ ಎಂದು ಹೇಳಿ, ಮಧು ಪಾತ್ರೆಯನ್ನು ಕೈಗೆ ತೆಗೆದುಕೊಂಡಳು. ಬಟ್ಟಲಿಗೆ ಬಗ್ಗಿಸಿ ಪಾನ ಮಾಡಲಾರಂಭಿಸಿದಳು. ಮತ್ತೊಂದು ಬಟ್ಟಲಿಗೆ ಬಗ್ಗಿಸಿ ಬೇಗಂಸಾಹೇಬಳಿಗೆ ಕೊಡುವುದಕ್ಕೆ ಹೋದಳು. ಅವಳು ತೆಗೆದುಕೊಳ್ಳಲಿಲ್ಲ. ತಲೆಯಲ್ಲಾಡಿಸಿದಳು. ನಾಚಿಕೆಯ ಮುಖದಿಂದ ಕಣ್ಣು ಹಾರಿಸಿದಳು. ಹುಚ್ಚಿಯು ಅದೇ ಪಾತ್ರೆಯಲ್ಲಿ ಬೈರಾಗಿಣಿಗೆ ಕೊಟ್ಟಳು. ಬೈರಾಗಿಣಿಯು ತಲೆ ಅಲ್ಲಾಡಿಸಿದಳು. ಹುಚ್ಚಿಯು ನಿಜವಾದ ಹೆಂಗಸರಿಗೆ ನಾಚಿಕೆ. ನಿನಗೇಕೆ ನಾಚಿಕೆ? ತೆಗೆದುಕೋ ಇಂತಹ ಮದ್ಯವು ನಿನಗೆಲ್ಲಿಯೂ ಸಿಕ್ಕುವುದಿಲ್ಲ ಎಂದು ಹೇಳಿ ಬಲಾತ್ಕರಿಸಿದಳು ಮೀರ್‌ಸಾದಕನು ಫಾತಿಮಳ ಕಡೆ ತಿರುಗಿ ನೋಡಿದನು. ಫಾತಿಮಳು ಹಸನ್ಮುಖದಿಂದ ಸೋಗೆ ಕಣ್ಣಿನಿಂದ ಸ್ವೀಕರಿಸಿ ಎಂದು ಪ್ರಾರ್ಥಿಸಿದಳು. ಮೋಹಿನಿಯು ಬಂದು ಮಧುವನ್ನು ನೀಡುವಾಗ—ಆ ಕಣ್ಣುಗಳು ಬೇಡುವಾಗ ಬೇಡವೆನ್ನುವುದೆಂತು. ಮೀರ್‌ಸಾದಕನು ಕೈಗೆ ತೆಗೆದುಕೊಂಡನು. ಹುಚ್ಚಿಯು ಫಾತಿಮಳನ್ನು ಬಿಡಲಿಲ್ಲ. ತಂಟೆಮಾಡಿದಳು. ಬಲಾತ್ಕಾರಮಾಡಿದಳು. ಕೊನೆಗೂ ಫಾತಿಮಳು ಬಟ್ಟಲನ್ನು ತೆಗೆದುಕೊಳ್ಳಲೇಬೇಕಾಯಿತು. ಒಂದುಬಾರಿ ಬೈರಾಗಿಣಿಯ ಕಡೆ ತಿರುಗಿ ನೋಡಿದಳು. ಅವನೆಲ್ಲಿಯೋ ಅನ್ಯಮನಸ್ಕನಾಗಿದ್ದನು. ಫಾತಿಮಳು ಅವನು ಕಾಣದಂತೆ ಸ್ವಲ್ಪ ಪಾನಮಾಡಿದಳು. ಆಮೇಲೆ ಅವಳ ದೃಷ್ಟಿಯು ಮಧು ಪಾತ್ರೆಯ ಕಡೆಗೇ ಇತ್ತು. ಮೀರ್

ಸಾದಕನು ಇಷ್ಟು ಹೊತ್ತು ಫಾತಿಮಳನ್ನು ಮನದಣಿಯ ನೋಡಿರಲಿಲ್ಲ. ಮಾತನಾಡುವಾಗ, ವಿನಯದಿಂದ ತಲೆಬಾಗಿ ಮಾತನಾಡುತ್ತಿದ್ದನು. ಆಗಾಗ ಕದ್ದು ನೋಡುತ್ತಿದ್ದನು.

ಈಗ ಆ ದಿವ್ಯ ಸುಂದರಮೂರ್ತಿಯನ್ನು ಕಣ್ಣು ದಣಿಯ ನೋಡುತ್ತಿದ್ದಾನೆ. ಎತ್ತರವಾದ ಆಜಾನುಬಾಹುವಾದ ಶರೀರ. ಆರಕ್ತ ಗೌರವರ್ಣ, ಸ್ವಲ್ಪ ದೀರ್ಘವಾದ ಮುಖ! ವಿಶಾಲವಾದ ಶಾಂತವಾದ ನೇತ್ರಯುಗ್ಮ! ಆ ಸೋಗಿನ ಕಣ್ಣುಗಳಲ್ಲಿ ವಿಲಾಸ ವೈಭವದ ಆಲಸ ದೃಷ್ಟಿ, ಎಳಸಾದ ಉದ್ದವಾದ ಮೂಗು, ಚಿಕ್ಕದಾದ ಗುಂಡಾದ ಬಾಯಿ, ಮುದ್ದಾದ ಕೆಂದುಟಿಗಳು, ದಾಳಿಂಬೆಯ ಬಿತ್ತಗಳಂತೆ ಥಳಥಳಿಸುವ ದಂತಪಂಗ್ತಿ, ಗುಂಡಾದ ಸಣ್ಣ ಕಿವಿಗಳು, ಗುಂಗುರ ಗುಂಗುರು ತಲೆಗೂದಲು, ಬೇಡಬೇಡವೆಂದರೂ ವಿಶಾಲವಾದ ಹಣೆಯನ್ನು ಬಂದು ಮುಚ್ಚುತ್ತಿರುವ ಮುಂಗೂದಲು. ದೀರ್ಘವಲ್ಲದಿದ್ದರೂ ಹೇರಳವಾದ ಕೇಶದಾಮ! ಆ ಕೇಶದಾಮವು ನಯವಾಗಿಲ್ಲದಿದ್ದರೂ, ಕಾಡಿಗೆಯ ಕಪ್ಪಿಗಿಂತಲೂ, ಮಿಗಿಲಾಗಿ ಹೊಳೆಯುತ್ತಿರುವ ದುಂಬಿಗಳ ತಂಡದಂತೆ ಶರೀರವನ್ನು ಮುತ್ತಿರುವ ಕಪ್ಪು ತಲೆಗೂದಲು! ದಪ್ಪನಾದ ಕೊಬ್ಬಿದ ಕಂಠಸ್ಥಳ! ಉನ್ನತವಾದ ಸ್ಥನಯುಗ್ಮ! ದುಂಡಾದ ಸ್ನಿಗ್ಧವಾದ ಬಾಹುಲತೆಗಳು, ಮನೋಹರವಾದ ಕಟಿಪ್ರದೇಶ! ಉನ್ನತವಾದ ವಿಪುಲವಾದ ಜಘನ! ಸ್ಥೂಲವಾದ ಗುಂಡಾದ ನಿತಂಬದಳ! ಪ್ರಶಸ್ತವಾದ ಊರುಸ್ಥಂಭ! ದೀರ್ಘವಾದ ದುಂಡಾದ ಕಾಲುಗಳು! ಸೊಗಸಾದ ಪಾದಯುಗ್ಮ! ಒಟ್ಟಿನಲ್ಲಿ ಆಜಾನುಬಾಹುವಾದ ಸ್ಥೂಲಾಂಗಿ. ಮೂವತ್ತು ವರ್ಷದ ಪ್ರೌಢೆ. ಸುಖಸಾಮ್ರಾಜ್ಯದಲ್ಲಿ ಬೆಳೆದ ಕೋಮಲಾಂಗಿ! ಮೃದು ಮಧುರವಾದ ವಾಣಿ! ಮಿರ್ ಸಾದಕನು, ಈ ಅಪ್ಸರೆಯ ರೂಪವನ್ನು ಕಣ್ಣುತುಂಬ ಪಾನಮಾಡಿದನು. ಅವಳ ವಾಕ್ಯಥೆಯನ್ನು ಕೇಳಿದನು. ಕೈಯ್ಯಲ್ಲಿ ನಿಜವಾದ ಸುಧೆ. ಅದನ್ನು ಅರ್ಧ ಮನಸ್ಸಿನಿಂದ ಪಾನಮಾಡುತ್ತಾ, ಫಾತಿಮಳ ದಿವ್ಯ ರೂಪವನ್ನು ನೋಡುತ್ತಾ ವೈಮರತಿದ್ದಾನೆ. ಎಷ್ಟೋ ದಿವಸಗಳಿಂದ ಫಾತಿಮಳ ರೂಪವನ್ನು ಕೇಳಿದ್ದನು. ಈಗ ಪ್ರತ್ಯಕ್ಷವಾಗಿ ನೋಡುವಾಗ ತಾನು ಕೇಳಿದ್ದ ಫಾತಿಮಳಿಗಿಂತಲೂ ಇವಳು ನೂರುಪಾಲು ಸುಂದರಿ ಎಂದುಕೊಂಡನು. ಸಾವಿತ್ರಿಯು ಇವನ ಕಡೆ ತಿರುಗಿ ನೋಡಿದಳು. ಇವನ ಮದನಾವಸ್ಥೆಯನ್ನು

ಗುರ್ತಿಸಿದಳು. ಫಾತಿಮಾಬೇಗಂ ಇದನ್ನು ನೋಡಿದರೆ ಎಷ್ಟು ಪ್ರಮಾದ ವಾಗುವುದೆಂದು ನಡುಗಿದಳು. ಹುಚ್ಚಿಯು ಬೇಗಂಸಾಹೇಬ್ ಅಪ್ಪಣೆಯಾದರೆ ನಾವು ಹೊರಡುತ್ತೇವೆ. ಅರ್ಧ ರಾತ್ರಿಯು ಮೀರಿತು ಈ ಬೈರಾಗಿಣಿಯನ್ನು ಮನೆಗೆ ಸೇರಿಸಿಬರುತ್ತೇನೆ. ನಾಳೇದಿನ ಬಂದು ತಮ್ಮ ದರ್ಶನಮಾಡುತ್ತೇನೆ. ಬೈರಾಗಿಣಿಯೂ, ನಾನೂ ನಾಳೆ ನಗರಕ್ಕೆ ಹೊರಡುತ್ತೇವೆ ಎಂದು ಹೇಳಿ ಬೀಳ್ಕೊಂಡಳು. ಬೈರಾಗಿಣಿಯೂ ಎದ್ದು ಫಾತಿಮಾಬೇಗಂರವರಿಗೆ ವಂದಿಸಿ, ಅಪ್ಪಣೆ ಪಡೆದು ಹೊರಟಳು. ಇಬ್ಬರೂ ದಿರ್ವಾರ ಮಹಲಿನಿಂದ ಹೊರಟು ಕೋಟೆಯನ್ನು ದಾಟಿ, ಮೋತೀಮಹಲಿಗೆ ಬಂದು ಸೇರಿದರು. ದಾರಿ ಯುದ್ದಕ್ಕೂ ಸಾವಿತ್ರಿಯು ಹಾಡುತ್ತಾ ಬಂದಳು. ಆ ಕತ್ತಲೆಯಲ್ಲಿ ನಕ್ಷತ್ರ ಗಳು ಮಿನುಗುವ ಬೆಳಕಲ್ಲದೇ ಮತ್ತಾವ ಬೆಳಕೂ ಇರಲಿಲ್ಲ. ಆ ಗಾಢಾಂಧ ಕಾರದಲ್ಲಿ ಮೀರ್‌ಸಾದಕನ ಸ್ಥಿತಿಯು ಹೇಗಾಗಿತ್ತೆಂಬುದು ಸಾವಿತ್ರಿಗೆ ತಿಳಿಯು ಲಿಲ್ಲ. ಅವಳ ಅಂದಿನ ಸಂಗೀತವು ಅವನಿಗೆ ಹಿತವಾಗಿರಲಿಲ್ಲ. ಅವನು ಫಾತಿಮಳನ್ನು ಧ್ಯಾನಮಾಡುತ್ತಿದ್ದನು. ಆ ಮನೋಹರವಾದ ರೂಪ! ಆ ವಿಲಾಸದ ಒಯ್ಯಾರ, ಆ ಮದಿರಾಮತ್ತಲೋಚನ! ಆ ಮೃಧಾಮಧುರ ವಾಣಿ ಎಲ್ಲವಕ್ಕಿಂತಲೂ, ಮಿಗಿಲಾಗಿ ಅವಳ ಭಯಪ್ರಸ್ತವಾದ ದೈನ್ಯಭಾವ! ಇವೇ ಅವನ ಕಣ್ಣು ಮುಂದೆ ನಾಟ್ಯವಾಡುತ್ತಿದ್ದವು. ಅವರಿಬ್ಬರೂ ಬಂದು ಮೋತೀಮಹಲನ್ನು ಸೇರಿದರು. ಮೀರ್‌ಸಾದಕನು ಪರ್ಯಂಕದಮೇಲೆ ಕುಳಿತು ಸಾವಿತ್ರಿ! ಮದಿರೆಯನ್ನು ಕೊಡು. ಈ ದಿನ ಈ ಮನಸ್ಸನ್ನು ಅಣಗಿಸು ವಷ್ಟು ಪಾನಮಾಡೋಣ ಎಂದನು. ಸಾವಿತ್ರಿಯು ಮಧುವಿನ ಹೂಜಾವನ್ನು ತಂದಳು. ಇಬ್ಬರೂ ಪಾನಮಾಡಿದರು. ನಕ್ಕರು. ಹಾಡಿದರು. ಪ್ರೇಮೋ ನ್ಮತ್ತರಾಗಿ ಚುಂಬಿಸಿದರು. ಪರಸ್ಪರಾಲಿಂಗನದಿಂದ ಮೈಮರೆತರು.

ಬೆಳಗಾಯಿತು ಸಾವಿತ್ರಿಯು ಪಟ್ಟಣದ ಕಡೆಗೆ ಹೊರಟಳು. ಅವಳೆಲ್ಲಿಗೆ ಹೋಗುತ್ತಾಳೋ ಅದನ್ನು ಕೇಳಿ ಫಲವಿಲ್ಲ. ಅದು ಮೀರ್‌ಸಾದಕನಿಗೆ ಬೇಡಲೂಬೇಡ. ಅವನು ಪರ್ಯಂಕದಲ್ಲಿ ಬಿದ್ದು ಹೊರಳಾಡುತ್ತಿದ್ದನು. ಅರ್ಧ ನಿದ್ದೆ ಅರ್ಧಜಾಗ್ರದವಸ್ಥೆ, ಪುನಃ ಫಾತಿಮಳ ಅಪ್ಸರ ರೂಪವು ಬಂದು ನಿಂತಿತು. ಮಹಮ್ಮದಾಲಿಯಂಥಾ ವೇದಾಂತಿ ವೃದ್ಧನಿಗೆ--ಈ ಸುರ ಸುಂದರಿಯೇ? ಮಹಮ್ಮದಾಲಿಯನ್ನು ಬಿಡಿಸುವಗೋಜು ನನಗೇಕೆ? ಈ

ದುರ್ಘಟದಲ್ಲಿ ಮತ್ತಷ್ಟು ಪ್ರಯತ್ನವನ್ನು ಮಾಡಿಬಿಟ್ಟರೆ—ಅವನ ಅವತಾರವು ಪೂರ್ತಿಯಾಗಿಬಿಡುತ್ತದೆ. ಈ ಮದನಮೋಹಿನಿಯನ್ನು ನಾನೇ ವಶಪಡಿಸಿ ಕೊಳ್ಳಬೇಕು. ಅವಳಿಗೆ ನಾನೇ ಅನುರೂಪನಾದ ಪತಿ. ಅವಳು ಮಹಮ್ಮದಾಲಿಯ ಪ್ರೇಮಕ್ಕಾಗಿ ಇಷ್ಟು ಒದ್ದಾಡುತ್ತಿಲ್ಲ. ದಿವಾನಗಿರಿಯ ಅಂತಸ್ಥಿಗಾಗಿ ಆ ವೈಭವಕ್ಕಾಗಿ, ತನ್ನ ಭೋಗಭಾಗ್ಯಕ್ಕಾಗಿ ಅವಳು ಆತುರಳಾಗಿದ್ದಾಳೆ. ಅವೆಲ್ಲವನ್ನೂ ನಾನೇ ಕೊಡಬಲ್ಲೆ. ನಾನೇನೋ ನಗರಕ್ಕೆ ಹೊರಡಲೇಬೇಕು. ಅಲ್ಲಿ ಮಹಮ್ಮದಾಲಿಯನ್ನು ಪೂರ್ತಿಮಾಡಿಸಿಬಿಡಬೇಕು. ಈ ಸಾವಿತ್ರಿಯೊಬ್ಬಳು ಎಲ್ಲದಕ್ಕೂ ಅಡ್ಡಿ. ಆದರೆ ನನ್ನ ಪ್ರಣಯಕ್ಕಾಗಿ ಅವಳು ಎಂಥಾ ಕಾರ್ಯವನ್ನಾದರೂ ಮಾಡಿಬಿಡುತ್ತಾಳೆ. ಇರಲಿ ! ಇರಲಿ! ಇನ್ನು ಘಾತಿಮಳು ನನ್ನ ಕೈಯಿಂದ ಹೇಗೆ ತಪ್ಪಿಸಿಕೊಳ್ಳುತ್ತಾಳೆ. ನೋಡುತ್ತೇನೆ ಎಂದುಕೊಂಡನು. ಎಷ್ಟೋ ಹೊತ್ತಾದಮೇಲೆ ಎದ್ದು ಹೊರಗೆ ಬಂದು ನೋಡಿದನು. ಯಾರೂ ಇರಲಿಲ್ಲ. ಪ್ರಾತಃಕೃತ್ಯಗಳನ್ನು ತೀರಿಸಿಕೊಂಡು ಮಂತ್ರಿ ಪೂರ್ಣಯ್ಯನವರ ಮನೆಗೆ ಬಂದನು. ಅಲ್ಲಿ ಅವರು ನಗರದ ವೃತ್ತಾಂತವೆಲ್ಲವನ್ನೂ ಹೇಳಿದರು. ಅಷ್ಟೇ ಅಲ್ಲ. ದಿವಾನ್ ಮಹಮ್ಮದಾಲಿಯವರ ಮನೆಯನ್ನು ಝುಡ್ತಿಮಾಡಿ ಶೋಧಿಸಬೇಕೆಂದೂ ಹುಕ್ಕುಂ ಬಂದಿದೆಯೆಂದು ಹೇಳಿದರು. ಮಿರ್‌ಸಾದಕನು ದಿವಾನ್ ಮಹಮ್ಮದಾಲಿಯವರ ಮೇಲೆ ಯಾರೋ ಕ್ಷುದ್ರ ನಡೆಸಿದ್ದಾರೆಂದೂ, ಅದನ್ನು ಹೇಗಾದರೂ ಮಾಡಿ ತಪ್ಪಿಸಬೇಕೆಂದು ಕೇಳಿಕೊಂಡನು. ಪೂರ್ಣಯ್ಯನವರು ಅದಕ್ಕಾಗಿ ನಾನು ಬಹಳ ಪ್ರಯತ್ನಪಡುತ್ತಿದ್ದೇನೆ. ನಾನು ಈ ರಾಜಧಾನಿಯನ್ನು ಬಿಟ್ಟು ಹೋಗುವಂತಿಲ್ಲ. ಸುಲ್ತಾನರಿಗೆ ಕಾಗದಗಳನ್ನು ಬರೆದು ಫಲವಿಲ್ಲ. ಮಹಾಮಾತುಶ್ರೀಯವರಿಂದ ಕಾಗದವನ್ನು ಬರೆಸಿದ್ದೇನೆ. ಆದರೆ ಇಂದಿನ ಪ್ರಸಂಗವು ದುರಂತವಾದುದು. ಮಹಮ್ಮದಾಲಿಯವರು ಇಂಗ್ಲೀಷು ಕಂಪನಿ ಸರದಾರರೊಡನೆ ಪತ್ರವ್ಯವಹಾರವನ್ನು ನಡೆಸುತ್ತಿದ್ದರೆಂದೂ, ಅವರ ಮೇಲೆ ಪಿತೂರಿಯ ಆಪಾದನೆಯೂ ಬಂದಿದೆ. ಅದರಿಂದಲೇ ಇಂದು ಮನೆ ಝುಡ್ತಿಮಾಡಿಸಬೇಕಾಗಿದೆ. ಕೊತ್ವಾಲರಿಗೆ ಅಪ್ಪಣೆಮಾಡಿದ್ದೇನೆ. ಅದೇನಾದರೂ ನಿಜವಾದರೆ ಮಹಮ್ಮದಾಲಿಯವರನ್ನು ಯಾರೂ ಉಳಿಸಲಾರರು ಎಂದು ಹೇಳಿದರು.

ಇಲ್ಲಿ ಹೀಗೆ ಮಾತು ನಡೆಯುತ್ತಿದ್ದ ಹಾಗೇ ದಿವಾನ್ ಮಹಮ್ಮದಾಲಿ

ಯುವರ ಮನೆ ಬಾಗಿಲಿನಲ್ಲಿ ದೊಡ್ಡ ಗದ್ದಲ. ಕೊತ್ವಾಲರು ಹೆಬ್ಬಾಗಿಲು ದಾಟಿ ಪಡಸಾಲೆಗೆ ಹೋದರು. ಮನೆಯ ಮುತ್ಸದ್ದಿಗೆ ಮನೆಯನ್ನು ಜಡ್ತಿ ಮಾಡುವುದಾಗಿ ತಿಳಿಸಿದರು. ಅವರು ಹೋಗಿ ಮಲಗಿದ್ದ ಬೇಗಂ ಸಾಹೇಬರನ್ನು ಎಬ್ಬಿಸಿ ಈ ವಿಚಾರವನ್ನು ಅರಿಕೆಮಾಡಿದರು. ಫಾತಿಮಾಬೇಗಂರವರು ಕೃದ್ಧರಾಗಿ, ಮುಖ ಘರದೆಯೂ ಇಲ್ಲದೇ ಖಚೇರಿ ಹಜಾರಕ್ಕೆ ಬಂದರು. ಅಲ್ಲಿದ್ದವರೆಲ್ಲಾ ಅದಬ್ಬಿನಿಂದ ನಿಂತುಕೊಂಡರು. ಕೊತ್ವಾಲರು ಬಂದು ಸಲ ಮುಟ್ಟಿ ಸಲಾಂಮಾಡಿ, ಮಹಲನ್ನು ಝಡ್ತಿಮಾಡಬೇಕೆಂದು ಅರಿಕೆಮಾಡಿದರು.

ಯಾರು ಝಡ್ತಿಮಾಡುವವರು ನಾನು ಬಿಡುವುದಿಲ್ಲ ಎಂದು ಬೇಗಂ ಸಾಹೇಬಳು ಘರ್ಜಿಸಿದಳು. ಕೊತ್ವಾಲರು, ತಾಯಿ! ಸುಲ್ತಾನರ ಖುದ್ದು ಹುಕ್ಕುಂ. ಯಾರೂ ಮೀರುವಂತಿಲ್ಲ ಎಂದರು.

ಫಾತಿಮಳು—ನನ್ನ ಮನೆಗೆ ಸುಲ್ತಾನರು ಯಜಮಾನರಲ್ಲ. ನಾನು ಬಿಡುವುದಿಲ್ಲ ಎಂದು ತಡೆದಳು.

ಹುಚ್ಚಿ ಸಾವಿತ್ರಿಯು ಹೊರಬಾಗಿಲಿನಿಂದ ನುಗ್ಗಿ ಬಂದು—ಕೊತ್ವಾಲ್ ಸಾಹೇಬ್ ದಿವಾನ್ ಸಾಹೇಬರ ಜನಾನಾವನ್ನು ಝಡ್ತಿಮಾಡಲು ನಿಮಗೆಷ್ಟು ಧೈರ್ಯಬೇಕು. ಜೀವದಮೇಲೆ ಆಶೆ ಇದ್ದರೆ ಸುಮ್ಮನೆ ಹೋಗಿ. ಆ ಸುಲ್ತಾನರೇ ಬಂದು ಝಡ್ತಿಮಾಡಲಿ.

ಕೊತ್ವಾಲರು—ಇಲ್ಲ! ನನ್ನ ಪ್ರಾಣಹೋದರೂ ನಾನು ಹಿಂದಕ್ಕೆ ಹೋಗುವಂತಿಲ್ಲ ಎಂದು ತಲೆಬಾಗಿ ಹೇಳಿದರು.

ಹುಚ್ಚಿಯು—ನೀವು ಝಡ್ತಿಮಾಡಿ, ಏನು ತೆಗೆದುಕೊಂಡು ಹೋಗುತ್ತೀರಿ?

ಏನೂ ಇಲ್ಲ! ಸರ್ಕಾರೀ ಕಾಗದಪತ್ರಗಳನ್ನು ಮಾತ್ರ. ಅದನ್ನು ಬೇಗಂ ಸಾಹೇಬರವರೇ ತೆಗೆದುಕೊಟ್ಟರೆ ಝಡ್ತಿಯ ಅವಶ್ಯಕತೆಯೇ ಇಲ್ಲ.

ಬೇಗಂಸಾಹೇಬಳು ದುಃಖೋದ್ವಿಗ್ನಳಾಗಿ ಧಡಧಡನೆ ಮೆಟ್ಟಲು ಹತ್ತಿ ಮಹಡಿಯ ಮೇಲೆ ದಿವಾನಖಾನೆಗೆ ಹೋದಳು. ಅವಳ ಹಿಂದೆ ಕೊತ್ವಾಲರೂ ಹೋದರು. ಹುಚ್ಚಿಯು ತಾನೂ ಹೋದಳು. ಅಲ್ಲಿ ದಿವಾನರ ಅಂತರಂಗ

ಕವಾಟವನ್ನು ತೆಗೆದು ಬೇಗಂಸಾಹೇಬಳು ಅಳುತ್ತಾ ಬೇಕಾದ್ದು ತೆಗೆದು ಕೊಳ್ಳಿರಿ ಎಂದು ಹೇಳಿ ನಿಂತಳು.

ಕೊತ್ವಾಲರು ಹುಡುಕಿದರು. ಒಂದು ತಗಡಿನ ಪೆಟ್ಟಿಗೆಯಲ್ಲಿ ಹನ್ನೆರಡು ಕಾಗದಗಳಿದ್ದುವು ಅವೆಲ್ಲಾ ನೀಲಿಯ ಕಾಗದಗಳು ಇಂಗ್ಲೀಷ್ ಲಿಪಿ. ಆ ಕಾಗದ ಗಳನ್ನು ಒಂದೊಂದಾಗಿ ಎಣಿಸಿ ಕೊತ್ವಾಲರು ತೆಗೆದುಕೊಂಡರು.

ಬೇಗಂ ಸಾಹೇಬ್ ! ಇವೇ ಕಾಗದಗಳು ಹುಜೂರಿಗೆ ಬೇಕಾದವು ಎಂದು ಹೇಳಿದರು.

ಫಾತಿಮಳು—ಆ ಕಾಗದಗಳಲ್ಲಿ ಏನಿದೆ ?

ಅವುಗಳನ್ನು ಯಾರೂ ನೋಡಕೂಡದೆಂದು ಖಾವಂದರ ಕಟ್ಟಪ್ಪಣೆ ಇದೆ.

ಆಗಲಿ ! ತೆಗೆದುಕೊಂಡುಹೋಗಿರಿ.

ಕೊತ್ವಾಲರು ಅದನ್ನು ತಂದು ಪೂರ್ಣಯ್ಯನವರಿಗೆ ಒಪ್ಪಿಸಿದರು. ಅವುಗಳನ್ನು ಪೂರ್ಣಯ್ಯನವರೂ ಮೀರ್‌ಸಾದಕನೂ ನೋಡಿದರು. ಮೀರ್ ಸಾದಕನು—ಮಹಮ್ಮದಾಲಿಯವರು ಇಂಥಾ ವಿದ್ರೋಹಿಗಳೇ ! ಹಾ! ಹಾ! ಎಂದನು.

ಪೂರ್ಣಯ್ಯನವರು ಸಾವಧಾನವಾಗಿ ಕಾಗದಗಳನ್ನು ಒಂದೊಂದಾಗಿ ಓದಿ, ಇದರಲ್ಲಿ ವಿದ್ರೋಹದ ಸುಳಿವೇ ಇಲ್ಲ. ಈ ಕಾಗದಗಳು ದಿವಾನರ ರಾಜಭಕ್ತಿಗೆ ಪ್ರಶಸ್ತಿ ಪತ್ರಗಳಂತಿವೆ. ಆದರೆ—ಈಗ ದಿವಾನರು ಸೆರೆಯಲ್ಲಿದ್ದಾರೆ ಸುಲ್ತಾನರು ಕೃದ್ಧರಾಗಿದ್ದಾರೆ. ಅವರು ಇದನ್ನು ಅರ್ಥಮಾಡಿಕೊಳ್ಳುವಷ್ಟು ಆಲೋಚನೆಮಾಡುತ್ತಾರೆಯೋ ಇಲ್ಲವೋ ಹೇಳಲಾಗುವುದಿಲ್ಲ. ಇರಲಿ, ದೇವರಿದ್ದಾನೆ ಎಂದು ಹೇಳಿ ಅವುಗಳನ್ನೆಲ್ಲಾ ತಮ್ಮ ಪೆಟ್ಟಿಗೆಯಲ್ಲಿ ತೆಗೆದಿಟ್ಟರು. ಮೀರ್‌ಸಾದಕನು ಅವರ ಅಪ್ಪಣೆ ಪಡೆದು ಮನೆಗೆ ಬಂದನು.

ಫಾತಿಮಾಬೇಗಂ ಮಧ್ಯಾಹ್ನಾತ್ಪರ ವ್ಯಾನಾದಲ್ಲಿ ಕುಳಿತು, ಮಂತ್ರಿ ಪೂರ್ಣಯ್ಯನವರ ಮನೆಗೆ ತೆರಳಿದಳು. ಅಲ್ಲಿ ಮಂತ್ರಿಗಳು ಬೇಗಂಸಾಹೇಬ ಳನ್ನು ಅತ್ಯಂತ ಗೌರವದಿಂದ ಕಂಡರು. ಬೇಗಂಸಾಹೇಬಳು ತನ್ನ ಪತಿಯನ್ನು

ಉಳಿಸಿಕೊಡಬೇಕೆಂದು ಎಷ್ಟೋ ಕೇಳಿಕೊಂಡಳು. ಮಂತ್ರಿಗಳು ತಾಯಿ! ಅಧೈರ್ಯಪಡುವ ಕಾರಣವಿಲ್ಲ. ನಮ್ಮ ಮಂತ್ರಾಲೋಚನೆಯಿಲ್ಲದೇ ಸುಲ್ತಾನರೂ ಏನೂ ದುಡುಕುವುದಿಲ್ಲ. ಮಹಾಮಾತೃಶ್ರೀ ಬೇಗಂಸಾಹೇಬರವರು ದಿವಾ‌ನ್ ಮಹಮ್ಮದಾಲಿಯವರನ್ನು ಬಂಧಿಸಿದ್ದು ಮಹಾಪರಾಧವೆಂದೂ, ಅವರನ್ನು ಬಂಧನದಿಂದ ತಪ್ಪಿಸಿ ಕ್ಷಮೆ ಬೇಡಬೇಕೆಂದೂ ಕಟ್ಟುನಿಟ್ಟಾಗಿ ಸುಲ್ತಾನರವರಿಗೆ ಪತ್ರ ಬರೆದಿದ್ದಾರೆ, ತಾವು ಏನೂ ಚಿಂತಿಸಬೇಕಾಗಿಲ್ಲ. ಇನ್ನು ಒಂದು ವಾರದೊಳಗಾಗಿ ಶುಭ ಸಮಾಚಾರವು ಬರುತ್ತದೆ.

ಮಂತ್ರಿಗಳೇ! ತಾವು ನನಗೆ ತಂದೆಯಂತೆ. ನನ್ನ ಮನಸ್ಸು ತಲ್ಲಣಿಸುತ್ತಿದೆ. ನನಗೂ ಹುಜೂರು ಸನ್ನಿಧಾನಕ್ಕೆ ಹೋಗಲು ಅಪ್ಪಣೆ ಇತ್ತರೆ ನಾನೇ ಹೋಗಿ ದಿವಾನರವರ ಭೇಟಿಮಾಡಬೇಕೆಂದು ಆಶೆ ಇದೆ. ಸುಲ್ತಾನರವರನ್ನೂ ಕೇಳಿಕೊಳ್ಳಬೇಕೆಂಬ ಹಂಬಲವಿದೆ.

ಆಗಲಿ! ಬೇಗಂ ಸಾಹೇಬ್ ನಾಳೇ ದಿನ ಎಲ್ಲಾ ಏರ್ಪಾಡುಮಾಡಿ ಕಳಿಸುತ್ತೇನೆ. ಮಿರ್ಸಾದಕರನ್ನು ಇದೇ ಕಾರ್ಯಕ್ಕಾಗಿ ಕಳಿಸಬೇಕೆಂದು ಯೋಚಿಸುತ್ತಿದ್ದೇನೆ.

ಅವರು ಹೋದರೆ ಈ ಕಾರ್ಯವು ಸಿದ್ಧಿಯಾಗುವುದೇ?

ಅವರೊಬ್ಬರೇ ಈ ಕಾರ್ಯದಲ್ಲಿ ದಕ್ಷರೆಂದು ನನ್ನ ಅಭಿನಿವೇಶ.

ಮಂತ್ರಿಗಳೇ! ಈ ಗಂಡಾಂತರದಿಂದ ಪಾರಾಗಬಹುದೆಂದು ತಮಗೆ ನಂಬಿಕೆ ಇದೆಯೋ?

ತಾಯಿ! ಮಾತುಶ್ರೀ ಬೇಗಂಸಾಹೇಬರ ಕಟ್ಟಪ್ಪಣೆ. ನನ್ನ ಸಲಹೆ. ತಾವು ಹೋಗಿ ಸ್ವಯಂ ಮಾಡುವ ಪ್ರಾರ್ಥನೆ. ಮಿರ್ಸಾದಕನ ಸಂಧಾನ ಇಷ್ಟು ಇರುವಾಗ ಜಯವಾಗದೇ ಏನು? ದಿವಾನರವರೇನು ಸಾಮಾನ್ಯ ಮನುಷ್ಯರೇ. ಈ ರಾಜ್ಯವನ್ನು ಎಷ್ಟೋಸಾರಿ ಉಳಿಸಿದ ರಾಜಭಕ್ತರವರು. ಅವರ ವಿಷಯದಲ್ಲಿ ಎಳ್ಳಷ್ಟೂ ಸಂದೇಹವಿಲ್ಲ.

ಈ ಮಾತುಗಳಿಂದ ಫಾತಿಮಳಿಗೆ ಏನೋ ಭರವಸೆ ಸಿಕ್ಕಿದಂತಾಯಿತು. ಅವಳು ಸಮಾಧಾನವಾಗಿ ಮಂತ್ರಿಗಳ ಅಪ್ಪಣೆ ಪಡೆದು ತನ್ನ ಮಹಲಿಗೆ ಹಿಂತಿರುಗಿದಳು. ಫಾತಿಮಳು ಮಹಲಿಗೆ ಹೋಗುವಾಗ ಸಂಧ್ಯಾಕಾಲ ಆರು

ಗಂಟೆಯಾಗಿತ್ತು. ಹುಚ್ಚಿಯು ದಿವಾನರ ಮನೆಯ ಮುಂದೆ ಹಾಡು ಹೇಳುತ್ತಿದ್ದಳು. ಅನೇಕ ಜನರು ಸೇರಿದ್ದರು. ಹುಡುಗರು ಹುಚ್ಚಿಯನ್ನು ಹಾಸ್ಯ ಮಾಡುತ್ತಿದ್ದರು. ಅಷ್ಟರಲ್ಲಿ ಮ್ಯಾನಾ ಬಂತು. ಎಲ್ಲರೂ ಅದಬ್ಬಿನಿಂದ ದಾರಿಬಿಟ್ಟರು. ಮ್ಯಾನಾ ಒಳಗೆ ಹೋಯಿತು. ಬೇಗಂಸಾಹೇಬಳು ಅಂತಃಪುರಕ್ಕೆ ಸೇರಿದಳು. ಹುಚ್ಚಿಯು ಮೆಲ್ಲಮೆಲ್ಲಗೆ ಆ ಜನಸಂದಿಣಿಯಿಂದ ತಪ್ಪಿಸಿಕೊಂಡು ಮಹಲಿನೊಳಗೆ ಹೊಕ್ಕಳು. ಪಹರೆಯವರು ಗುಂಪನ್ನೆಲ್ಲಾ ಚದುರಿಸಿದರು. ಹುಚ್ಚಿಯು ಜನಾನಾಕ್ಕೆ ಹೋದಳು. ಅಲ್ಲಿ ಬೇಗಂ ಸಾಹೇಬರ ಭೇಟಿಮಾಡಿದಳು. ಬೇಗಂ ಸಾಹೇಬಳು ಸಮಾಧಾನವಾಗಿದ್ದಂತೆ ತೋರಿತು.

ಹುಚ್ಚಿಯು ಬೇಗಂಸಾಹೇಬ್ ಹಾಡು ಹೇಳಲೆ? ಎಂದಳು.

ನಿನ್ನ ಹಾಡು ಬೇಡ! ಕುಳಿತುಕೊ ಎಂದಳು. ತಾನು ಹೋಗಿ ಬಂದ ಸಮಾಚಾರವನ್ನು ಅವಳಿಗೆ ವಿಸ್ತಾರವಾಗಿ ತಿಳಿಸಿದಳು. ಮಂತ್ರಿಗಳು ನಾಳೇ ದಿನ ನನ್ನನ್ನು ಶಿಬಿರಕ್ಕೆ ಕಳುಹಿಸುವುದಾಗಿ ಹೇಳಿದ್ದಾರೆ. ಮಿರ್ಸಾದಕರನ್ನು ಈ ಸಂಧಾನಕ್ಕೆ ಕಳುಹಿಸುವುದಾಗಿ ಹೇಳಿದ್ದಾರೆ. ನೀನೂ ಹೊರಡುವೆಯಷ್ಟೆ? ನಾನು ಹೊರಡದೇ ಉಂಟೇ! ಇಂದು ಪ್ರಾತಃಕಾಲನೇ ಹೊರಟಿದ್ದೆ. ಈ ದಿವಸ ಪ್ರಾತಃಕಾಲ ನಿಮ್ಮಲ್ಲಿ ಹೇಳಿ ಅಪ್ಪಣೆ ಪಡೆದು ಹೊರಡೋಣವೆಂದು ಬಂದೆ. ಅಷ್ಟರಲ್ಲಿ ಕೊತ್ವಾಲರು ಬಂದು ಗದ್ದಲವಾಗಿತ್ತು. ಹೊರಟು ಹೋದೆ.

ಹುಚ್ಚಿ! ಆ ಕಾಗದಗಳೇನೆಂಬುದನ್ನು ತಿಳಿದುಕೊಂಡೆಯಾ?

ಇಲ್ಲ ಬೇಗಂಸಾಹೇಬ್! ಅವು ಏನೋ ಗುಪ್ತ ಪತ್ರಗಳಂತೆ. ನೀವು ಮಂತಿಗಳನ್ನು ಕೇಳಲಿಲ್ಲವೇ?

ಇಲ್ಲ ಸಾವಿತ್ರಿ! ಅದರ ವಿಚಾರ ಕೇಳುವುದಕ್ಕೆ ನನಗೆ ನಾಚಿಕೆಯಾಯಿತು. ಅದನ್ನು ತಿಳಿದುಕೊಳ್ಳಬೇಕೆಂದು ನನ್ನ ಮನಸ್ಸು ತವಕಪಡುತ್ತಿದೆ. ಅದನ್ನು ತಿಳಿದುಕೊಳ್ಳಲು ಏನುಮಾಡುವುದು? ಎಂದು ಇಬ್ಬರೂ ಬಹಳ ಹೊತ್ತು ಯೋಚಿಸಿದರು. ಕೊನೆಗೆ ಬೇಗಂಸಾಹೇಬಳು, ನಾನೇ ಹೋಗಿ ಮಿರ್ಸಾದಕನನ್ನು ಕೇಳಿ ಬರುತ್ತೇನೆ. ನೀನು ನನ್ನನ್ನು ಹೇಗಾದರೂ ಮೋತೀಮಹಲಿಗೆ ಕರೆದೊಯ್ಯುವೆಯಾ?

ಬೇಡ. ಬೇಗಂ ಸಾಹೇಬ್! ತಾವು ಮೋತೀಮುಹಲಿಗೆ ಈ ರಾತ್ರಿಯಲ್ಲಿ ಹೋಗುವುದನ್ನು ನಾನು ಒಪ್ಪುವುದೇ ಇಲ್ಲ. ಮೀರ್‌ಸಾದಕನು ಸುರಾಪಾಯಿ. ಅವನು ಈ ಹೊತ್ತಿನಲ್ಲಿ ಮಿತಿಮೀರಿ ಕುಡಿದು ಉನ್ಮತ್ತನಂತಿರುತ್ತಾನೆ. ತಮ್ಮಂಥಾ ತರುಣ ಸ್ತ್ರೀಯು ಏಕಾಂಗಿಯಾಗಿ ಅಲ್ಲಿಗೆ ಹೋಗುವುದು ಸರ್ವಥಾ ತರವಲ್ಲ.

ಹುಚ್ಚಿ! ನೀನು ಅಡ್ಡಿಪಡಿಸಬೇಡ. ಮೀರ್‌ಸಾದಕನು ದಿವಾನರ ವಿಷಯದಲ್ಲಿ ಎಷ್ಟೋ ಭಕ್ತಿ ವಿಶ್ವಾಸಗಳಿಂದ ಮಾತನಾಡಿದ. ನನ್ನಲ್ಲಿ ಮಾತೃಭಕ್ತಿಯನ್ನು ತೋರಿದ. ಅವನಲ್ಲಿ ನನಗೆ ಭಯವೆಲ್ಲಿ ಬಂತು. ಹಾಗೇನಾದರೂ ವಿಪರೀತ ಸಂದರ್ಭ ಬಂದರೆ—ಅವನನ್ನು ಒಂದೇ ಏಟಿನಿಂದ ಕತ್ತರಿಸಿ ತುಂಡುತುಂಡು ಮಾಡಬಲ್ಲೆ.

ತಾಯಿ! ಅಕಾಲದಲ್ಲಿ, ಆ ಸ್ಥಾನದಲ್ಲಿ ಹೋಗಿ ವಿಪರೀತ ಸಂಘಟನೆಯು ಪ್ರಾಪ್ತವಾದರೆ ಅವನೊಡನೆ ನಿಷ್ಠೂರ ಕಟ್ಟಿಕೊಳ್ಳುವುದರಿಂದ ಪ್ರಯೋಜನವೇನು? ತಮ್ಮಂಥಾ ಅಂತಃಪುರ ಸ್ತ್ರೀಯು ಈ ರಾತ್ರಿಯಲ್ಲಿ ಏಕಾಕಿನಿಯಾಗಿ ಮೀರ್‌ಸಾದಕನ ವಿಲಾಸಭವನಕ್ಕೆ ಹೋಗುವುದನ್ನು ಯಾರಾದರೂ ನೋಡಿದರೆ ಏನಂದಾರು! ತಾವು ಎಂಥಾ ವೀರರಮಣಿಯಾದರೂ ಆ ಅಪವಾದವು ದಾರುಣವಾದುದಲ್ಲವೆ? ತಾಯಿ!

ಎಲ್ಲೆಲ್ಲಿಯೂ ಪ್ರತ್ಯಕ್ಷವಾಗಿರುವ ಅಲ್ಲಾನ ಮುಂದೆ ನನ್ನ ಪರಿಶುದ್ಧವನ್ನು ಅಪರಾಧವು ಮುಟ್ಟೀತೆ. ಏನೂ ತಪ್ಪಿಲ್ಲದಿದ್ದರೆ ಅಪವಾದದ ಸೋಂಕೇ ಇಲ್ಲ. ಹುಚ್ಚಿ! ನಾನು ಪವಿತ್ರಳೆಂಬುದನ್ನು ದಿವಾನರು ತ್ರಿಕರಣಶುದ್ಧವಾಗಿ ನಂಬುತ್ತಾರೆ. ಅದಕ್ಕೆ ಅಲ್ಲಾನೇ ಸಾಕ್ಷಿ. ನನ್ನ ಶುದ್ಧ ಹೃದಯ ಪತಿದೇವನ ಪರಿಶುದ್ಧ ಮನಸ್ಸು. ಅಲ್ಲಾನ ಪವಿತ್ರ ಸಾಕ್ಷಿ. ಇದನ್ನಲ್ಲದೆ ಮತ್ತಾರನ್ನು ಒಪ್ಪಿಸಬೇಕು? ನಾನು!

ಕೊನೆಗೂ ಹುಚ್ಚಿಯು ಒಪ್ಪಲಿಲ್ಲ. ಬೇಗಂಸಾಹೇಬಳು ಬಿಡಲಿಲ್ಲ. ಏನೇನೋಮಾಡಿ ಹುಚ್ಚಿಯನ್ನು ಒಪ್ಪಿಸಿದಳು. ಇಬ್ಬರೂ ವೇಷವನ್ನು ಮರೆಸಿಕೊಂಡು ಮೋತೀಮುಹಲಿಗೆ ಹೋದರು.

# ಮೀರ್ ಸಾದಕನ ಚಕ್ರವ್ಯೂಹದಲ್ಲಿ

ಮೋತೀಮಹಲಿನಲ್ಲಿ ಅಚ್ಚುಕಟ್ಟಾದ ನಾಲ್ಕು ಕೋಣೆಗಳಿವೆ. ಎಲ್ಲವೂ ಒಂದರಂತೆ ಒಂದಿವೆ. ಒಂದು ಕೋಣೆಗೂ ಮತ್ತೊಂದಕ್ಕೂ ವ್ಯತ್ಯಾಸವೇ ಇಲ್ಲ. ಒಳಗಿರುವವರಿಗೆ ಯಾವ ಕೋಣೆಯಲ್ಲಿ ಇದ್ದೇವೆಂಬುದೇ ಭಾಸವಾಗುವುದಿಲ್ಲ. ಎಲ್ಲವೂ ಬಹಳ ಸೊಗಸಾಗಿ ಅಲಂಕೃತವಾಗಿರುವ ಕೋಣೆಗಳು. ಅದರಲ್ಲಿ ಒಂದು ಶಯನ ಗೃಹ. ಉಳಿದ ಎರಡು ಕೋಣೆಗಳು ಬೈಠಕ್ ಗೃಹಗಳು. ಒಂದು ಅಂತಃಗೃಹ. ಅದು ಭದ್ರವಾಗಿ ಮುಚ್ಚಿದೆ. ಅದರಲ್ಲೇನಿದೆಯೋ ಯಾರಿಗೂ ಗೊತ್ತಿಲ್ಲ. ಬೈಠಕ್ ಕೋಣೆಗಳಲ್ಲಿ ನಿಲುಗನ್ನಡಿಗಳೂ. ಪಠಗಳೂ ಕಟ್ಟಿವೆ. ಅಲ್ಲಿರುವ ಪಠಗಳೆಲ್ಲಾ ಸ್ತ್ರೀಯರ ಪಠಗಳು. ಕೆಲವು ಫ್ರೆಂಚ್ ಸ್ತ್ರೀಯರ ಪಠಗಳೂ ಇವೆ. ಕೋಣೆಯ ಅಲಂಕಾರದಲ್ಲಿ ಅಲ್ಲಲ್ಲಿ ಪಾಶ್ಚಾತ್ಯರ ಪದ್ಧತಿಯಂತೆ ಅಲಂಕರಿಸಲ್ಪಟ್ಟಿದೆ. ಶ್ರೀರಂಗಪಟ್ಟಣದಲ್ಲಿ ಈ ಪಾಶ್ಚಾತ್ಯ ಅನುಕರಣವು ಮತ್ತೆಲ್ಲಿಯೂ ಇಲ್ಲ. ಒಂದು ಕಪಾಟದಲ್ಲಿ ಅತ್ತರುಗಳೂ, ವಿವಿಧ ವಾದ್ಯಗಳೂ ಇಡಲ್ಪಟ್ಟಿದೆ. ಅದನ್ನು ಪುಷ್ಪದಾಮಗಳಿಂದ ಅಲಂಕರಿಸಿದ್ದಾರೆ. ಮತ್ತೊಂದು ಕಪಾಟದಲ್ಲಿ ಅನೇಕ ಪುಸ್ತಕಗಳಿವೆ. ಅವೆಲ್ಲಾ ಫಾರಸಿ ಮತ್ತು ಸಂಸ್ಕೃತ ಪುಸ್ತಕಗಳಿವೆ. ಮತ್ತೊಂದು ಕೋಣೆಯಲ್ಲಿ ತಂಬೂರಿ, ಸಿತಾರ, ವೀಣೆ ಮುಂತಾದ ವಾದ್ಯ ವಿಶೇಷಗಳು ಅಚ್ಚುಗಟ್ಟಾಗಿ ಇಡಲ್ಪಟ್ಟಿವೆ. ಎಲ್ಲ ಕೋಣೆಗಳಲ್ಲಿಯೂ ಕಂದೀಲು ದೀಪಗಳು. ಶಯನ ಗೃಹದಲ್ಲಿ ವಿಶಾಲವಾದ ಪರ್ಯಂಕ. ಅದರಮೇಲೆ ಹಂಸತೂಲಿಕಾತಲ್ಪ. ಕುತ್ತನಿಯ ದಿಂಬುಗಳು. ಕಿಂಕಾಪಿನ ಫರದೆಗಳು. ಅಲ್ಲಿ ಒಂದು ಬೆಳ್ಳಿಯ ಕಾಲುಮಣೆಯಮೇಲೆ ಗಾಜಿನ ಹೂಜಿಯಲ್ಲಿ ಮದ್ಯ. ಸಣ್ಣ ಸಣ್ಣ ಚಿನ್ನದ ಪಾನ ಪಾತ್ರೆಗಳು. ಎರಡು ಕಡೆಯೂ ಬೆಳ್ಳಿಯ ಕಟ್ಟುಹಾಕಿದ ನಿಲುಗನ್ನಡಿ. ಮನೆಯೆಲ್ಲವೂ ಅತ್ತರುಸಿಂದ ಘಮಘಮಿಸುತ್ತಿದೆ. ಹುಚ್ಚಿಯೂ ಬೇಗಂ ಸಾಹೇಬಳೂ ಅಲ್ಲಿಗೆ ಹೋಗುವ ಹೊತ್ತಿಗೆ ಮೀರ್ ಸಾದಕನಿರಲಿಲ್ಲ. ಹುಚ್ಚಿಯು ಬೇಗಂ ಸಾಹೇಬಳನ್ನು ಕರೆದುಕೊಂಡುಹೋಗಿ ಮನೆಯೆಲ್ಲವನ್ನೂ ತೋರಿಸಿ

ದಳು. ಆ ಮನೆಯ ಅಂದಚಂದವನ್ನು ನೋಡಿ ಬೇಗಂಸಾಹೇಬಳು ಅಪ್ರಭಳಾದಳು. ಶಯನಗೃಹಕ್ಕೆ ಹೋಗುವಾಗ ಅವಳಿಗೆ ಲಜ್ಜೆಯಾಯಿತು. ಹುಚ್ಚಿಯು ಕೈ ಹಿಡಿದು ಎಳದು ಕರದುಕೊಂಡುಹೋಗಿ, ಆ ಶಯನಗೃಹವನ್ನು ತೋರಿಸಿದಳು. ಅಲ್ಲಿ ಒಂದು ಪಠಕ್ಕೆ ಕಿಂಕಾಪಿನ ಫರದೆ ಹಾಕಿತ್ತು. ಹುಚ್ಚಿಯು ಅದನ್ನು ಮಾತ್ರ ತೋರಿಸಲಿಲ್ಲ. ಅದೇನಿರಬಹುದೆಂದು ಫಾತಿಮುಳಿಗೆ ಕುತೂಹಲವಾಯಿತು. ಹುಚ್ಚಿಯು ಅನ್ಯಮನಸ್ಕಳಾಗಿರುವಾಗ ಫಾತಿಮುಳು ಆ ಫರದೆಯನ್ನು ಓರೆಮಾಡಿ ನೋಡಿದಳು. ಆ ದಿವ್ಯಾಕೃತಿಯನ್ನು ಕಂಡು-ಆಶ್ಚರ್ಯಚಕಿತಳಾಗಿ—ಸಾವಿತ್ರಿ ! ಇದಾರದು ಈ ಪಠ ?

ಸಾವಿತ್ರಿಯು ನಗುತ್ತಾ, ಗೊತ್ತಾಗುವುದಿಲ್ಲವೇ ಅದು—ಈ ಪಾಪಿಯದೆಂದು !

ಸಾವಿತ್ರಿ ! ನೀನು ಎಂಥಾ ಚಲುವಿನ ಖನಿಯೋ ! ಎಂದು ಆ ಪಠವನ್ನು ದಿಟ್ಟಿಸಿ ನೋಡುತ್ತಾ—ಸಾವಿತ್ರಿ ! ನಿನಗೂ ಈ ಮಿರ್ ಸಾದಕನಿಗೂ ಏನು ಸಂಬಂಧ ? ನಿನ್ನ ಕಥೆಯನ್ನೇಕೆ ಇಷ್ಟು ಗೋಪ್ಯವಾಗಿಟ್ಟಿದ್ದಿ ? ನೀನು ಮಿರ್ ಸಾದಕನ ಸಹೋದರಿಯೇನು ?

ಬೇಗಂಸಾಹೇಬ್ ! ನನಗೂ ಮಿರ್ ಸಾದಕನಿಗೂ—ಸಂಬಂಧವೇನಿದೆ ? ಅವನು ನನ್ನ ಪೂರ್ವ ಜನ್ಮದ ಶತ್ರು ! ಈ ಜನ್ಮದಲ್ಲಿ ನನ್ನನ್ನು ಬಂಧಿಸಿರುವ ಘಟಸರ್ಪ. ಆ ಕಥೆಯು ನಿಮಗೇಕೆ ? ಎಂದು ಆ ಪಠದ ಮೇಲೆ ಒಂದೇಟು ಹೊಡೆದು, ಫರದೆಯನ್ನು ಮುಚ್ಚಿದಳು. ಫಾತಿಮುಳು ಅವಳ ಮುಖವನ್ನು ನೋಡಿದಾಗ ಹುಚ್ಚಿಯ ಕಣ್ಣಿನಲ್ಲಿ ಧಾರಾಕಾರವಾಗಿ ಸುರಿಯುತ್ತಿತ್ತು. ಅದನ್ನು ನೋಡಿ ಫಾತಿಮುಳು ಅವಾಕ್ಕಾದಳು.

ಹುಚ್ಚಿಯು ಇಂಥಾ ಅಳುವನ್ನು ಎಷ್ಟೋ ಅತ್ತಿದ್ದಾಳೆ. ಅವಳ ಹುಚ್ಚೇ ಅವಳನ್ನು ಸಮಾಧಾನಪಡಿಸುತ್ತದೆ. ಸ್ವಲ್ಪ ಹೊತ್ತಿನೊಳಗಾಗಿ ಹುಚ್ಚಿಯು ನಗುತ್ತಾ ತಾಯಿ, ಭಯಪಡಬೇಡಮ್ಮ ಎಂದು ಬೇಗಂಸಾಹೇಬಳನ್ನೇ ಸಮಾಧಾನಗೊಳಿಸಿದಳು. ಇಷ್ಟು ಹೊತ್ತಾದರೂ ಮಿರ್ ಸಾದಕನು ಬರಲೇ ಇಲ್ಲ. ಹುಚ್ಚಿಯು ಬೇಗಂಸಾಹೇಬ್ ತಾವು ಇಲ್ಲಿ ಕುಳಿತಿರಿ. ದರಿಯಾ ದೌಲತ್ತಿನಲ್ಲಿ ಏನೋ ದೀಪಟಿಗೆಗಳು ಕಾಣುತ್ತಿವೆ. ಅಲ್ಲೇನೋ ವಿಶೇಷವಿರಬೇಕು. ನೋಡಿ

ಕೊಂಡು ಬರುತ್ತೇನೆ. ಬಹುಶಃ ಮಿರ್‌ಸಾದಕನು ಅಲ್ಲೇ ಇರಬಹುದು. ಕರೆತರುತ್ತೇನೆ ಎಂದು ಹೇಳಿ ಹೊರಟುಹೋದಳು. ಫಾತಿಮಳು—ಸಾವಿತ್ರಿ ಎಂಥಾ ಸುಂದರಿ. ಎಷ್ಟು ಚತುರೆ. ಇವಳಿಗೆಲ್ಲಿ ಹುಚ್ಚು ಬಂತು. ಮಿರ್‌ ಸಾದಕನು ಇವಳ ಆತ್ಮೀಯನೇ ಇರಬೇಕು. ಇವಳು ಹಿಂದೂ. ಅವನು ಮುಸಲ್ಮಾನ. ಇವಳು ಮಿರ್‌ಸಾದಕನ ಪ್ರಣಯಿನಿಯೋ? ಅಂತರಂಗದ ಪತ್ನಿಯೋ? ಸಾವಿತ್ರಿಯ ಹುಚ್ಚು ನಿಜವೋ? ವೇಷವೋ? ಅವಳೇಕೆ ಹುಚ್ಚಿಯ ವೇಷದಿಂದ ಇಷ್ಟು ಕಷ್ಟಪಡಬೇಕು. ಸಾವಿತ್ರಿಯು ಹುಚ್ಚಿಯೇ ನಿಜ. ಈ ಹುಚ್ಚಿಯ ಸಹವಾಸದಲ್ಲಿ ಮಿರ್‌ಸಾದಕನೇಕೆ ಹೆಣಗಾಡಬೇಕು. ಇದರಲ್ಲೇನೋ ಅಭೇದ್ಯವಾದ ಅಂತರಂಗವಿದೆ ಎಂದು ಚಿಂತಿಸುತ್ತಿದ್ದಳು.

ಹುಚ್ಚಿಯು ದರಿಯಾದವಲತ್ತಿನ ಹತ್ತಿರ ಬರುವ ಹೊತ್ತಿಗೆ ಬೋಯಿಗಳ ಶಬ್ದ ಕೇಳಿಸಿತು. ಮ್ಯಾನಾ ಹೊರಟಿತು. ದೀವಟಿಗೆಗಳು ಮುಂದೆ ಹೊರಟವು. ಆ ಮ್ಯಾನಾವನ್ನು ನೋಡಿ ಮಂತ್ರಿ ಪೂರ್ಣಯ್ಯನವರದೆಂದು ತಿಳಿದುಕೊಂಡು ದರಿಯಾದವಲತ್ತಿನೊಳಗೆ ಹೋದಳು. ಕಾವಲುಗಾರರನ್ನು ಕೇಳಿದಳು. ಅಲ್ಲಿ ಮಿರ್‌ಸಾದಕನೊಬ್ಬನೇ ಇದಾನೆಂದು ಅವರು ಹೇಳಿದರು. ಇವಳು ಒಳಹೊಕ್ಕು ನೋಡಿದಳು. ಮಿರ್‌ಸಾದಕನು ಏಕಾಂಗಿಯಾಗಿ ಆಲೋಚನೆಯಲ್ಲಿ ಮಗ್ನನಾಗಿದ್ದನು. ಹುಚ್ಚಿಯು ನಕ್ಕಳು. ಮಿರ್‌ ಸಾದಕನು ಹುಚ್ಚಿಯ ಕಡೆಗೆ ತಿರುಗಿದನು.

ಹುಚ್ಚಿ ! ಇಲ್ಲಿಗೇಕೆ ಬಂದೆ ?

ನಿನ್ನನ್ನು ಮಹಲಿಗೆ ಕರೆದುಕೊಂಡು ಹೋಗುವುದಕ್ಕೆ.

ಮಹಲಿನಲ್ಲಿ ಏನು ಕೆಲಸ ?

ನನ್ನ ಸ್ನೇಹಿತರೊಬ್ಬರು ನಿನ್ನ ಭೇಟಿಗಾಗಿ ಬಂದು ಕಾದಿದ್ದಾರೆ.

ಯಾರದು ?

(ಕಿವಿಯಲ್ಲಿ) ಫಾತಿಮಾ ಬೇಗಂ !

ಮಿರ್‌ಸಾದಕನು ಲಗುಬಗೆಯಿಂದ ಎದ್ದು ಹೊರಟನು. ಅವನು ದಾರಿಯಲ್ಲಿ ಬರುತ್ತಾ ಫಾತಿಮಳು ಏಕೆ ಬಂದಿದ್ದಾಳೆ. ನನ್ನಲ್ಲಿ ವಲಿದು ಬಂದಿರಬಹುದೇ ? ಇಲ್ಲಾ ! ನನ್ನನ್ನು ಪ್ರಾರ್ಥಿಸಲು ಬಂದಿರಬಹುದೇ. ಹೇಗಾ

ದರೂ ಈಗ ಅವಳು ನನ್ನ ದಾಸಿ. ನನ್ನ ಬಲೆಗೆ ಸಿಕ್ಕಿದ ಹರಿಣಿ! ಇಂದು ದಿವಾನ್ ಮಹಮ್ಮದಾಲಿಯು ಮೃತ್ಯುವಿನ ಕೋರೆದಾಡೆಯಲ್ಲಿದ್ದಾನೆ. ಫಾತಿಮಳಿಗೆ ಯಾರಿದ್ದಾರೆ. ಫಾತಿಮಳನ್ನು ಪ್ರಣಯ ಭಿಕ್ಷೆ ಬೇಡುತ್ತೇನೆ. ಒಪ್ಪದಿದ್ದರೆ—ಬಲಾತ್ಕರಿಸುತ್ತೇನೆ. ಹೇಗಾದರೂ ಇಂದು ತ್ರಿಲೋಕ ಸುಂದರಿಯಾದ ಫಾತಿಮಳು ನನ್ನವಳು. ನನ್ನ ಕರಗತವಾದ ಶಿಕಾರಿಯು—ತಪ್ಪಿಸಿಕೊಳ್ಳುವುದೇ ಇಲ್ಲ. ಪಿತೂರಿಯ ಕಾಗದಗಳನ್ನು ನಾನೇ ತೆಗೆದುಕೊಂಡು ಹೋಗಬೇಕೆಂದು ಮಂತ್ರಿ ಪೂರ್ಣಯ್ಯನವರು ಆ ಕಾಗದಗಳನ್ನು ನನ್ನ ಕೈಲಿಟ್ಟಿದ್ದಾರೆ. ಆ ಕಾಗದಗಳು ನನ್ನ ಕೈಯ್ಯಲ್ಲಿವೆ. ಮಹಮ್ಮದಾಲಿಯ ಪ್ರಾಣವು ಆ ಕಾಗದಗಳಲ್ಲಿದೆ. ಫಾತಿಮಳು ಈಗ ನನ್ನ ಬಲೆಯಲ್ಲಿದ್ದಾಳೆ. ಪ್ರಲೋಭ-ವಂಚನೆ, ಬಲಾತ್ಕಾರ, ಯಾವುದಾದರೂ ಮಾರ್ಗದಿಂದ ಫಾತಿಮಳನ್ನು ನಾನು ಪಡೆಯದಿದ್ದರೆ ಮೀರ್ ಸಾದಕನೇ ನಾನು? ಈ ಸಾವಿತ್ರಿಯೊಬ್ಬಳು ನನಗೆ ಪ್ರತಿಬಂಧಕ. ಇವಳನ್ನು ಹೇಗಾದರೂ ಮಾಡಿ ದೂರದಲ್ಲಿಡಬೇಕು ಎಂದು ಆಲೋಚನೆ ಮಾಡುತ್ತಾ ಸಾವಿತ್ರಿಯ ಜೊತೆಯಲ್ಲಿ ಮೋತೀಮಹಲಿಗೆ ಬರುತ್ತಿದ್ದನು.

ಸಾವಿತ್ರಿ! ಬೇಗಂಸಾಹೇಬರೇಕೆ ಬಂದಿದ್ದಾರೆ?

ನಿನ್ನನ್ನು ನೋಡಿ ಮಾತನಾಡುವುದಕ್ಕೆ.

ಒಳ್ಳೆಯ ಅಸಮಯದಲ್ಲಿ ಅವರು ಬಂದಿದ್ದಾರೆ. ಈಗ ಮಂತ್ರಿ ಪೂರ್ಣಯ್ಯನವರು ಕೆಲವು ಮುಖ್ಯವಾದ ಕಾಗದಪತ್ರಗಳನ್ನು ತಂದುಕೊಡುವುದಾಗಿಯೂ ಅದನ್ನು ನಾನೇ ನಗರಕ್ಕೆ ತೆಗೆದುಕೊಂಡುಹೋಗಬೇಕೆಂದು ಹೇಳಿದ್ದಾರೆ. ಅವರು ಬರುವ ಹೊತ್ತಿಗೆ ಬೇಗಂಸಾಹೇಬರು ಇಲ್ಲಿರುವುದು ಚೆನ್ನಾಗಿಲ್ಲ. ಅವರು ಹೊರಟುಹೋದರೂ ದಾರಿಯಲ್ಲಿ ಅವರ ಕಣ್ಣಿಗೆ ಬೀಳುತ್ತಾರೆ. ಇದಕ್ಕೇನು ಮಾಡುವುದು? ಬೇಗಂಸಾಹೇಬರು ನನ್ನನ್ನು ನೋಡುವ ಅವಶ್ಯಕತೆ ಇಲ್ಲ. ನೀನೇ ಅವರಿಗೆ ಸಮಾಧಾನ ಹೇಳಿ ಕರೆದುಕೊಂಡು ಹೋಗಿ ಮನೆಗೆ ಬಿಟ್ಟು ಬಾ!

ಅದೆಲ್ಲಾ ಹೇಳಿ ನೋಡಿದೆ. ಅವಳು ಕೇಳಲಿಲ್ಲ. ಅವಳು ನಿನ್ನನ್ನೇ ನೋಡಬೇಕಂತೆ.

ಸಾವಿತ್ರಿ ! ಇದು ಬಲು ಪ್ರಮಾದದ ಸಂಧಿ. ನೀನೊಂದು ಕೆಲಸಮಾಡು. ನೀನು ಜಾಗರೂಕತೆಯಿಂದ ನೋಡುತ್ತಿರು. ದೂರದಲ್ಲಿ ದೀವಟಿಗೆಗಳು ಕಾಣು ತ್ತಲೇ ಮೋತೀಮಹಲಿಗೆ ಬಂದು ಎಚ್ಚರಿಸಿಬಿಡು. ಅಷ್ಟರಲ್ಲಿ ನಾನು ಬೇಗಂ ಸಾಹೇಬರನ್ನು ನೋಡಿ, ಮಾತನಾಡಿ, ಸಮಾಧಾನಪಡಿಸುತ್ತೇನೆ. ಅವರನ್ನು ಮಂತ್ರಿಗಳು ಬಂದು ಹೋಗುವವರೆಗೆ ಅಂತಃಗೃಹದಲ್ಲಿ ಮುಚ್ಚಿಡೋಣ. ಆಮೇಲೆ ಕರೆದುಕೊಂಡು ಹೋಗಿ ಅವರ ಮಹಲಿಗೆ ತಲಪಿಸಿ ಬಾ !

ಸಾವಿತ್ರಿಯು ಸಮ್ಮತಿಸಿದಳು. ಮಿರ್ಸಾದಕನು ಲಗುಬಗೆಯಿಂದ ಮೋತೀಮಹಲಿಗೆ ಹೋದನು. ಅಲ್ಲಿ ಬೈಠಕ್ ಖಾನೆಯಲ್ಲಿ ಫಾತಿಮಾಬೇಗಂ ನಿಂತಿದ್ದಳು. ಮಿರ್ಸಾದಕನು ಅಲ್ಲಿಗೆ ಹೋಗಿ—ಬಹಳ ಮರ್ಯಾದೆಯಿಂದ ಅವರನ್ನು ವಂದಿಸಿದನು. ಬೇಗಂರವರು ನಸುನಗುತ್ತಾ ನಿಮಗೆ ಬಹಳ ತೊಂದರೆ ಕೊಟ್ಟಹಾಗಾಯಿತು.

ಇಲ್ಲ. ಬೇಗಂಸಾಹೇಬ್. ರಾಜಕಾರ್ಯದಲ್ಲಿ ಮಹಲಿಗೆ—ಬರುವುದು ಹೊತ್ತಾಗಿಹೋಯಿತು. ತಮ್ಮನ್ನು ಬಹಳ ಕಾಯಿಸಿದಹಾಗಾಯಿತು. ತಾವು ದಯಮಾಡಿಸಿದ ಕಾರಣವೇನು ?

ನೀವು ನಾಳೆಯದಿನ ಶಿಬಿರಕ್ಕೆ ಹೊರಡುವಿರೆಂದು ತಿಳಿಯಿತು.

ತಮಗಾರು ಹೇಳಿದರು ?

ಸ್ವಯಂ ಪೂರ್ಣಯ್ಯನವರು.

ಹೌದು ! ಹೊರಡುತ್ತೇನೆ. ತಮ್ಮ ಕಾರ್ಯಕ್ಕಾಗಿಯೇ !

ನಾನು ನಿಮ್ಮನ್ನೇ ನಂಬಿದ್ದೇನೆ. ಮಂತ್ರಿಗಳೂ ನಿಮ್ಮನ್ನೇ ನಿಯೋಗಿಸಿದ್ದಾರೆ.

ಬೇಗಂಸಾಹೇಬ್ ತಾವು ದಯವಿಟ್ಟು ಕುಳಿತುಕೊಳ್ಳಬೇಕು. ನಿಂತಿರೋಣವಾಗಿದೆ ಎಂದು ಹೇಳಿ—ಒಂದು ಸೋಪಾವನ್ನು ತೋರಿಸಿದನು. ಬೇಗಂ ಸಾಹೇಬಳು ನಾಚಿಕೆಯಿಂದ—ಮೇಲುಡುಪನ್ನು ಸರಿಮಾಡಿಕೊಂಡು ಕುಳಿತಳು. ಮಿರ್ಸಾದಕನು ಒಳಗೆ ಹೋಗಿ ಮಧುಪಾತ್ರೆಯನ್ನು ತಂದು ಮರ್ಯಾದೆಯಿಂದ—ಬೇಗಂಸಾಹೇಬಳ ಮುಂದೆ ಹಿಡಿದು ಸ್ವೀಕರಿಸಬೇಕೆಂದು ಪ್ರಾರ್ಥಿಸಿ

ದನು. ಬೇಗಂಸಾಹೇಬಳು ತಲೆ ಅಲ್ಲಾಡಿಸಿದಳು. ಮೀರ್‌ಸಾದಕನು ಪುನಃ ಪುನಃ ಬೇಡಿದನು. ಅವನ ದಾಕ್ಷಿಣ್ಯವನ್ನು ಮೀರಲಾರದೆ ಫಾತಿಮಳು ಸ್ವರ್ಣ ಪಾತ್ರೆಯಲ್ಲಿದ್ದ ಮಧುವನ್ನು ಸ್ವಲ್ಪ ಸೇವಿಸಿದಳು. ಕ್ಷಣದಲ್ಲಿ ಮುಖದಲ್ಲಿ ಕೆಂಪೇರಿತು. ಆದರೂ ಬುದ್ಧಿಯಲ್ಲಿ ವ್ಯತ್ಯಾಸವೇನೂ ಆಗಲಿಲ್ಲ.

ಮೀರ್‌ಸಾದಕ್ ! ಆ ಪರಂಗಿಯವರ ಕಾಗದಗಳೇನು ?

ಅದು ನನ್ನಲ್ಲಿಯೇ ಇದೆ. ನಾನೇ ಅದನ್ನು ತೆಗೆದುಕೊಂಡುಹೋಗಿ ಹುಜೂರಿಗೆ ಒಪ್ಪಿಸಬೇಕೆಂದು ಮಂತ್ರಿಗಳು ಅಪ್ಪಣೆಮಾಡಿದ್ದಾರೆ ಎಂದು ಜೇಬಿನಿಂದ ಕಾಗದಗಳ ಕಟ್ಟನ್ನು ತೆಗೆದನು. ಫಾತಿಮಳು ಜಿಂಕೆಯಂತೆ, ಮೀರ್‌ಸಾದಕನ ಮೈಮೇಲೆ ಹಾರಿ ಆ ಕಾಗದಗಳನ್ನು ಕಿತ್ತುಕೊಂಡಳು. ಬೇಕೆಂದು ಮೀರ್‌ಸಾದಕನು ಅಡ್ಡಿಪಡಿಸಿದನು. ಅವನ ಕೈಗಳನ್ನು ತಳ್ಳಿ ಕಿಸೆಗೆ ಕೈ ಹಾಕಿ ಅವುಗಳನ್ನು ತೆಗೆದುಕೊಂಡಳು. ಆ ಸ್ಪರ್ಶದಿಂದ ಮೀರ್‌ಸಾದಕನಿಗೆ ರೋಮಾಂಚನವಾಯಿತು.

ಫಾತಿಮಳು ಒಂದೆರಡು ಹೆಜ್ಜೆ ಹಿಂದಕ್ಕೆ ಸರಿದು ಮೀರ್‌ಸಾದಕ್, ಈ ಕಾಗದಗಳಲ್ಲಿ ಏನಿದೆ?

ಬೇಗಂಸಾಹೇಬ್ ! ಅವುಗಳಲ್ಲಿ ಪರಂಗಿಗಳೊಡನೆ—ದಿವಾನರವರು ಪಿತೂರಿ ನಡೆಸಿದ್ದಾರೆಂದು ದಾಖಲಾತಿಗಳಿವೆ.

ಫಾತಿಮಳಿಗೆ ಸಿಡಿಲು ಬಡಿದಂತಾಯಿತು. ಪಿತೂರಿಯೇ ? ಹಾಗಾದರೆ ದಿವಾನರಿಗೆ ಮುಕ್ತಿ ಎಲ್ಲಿ ಬಂತು ?

ಈ ಕಾಗದಗಳು ಸುಲ್ತಾನರ ಕೈ ಸೇರಿದರೆ ದಿವಾನರ ಅವತಾರವು ಪೂರ್ತಿಯಾದಂತೆಯೇ ಸರಿ ! ಎಂದು ಮೀರ್‌ಸಾದಕನು ಮೆತ್ತಗೆ ತಡವರಿಸುತ್ತ ಹೇಳಿದನು.

ಫಾತಿಮಳಿಗೆ ತಲೆ ತಿರುಗಿತು. ಎದೆಯೊಡೆಯಿತು. ಮೈ ಬೆವರಿತು. ಕೈಕಾಲುಗಳು ಅದುರಿದವು. ಬಾಳೇ ಮರವು ಕಳಚಿ ಬಿದ್ದಂತೆ ಅವಳು ಮೂರ್ಛಿತಳಾಗಿ ಬಿದ್ದಳು. ಹಣೆಗೆ ಏಟು ತಾಗಿ ರಕ್ತ ಬಂತು. ಮೀರ್‌ಸಾದಕನು ಅದನ್ನು ಬಿಗಿಯಾಗಿ ಹಿಡಿದನು. ತನ್ನ ಶುಭ್ರ ವಸ್ತ್ರವನ್ನು ಹರಿದು ಮದ್ಯದಲ್ಲಿ ನೆನಸಿ ಕಟ್ಟಿದನು. ಫಾತಿಮಳನ್ನು ಎತ್ತಿಕೊಂಡು ಹೋಗಿ ಪರ್ಯಂಕ

ದಲ್ಲಿ ಮಲಗಿಸಿದನು. ಸ್ವಲ್ಪ ಮದ್ಯವನ್ನು ಕುಡಿಸಿದನು. ಎದ್ದು ಬಂದು ಬಾಗಿಲನ್ನು ಭದ್ರವಾಗಿ ಮುಚ್ಚಿದನು. ಪುನಃ ಅವಳ ತಲೆಯನ್ನು ತನ್ನ ತೊಡೆಯಮೇಲಿಟ್ಟುಕೊಂಡು ಮಂಚದ ಮೇಲೆ ಕುಳಿತನು. ಫಾತಿಮಳಿಗೆ ಸ್ವಲ್ಪ ತಿಳಿವು ಬಂತು. ಕಣ್ಣು ಬಿಟ್ಟಳು. ತಾನೆಲ್ಲಿದ್ದೇನೆಂದು ಬೋಧೆಯಾಗ ಲಿಲ್ಲ. ಆದರೆ ಮಿರ್ಸಾದಕನು ತನ್ನ ಪಕ್ಕದಲ್ಲಿ ಗಾಳಿ ಹಾಕುತ್ತಾ ಕುಳಿತಿದ್ದಾ ನೆಂದು ತಿಳಿಯಿತು. ಫಾತಿಮಳು ಅವನ ಕೈ ಹಿಡಿದುಕೊಂಡು—ಬಂಧುವೇ ಆ ಕಾಗದಗಳನ್ನು ನಾಶಮಾಡಿಬಿಡಲಾರೆಯಾ? ಅದಕ್ಕಾಗಿ ನಿನಗೆ ಏನು ಬೇಕಾದರೂ ಕೊಡುತ್ತೇನೆ.

ಮಿರ್ಸಾದಕನು ಅವಳ ಬೆನ್ನು ಸವರುತ್ತಾ ನೋಡು ಫಾತಿಮಾ! ನೀನು ಇದೊಂದು ದಿವಸದ ಸ್ವರ್ಗವನ್ನು ಕರುಣಿಸುವುದಾದರೆ ಈ ಕಾಗದ ಗಳನ್ನು ನಿನ್ನ ಎದುರಿನಲ್ಲಿಯೇ ಸುಟ್ಟುಬಿಡುತ್ತೇನೆ.

ಈ ಮಾತುಗಳು ಸ್ವಪ್ನದಲ್ಲಿ ನುಡಿದಂತೆ ಫಾತಿಮಳ ಕಿವಿಗೆ ಬಿತ್ತು. ಅವಳು ಸರ್ಪದರ್ಶನವಾದಂತೆ ಎದ್ದು ಮಿರ್ಸಾದಕನನ್ನು ಬಿರುಗಣ್ಣಿನಿಂದ ನೋಡಿದಳು. ಮಿರ್ಸಾದಕನು ಫಾತಿಮಳನ್ನು ಮಂಚದಿಂದ ಇಳಿಯುವು ದಕ್ಕೆ ಬಿಡದೇ—ಬಿಗಿಯಾಗಿ ಹಿಡಿದು ಬಲಾತ್ಕಾರದಿಂದ ಚುಂಬಿಸಿದನು. ಫಾತಿಮಳು ಘಟ್ಟಿಯಾಗಿ ಕೂಗುವುದಕ್ಕೆ ಹೋದಳು. ಮಿರ್ಸಾದಕನು ಕುತ್ತಿಗೆಯನ್ನು ಬಿಗಿಹಿಡಿದನು. ಫಾತಿಮಳು ಅವನ ಬಾಹು ಬಂಧನದಿಂದ ತಪ್ಪಿಸಿಕೊಳ್ಳಲಾರದೇ ಒದ್ದಾಡಿ ಪುನಃ ಮೂರ್ಛಿತಳಾದಳು. ಮಿರ್ಸಾದಕನು ಪಕ್ಕದಲ್ಲಿದ್ದ ಶೀಸೆಯಿಂದ ಮದ್ಯವನ್ನು ತೆಗದು ಫಾತಿಮಳಿಗೆ ಕುಡಿಸಿದನು. ಫಾತಿಮಳು ಪೂರ್ತಿಯಾಗಿ ಜ್ಞಾನಶೂನ್ಯಳಾದಳು.

ಮಿರ್ಸಾದಕನು ತನ್ನ ಪಾಶವೀವೃತ್ತಿಯಿಂದ ಕಾಮೇಚ್ಛೆಯನ್ನು ಪೂರೈಸಿಕೊಂಡನು. ಉಪಭೋಗದಿಂದ ಕಾಮವು ಶಮನವಾಗುವುದೇನು? ಇಲ್ಲ. ಅವನು ಫಾತಿಮಳನ್ನು ಪುನಃ ಪುನಃ ಆಲಿಂಗಿಸಿ, ಚುಂಬಿಸಿ, ಕಾಡಿನಲ್ಲಿ ಹುಲಿಯು ಹರಿಣಿಯನ್ನು ಆಕ್ರಮಣಮಾಡುವಂತೆ ಅಬ್ಬರಿಸಿದನು.

ಸಾವಿತ್ರಿಯು ಬಹಳ ಹೊತ್ತು ಕಾದುಕಾದು ಸಾಕಾಯಿತು. ಆಗ ಅವಳ ಮನಸ್ಸಿಗೆ ದಿಗಿಲಾಯಿತು. ಮಿರ್ಸಾದಕನು ಮೋಸಗಾರ! ಫಾತಿಮ

ಳನ್ನು ಏನೋ ಮೋಸಪಡಿಸಿರಬೇಕು. ನಾನು ಬೇಡಬೇಡವೆಂದರೂ, ರಾತ್ರಿ ಕಂಡ ಬಾವಿಯಲ್ಲಿ ಹಗಲು ಅವಳಾಗಿ ಹೋಗಿ ಬಿದ್ದರೆ ತಪ್ಪಾರದು? ಹೇಗೇ ಆಗಲಿ--ಫಾತಿಮಾಬೇಗಂರವರನ್ನು ಸುರಕ್ಷಿತವಾಗಿ, ಮನೆಗೆ ತಲಪಿಸುವುದು ನನ್ನ ಭಾರ! ಹೀಗೇ ಆಲೋಚಿಸುತ್ತಾ ಮೋತೀಮಹಲಿಗೆ ಬಂದಳು. ಒಂದು ಕೋಣೆಯಿಂದ ಮತ್ತೊಂದು ಕೋಣೆಗೆ ಕಾಲು ಸದ್ದಾಗದೆ ಪ್ರವೇಶಿಸುತ್ತ ಬಂದಳು. ಆ ಬಾಗಿಲು ಭದ್ರವಾಗಿ ಹಾಕಿದೆ. ಸದ್ದೇ ಇಲ್ಲ. ಓಹೋ! ಫಾತಿಮಳು ಮಿರ್‌ಸಾದಕನ ಮೋಹದಲ್ಲಿ ತಾನಾಗಿ ಬಿದ್ದಿದ್ದಾಳೆ. ನಾನೇನು ಮಾಡಲಾದೀತು? ಹಾಳು ಹೆಂಗಸಿನ ಬುದ್ಧಿ ಚಂಚಲವಾದುದು. ನಿಶಾ ಸಮಯವು ಕಾಮದೇವನ ಪ್ರಸಾದ ಸಮಯ. ಇಬ್ಬರೂ ಮದ್ಯಪಾಯಿಗಳು. ಫಾತಿಮಳು ತರುಣಿ! ಮಿರ್‌ಸಾದಕನು ಕಾಮಾಂಧ! ಸವಿಮಾತುಗಳಿಂದ ವಂಚನೆಯಿಂದ ಫಾತಿಮಳನ್ನು ಮೋಸಮಾಡಿದ್ದಾನೆ. ಪಾತಿವ್ರತ್ಯವನ್ನು ನೀಗಿಕೊಂಡ ಫಾತಿಮಳಿಗೆ ಇನ್ನು ದಿರ್ವಾರ ಚಿಂತೆ ಏಕೆ? ಐಶ್ವರ್ಯ, ಅಂತಸ್ತು ವೈಭವಗಳಿಗಾಗಿಯೇ? ನಾಶವಾದ ಐಶ್ವರ್ಯ, ವೈಭವಗಳೇ ಈ ಜಗತ್ತಿಗೆ ಹುಚ್ಚು ಹಿಡಿಸಿರುವ ಸಮ್ಮೋಹನಾಸ್ತ್ರಗಳು. ಪ್ರಪಂಚವೆಲ್ಲವೂ ವಿಡಂಬನ. ಹೀಗೆ ಹೇಳುತ್ತಾ ನೆಲವನ್ನು ನೋಡಿದಳು. ಹರಿದ ಬಟ್ಟೆಯ ಚಿಂದಿಯು ಬಿದ್ದಿದ್ದುವು. ಅದನ್ನು ನೋಡಿ ಹುಚ್ಚಿಯು ಚಿಟ್ಟನೆ ಚೀರಿದಳು. ಬಾಗಿಲನ್ನು ಧಡಧಡನೆ ಒದ್ದಳು. ಮಿರ್‌ಸಾದಕನು ಹುಚ್ಚಿಯು ಬಂದುಬಿಟ್ಟಳು. ಇನ್ನು ನಿಸ್ತಾರವಿಲ್ಲ ಎಂದುಕೊಂಡು ಬಾಗಿಲು ತೆಗೆದನು. ಹುಚ್ಚಿಯು ಪಾಪಿಯೇ! ನೀಚನೆ ಏನುಮಾಡಿಬಿಟ್ಟೆ ಎಂದು ಬೊಬ್ಬೆ ಹಾಕಿದಳು. ಕೋಣೆಗೆ ಹೋಗಿ ನೋಡಿದಳು. ಮಂಚದಮೇಲೆ ಅಸ್ತವ್ಯಸ್ತವಾಗಿ ಬಿದ್ದಿದ್ದಾಳೆ. ಮೈ ತಡವರಿಸಿದಳು. ಹಣೆಯನ್ನು ಮುಟ್ಟಿ ನೋಡಿದಳು. ಮುಖದ ಹತ್ತಿರ ಮುಖವಿಟ್ಟು ನೋಡಿದಳು. ಫಾತಿಮಳು ಜ್ಞಾನಶೂನ್ಯಳಾಗಿ ನಿಶ್ಚೇಷ್ಟಿತಳಾಗಿ ಬಿದಿದ್ದಾಳೆ. ಹಣೆಗೆ ಬಟ್ಟೆಯು ಕಟ್ಟಿದೆ. ಅದೆಲ್ಲಾ ರಕ್ತಾರ್ದ್ರವಾಗಿದೆ. ಗಾಬರಿಗೊಂಡು ಹೊರಗೆ ಬಂದಳು. ಮಿರ್‌ಸಾದಕನು ನಿರ್ವಿಣ್ಣನಾಗಿ ನಿಂತಿದ್ದಾನೆ.

ಮಿರ್‌ಸಾದಕ್! ಏನುಮಾಡಿದೆ. ಫಾತಿಮಳನ್ನು ಖೂನಿ ಮಾಡಿದೆಯಾ?

ಅವಳಾಗಿ ದುಃಖೋದ್ವೇಗದಿಂದ ಮೂರ್ಛಿತಳಾಗಿ ಬಿದ್ದಳು. ಹಣೆ ಯೊಡೆದು ರಕ್ತ ಬಂತು. ನಾನು ಎತ್ತಿಕೊಂಡುಹೋಗಿ ಮಂಚದ ಮೇಲೆ ಮಲಗಿಸಿದೆ.

ನನ್ನನ್ನೇಕೆ ಅಲ್ಲಿ ಸುಳ್ಳು ಹೇಳಿಬಿಟ್ಟು ಬಂದೆ. ಇಷ್ಟು ಅವಾಂತರವಾದರೆ ಪರಿಜನರನ್ನು ಕರೆಯಲಿಲ್ಲವೇಕೆ?

ಪರಿಜನರು ಬಂದರೆ ಬೇಗಂಸಾಹೇಬಳ ಗುಟ್ಟಾಗುವುದೆಂದು.

ನನ್ನನ್ನೇಕೆ ಕರೆಯಲಿಲ್ಲ.

ಮೌನ!

ನೀನು ನೀಚ! ಕಾಮಾಂಧ! ಫಾತಿಮಳ ಮೇಲೆ ಅತ್ಯಾಚಾರಮಾಡಿದ್ದಿ. ನಾನು ಹೋಗಿ ದೊಡ್ಡ ಬೇಗಂಸಾಹೇಬರಲ್ಲಿ ಎಲ್ಲವನ್ನೂ ತಿಳಿಸಿಬಿಡುತ್ತೇನೆ. ಸುಲ್ತಾನರಲ್ಲಿ ಮೊರೆ ಇಡುತ್ತೇನೆ. ನಿನ್ನನ್ನು ಪುನಃ ಸರಪಣಿ ಬೇಡಿಗಳನ್ನು ಹಾಕಿ ಕತ್ತಲೆಯ ಕಾರಾಗೃಹದಲ್ಲಿ ಇಡಿಸುವಂತೆ ಮಾಡುತ್ತೇನೆ.

ಮಿರ್ಸಾದಕನು ಸಾವಿತ್ರಿಯನ್ನು ನೂರು ಬಗೆಯಿಂದ ಬೇಡಿದನು. ಗುಂಡಿನಿಂದ ಹೊಡೆದುಕೊಂಡು ಪ್ರಾಣಬಿಡುವುದಾಗಿ ಹೇಳಿದನು. ಮೊರೆ ಇಟ್ಟನು. ಸಾವಿತ್ರಿಯ ಬೆನ್ನು ಸವರಿ ಸಂತೈಸಿದನು. ಮಿರ್ಸಾದಕನ ದೈನ್ಯಭಾವದಿಂದ ಸಾವಿತ್ರಿಯು ಕರಗಿಹೋದಳು.

ಹಾಗಾದರೆ ಫಾತಿಮಾಬೇಗಂರವರನ್ನು ಮನೆಗೆ ಸೇರಿಸುವುದೆಂತು?

ನಾನು ಮ್ಯಾನಾ ತರಿಸುತ್ತೇನೆ. ನೀನು ಅವಳನ್ನು ಹಾಕಿಕೊಂಡು ಹೋಗಿ ಮನೆಗೆ ತಲಪಿಸಿ ಬಾ!

ಆದಾಗದು! ಮ್ಯಾನಾ ಬೇಡ. ಅವಳಿಗೆ ಸ್ವಲ್ಪ ತಿಳಿವು ಬರಲಿ. ನಾನು ಹೇಗಾದರೂಮಾಡಿ ಅವಳನ್ನು ಮನೆಗೆ ಸೇರಿಸುತ್ತೇನೆ. ಅವಳ ಹಣೆಯ ಬರಹ.

ಸಾವಿತ್ರಿಯು ಸಮಾಧಾನಕ್ಕೆ ಬಂದುದನ್ನು ನೋಡಿ, ಮಿರ್ಸಾದಕನು ಬದುಕಿಕೊಂಡೆ ಎಂದು ಧೈರ್ಯಮಾಡಿಕೊಂಡನು. ಸಾವಿತ್ರಿಗೆ ಪಾನಮಾಡಲು ಮದ್ಯವನ್ನು ತಂದುಕೊಟ್ಟನು. ಅವಳು ಪಾನಮಾಡಿದಳು. ಉತ್ತೇಜಿತ

ಳಾದಳು. ಮೀರ್‌ಸಾದಕನು ಸಾವಿತ್ರಿಯನ್ನು ಬಾಚಿ ತಬ್ಬಿಕೊಂಡು ಮುತ್ತಿಟ್ಟನು. ಸಾವಿತ್ರಿಯು ಅವನ ಬಾಹುಬಂಧನದಿಂದ ಬಿಡಿಸಿಕೊಂಡು ಹೋಗಿ ಬೇಗಂಸಾಹೇಬಳನ್ನು ಉಪಚರಿಸುತ್ತಾ ಅವಳ ಹತ್ತಿರ ಕುಳಿತಳು.

ಬೇಗಂಸಾಹೇಬಳಿಗೆ ತಿಳಿವು ಬಂತು. ಸುತ್ತಲೂ ಕಣ್ಣು ಬಿಟ್ಟು ನೋಡಿದಳು. ಯಾರೂ ಇಲ್ಲ. ಸಾವಿತ್ರಿಯೊಬ್ಬಳೇ ಕುಳಿತಿದ್ದಾಳೆ. ಅವಳನ್ನು ಬಿಚ್ಚು ಕಣ್ಣಿನಿಂದ ನೋಡುತ್ತಾ ಸಾವಿತ್ರಿ! ನಾನೆಲ್ಲಿದ್ದೇನೆ?

ನೀವು ಮೀರ್‌ಸಾದಕನ ಗೃಹದಲ್ಲಿ—ಮೋತೀಮಹಲಿನಲ್ಲಿದ್ದೀರಿ.

ಎದ್ದು ಕುಳಿತಳು. ಆ ಮೀರ್‌ಸಾದಕನೆಲ್ಲಿ?

ಮೀರ್‌ಸಾದಕನು ಬಂದು ನಿಂತನು.

ಪಾಪಿಯೇ! ಹೀಗೆ ನೀನೆಷ್ಟು ಪತಿವ್ರತೆಯರ ಮಾನಾಪಹಾರಮಾಡಿದ್ದಿ? ಈ ನರಕವು ನಿನ್ನ ಪಾಪದ ಆರಾಧನೆಗಾಗಿಯೇ ನಿರ್ಮಾಣವಾಗಿದೆ. ಇಂದು ನಾನು ಪ್ರಾಣದಮೇಲೆ ಆಶೆಯನ್ನು ಪೂರ್ತಿಯಾಗಿ ತೊರೆದಿದ್ದೇನೆ. ನಿನ್ನ ಈ ಪಾಪಕಾಂಡದಲ್ಲಿ ನಿನ್ನ ಪೂರ್ಣಾಹುತಿಯನ್ನು ತೆಗೆದುಕೊಂಡರೆ, ಶ್ರೀರಂಗಪಟ್ಟಣದ ರಾಜ್ಯದಲ್ಲಿ ಎಷ್ಟೋ ಸತಿಯರ ಸತೀತ್ವವನ್ನು ನಾನು ಕಾಪಾಡಿದಂತಾಗುತ್ತದೆ.

ಫಾತಿಮಾಬೇಗಂ! ತಮ್ಮ ಪ್ರಾರ್ಥನೆಯಂತೆ ಈ ಕಾಗದಗಳನ್ನು ತಮಗೆ ಒಪ್ಪಿಸುತ್ತೇನೆ. ಸ್ವೀಕರಿಸೋಣವಾಗಲಿ ಎಂದು ಅವನಲ್ಲಿದ್ದ ಪಿತೂರಿ ಕಾಗದಗಳನ್ನು ಹಾಸಿಗೆಯಮೇಲಿಟ್ಟನು. ಫಾತಿಮಳು ಅವುಗಳನ್ನು ಕಾಲಿನಿಂದ ಒದ್ದು, ಘಾತುಕನೇ! ನೀಚನೆ! ಇವು ನನಗೆ ಬೇಡ. ನನ್ನ ಸತೀತ್ವವನ್ನು ಸೂರೆಗೊಂಡುದುದಕ್ಕಾಗಿ ನೀನು ಇದನ್ನು ಪಣವಾಗಿ ಕೊಡುವೆಯಾ? ನಾನು ಪಣ್ಯಸ್ತ್ರೀ ಎಂದು ಬಗೆದೆಯಾ? ಎಂದು ಅಳುತ್ತ ಆ ಕಾಗದಗಳನ್ನು ತಳ್ಳಿದಳು.

ಫಾತಿಮಾ! ನೀನು ಸುರಸುಂದರಿ. ಸುಂದರಿಯರ ಕೋಪವೂ ನನಗೆ ಪ್ರಸಾದವೇ. ನೀನು ನನ್ನಲ್ಲಿ ಅನುಗ್ರಹಿಸು. ನಾನು ದಿವಾನರನ್ನು ಬಂಧನದಿಂದ ಬಿಡಿಸುತ್ತೇನೆ. ನಿನ್ನ ಅಂತಸ್ತು, ವೈಭವ ಎಲ್ಲವೂ ಹಾಗೆ ಉಳಿಯುತ್ತವೆ. ನನ್ನ ನಿನ್ನ ಪ್ರೇಮಗಳು ಆಮರಣಾಂತವಾಗಿ ಬೆಳೆಯುತ್ತವೆ.

ಕಾಮಾಂಧನಾದ ಪಶುವೆ! ನನ್ನ ಐಶ್ವರ್ಯ, ವೈಭವಗಳು ಸುಡಲಿ. ದಿವಾನರು ಅಪರಾಧಮಾಡಿದ್ದರೆ ಅನುಭವಿಸಲಿ. ನಾನು ಮೊದಲು ನಿನ್ನ ವಿಚಾರಣೆಮಾಡಿಸುತ್ತೇನೆ. ನಾನು ನನ್ನ ಪತಿದೇವನಲ್ಲಿ ನನ್ನ ಅಪರಾಧವನ್ನೆಲ್ಲಾ ಚಾಚೂ ತಪ್ಪದೆ ಹೇಳಿಕೊಂಡು ಕ್ಷಮೆ ಬೇಡುತ್ತೇನೆ. ತುಂಬಿದ ರಾಜಸಭೆಯಲ್ಲಿ ನಿನ್ನ ಅಪರಾಧವನ್ನು ಹೇಳಿ, ನಿನಗೆ ಮರಣಶಾಸನವಮಾಡಿಸಬೇಕೆಂದು ಸುಲ್ತಾನರನ್ನು ಪ್ರಾರ್ಥಿಸುತ್ತೇನೆ. ಶ್ರೀರಂಗಪಟ್ಟಣದ ರಾಜ್ಯವು ಉಳಿಯಬೇಕಾದರೆ ಇಲ್ಲಿ ಪತಿವ್ರತೆಯ ಮೇಲೆ ನಡೆದ ಅತ್ಯಾಚಾರಕ್ಕೆ ತಕ್ಕ ಶಿಕ್ಷೆಯಾಗಲೇಬೇಕು. ನಿನ್ನನ್ನು ಗಲ್ಲಿಗೇರಿಸಿದ್ದನ್ನು ನೋಡಿ, ವಿಷಪ್ರಾಶನ ಮಾಡಿ, ನನ್ನ ಪತಿದೇವನ ಪಾದತಲದಲ್ಲಿ ಪ್ರಾಣಬಿಡುತ್ತೇನೆ. ಆಮೇಲೆ ದಿವಾನರ ವಿಚಾರಣೆಯಾಗಲಿ. ಅವರು ಬದುಕುವುದಾದರೆ ಅವರ ಸತ್ಯದಿಂದ —ಅವರ ಸ್ವಯಂ ಶಕ್ತಿಯಿಂದ ಬದುಕಲಿ. ನಿನ್ನಂಥಾ ಘೋರ ಪಾತಕಿಯಿಂದ ನನ್ನಂಥ ಪತಿತಳಿಂದ ಅವರ ಪ್ರಾಣ ರಕ್ಷಣೆಯಾಗುವ ಅವಶ್ಯಕತೆ ಇಲ್ಲ ಎಂದು ಹೇಳುತ್ತಾ ಅಳುತ್ತಾ ಸರಸರನೆ ಹೊರಕ್ಕೆ ಹೊರಟಳು. ಮೀರ್‌ಸಾದಕನು ಅವಳನ್ನು ತಡೆದು ನಿಲ್ಲಿಸಲಾರದೇಹೋದನು. ಅವಳ ಹಿಂದೆ ಹಿಂದೆ ಸಾವಿತ್ರಿ ಹೋದಳು. ಇಬ್ಬರೂ ಮಾತನಾಡಲಿಲ್ಲ. ಫಾತಿಮಾಳು ಮಹಲಿಗೆ ಹೋಗಿ, ರಾಜಾರೋಷಾಗಿ ಮಹಾದ್ವಾರವನ್ನು ಹೊಕ್ಕು ತನ್ನ ಜನಾನಕ್ಕೆ ಹೋದಳು. ಅಲ್ಲಿ ತನ್ನ ಪರ್ಯಂಕದಮೇಲೆ ಬಿದ್ದು ಜ್ಞಾನಶೂನ್ಯಳಾದಳು. ಹುಚ್ಚಿಯು ಅವಳನ್ನು ಉಪಚರಿಸುತ್ತಾ ಸಮೀಪದಲ್ಲಿ ಕುಳಿತಳು. ಫಾತಿಮಾಳನ್ನು ಒಂದೆ ರಡುಬಾರಿ ಮುಟ್ಟಿನೋಡಿದಳು. ತೀಕ್ಷ್ಣವಾದ ಜ್ವರವೇಗವು ಅವಳನ್ನು ಸುಡುತ್ತಿತ್ತು. ಬೆಳಗಿನಜಾವ ನಸುಕಿನಲ್ಲಿ ಫಾತಿಮಾಳಿಗೆ ಜ್ಞಾನಬಂತು. ಪಕ್ಕದಲ್ಲಿ ಹುಚ್ಚಿಯಿದ್ದಳು.

ಹುಚ್ಚಿ! ನೀನು ಹೋಗಮ್ಮಾ. ನನಗಾಗಿ ಹಂಬಲಿಸಬೇಡ. ನಿನ್ನದೇನೂ ತಪ್ಪಿಲ್ಲ. ನೀನೆಷ್ಟೋ ನಿರೋಧಿಸಿದೆ. ನಾನು ಕೇಳಲಿಲ್ಲ. ತಪ್ಪು ನನ್ನದು. ನನ್ನ ಕರ್ಮಫಲವನ್ನು ನಾನು ಅನುಭವಿಸುತ್ತೇನೆ. ನಾನು ಮಹಮ್ಮದಾಲಿಯವರ ದರ್ಶನಮಾಡುವವರೆಗೆ ಈ ಪ್ರಾಣವನ್ನು ಧಾರಣ ಮಾಡುತ್ತೇನೆ. ಆಮೇಲೆ ಈ ಭೂಮಿಯಮೇಲೆ ಒಂದು ಕ್ಷಣ ನಾನು ಬದುಕಿರುವುದಿಲ್ಲ. ಹೋಗು ತಾಯಿ. ನಿನ್ನಿಂದ ನನಗೇನೂ ಕೆಲಸವಿಲ್ಲ.

ಹುಚ್ಚಿಗೂ ಫಾತಿಮುಳಿಂದ ಏನೂ ಕೆಲಸವಿಲ್ಲ. ಅವಳಿಗೆ ಈ ಪ್ರಪಂಚದಲ್ಲಿ ಯಾರಿಂದಲೂ, ಏನೂ ಕೆಲಸವಿಲ್ಲ. ಅದಕ್ಕಾಗಿಯೇ ಅವಳು ಹುಚ್ಚಿ. ಫಾತಿಮುಳ ಮೇಲೆ ನಡೆದ ಅತ್ಯಾಚಾರಕ್ಕಾಗಿ ಅವಳಿಗೆ ದುಃಖವೂ ಇಲ್ಲ. ಫಾತಿಮುಳ ಕ್ರೋಧಕ್ಕಾಗಿ ಅವಳ ಮನಸ್ಸು ಭಯಪಡಲೂ ಇಲ್ಲ. ಹುಚ್ಚಿಯು ತನ್ನ ಪ್ರೇಮೋನ್ಮತ್ತವಾದ ಮನಸ್ಸನ್ನು ದಣಿಸುವುದಕ್ಕಾಗಿ ಪ್ರಪಂಚದ ಎಲ್ಲ ಕಷ್ಟಸುಖಗಳನ್ನು ತೊರೆದಿದ್ದಾಳೆ. ವೇದಾಂತಿಗಳು ಮನಸ್ಸನ್ನು ಜಯಿಸುವುದಕ್ಕಾಗಿ ಲೋಕದ ಕಷ್ಟಸುಖಗಳನ್ನು ದೂರಮಾಡುತ್ತಾರೆ. ಬಹಿರಂಗ ವ್ಯಾಪಾರದಲ್ಲಿ ಹುಚ್ಚಿಗೂ ವೇದಾಂತಿಗಳಿಗೂ ಏನೂ ವ್ಯತ್ಯಾಸವಿಲ್ಲ. ಹುಚ್ಚಿಯು ಹಾಡುತ್ತ, ಹಾಡುತ್ತ ಮಹಲಿನಿಂದ ಹೊರಟುಹೋದಳು.

## ದರ್ಬಾರಿನಲ್ಲಿ ದಿವಾನರ ವಿಚಾರಣೆ.

ಪ್ರಾತಃಕಾಲ ಒಂಬತ್ತು ಗಂಟೆಯ ಹೊತ್ತಿಗೆ ಫಾತಿಮಾಬೇಗಂ ಹೊರಡಲು ಎಲ್ಲಾ ಸಿದ್ಧವಾಯಿತು. ಗಾಡಿಗಳೂ, ಒಂಟೆಗಳೂ, ಕುದುರೆಯುರಾವುತರೂ ಎಲ್ಲರೂ ಮಹಲಿನ ಮುಂದೆ ಬಂದು ನಿಂತರು. ಸುಸಜ್ಜಿತವಾದ ಮ್ಯಾನಾ ಅರಮನೆಯಿಂದ ಮಹಲಿನೊಳಕ್ಕೆ ಬಂತು. ತನ್ನಲ್ಲಿದ್ದ ಅಮೂಲ್ಯ ರತ್ನಾಭರಣಗಳನ್ನು, ಧನಕನಕಗಳನ್ನು ತೆಗೆದುಕೊಂಡು ಫಾತಿಮುಳು ಹೊರಟಳು. ಆಪ್ತರಾದ ನಾಲ್ಕು ಮಂದಿ ಸೇವಕರು ಜೊತೆಯಲ್ಲಿ ಹೊರಟರು. ಫಾತಿಮುಳು ನಗರಕ್ಕೆ ಪ್ರಯಾಣ ಮಾಡಿದಳು. ಪೂರ್ಣಯ್ಯನವರು ಸಕಲ ಏರ್ಪಾಡುಗಳನ್ನು ಮಾಡಿ ಬಹಳ ಮರ್ಯಾದೆಯಿಂದ ರಾಣಿಯವರ ಜನಾನಾ ಸವಾರಿಯು ಹೊರಟರೆ ಹೇಗೊ ಹಾಗೆ ವ್ಯವಸ್ಥೆಮಾಡಿದ್ದರು. ದಾರಿಯಲ್ಲಿ ಸೇವಕಿಯರಿಗೆ ಫಾತಿಮುಳಲ್ಲಿ ಬಹಳ ವ್ಯತ್ಯಾಸವು ಕಾಣುತ್ತಿತ್ತು. ಅವರು ಎಷ್ಟೇ ತಂದೊಪ್ಪಿಸಿದರೂ ಫಾತಿಮುಳು ಮದ್ಯವನ್ನು ಸೇವನೆ ಮಾಡಲಿಲ್ಲ. ಆಹಾರವನ್ನು ತೆಗೆದುಕೊಳ್ಳಲಿಲ್ಲ. ಯಾರಲ್ಲಿಯೂ ಮಾತನಾಡಲಿಲ್ಲ. ಅವಳ ರೀತಿಯೇ ಯಾರಿಗೂ ಅರ್ಥವಾಗುತ್ತಿರಲಿಲ್ಲ. ದುಃಖಸಾಗರದಲ್ಲಿ ಮುಳುಗಿರುವ ಫಾತಿಮುಳನ್ನು ಉಪಚರಿಸುವುದಕ್ಕೆ ಸೇವಕಿಯರು ಭಯಪಡುತ್ತಿದ್ದರು. ಇವರು ಶಿಬಿರಕ್ಕೆ ಬರುವುದಕ್ಕೆ ಹನ್ನೆರಡು ದಿವಸ ಹಿಡಿಯಿತು. ಅದಕ್ಕೆ

ಮೊದಲೇ ಪೂರ್ಣಯ್ಯನವರ ಪತ್ರವು ಬಂದಿತ್ತು. ಸುಲ್ತಾನರೇ ಸ್ವಯಂ ಫಾತಿಮಾಬೇಗಂರವರಿಗೆ ಬಿಡಾರಕ್ಕೆ ಏರ್ಪಾಡು ಮಾಡಿದ್ದರು. ಮುಹಮ್ಮದಾಲಿಯವರು ಇದ್ದ ಗುಡಾರದಲ್ಲಿಯೇ ಫಾತಿಮಾಬೇಗಂರವರಿಗೆ ಬಿಡಾರವು ಸಿದ್ಧವಾಗಿತ್ತು. ಫಾತಿಮಾಬೇಗಂರವರನ್ನು ಅಲ್ಲಿ ಇಳಿಸಿದರು. ಅದೇ ದಿನವೇ ಮೀರ್‌ಸಾದಕನೂ ಬಂದು ಸೇರಿದನು. ಅವನು ಫಾತಿಮಾಬೇಗಂರವರು ಬಂದ ದಾರಿಯನ್ನು ಬಿಟ್ಟು ಕುಣಿಗಲು ಮಾರ್ಗವಾಗಿ ಬಂದು ಸೇರಿದನು. ಬಂದ ರಾತ್ರಿಯೇ ಸುಲ್ತಾನರ ಭೇಟಿ ಮಾಡಿದನು. ಮಂತ್ರಿ ಪೂರ್ಣಯ್ಯನವರ ಕಾಗದಗಳನ್ನು ಕೊಟ್ಟನು. ಫರಂಗಿಯವರ ಪಿತೂರಿ ಕಾಗದಗಳನ್ನು ಕೊಟ್ಟನು. ಸುಲ್ತಾನನು ಅವುಗಳನ್ನೆಲ್ಲಾ ಮೀರ್‌ಸಾದಕನಿಂದಲೇ ಓದಿಸಿ ಕೇಳಿದನು. ಆ ಕಾಗದಗಳಲ್ಲಿ ಶ್ರೀರಂಗಪಟ್ಟಣದ ರಾಜ್ಯವನ್ನೇ ಫರಂಗಿಗಳಿಗೆ ಒಪ್ಪಿಸಿಬಿಡುವ ಮಹಾ ಪಿತೂರಿ ಇದೆ. ಅದನ್ನು ನೋಡಿ ಸುಲ್ತಾನನು ಕೆಂಡಕೆಂಡವಾಗಿ ರೇಗಿದನು. ಆಹಾ, ಮುಖ್ಯ ದಿವಾನರೇ ಪಿತೂರಿಗೆ ಪಾಲಾಗಿದ್ದರೆ ಇನ್ನು ನನ್ನ ರಾಜ್ಯವೆಲ್ಲಿ ಬಂತು ? ಈ ಪಿತೂರಿಯು ದೊಡ್ಡ ನವಾಬರ ಕಾಲದಿಂದಲೇ ನಡೆಯುತ್ತಿದೆ. ಇರಲಿ, ಸ್ವಾಮಿ ಭಕ್ತರೆಂದು ಜಂಬ ಕೊಚ್ಚಿಕೊಳ್ಳುವ ದಿವಾನರು ಇದಕ್ಕೆ ಏನು ಉತ್ತರ ಕೊಡುತ್ತಾರೋ ನೋಡೋಣ ಎಂದನು. ಮೀರ್‌ಸಾದಕನೊಂದಿಗೆ ಬಹಳ ಮಾತುಕಥೆಗಳನ್ನಾಡಿ, ಕಳುಹಿಸಿ ತನ್ನ ಗುಡಾರಕ್ಕೆ ಹೋಗಿ ಮಲಗಿದನು.

ಪ್ರಾತಃಕಾಲವಾಗುತ್ತಲೇ ಪಹರೆಯವರು ಬಂದು—ಫಾತಿಮಾಬೇಗಂರವರು ದಿವಾನರವರ ಭೇಟಿಮಾಡಬೇಕೆಂದು ಪ್ರಾರ್ಥಿಸುತ್ತಾರೆಂದು ತಿಳಿಸಿದರು. ಸುಲ್ತಾನರು ಭಕ್ಷಿಯವರವನ್ನು ಕರೆಸಿ ಬೇಗಂಸಾಹೇಬರಿಗೆ ದಿವಾನರ ಭೇಟಿ ಮಾಡಿಸಬೇಕೆಂದು ಅಪ್ಪಣೆ ಮಾಡಿದರು. ಬೇಗಂಸಾಹೇಬಳು ದಿವಾನರು ಇರುವ ಜೈಲು ಶಿಬಿರಕ್ಕೆ ಹೋದಳು. ಸುಲ್ತಾನರ ಅಪ್ಪಣೆಯಂತೆ ಬೇಗಂ ಸಾಹೇಬಳನ್ನು ಮ್ಯಾನಾದಲ್ಲಿ ಕೂಡಿಸಿಕೊಂಡು ದಿವಾನರನ್ನು ಬಂಧನದಲ್ಲಿಟ್ಟಿದ್ದ ಶಿಬಿರಕ್ಕೆ ಕರೆದೊಯ್ದರು. ಅಲ್ಲಿ ಒಂದು ಭದ್ರವಾದ ಸ್ಥಳದಲ್ಲಿ ಮುಹಮ್ಮದಾಲಿಯವರನ್ನು ಇಟ್ಟಿದ್ದರು. ಅವರ ಕೈಕಾಲುಗಳಿಗೆ ಸರಪಣಿಗಳನ್ನು ಕಟ್ಟಿದ್ದರು. ಫಾತಿಮಳು ಅಲ್ಲಿಗೆ ಹೋಗಿ ದಿವಾನರ ದರ್ಶನಮಾಡಿದಳು. ಆ ಅವಸ್ಥೆಯನ್ನು ನೋಡಲಾರದೆ ಅಳುವುದಕ್ಕೆ ಮೊದಲಿಟ್ಟಳು. ಅವಳ ಆ ಉದ್ವಿ

ಗ್ಲಾನವಸ್ಥೆಯನ್ನು ನೋಡಿ, ಮಹಮ್ಮದಾಲಿಯ ಕಣ್ಣಿನಲ್ಲಿ ನೀರು ಬಂತು. ಆ ಮಹಾನುಭಾವನು ತಕ್ಷಣ ಅದನ್ನು ತಡೆದುಕೊಂಡು, ಪಾತಿಮಾ, ಇಲ್ಲಿಗೇಕೆ ಬಂದೆ?

ತಮ್ಮ ಈ ದುರವಸ್ಥೆಯನ್ನು ನೋಡಲು ವಿಧಿಯು ಕರತಂದಿತು. ದೇವಾ! ಇಂಥಾ ಘೋರ ಸಂಕಟದಿಂದ ತಮ್ಮ ಬಿಡುಗಡೆ ಇಲ್ಲವೆ?

ಬಿಡುಗಡೆಯೇ! ಒಂದೇ ಒಂದು ಕ್ಷಣದಲ್ಲಿ ಬಿಡುಗಡೆಯನ್ನು ಹೊಂದ ಬಹುದು. ಬಿಡುಗಡೆಯನ್ನು ಅಪೇಕ್ಷಿಸುವುದಿಲ್ಲ. ನನಗೆ ಇಂಥಾ ಅಪಮಾನ ವಾದಮೇಲೆ ಏತಕ್ಕಾಗಿ ಬದುಕಬೇಕು? ಫಾತಿಮಾ, ಹೋದಮಾನವು ಬಾರದು. ನನಗೆ ಬದುಕುವ ಅಪೇಕ್ಷೆಯೇ ಇಲ್ಲ. ವೀರನಂತೆ ಸಾಯುತ್ತೇನೆ. ನಿನಗೊಂದು ಮಾತು ಹೇಳಿಕಳುಹಿಸಬೇಕೆಂದಿದ್ದೆ. ನೀನೇ ಪ್ರತ್ಯಕ್ಷವಾಗಿ ಬಂದಿದ್ದಿ. ನೋಡು ಫಾತಿಮಾ! ನೀನು ಈ ಟಿಪ್ಪೂಸುಲ್ತಾನನ ಹೆಸರಿಲ್ಲದ ಸ್ಥಳದಲ್ಲಿ ಹೋಗಿ ಇರಬೇಕು. ಈ ರಾಜ್ಯದಿಂದ ಒಂದು ಕವಡೆಯನ್ನೂ ತೆಗೆದುಕೊಂಡು ಹೋಗಕೂಡದು. ಬಟ್ಟೆಗಳನ್ನು ಹೊಲೆದು ಜೀವನಮಾಡು. ಮಶೀದಿಯನ್ನು ಗುಡಿಸಿ ಹೊಟ್ಟೆ ಹೊರೆದುಕೋ. ಭಿಕ್ಷೆ ಬೇಡಿಯಾದರೂ ಬದುಕು. ಈ ರಾಜ್ಯದಲ್ಲಿರಬೇಡ. ಹೊರಟು ಹೋಗು. ನನಗಾಗಿ ಚಿಂತಿಸ ಬೇಡ, ನಾನು ಈಕ್ಷಣದವರೆಗೆ ವೀರನಂತೆ ಬದುಕಿದ್ದೇನೆ. ವೀರನಂತೆ ಸಾಯುತ್ತೇನೆ.

ಫಾತಿಮಳು ಅನಾಕ್ಕಾಗಿ ಗಡಗಡನೆ ನಡುಗುತ್ತ ಚೀರಿ ಅಳುತ್ತ ಭೂಮಿ ಯಮೇಲೆ ಬಿದ್ದಳು. ಮಹಮ್ಮದಾಲಿಯು–ಅವಳನ್ನು ಕರೆದುಕೊಂಡುಹೋಗಿ ಎಂದು ಅಪ್ಪಣೆ ಮಾಡಿದನು. ಸೇವಕಿಯರು ಹಿಡಿದುಕೊಂಡು ಹೋಗಿ ಮ್ಯಾನಾದಲ್ಲಿ ಕೂಡಿಸಿದರು. ಮ್ಯಾನಾ ಬಿಡಾರಕ್ಕೆ ಹೊರಟು ಹೋಯಿತು. ಬಿಡಾರದಲ್ಲಿ ಸೇವಕಿಯರು ಹಾಸಿಗೆಯಮೇಲೆ ಮಲಗಿಸಿದರು. ಒಂದೆರಡು ಗಂಟೆಗಳಲ್ಲಿ ಫಾತಿಮಳು ಚೇತರಿಸಿಕೊಂಡಳು.

ಅಯ್ಯೋ! ನಾನೇಕೆ ಇಲ್ಲಿಗೆ ಬಂದೆ! ನನ್ನ ಸ್ವಾಮಿಯ ದರ್ಶನ ಮಾಡಿದೆ. ಎಂಥಾ ದುರ್ದೆಸೆಯಲ್ಲಿ ಆತನ ದರ್ಶನಮಾಡಬೇಕಾಯಿತು. ನನ್ನ ಪಾಪವನ್ನು ಅವರಲ್ಲಿ ಹೇಳಿಕೊಳ್ಳಬೇಕೆಂದು ಬಂದೆ. ಪಾಪವನ್ನು ಆ ಪ್ರತ್ಯಕ್ಷ

ದೇವನ ಮುಂದೆ ಹೇಳಿಕೊಳ್ಳಲು ಧೈರ್ಯವೆಲ್ಲಿದೆ ನನಗೆ ! ನನ್ನ ಪಾಪಕ್ಕೆ ನಾನೇ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು. ಈಗಲೇ ವಿಷಪಾನಮಾಡಿ ಪ್ರಾಣ ಬಿಡುತ್ತಿದ್ದೆ. ಆ ಮೀರ್‌ಸಾದಕನ ಮೇಲೆ ಸೇಡು ತೀರಿಸಿಕೊಳ್ಳದೆ ನಾನೇಕೆ ಸಾಯುತ್ತೇನೆ. ನನ್ನ ಪ್ರಾಣವನ್ನು ಅವನ ಪ್ರಾಣಾಪಹಾರಮಾಡುವುದಕ್ಕಾಗಿ ಮೀಸಲಾಗಿಡುತ್ತೇನೆ. ಈಗೇನು ಮಾಡಲಿ ? ಒಂದೇ ದಾರಿ ! ಸುಲ್ತಾನರನ್ನು ಕರಸಿ, ನನ್ನ ಫಿರ್ಯಾದನ್ನು ಹೇಳಿಕೊಳ್ಳುತ್ತೇನೆ. ಅವರು ಅಪರಾಧಿಗೆ ತಕ್ಕ ಶಿಕ್ಷೆ ಕೊಟ್ಟರೆ —ದಿವಾನರು ಸಾಯುವುದಕ್ಕೆ ಮೊದಲೇ ನನ್ನ ಇಹಲೋಕದ ಯಾತ್ರೆಯನ್ನು ಮುಗಿಸುತ್ತೇನೆ. ನಾನು ಹೇಳಿಕಳುಹಿಸಿದರೆ ಸುಲ್ತಾನರು ಬರುತ್ತಾರೆಯೇ ? ನನ್ನ ಪತಿದೇವನು ಸುಲ್ತಾನರಮೇಲೆ ಎಷ್ಟೊಂದು ಆಗ್ರಹದಿಂದ ಶಪಿಸಿದ್ದಾರೆ. ಅಂಥಾವರಲ್ಲಿ ನಾನು ಪ್ರಾರ್ಥನೆ ಮಾಡುವುದು ಸರಿಯೆ ? ಮೀರ್‌ಸಾದಕನ ಪ್ರಾಯಶ್ಚಿತ್ತಕ್ಕಾಗಿ ಇದೊಂದು ಬಾರಿ—ಒಂದೇ ಬಾರಿ ಪತಿದೇವನ ಅಪ್ಪಣೆಯನ್ನು ಉಲ್ಲಂಘಿಸುತ್ತೇನೆ. ಹೀಗೆ ಮನಸ್ಸಿನಲ್ಲಿ ಅಂದುಕೊಂಡು ಪರಿಚಾರಕಳನ್ನು ಕರೆದು ನಾನು ಅಶಕ್ತಳಾಗಿದ್ದೇನೆ. ಸುಲ್ತಾನರಲ್ಲಿ ಅರಿಕೆಮಾಡಿ, ಅವರನ್ನು ಕರದುತಾ ! ಎಂದು ಹೇಳಿದಳು. ಈ ಸಮಾಚಾರವನ್ನು ಕೇಳುತ್ತಲೇ ಸುಲ್ತಾನನು ಇದ್ದಕ್ಕಿದ್ದಹಾಗೆ ಫಾತಿಮಾಬೇಗಂರವರು ಇರುವ ಗುಡಾರಕ್ಕೆ ಬಂದನು. ಅವನ ಮನಸ್ಸು ಡೋಲಾಯಮಾನವಾಗಿತ್ತು. ಕ್ರೋಧದಲ್ಲಿ ಮಹಮ್ಮದಾಲಿಯನ್ನು ಬಂಧಿಸಿಬಿಟ್ಟ ! ಮಾತುಶ್ರೀಯವರು ಅದು ಮಹಾ ಅಪರಾಧವೆಂದು ಬರೆದಿದ್ದಾರೆ. ಮಂತ್ರಿ ಪೂರ್ಣಯ್ಯನವರು ದಿವಾನರ ವಿಷಯದಲ್ಲಿ ಇಂಥಾ ದುರಂತವು ಪ್ರಾಪ್ತವಾದುದು ಮೈಸೂರಿನ ದೌರ್ಭಾಗ್ಯವೆಂದು ಬರೆದಿದ್ದಾರೆ. ಮೀರ್‌ಸಾದಕನೂ ದಿವಾನರನ್ನು ಬಿಡುಗಡೆಮಾಡಬೇಕೆಂದು ಸಲಹೆ ಹೇಳುತ್ತಿದ್ದಾನೆ. ಇದಿಷ್ಟನ್ನು ಚಿಮ್ಮಿ ನೆಗೆಯುವ ಮನೋಧೈರ್ಯವು ಸುಲ್ತಾನನಿಗೆ ಕುಂಠಿತವಾಗಿದೆ. ಆದರೆ ರಾಜಸತ್ತೆ. ದಿವಾನರು ಖಾಸಿಂಖಾನನನ್ನು ಉಳಿಸಿದ್ದು ತಪ್ಪು. ಆದರೂ ಖಾಸಿಂಖಾನನು ಉಳಿದನೇನು ? ಈಗ ದಿವಾನರಲ್ಲಿ ಹೇಗಾದರೂ ಸಂಧಾನ ನಡೆಸುವ ಪ್ರತ್ಯಾಶೆಯು—ಸುಲ್ತಾನನಿಗೆ ಉಂಟು. ಈ ಬೇಗಂಸಾಹೇಬಳ ಮೂಲಕ ಆ ಸಂಧಾನವನ್ನು ನಡೆಸಬೇಕೆಂದು ಹವಣಿಸಿದನು. ಬೇಗಂಸಾಹೇಬಳಿಂದ ಕರೆಬರುತ್ತಲೇ ಅವಳ ಬಿಡಾರಕ್ಕೆ ಹೋದನು.

ಸುಲ್ತಾನನು ಹೋಗುತ್ತಲೇ ಬೇಗಂಸಾಹೇಬಳು ಎದ್ದು ನಿಂತಳು. ಸುಲ್ತಾನನು ಬಹಳ ಮರ್ಯಾದೆಯಿಂದ ಬೇಗಂಸಾಹೇಬಳನ್ನು ಕುಳಿತುಕೊಳ್ಳ ಬೇಕೆಂದು ಪ್ರಾರ್ಥಿಸಿದನು. ತನ್ನನ್ನು ಕರಸಿದ ಕಾರಣವೇನೆಂದು ಪ್ರಶ್ನೆ ಮಾಡಿದನು.

ಫಾತಿಮಳು ಎರಡುಮೂರಾವೃತ್ತಿ ಮಾತನಾಡುವುದಕ್ಕೆ ಹೋದಳು ಬಾಯಿ ಬರಲಿಲ್ಲ.

ಸುಲ್ತಾನನು ಬೇಗಂಸಾಹೇಬ್, ತಾವು ದಿವಾನಸಾಹೇಬರನ್ನು ಬಿಡುಗಡೆ ಮಾಡಿಸುವುದಕ್ಕೆ ದಯಮಾಡಿಸೋಣಾಗಿದೆಯೆಂದು ಮಂತ್ರಿ ಪೂರ್ಣಯ್ಯ ನವರ ಪತ್ರದಿಂದ ತಿಳಿಯಿತು. ದಿವಾನರು ನನಗೆ ಪಿತೃಸಮಾನರು. ಆದರೂ ರಾಜತ್ವವನ್ನು ಧರ್ಮದಿಂದ ನಡೆಸುವುದು ನನ್ನ ಕರ್ತವ್ಯ. ಅವರು ಇಂದು ರಾಜಸಭೆಯಲ್ಲಿ ಕ್ಷಮಾಪ್ರಾರ್ಥನೆ ಮಾಡಿದರೆ—ನಾನು ನನ್ನ ಕರ್ತವ್ಯದಿಂದ ಪಾರಾದಂತಾಗುತ್ತದೆ.

ಸುಲ್ತಾನರೇ! ನಾನು ಮೊದಲು ದಿವಾನಸಾಹೇಬರ ವಿಚಾರಕ್ಕೆ ಬಂದೆ. ಈಗ ನನ್ನ ಆಶೆ ಅದಲ್ಲ. ದಿವಾನರು ಅಳಿಯುವುದೂ ಉಳಿಯುವುದೂ ಅವರ ಸ್ವಾಮಿನಿಷ್ಠೆಯಿಂದ. ತಮ್ಮ ಮಿತ್ರನಾದ ಮಿರ್‌ಸಾದಕನಮೇಲೆ ನನ್ನದೊಂದು ಅಭಿಯೋಗವಿದೆ. ಅವನ ಮೇಲಿನ ಸೇಡು ತೀರಿಸಿಕೊಳ್ಳಲು—ತಮ್ಮಲ್ಲಿ ನ್ಯಾಯಭಿಕ್ಷೆ ಬೇಡುತ್ತಿದ್ದೇನೆ.

ಬೇಗಂಸಾಹೇಬ್! ಮಿರ್‌ಸಾದಕನು ದಿವಾನರ ಬಿಡುಗಡೆಗಾಗಿ ಸರ್ವ ಪ್ರಯತ್ನಮಾಡುತ್ತಿದ್ದಾನೆ. ತಾವು ಅವನ ಮೇಲೆ ಅಭಿಯೋಗ ನಡೆಸುತ್ತಿ ರೋಣಾಗಿದೆ. ಇದೊಂದು ಆಶ್ಚರ್ಯ.

ಸುಲ್ತಾನರೇ! ಮಿರ್‌ಸಾದಕನು. ವಂಚಕ, ಪಾಪಿ, ಅವನು ದಿವಾನರು ನಿರ್ದೋಷಿಗಳೆಂದು ಬಲ್ಲ. ಅವರ ಸತ್ಯ, ಸ್ವಾಮಿನಿಷ್ಠೆಗಳಿಂದಲೇ ಅವರ ಬಿಡುಗಡೆಯಾದರೆ ನಾನು ಸಭ್ಯ, ಒಳ್ಳೆಯವನು ಎನ್ನಿಸಿಕೊಳ್ಳುವುದ ಕ್ಕಾಗಿ ಮಿರ್‌ಸಾದಕನು ಈ ಆಟವನ್ನು ಹೂಡಿದ್ದಾನೆ. ದಿವಾನರಿಗೆ ಅವನ ಶಿಫಾರಸ್ಸು ಬೇಕಿಲ್ಲ. ಅವರ ಸತ್ಯವೇ ಅವರನ್ನುದ್ಧಾರಮಾಡುತ್ತದೆ. ನನ್ನ ಮಾತು ಬೇರೆ. ನನ್ನ ಅಭಿಯೋಗವೇ ಬೇರೆ. ತಮ್ಮ ಧರ್ಮರಾಜ್ಯದಲ್ಲಿ

ತಮ್ಮ ಮಿತ್ರನಾದ ಮೀರ್‌ಸಾದಕನು ಒಬ್ಬ ಪತಿವ್ರತಾಸ್ತ್ರೀಮೇಲೆ ಅತ್ಯಾಚಾರ ನಡೆಸಿದ್ದಾನೆ. ಅದಕ್ಕೆ ತಕ್ಕ ಶಿಕ್ಷೆಯು ಅವನಿಗೆ ಆಗಲೇಬೇಕು.

ತಾಯಿ! ಅದು ಮಹಾಪರಾಧ. ನಾನು ಅವನನ್ನು ಕ್ಷಮಿಸುವುದಿಲ್ಲ. ಅದಕ್ಕೆ ಸಾಕ್ಷ್ಯವು ತಮ್ಮಲ್ಲೇನಿದೆ?

ಸಾಕ್ಷಿಯೆ! ಸಾಕ್ಷಿಯೇಕೆ? ನಾನೇ ಸಾಕ್ಷಿ. ನಾನೇ ಅತ್ಯಾಚಾರಕ್ಕೆ ಪಕ್ಕಾದ ಮಹಾ ಪಾಪಿ.

ಸುಲ್ತಾನನು ಹಾ! ಎಂದು ಬೆರಳು ಕಡಿದನು. ಬೆರಳಿಂದ ರಕ್ತವು ಛಿಲ್ಲೆಂದು ಹಾರಿತು.

ತಾಯಿ! ಆ ಪಾಪಿಯನ್ನು ವಿಚಾರಣೆಮಾಡಿ ಮರಣಾಂತ ಪ್ರಾಯಶ್ಚಿತ್ತ ಮಾಡುತ್ತೇನೆ. ದೊಡ್ಡ ಸುಲ್ತಾನರು ಅವನಿಗೆ—ಶಿಕ್ಷೆಯನ್ನು ವಿಧಿಸಿಯೇ ಇದ್ದಾರೆ. ಆದರೂ ನ್ಯಾಯಸ್ಥಾನದಲ್ಲಿ ಒಂದು ಸಾಕ್ಷಿಯು ಬೇಕೇ ಬೇಕು.

ಸಾಕ್ಷಿಯು ಬೇಕಾದರೆ ಹುಚ್ಚಿಯು ಸಾಕ್ಷಿ.

ನಾನು ರಾಜಸಭೆಯಲ್ಲಿ ವಿಚಾರಣೆ ಮಾಡಿದರೆ-ತಮ್ಮ ಅಂತಸ್ತಿಗೆ ಕುಂದಕ. ತಾವು ರಾಜಸಭೆಗೆ ಬರಬೇಕಾಗುತ್ತದೆ.

ರಾಜಸಭೆಯೇ! ಬೀದಿಯ ಭಿಕಾರಿಣಿಯಾದ ನನಗೆ ರಾಜಸಭೆಗೆ ಬರಲು —ಭಯವೇನು? ಅಲ್ಲಿಯೇ ಎಲ್ಲಾ ವಿಚಾರಣೆ ಆಗಲಿ.

ಸುಲ್ತಾನನು ಬೀಳ್ಕೊಂಡು ಹೊರಟನು. ಹೋಗುತ್ತಾ—ನೀಚನಾದ ಮೀರ್‌ಸಾದಕನೆ ಎಂಥಾ ಕೆಲಸದಲ್ಲಿ ಕೈಹಾಕಿದೆ. ದಿವಾನರಮೇಲೆ ನಿನ್ನ ಅತ್ಯಾಚಾರವು ಅಕ್ಷಮ್ಯವಾದುದು. ನನ್ನ ರಾಜ್ಯವು ಇರಲಿ ಹೋಗಲಿ! ನಾನು ನಿನ್ನನ್ನು ಶಿಕ್ಷಿಸದೇ ಬಿಡುವುದಿಲ್ಲ. ಎಂದುಕೊಳ್ಳುತ್ತಾ ತನ್ನ ಗುಡಾರಕ್ಕೆ ತೆರಳಿದನು. ಅಲ್ಲಿ ಮೀರ್‌ಸಾದಕನನ್ನು ಕರಸಿದನು. • ಅವನು ಬಂದು ದೂರದಲ್ಲಿ ನಿಂತನು.

ಸುಲ್ತಾನನು—ಮೀರ್‌ಸಾದಕ್, ನೀನು ಮಹಾ ಪಾಪಮಾಡಿದ್ದಿ. ದಿವಾನರವರ ಧರ್ಮಪತ್ನಿಯವರಾದ ಬೇಗಂಸಾಹೇಬರಮೇಲೆ ಅತ್ಯಾಚಾರ ನಡೆಸಿದ್ದಿ. ಏನು ಹೇಳುವೆ? ಮಹಾಪಾಪ! ಮಹಾಪಾಪ.

ಮಹಾಸ್ವಾಮಿ ! ಇದೆಲ್ಲಿ ಬಂತು. ಈ ಅಪವಾದ. ದೊಡ್ಡ ಬೆಟ್ಟವು ಬಂದು ನನ್ನ ಮೇಲೆ ಮಗುಚಿಕೊಂಡಂತೆ ಆಯಿತು. ನಾನು ನಿಜವನ್ನು ಹೇಳಿಬಿಡುತ್ತೇನೆ. ಬೇಗಂಸಾಹೇಬರು, ನಾನು ಶ್ರೀರಂಗಪಟ್ಟಣದಿಂದ ಹೊರಡುವ ಹಿಂದಿನ ರಾತ್ರಿ ನನ್ನ ಮನೆಗೆ ಬಂದರು. ಬಂದು ನನ್ನನ್ನು ಕಂಡು— ದಿವಾನರನ್ನು ಉಳಿಸುವ ಪ್ರಯತ್ನಮಾಡಬೇಕೆಂದು ಕೇಳಿದರು. ನಾನು ತಾಯೆ ! ಅವರು ನಮ್ಮೆಲ್ಲರಿಗೂ ಹಿರಿಯರು. ಅವರ ವಿಷಯದಲ್ಲಿ ಸೇವೆ ಮಾಡುವುದಕ್ಕೆ ನಾನು ಸಿದ್ಧನಾಗಿದ್ದೇನೆ ಎಂದು ಹೇಳಿದೆ. ಬೇಗಂಸಾಹೇಬರು– ತಮ್ಮಲ್ಲಿರುವ ಫರಂಗಿಯವರ ಕಾಗದಗಳಿದ್ದರೆ ದಿವಾನರು ಉಳಿಯುವುದಿಲ್ಲ. ಅದನ್ನು ತಮಗೆ ಕೊಡಬೇಕೆಂದು ಕೇಳಿದರು. ಅದಕ್ಕೆ ಪ್ರತಿಯಾಗಿ ತಮ್ಮ ಸರ್ವಸ್ವವನ್ನು ಕೊಡುವುದಾಗಿ ಹೇಳಿದರು. ಸ್ತ್ರೀ ಸಹಜವಾದ ಬೆಡಗು ಬಿನ್ನಾಣಗಳಿಂದ ನನ್ನನ್ನು ವಂಚಿಸಲು ಸರ್ವಪ್ರಯತ್ನಮಾಡಿದರು. ನಾನು ಸಗ್ಗಲಿಲ್ಲ. ಕಾಗದಗಳನ್ನು ಕೊಡಲಿಲ್ಲ. ಅಂದೇ ನನ್ನ ಪ್ರಾಣಕ್ಕೆ ಸಂಚಕಾರ ತರುವುದಾಗಿ ಹೇಳಿ—ಶಪಥಮಾಡಿ ಹೋದರು. ನಾನು ಸತ್ಯವಾಗಿರುವಾಗ ಅವರೇನು ಮಾಡಬಲ್ಲರೆಂದು ನಾನು ಸನ್ನಿಧಾನದಲ್ಲಿ ಅರಿಕೆಮಾಡಲಿಲ್ಲ.

ನೀನು ಅತ್ಯಾಚಾರ ಮಾಡಿದೆಯೆಂದೂ, ಹುಚ್ಚಿ ಸಾವಿತ್ರಿಯು ಅದಕ್ಕೆ ಸಾಕ್ಷಿಯೆಂದೂ, ನಿನ್ನ ಮೇಲೆ ಅಭಿಯೋಗ ನಡೆಸುವುದಾಗಿಯೂ ಬೇಗಂ ಸಾಹೇಬರು ಹೇಳುತ್ತಾರೆ.

ಹುಜೂರು ! ಹುಚ್ಚಿಯ ಸಾಕ್ಷಿಯು ಒಂದು ಸಾಕ್ಷಿಯೆ. ಆದರೂ ತಮ್ಮ ಸರ್ಕಾರಕ್ಕೆ ಅಪಕ್ಯಾತಿಯು ಕೂಡದು. ತಾವು ರಾಜಸಭೆಯಲ್ಲಿ ವಿಚಾರಣೆ ನಡೆಸಲೇಬೇಕು. ಖುದ್ದು ದಿವಾನ್ ಸಾಹೇಬರವರ ಸಮಕ್ಷಮ ವಿಚಾರಣೆ ಆಗಬೇಕು.

ಆಗಲಿ, ನೀನು ದೋಷಮುಕ್ತನಾಗುವವರೆಗೆ ನಮ್ಮಲ್ಲಿ ಬರಕೂಡದು. ದೋಷವು ಸಾಬೀತಾದರೆ ನಿನಗೆ ಆಮರಣಾಂತವಾದ ಶಿಕ್ಷೆಯಾಗುವುದು.

" ಸನ್ನಿಧಾನದ ಹುಕ್ಕುಂ "—ಮೀರ್‌ಸಾದಕನು ಹೊರಗೆಹೊರಟು ಹೋದನು.

ಮಧ್ಯಾಹ್ನಾನಂತರ ಸಭೆಯು ಸೇರಬೇಕೆಂದು ಸುಲ್ತಾನರ ಅಪ್ಪಣೆ ಆಯಿತು. ನಾಲ್ಕು ಗಂಟೆಗೆ ಸಭೆಯು ಸೇರಿತು. ಇಂಥಾ ಸಭೆಯು ಎಂದೂ ಸೇರಿಲ್ಲ. ದಿವಾನ್ ಮಹಮ್ಮದಾಲಿಯ ವಿಚಾರಣೆ. ಚಾವಡಿಯ ಸುತ್ತಲೂ ಸೈನ್ಯವು ಸಿದ್ಧವಾಗಿದೆ. ಸಭಾಂಗಣದಲ್ಲಿ ಸೇನಾನಾಯಕರೂ ಮಂತ್ರಿಗಳೂ, ಸರದಾರರೂ ಖಾಜಿಗಳೂ, ಬಂದು ತಮ್ಮ ತಮ್ಮ ಆಸನಗಳಲ್ಲಿ ಕುಳಿತಿದ್ದಾರೆ. ಸುಲ್ತಾನರ ಸವಾರಿಯು ರಾಜವೈಭವದೊಂದಿಗೆ ಬಂದು ಸಿಂಹಾಸನದಮೇಲೆ ಮಂಡಿಸಿತು. ದಿವಾನ್ ಮಹಮ್ಮದಾಲಿಯವರನ್ನು ಕರತರಬೇಕೆಂದು ಹುಕುಂ ಆಯಿತು. ಒಂದು ದೊಡ್ಡ ಕಬ್ಬಿಣದ ಪಂಜರವನ್ನು ತಂದು ಸಿಂಹಾಸನದ ಎದುರಿಗಿಟ್ಟರು. ಸುತ್ತಲೂ ಬಿಚ್ಚುಕತ್ತಿಯ ಪಹರಾ ಕಾವಲಿದೆ. ಮಹಮ್ಮದಾಲಿಯವರ ಕೈಗೂ ಕಾಲಿಗೂ ಸರಪಣಿಗಳನ್ನು ಹಾಕಿ ಕಟ್ಟಿ ಪಂಜರದಲ್ಲಿ ಕೂಡಿಸ್ಸಾರೆ. ಆ ಪಂಜರದಲ್ಲಿ ಮಹಮ್ಮದಾಲಿಯವರು ವೀರಮಂಡಿಯನ್ನು ಹಾಕಿಕೊಂಡು ಕುಳಿತಿದ್ದಾರೆ.

ಸುಲ್ತಾನರು —ಉಮ್ರಾಗಳೂ, ಖಾಜಿಗಳೂ, ಸರದಾರರ ಕಡೆ ತಿರುಗಿ— ಮಹಮ್ಮದಾಲಿಯವರ ವಿಚಾರಣೆಯಾಗಬೇಕು. ಅವರ ಅಪರಾಧವು ದುರಂತವಾದುದು. ನೀವೇನು ಹೇಳುವಿರಿ?

ಮಹಮ್ಮದಾಲಿಯವರಿದ್ದ ಪಂಜರವು ದಢದಢ ಸದ್ದಾಯಿತು. ಅವರು ಸಿಡಿಲಿನಂತೆ ಘರ್ಜಿಸಿದರು. ನಾನು ಹೇಳುತ್ತೇನೆ---

ಸುಲ್ತಾನರೇ. ನನ್ನ ಮೇಲಿನ ಅಪರಾಧವೇನು?

ರಾಜದಂಡದಿಂದ ದಂಡಿತನಾಗಿ ವಧ್ಯವೇದಿಕೆಯ ಮೇಲಿದ್ದ ಖಾನನನ್ನು ನೀವು ತಪ್ಪಿಸಿ ರಾಜದ್ರೋಹ ಮಾಡಿದ್ದೀರಿ.

ಮಹಮ್ಮದಾಲಿಯು—ರಾಜದ್ರೋಹ! ರಾಜದ್ರೋಹ! ರಾಜನಾರು? ನಾವೆಲ್ಲರೂ ಸೇರಿ ಮೈಸೂರು ರಾಜ್ಯವನ್ನು ಕಟ್ಟುತ್ತಿದ್ದೇವೆ. ದೊಡ್ಡ ನವಾಬರಾದ ಹೈದರಲ್ಲಿಖಾನರವರು ಈ ಸಂಕಲ್ಪವನ್ನು ಆರಂಭಿಸಿದರು. ಇಂದು ನನ್ನನ್ನು ರಾಜದ್ರೋಹಿ ಎನ್ನಬಹುದು. ಎಷ್ಟೋ ಯುದ್ಧಗಳಲ್ಲಿ ನಾನು ಪ್ರಾಣದಮೇಲೆ ಹಂಗು ತೊರೆದು ಯುದ್ಧಮಾಡಿದ್ದೇನೆ. ಈ ರಾಜ್ಯದಲ್ಲಿ ನಾನಿಲ್ಲದ ಯುದ್ಧವೇ ಇಲ್ಲವೆನ್ನಬಹುದು. ಟಿಪ್ಪೂಸುಲ್ತಾನರು ನನ್ನ ತೊಡೆಯಮೇಲೆ ಆಡುತ್ತಿದ್ದ

ಮೆಗು. ಅವರು ನನ್ನನ್ನು ಆ ಸಿಂಹಾಸನದಮೇಲೆ ಕೂಡಿಸಿದ್ದರೇನು? ಈ ಶರಪಂಜರದಲ್ಲಿ ಕಟ್ಟಿಹಾಕಿಸಿದ್ದರೇನು? ನಾನಿರುವುದು ಅವರು ತಪ್ಪುಮಾಡದಂತೆ ನೋಡಿಕೊಳ್ಳುವುದಕ್ಕೆ. ಅವರು ತಪ್ಪುಮಾಡಿದರೆ ಅವರ ಕುತ್ತಿಗೆಯನ್ನು ಹಿಚಿಗಿ ಬಿಸಾಡುವ ಅಧಿಕಾರವು ನನಗಿದೆ. ಖಾಸಿಂಖಾನನು ಸುಲ್ತಾನರ ವಿದ್ವೇಷಿಯಿರಬಹುದು. ಭರ ದರಬಾರಿನಲ್ಲಿ ನನ್ನ ಎದುರಿನಲ್ಲಿ ಅವನಿಗೆ ಕ್ಷಮೆಯನ್ನು ಕೊಟ್ಟಿದೆ. ಆಮೇಲೆ ತಂತ್ರದಿಂದ ಅವನನ್ನು ಗಲ್ಲಿಗೇರಿಸಿದೆ. ಇದಾವ ರಾಜಧರ್ಮ. ಖಾನನನ್ನು ನಾವು ಮರ್ಯಾದೆಯಿಂದ ಕರತಂದು ಮನ್ನಿಸಿದೆವು. ಅವನು ವಿದ್ವೇಷಿಯೆಂದು ಕಂಡುಬಂದರೆ ಅವನನ್ನು ತ್ಯಾಗಮಾಡುವುದು ಉಚಿತವಾಗಿತ್ತು. ಅವನನ್ನು ಓಡಿಸಿಬಿಟ್ಟಿದ್ದರೆ ಏನು ಪ್ರಮಾದವಾಗುತ್ತಿತ್ತು. ರಾಜ್ಯಭ್ರಷ್ಟನಾದ ಖಾನನು ಯುದ್ಧಮಾಡಬಲ್ಲನೊ? ಅವನು ಯುದ್ಧವನ್ನು ಕಟ್ಟಿದ್ದರೆ ತಾನೇ ಏನು? ನಾವು ಇಷ್ಟು ಸೈನ್ಯವನ್ನು ತೆಗೆದುಕೊಂಡು, ಇಷ್ಟೊಂದು ಆಡಂಬರದಿಂದ ಬಂದು ಇಷ್ಟು ಅಟ್ಟಹಾಸ ಮಾಡುತ್ತಿರುವುದೇಕೆ? ಯುದ್ಧವನ್ನು ಮಾಡಿಯೇ ಗೆಲ್ಲಬಹುದಾಗಿತ್ತು. ನಾನು ಗೆಲ್ಲುತ್ತಿದ್ದೆ. ಈ ನಗರದ ರಾಜ್ಯಕ್ಕೆ ಸುಲ್ತಾನರು ಬಂದಮೇಲೆ ಎಷ್ಟು ಅನ್ಯಾಯಗಳು. ಎಷ್ಟು ಅತ್ಯಾಚಾರಗಳು. ನಾನು ರಾಜದ್ರೋಹಿಯಲ್ಲ. ಸುಲ್ತಾನರು ಮಾತ್ರ ರಾಜದ್ರೋಹಿಗಳು. ಇಯುಜ್‌ಖಾನರ ತಪ್ಪೇನು? ಅವರಮೇಲೆ ದಂಡೆತ್ತಿ ಬಂದುದೇಕೆ? ಈಗಲೂ ನಗರವು ನಮ್ಮ ವಶವಾಗಿದೆಯೇ? ಒಬ್ಬ ಪಾಳಯಗಾರರಾದರೂ ನಮ್ಮ ವಶಕ್ಕೆ ಬಂದಿದ್ದಾರೆಯೇ? ನಾವು ಹೊರಟುಹೋಗುತ್ತಲೇ ಅವರದೇ ಸ್ವರಾಜ್ಯ! ರಾಜತಂತ್ರವನ್ನರಿತವರು ಇಲ್ಲಿ ಯಾರಾದರೂ ಇದ್ದರೆ ಇಯುಜ್‌ಖಾನರನ್ನು ಕರೆಸಿ, ನಗರವನ್ನು ಅವರಿಗೇ ಒಪ್ಪಿಸಿ ಹೋಗಬೇಕಾಗಿತ್ತು. ನನ್ನ ವಿಚಾರಣೆಗೆ ನಾನೊಪ್ಪುವುದಿಲ್ಲ. ಸುಲ್ತಾನರು ಹುಚ್ಚು ದರ್ಬಾರು ಮಾಡುತ್ತಿದ್ದರೆ—ಅವರಿಗೆ ಜೋಹುಕ್ಕುಂ ಹೇಳಿಕೊಂಡು ಗುಲಾಮರಾದವರು ಈ ರಾಜಸಭೆಯಲ್ಲಿರಬೇಕು. ಒಂದು ಕತ್ತಿಯನ್ನು ಇತ್ತಕೊಡಿರಿ! ನಾನೇ ನನ್ನ ತಲೆಯನ್ನು ಕತ್ತರಿಸಿ ಸುಲ್ತಾನರಿಗೆ ಒಪ್ಪಿಸುತ್ತೇನೆ. ಅವರು ಅದನ್ನು ಒಂದು ಭಲ್ಲೆಗೆ ಸಿಕ್ಕಿಸಿಕೊಂಡು ಶ್ರೀರಂಗಪಟ್ಟಣಕ್ಕೆ ತೆಗೆದುಕೊಂಡು ಹೋಗಲಿ! ನಗರವನ್ನು ಗೆದ್ದುಬಂದ ಜಯಧ್ವಜನೆಂದು ಸಂತೋಷಪಟ್ಟುಕೊಳ್ಳಲಿ.

ಸುಲ್ತಾನರಿಗೆ ಈ ಮಾತುಗಳು ಶಲ್ಯದಂತೆ ನೋಯಿಸಿದವು. ಅವರು ಖತಿಗೊಂಡು, ದಿವಾನರೇ ತಾವು ದೊಡ್ಡವರು ಹೌದು. ದೊಡ್ಡ ನವಾಬರ ಸರಿಸಮಾನಸ್ಥರೂ ಹೌದು. ಮೈಸೂರು ರಾಜ್ಯದ ಆಧಾರಸ್ತಂಬರೂ ಹೌದು. ಯುದ್ಧದಲ್ಲಿ ಗೆದ್ದು ಬಂದ ವೀರರೂ ನಿಜ. ಇಂಥಾ ದೊಡ್ಡವರು—ಇಂಗ್ಲೀಷ ರೊಡನೆ ಸಂಧಾನ ನಡೆಸುತ್ತಿದ್ದುದು ಏಕೆ?

ಯಾರು ಸಂಧಾನ ನಡೆಸಿದವರು? ಯಾತಕ್ಕಾಗಿ ಸಂಧಾನ?

ತಾವು ಸಂಧಾನವನ್ನು ನಡೆಸಿದವರು.

ಸಂಧಾನವೇನು?

ಈ ಶ್ರೀರಂಗಪಟ್ಟಣದ ರಾಜ್ಯವನ್ನೇ—ಇಂಗ್ಲೀಷರಿಗೆ ಒಪ್ಪಿಸುವ ಪಿತೂರಿ. ಫರಂಗಿಗಳು ಒಂದು ಜಹಗೀರಿಯ ಆಶೆಯನ್ನು ತೋರಿಸಿ, ಪಿತೂರಿ ನಡೆಸಿರುವ ದಾಖಲೆಗಳು ನಮ್ಮಲ್ಲಿವೆ. ಆ ಪಿತೂರಿಯಲ್ಲಿ ತಮ್ಮ ಒಳಸಂಚು ಇದೆ. ನೋಡಿರಿ. ಈ ಕಾಗದಗಳನ್ನು ಎಂದು ಟಿಪ್ಪುಸುಲ್ತಾನನು ಆ ಫರಂಗಿ ಗಳ ಕಾಗದಗಳನ್ನು ಪಂಜರದ ಕಡೆಗೆ ಎಸೆದನು. ಇದಕ್ಕೇನು ಹೇಳುವಿರಿ?

ಸೇವಕರು ಆ ಕಾಗದಗಳನ್ನು ಆರಿಸಿ, ಮುಹಮ್ಮದಾಲಿಯ ಕೈಗೆ ಕೊಡು ವುದಕ್ಕೆ ಹೋದರು. ಮುಹಮ್ಮದಾಲಿಯು ಅವುಗಳನ್ನು ದೂರ ಎಸೆದು— ಈ ಕಾಗದದಲ್ಲಿ ಏನಿದೆ? ಫರಂಗಿಗಳು ಪ್ರಲೋಭಮಾಡುವುದು ಅವರ ಸ್ವಭಾವ. ಆ ಪ್ರಲೋಭಕ್ಕೆ ನಾನು ವಶನಾದ ನಿದರ್ಶನವೆಲ್ಲಿದೆ? ಆ ಕಾಗದ ಗಳು ಈಗ ಬಂದವುಗಳಲ್ಲ, ದೊಡ್ಡ ನವಾಬರ ಕಾಲದಿಂದ ಆ ಕಾಗದಗಳು ಬರುತ್ತಲೇ ಇವೆ. ನಾನು ಆ ಕಾಗದಗಳನ್ನು ತಿರಸ್ಕರಿಸಿದ್ದೇನೆಂಬುದು ಆ ಕಾಗದ ಗಳೇ ಒಂದಕ್ಕೊಂದು ಮಾತನಾಡುತ್ತಿವೆ.

ಈ ತಿರಸ್ಕೃತ ಸಂಧಾನವನ್ನಾದರೂ ತಾವು ನಮಗೇಕೆ ತಿಳಿಸಲಿಲ್ಲ.

ತಿಳಿಸಬೇಕಾದ ಪ್ರಕೃತವೇ ಇಲ್ಲ. ಆದರಲ್ಲೇನಾದರೂ ಪ್ರಮಾದವಿದ್ದರೆ ತಿಳಿಸಬೇಕು. ಅದು ಅಷ್ಟು ದೊಡ್ಡ ಪ್ರಮೇಯವಲ್ಲ. ತೃಣದಂಥಾ ವಿಷಯ ಗಳನ್ನು ಬೆಟ್ಟವಾಗಿ ಮಾಡಿ ಸುಲ್ತಾನರಿಗೆ ತಿಳಿಸಬೇಕಾದರೆ—ಅವರಿಂದ ಪ್ರತ್ಯಾ ಶೆಯುಳ್ಳ ಅಲ್ಪರು ಮಾಡುವ ಕೆಲಸ.

ಅದು ತೃಣಸಮಾನವಾಗದಿದ್ದರೆ—ಪ್ರತ್ಯಾಶೆ ಇಲ್ಲದಿದ್ದರೆ—ತಾವು ಅದನ್ನು ಸಂದೂಕದಲ್ಲೇಕೆ ಇಟ್ಟದ್ದಿರಿ?

ರಾಜನೀತಿಯನ್ನರಿತವರು ಆ ತೃಣವನ್ನು ಸಂಗ್ರಹಿಸಿಟ್ಟಿರಬೇಕೆಂಬುದನ್ನು ಅರಿಯಬಲ್ಲರು.

ದು ರಾಜನೀತಿಗೆ ಸಂಬಂಧಪಟ್ಟುದಾದರೆ—ಅದನ್ನು ತೆಗೆದುಕೊಳ್ಳಲು ಕೊತ್ವಾಲರು ತಮ್ಮ ಮನೆಗೆ ಹೋದಾಗ—ಬೇಗಂಸಾಹೇಬರು ಘೋಷಾವನ್ನು ಪರಿತ್ಯಜಿಸಿ, ರಾಜಾರೋಷಾಗಿ ಬಂದು ಅದನ್ನು ತಡೆದುದೇಕೆ?

ನಿರುತ್ತರ.

ಅಷ್ಟೇ ಅಲ್ಲ. ಅರ್ಧರಾತ್ರಿಯಲ್ಲಿ ಮೀರ್‌ಸಾದಕನ ಮನೆಗೆ ಹೋಗಿ—ಆ ಕಾಗದಗಳನ್ನು ತನಗೆ ಕೊಡಬೇಕೆಂದು ಬಲಾತ್ಕರಿಸಿದ್ದೇಕೆ? ತಮ್ಮ ಸತೀತ್ವವನ್ನು ಕೂಡ ಲೆಕ್ಕಿಸದೇ ಬೇಗಂಸಾಹೇಬರು ಅಭಿಸಾರವನ್ನು ಮಾಡಿದ್ದೇಕೆ? ಅದರಲ್ಲಿ ಸ್ವಾರ್ಥವಿಲ್ಲದಿದ್ದರೆ—ಅವರು ಇಷ್ಟೆಲ್ಲಾ ಮಹಾಪ್ರಯತ್ನ ಮಾಡುತ್ತಿದ್ದರೇನು? ನೀವು ಇದನ್ನು ಇಷ್ಟು ಗುಟ್ಟು ಮಾಡುತ್ತಿದ್ದರೇನು?

ಮಹಮ್ಮದಾಲಿಯು—ತಲೆಬಾಗಿ—ಫಾತಿಮಾ ಬೇಗಂರವರನ್ನು ಈ ಸಭೆಗೆ ಕರಸಿ ವಿಚಾರಮಾಡಿರಿ.

ಜನಾನಾ ಸ್ತ್ರೀಯರನ್ನು ಕರಸಿ. ಇಲ್ಲಿ ಈ ರಾಜಸಭೆಯಲ್ಲಿ ವಿಚಾರಣೆ ಮಾಡುವುದು ನನಗೆ ಒಪ್ಪಿಗೆ ಇಲ್ಲ.

ನಾನು ಒಪ್ಪುತ್ತೇನೆ. ವಿಚಾರಣೆ ಮಾಡುವವನು ನಾನು.

ಸುಲ್ತಾನರ ಅಪ್ಪಣೆಯಂತೆ—ಕಾವಲುಗಾರರು ಹೋಗಿ ಫಾತಿಮಾ ಬೇಗಂರವರನ್ನು ಕರತಂದರು. ಫಾತಿಮಳು ಈಗ ತನ್ನ ಅಭಿಯೋಗ ವಿಚಾರಣೆಯಾಗುತ್ತದೆ. ಇದೊಂದು ದಿನ ನನಗೆ—ಅಲ್ಲಾನು ಧೈರ್ಯವನ್ನು ಕರುಣಿಸಲಿ. ಆ ಮೀರ್‌ಸಾದಕನನ್ನು ಆಹುತಿ ತೆಗೆದುಕೊಳ್ಳುತ್ತೇನೆ ಎಂದುಕೊಳ್ಳುತ್ತಾ ರಾಜಸಭೆಗೆ ಬಂದಳು. ಫಾತಿಮಾಬೇಗಂ ಬಂದು ಸಭೆಯಲ್ಲಿ ನಿಂತಳು. ಫಾತಿಮಳು ಆ ರಾಜಸಭೆಯನ್ನು ನೋಡಿ ಗಡಗಡನೆ ನಡುಗುತ್ತಿದ್ದಾಳೆ. ಪರದೆಯನ್ನು ಓರೆಮಾಡಿಕೊಂಡು ದಿವಾನರ ಮುಖವನ್ನು ನೋಡಿದಳು. ಅವರ ಮುಖವು ಜ್ವಲಿಸುತ್ತಿದೆ. ಕಣ್ಣುಗಳಲ್ಲಿ ಕ್ರೋಧಾನಲವು ಉರಿ

ಏಳುತ್ತಿದೆ. ಆ ಭೈರವ ಮೂರ್ತಿಯನ್ನು ನೋಡಿ, ಅವಳ ಎದೆಯೊಡೆದು ಹೋಯಿತು.

ಸುಲ್ತಾನರು ತಲೆಬಾಗಿ, ಬೇಗಂಸಾಹೇಬ್ ! ತಮ್ಮ ಅಭಿಯೋಗವನ್ನು ಹೇಳೋಣಾಗಲಿ ! ಸಭಿಕರೆಲ್ಲರೂ ಫಾತಿಮಳ ಕಡೆಗೆ ಎವೆ ಇಕ್ಕದೆ ನೋಡು ತ್ತಿದ್ದರು. ಫಾತಿಮಳ ಬಾಯಿನಲ್ಲಿ ಮಾತು ಹೊರಡಲಿಲ್ಲ. ಘಟ್ಟಿಯಾಗಿ ಅಳ ಲಾರಂಭಿಸಿದಳು. ಶರೀರವು ನಡುಗುತ್ತಿತ್ತು. ಸೇವಕಿಯರು ಅವಳನ್ನು ಬಲ ವಾಗಿ ಹಿಡಿದಕೊಂಡಿದ್ದರು. ಸುಲ್ತಾನರು ಮತ್ತೊಮ್ಮೆ ಕೇಳಿದರು. ಬೇಗಂ ಸಾಹೇಬಳು ಮಾತನಾಡಲಿಲ್ಲ. ಗಟ್ಟಿಯಾಗಿ ಬಿಕ್ಕಿಬಿಕ್ಕಿ ಅಳುತ್ತಿದ್ದಳು.

ಮಿರ್‌ಸಾದಕನು ಮನಸ್ಸಿನಲ್ಲಿ ಗೆದ್ದೆ ! ಹೆಂಗಸು ತನ್ನ ಅಪಮಾನವನ್ನು ತಾನೇ ಹೇಳಿಕೊಂಡಾಳೆ ! ಎಂದುಕೊಂಡನು.

ಸುಲ್ತಾನರು—ಬೇಗಂ ಸಾಹೇಬರು ಅದನ್ನು ಬಾಯಿಬಿಟ್ಟು ಈ ಸಭೆ ಯಲ್ಲಿ ಹೇಳಲು ಅಶಕ್ತರಾಗಿದ್ದಾರೆ. ಅವರ ಅಭಿಯೋಗವು ಸಾಕ್ಷಿಯ ವಿಚಾ ರಣೆಯಿಂದಲೇ ಸಾಬೀತಾಗುತ್ತದೆ. ಅದಕ್ಕೆ ಹುಚ್ಚಿ ಸಾವಿತ್ರಿಯು ಖುದ್ದು ಸಾಕ್ಷಿ. ಸಭಿಕರೆಲ್ಲರೂ ಸ್ಥಂಭೀಭಾವದಿಂದ ಇದ್ದರು. ಯಾರಮೇಲೆ ದೂರು ! ಎಂಥಾ ದೂರು ಎಂದು ಎಲ್ಲರೂ ಕಾತುರರಾಗಿ ಸಾವಿತ್ರಿಯ ಕಡೆ ನೋಡು ತ್ತಿದ್ದರು.

ಸಾವಿತ್ರಿ ! ನೀನು ಈ ಶಿಬಿರಕ್ಕೆ ಹೇಗೆ ಬಂದೆ ?

ಖಾವಂದರವರೇ ! ಬೇಗಂಸಾಹೇಬರು ನನ್ನನ್ನು ಅವರ ಸಂಗಡಲೇ ಕರತಂದರು. ಅಬಲೆಯರಿಗೆ—ಅನಾಥರಿಗೆ; ನಿಸ್ಸಹಾಯಕರಿಗೆ ನಾನೊಬ್ಬ ಸಹಾಯಕಳು.

“ ಸಾವಿತ್ರಿ ! ಹೆಚ್ಚು ಮಾತನಾಡಬೇಡ. ಬೇಗಂಸಾಹೇಬರವರು ಮಾಡಿರುವ ಅಭಿಯೋಗದಲ್ಲಿ ನೀನು ಸಾಕ್ಷಿ. ಎಲ್ಲವನ್ನೂ ಸತ್ಯವಾಗಿ ಹೇಳು. ಭಯಪಡಬೇಡ.”

ಸಾವಿತ್ರಿಯು—ಹುಜೂರು ! ಭಯವೇಕೆ ? ನಾನು ಎಲ್ಲವನ್ನೂ ಹೇಳು ತ್ತೇನೆ. ನನ್ನನ್ನೇ ಬೇಕಾದರೂ ಶಿಕ್ಷೆಮಾಡಿರಿ.

“ದಿವಾನಸಾಹೇಬರ ಬಂಧನವು ಶ್ರೀರಂಗಪಟ್ಟಣಕ್ಕೆ ಮುಟ್ಟಿತು. ಬೇಗಂ ಸಾಹೇಬರು—ಹುಚ್ಚರಂತಾದರು. ಅವರು ಮಿರ್‌ಸಾದಕನನ್ನು ಮಹಲಿಗೆ ಕರತರಬೇಕೆಂದು ನನಗೆ ಹೇಳಿದರು. ನಾನು ಶುಕ್ರವಾರ ರಾತ್ರಿ ವೇಷಾಂತರ ದಲ್ಲಿ ಈ ಮಿರ್‌ಸಾದಕನನ್ನು ಮಹಲಿಗೆ ಕರೆದುಕೊಂಡು ಹೋದೆ.”

ಎಲ್ಲರೂ ಹಾಹಾಕಾರ ಮಾಡಿದರು.

ಸುಲ್ತಾನ—ಅಲ್ಲೇನು ನಡೆಯಿತು?

ಏನೂ ಇಲ್ಲ! ಬೇಗಂಸಾಹೇಬರು ದಿವಾನರನ್ನು ಬಿಡುಗಡೆಮಾಡಿಸ ಬೇಕೆಂದು—ಮಿರ್‌ಸಾದಕನ ಸಹಾಯವನ್ನು ಬೇಡಿದರು. ಮಿರ್‌ಸಾದಕನು ದಿವಾನರಲ್ಲಿ ಬಹಳ ಗೌರವವನ್ನು ತೋರಿ—ಬೇಗಂಸಾಹೇಬರಲ್ಲಿ ಬಹಳ ವಿನ ಯದಿಂದ ಸಹಾಯಮಾಡುವುದಾಗಿ ವಾಗ್ದಾನಮಾಡಿದನು.

ಎಲ್ಲರೂ ಪಿಸುಮಾತಿನಲ್ಲಿ ತಪ್ಪೆಲ್ಲಿದೆ? ತಪ್ಪೇನಿದೆ? ಎಂದರು.

ಮಿರ್‌ಸಾದಕನು—ಬದುಕಿದೆ ಎಂದುಕೊಂಡನು!

ಸುಲ್ತಾನರು—ಅಷ್ಟೇನೊ ?

ಹಚ್ಚಿ:—ಅಲ್ಲ! ಇನ್ನೂ ಇದೆ. ಮೂರನೆಯದಿನ ಶನಿವಾರ ರಾತ್ರಿ ಬೇಗಂಸಾಹೇಬರವರು ಮಿರ್‌ಸಾದಕನ ಮನೆಗೆ ತಾವು ಹೋಗಬೇಕೆಂದೂ— ಅಲ್ಲಿಗೆ ಕರೆದುಕೊಂಡು ಹೋಗಬೇಕೆಂದು ನನ್ನನ್ನು ಕೇಳಿದರು. ನಾನು ಬೇಡ ವೆಂದೆ. ಅವರು ಬಿಡಲಿಲ್ಲ. ಬಲಾತ್ಕಾರ ಮಾಡಿದರು. ಹೊರಟೇಬಿಟ್ಟರು. ನಾನೂ ಹಿಂದೆ ಹೋದೆ. ಅಲ್ಲಿ ಮಿರ್‌ಸಾದಕನಿರಲಿಲ್ಲ. ಒಂದೆರಡು ಘಂಟೆ ಕಾದಿದ್ದರು. ಮಿರ್‌ಸಾದಕನು ಬರತ್ತಲೇ ಅವನಲ್ಲಿದ್ದ ಕಾಗದಗಳನ್ನು ತಮಗೆ ಕೊಡಬೇಕೆಂದು ಬೇಡಿದರು. ಅದಕ್ಕಾಗಿ ಸರ್ವಸ್ವವನ್ನು ಕೊಡುವುದಾಗಿ ಹೇಳಿದರು. ಅವನು ಕೊಡಲಿಲ್ಲ. ಅವನ ಮೈಮೇಲೆ ಹಾರಿಬಿದ್ದು ಅವು ಗಳನ್ನು ಕಿತ್ತುಕೊಂಡರು. ಆ ಹೋರಾಟದಲ್ಲಿಯೇ ಬೇಗಂಸಾಹೇಬರು ಬಿದ್ದು ಹಣೆಯೊಡೆಯಿತು! ಅವರ ಹಣೆಯಮೇಲೆ ಘಾಯವಿದೆ ನೋಡಿರಿ.

ಮುಹಮ್ಮದಾಲಿಯವರು ಪಂಜರದಿಂದ ಘರ್ಜಿಸಿದರು.

ಹುಚ್ಚಿ! ಸಾಕು ನಿಲ್ಲಿಸು! ಇಲ್ಲಿ ವಿಚಾರಣೆ ಮಾಡುವವನು ನಾನು! ತೀರ್ಪು ಕೊಡುವವನು ನಾನು! ಪತಿವ್ರತೆಯಾದ ಘೋಷಾ ಸ್ತ್ರೀಯು ಪರ

ಪುರುಷನನ್ನು ಜನಾನಕ್ಕೆ ಕರಸುವುದೆಂದರೇನು? ಅವಳು ಅವೇಳೆ ರಾತ್ರಿ ಯಲ್ಲಿ ಪರಪುರುಷನ ಏಕಾಂತ ಭವನಕ್ಕೆ ಹೋಗುವುದೆಂದರೇನು? ಅವನ ಸ್ಮೈಮೇಲೆ ಬಿದ್ದು ಹೋರಾಡುವುದೆಂದರೇನು? ತಪ್ಪು ಪೂರ್ತಿಯಾಗಿ ಫಾತಿ ಮಳದು. ಅವಳನ್ನು ಸುಣ್ಣದ ಕಡಾಯಿಯಲ್ಲಿ ಹಾಕಿ ಸುಡಿಸಬೇಕು ಎಂದು ಗರ್ಜಿಸಿದರು.

ಸುಲ್ತಾನನು ಕ್ರೋಧತಾಮ್ರಾಕ್ಷನಾಗಿ ಮುಹಮ್ಮದಾಲಿಯುವರೇ! ನೀವು ರಾಜದ್ರೋಹಿಗಳು. ನಗರಕ್ಕೆ ಬರುವಾಗಲೇ ಇಯಜ್‌ಖಾನನೊಡನೆ ತಂತ್ರ ಮಾಡಿದ್ದೀರಿ. ಇಲ್ಲಿ ವಧಾರ್ಹನಾದ ಖಾಸಿಂಖಾನನಿಗೆ ಮದತ್‌ಮಾಡಿ, ರಾಜಾಜ್ಞೆಯನ್ನು ಅತಿಕ್ರಮಿಸಿ, ಅಪರಾಧಮಾಡಿದ್ದೀರಿ. ಎಲ್ಲದಕ್ಕಿಂತಲೂ, ಪಿಚ್ಚಾಗಿ—ಇಂಗ್ಲೀಷರೊಡನೆ ಪಿತೂರಿ ನಡೆಸಿದ್ದೀರಿ. ಇದಕ್ಕಿಂತಲೂ ಮಹ ತ್ತರವಾದ ಅಪರಾಧವೇನಿದೆ? ನೀವು ವಧಾರ್ಹರು? ನಿಮಗೆ ಚಿತ್ರವಧೆ ಯಾಗಬೇಕು. ಯಾವ ರೀತಿಯಾದ ವಧೆಯಾಗಬೇಕೆಂಬುದನ್ನು ಆಲೋಚನೆ ಮಾಡಿ ವಿಧಾನಮಾಡುತ್ತೇವೆ. "ಅಷ್ಟರಲ್ಲಿ ಫಾತಿಮಳು—ಮುಖ ಘರದೆ ಯನ್ನು ಕಿತ್ತುಹಾಕಿ ಸಭೆಯ ಮುಂದೆ ನಿಂತಳು." "ಟಿಪ್ಪೂಸುಲ್ತಾನ್! ನೀನು ಮೋಸಗಾರ! ಧೂರ್ತ! ನಾನು ನಿನ್ನಲ್ಲಿ ಹೇಳಿಕೊಂಡ ದೂರನ್ನು ನಿನಗೆ ಅನು ಕೂಲವಾಗಿ ತಿರುಗಿಸಿಕೊಂಡು ಉಪಯೋಗಿಸಿಕೊಂಡೆ. ಅದನ್ನು ದಿವಾನರ ಮೇಲೆ ಹೊರಿಸಿ ಶಿಕ್ಷೆಯನ್ನು ವಿಧಿಸಿದೆ. ನಿನ್ನ ದೌಲತ್ತು ಹಾಳಾಗಿಹೋಗಲಿ! ದಿವಾನರ ಮೇಲೆ ನೀನು ಫರಂಗಿಗಳೊಡನೆ ಪಿತೂರಿ ಮಾಡಿದರೆಂದು—ಅಪ ಖ್ಯಾತಿಯನ್ನು ಹೊರಿಸಿದೆಯಲ್ಲವೆ. ಆ ಪಿತೂರಿಯನ್ನು ನಾನು ನಡೆಸುತ್ತೇನೆ. ನಿನ್ನನ್ನು ಇಂಥಾ ಶರಪಂಜರದಲ್ಲಿಡಿಸಿ, ಶ್ರೀರಂಗಪಟ್ಟಣದಲ್ಲಿ ಮೆರವಣಿಗೆ ಮಾಡಿಸುತ್ತೇನೆ ಎಂದು ಶಪಿಸತೊಡಗಿದಳು." ಸಭೆಯೆಲ್ಲವೂ ಹಾಹಾಕಾರ ಮಾಡಿತು.

ಟಿಪ್ಪೂಸುಲ್ತಾನನ ಅಪ್ಪಣೆಯಂತೆ ಫಾತಿಮಾಬೇಗಂಳನ್ನು ಅಂಗರಕ್ಷಕರು ಹಿಡಿದು ಬಂಧಿಸಿದರು.

ಟಿಪ್ಪೂಸುಲ್ತಾನನ ಕೋಪವು ಅಗ್ನಿಕಣಗನ್ನು ಕಾರುತ್ತಿತ್ತು. ಅವನು ಈ ಫಾತಿಮಾಬೇಗಂ ಹರಾಮಿಯಾಗಿದ್ದಾಳೆ. ಅವಳ ಅಸಹ್ಯವಾದ ಚರಿತ್ರೆ

ಯನ್ನು ಹೇಳಲು ಸಾಧ್ಯವಿಲ್ಲ. ಅವಳು ಈ ರಾಜಸಭೆಯಲ್ಲಿ ಮಾಡಿರುವ ಅಪ ಚಾರವು ಶಿಕ್ಷಾರ್ಹವಾದುದು. ಇವಳನ್ನು ಒಬ್ಬ ಗುಲಾಮನಿಗೆ—ಕೊಟ್ಟು ನಿಖಾ ಮಾಡಿಸತಕ್ಕದ್ದು ಎಂದು ಆಜ್ಞೆಮಾಡಿ ಅಲ್ಲಿದ್ದ ಕರೀಂ ಎಂಬ ಗುಲಾ ಮನನ್ನು ಕರದು-ತೆಗೆದುಕೋ! ಈ ಫಾತಿಮಾಳು ಇಂದಿನಿಂದ ನಿನ್ನ ಹೆಂಡತಿ! ಎಂದು ಅಪ್ಪಣೆ ಮಾಡಿದರು.

ಪಂಜರದಲ್ಲಿದ್ದ ಮಹಮ್ಮದಾಲಿಯವರು ಟಿಪ್ಪೂ! ನೀನು ಭ್ರಷ್ಟ! ದ್ರೋಹಿ! ನಿನ್ನ ತಲೆಯು—ಸಹಸ್ರ ಪಾಲಾಗಿ ಭೂಮಿಯಮೇಲೆ ಬಿದ್ದು ಹೊರಳಾಡಲಿ! ಎಂದು ಕೂಗಿದರು. ಕೈ ಸರಪಣಿಗಳನ್ನು ಕತ್ತಿಗೆ ಬೀರಿಕೊಂಡು ಜ್ಞಾನಶೂನ್ಯರಾಗಿ ಕೆಳಗೆ ಬಿದ್ದರು. ಅಷ್ಟರಲ್ಲಿ ಕಾವಲುಗಾರರು ಬಂದು ಸರಪಣಿಯನ್ನು ಬಿಚ್ಚಿದರು. ಸುಲ್ತಾನರು ಪಂಜರವನ್ನು ತೆಗೆದುಕೊಂಡು ಹೋಗಿ ಎಂದು ಅಪ್ಪಣೆಮಾಡಿ, ಸಭೆಯಿಂದ ಎದ್ದು ಹೊರಟರು. ಸಭಿಕ ರೆಲ್ಲರೂ ಮೌನವಾಗಿ—ಒಂದು ಬಾರಿ ಮಹಮ್ಮದಾಲಿಯವರ ಕಡೆ ನೋಡುತ್ತಾ, ಮತ್ತೊಂದುಬಾರಿ, ಗುಲಾಮನು ಕೈ ಹಿಡಿದಿರುವ ಫಾತಿಮಳನ್ನು ನೋಡುತ್ತಾ, ತಲೆ ಬಾಗಿಸಿಕೊಂಡು ಸಭೆಯಿಂದ ಹೊರಟುಹೋದರು. ಕೆಲ ವರು ಪಾತಿಮಳನ್ನು ಪರಿಹಾಸ್ಯಮಾಡಿದರು. ಮಿರ್ ಸಾದಕನು ಮಾತ್ರ ಫಾತಿಮಳ ಕಡೆ ಓರೆಗಣ್ಣಿನಿಂದ ನೋಡಿ ಕಿರುನಗುವನ್ನು ನಕ್ಕು, ಸಭೆಯಿಂದ ಹೊರಗೆಹೋದನು.

## ಕರಾಳ ರಾತ್ರಿಯಲ್ಲಿ.

ನಿಶಾ ಮಹಿಮೆಯನ್ನು ಎಷ್ಟು ಬಣ್ಣಿಸಿದರೂ ತೀರದು. ಲೋಕದ ಸಮಸ್ತ ಪಾಪಿಗಳಿಗೂ ನಿಶಿಯು ಮಾತೃಭೂಮಿ. ಆ ನಿಶಿಯಲ್ಲಿಯೇ ಪಾಪಿ ಗಳು ಮಹಾ ಪಾಪವನ್ನು ಮಾಡಲು ಹೇಸುವುದಿಲ್ಲ. ಲೋಕದ ಕಣ್ಣು ಮುಚ್ಚಿ, ಪಾಪಿಗಳಿಗೆ ಬಲವನ್ನು ಕೊಟ್ಟು ಪಾಪ ಮಾಡಿಸುವವಳು ನಿಶೆ. ಈ ಜಗತ್ತಿನಲ್ಲಿ ಎಷ್ಟೊಂದು ಪಾತಕಗಳು ನಿಶೆಯ ಮಡುಲಿನಲ್ಲಡಗಿವೆ. ನಿಶಾನಾಥ ನಾದರೂ, ಸತಿಗೆ ತಕ್ಕ ಪತಿ! ಗುರುತಲ್ಪಗಮನಮಾಡಿದ ಚಂದ್ರನು ನಿಶೆಯ

ಪತಿ. ನಿಶೆಯ ಸಹವಾಸದಿಂದ ಅವನಿಗಾದರೂ ಸುಖ ಉಂಟೆ ! ಕ್ಷಯರೋಗ ಪೀಡಿತನಾಗಿ, ನಿಶೆಗೆ ಒಂದು ದಿನ ಅವನ ಸಾನ್ನಿಧ್ಯವಿದ್ದರೆ—ಮತ್ತೊಂದು ದಿನವಿಲ್ಲ. ಪತಿ ಸಾನ್ನಿಧ್ಯವಿಲ್ಲದಿರುವಾಗ ನಿಶೆಯ ಪ್ರತಾಪವು ಮತ್ತೂ ಹೆಚ್ಚು. ವಿಟರು, ಕಳ್ಳರು, ಕೊಲೆಪಾತಕಿಗಳು ಎಲ್ಲರೂ ನಿಶಾ ಭಕ್ತರೇ. ಸುರೆಯು ನಿಶೆಯ ಸಹೋದರಿ. ಈ ಇಬ್ಬರ ಸಹೋದರಿಯರ ಆರ್ಭಟದಲ್ಲಿ ಲೋಕವು ಪಾಪದಲ್ಲಿ ಮುಳುಗಿಮುಳುಗಿ ಏಳುತ್ತದೆ. ಸೂರ್ಯದೇವನು ಈ ನಿಶೆಯನ್ನು ಸಂಹಾರಮಾಡಬೇಕೆಂದು, ಸೃಷ್ಟಿಯ ಆದಿಯಿಂದ—ಕಲ್ಪಾಂತರದವರೆಗೆ ಪರಿ ತಪಿಸುತ್ತಾನೆ. ಅವನು ಬಂದಾಗ ನಿಶೆಯು ಮಾಯವಾಗಿ ಹೋಗುತ್ತಾಳೆ. ಅವನು ಆರಕ್ತನಾದಾಗ, ನಿಶಿಯು ಅವನನ್ನೇ ಕಬಳಿಸಿಬಿಡುತ್ತಾಳೆ. ಈ ಪ್ರಪಂಚದಲ್ಲಿ ನಿಶೆಯು ಸರ್ವ ವಿಜಯಿನಿ. ಇಂದು ನಿಶೆಯ ಪ್ರತಾಪವು ಪ್ರಖ ರವಾಗಿದೆ. ಮಿರ್‌ಸಾದಕನು ನಿಶೆಯ ಪರಮ ಭಕ್ತ. ಅವನು ನಿಶಾದರ್ಶನ ವನ್ನು ಎದುರು ನೋಡುತ್ತಾ ಇದ್ದಾನೆ. ಅವನು ನಿಶೆಯ ಅನುಗ್ರಹದಿಂದ ಇಂದು ಮಹತ್ಕಾರ್ಯಸಾಧನೆ ಮಾಡಬೇಕೆಂದು ಸಂಕಲ್ಪಿಸಿದ್ದಾನೆ. ನಿಶೆಯು ಜಗತ್ತನ್ನು ಆವರಿಸುತ್ತಲೇ ಮಿರ್‌ಸಾದಕನು ತನ್ನ ಬಿಡಾರದಿಂದ ಹೊರಟನು. ವೇಷವನ್ನು ಮರಸಿಕೊಂಡು ಹೊರಟನು. ಹೊರಡುವಾಗ ನಾಲ್ವರು ಶಿದ್ದಿ ಗಳನ್ನು ಜೊತೆಯಲ್ಲಿ ಕರೆದುಕೊಂಡು ಹೋದನು ಅವರನ್ನು ಜೊತೆಯಲ್ಲಿ ಕರದೊಯ್ದು ಸಾರಾಯನ್ನು ಕುಡಿಸಿದನು. ಯಥೇಚ್ಛವಾಗಿ ಕುಡಿದರು. ಅವರ ಕೈಯ್ಯಲ್ಲಿ ಚಿನ್ನದ ಮೊಹರಾಗಳನ್ನು ಕೊಟ್ಟನು. ಅದನ್ನು ನೋಡಿ, ಅವರು ಸಂತುಷ್ಟರಾದರು. ಅವನು ಹೇಳಿದ ಕಾರ್ಯವನ್ನು ಮಾಡುವುದಾಗಿ ಅವರಿಂದ ಮಾತು ತೆಗೆದುಕೊಂಡನು ಇನ್ನೂ ಎಷ್ಟೋ ಆಶೆಗಳನ್ನು ಹೇಳಿ, ಹುರಿದುಂಬಿಸಿದನು. ಇಂದು ಒಬ್ಬ ಸುಂದರಿಯನ್ನು ಅಪಹರಿಸಿಕೊಂಡು ಬರಬೇಕು. ಆ ಸುಂದರಿಯು ಕೈಸೇರಿದರೆ ನಿಮಗೆ ಇನ್ನೂ ಬೇಕಾದಷ್ಟು ಮೊಹರುಗಳನ್ನು ಕೊಡುತ್ತೇನೆ ಎಂದು ಹೇಳಿದನು. ಅವರು ಕುಣಿ ಯುತ್ತ ಆ ಕಾರ್ಯಕ್ಕೆ ಸಮ್ಮತಿಸಿದರು. ಪುನಃ ಅವರು ಸುರಾಪಾನಮಾಡಿದರು.

ಅವನು ಕರೀಂ ಗುಲಾಮನ ಬಿಡಾರವನ್ನು ಹುಡಿಕಿಕೊಂಡು ಹೋದನು. ಶಿಬಿರಕ್ಕೆ ದೂರದ, ಖಾಸಿಂಖಾನನ್ನು ಗಲ್ಲಿಗೇರಿಸಲು ತಯಾರು ಮಾಡಿದ್ದ ವಧ್ಯ ಪ್ರದೇಶದ ಸಮೀಪದ ತೋಪಿನಲ್ಲಿ ಒಂದು ಗುಡಿಸಲು. ಒಳಗೆ ಒಂದು ಹಣ

ತೆಯ ದೀಪವು ಮಿನುಗುಟ್ಟುತ್ತಿದೆ. ಅದರ ಸಮೀಪದಲ್ಲಿ ಒಬ್ಬ ರಾಜಸ್ತ್ರೀಯು ಕುಳಿತಿದ್ದಾಳೆ. ಅವಳನ್ನು ದೂರದಿಂದ ನೋಡಿ, ಘಾತಿಮಾಬೇಗಂ ಎಂದು ಗುರ್ತಿಸಿದನು. ಜೊತೆಯಲ್ಲಿದ್ದ ಶಿದ್ದಿಗಳನ್ನು ಸಮೀಪದಲ್ಲಿ ಔತುಕೊಂಡಿರ ಬೇಕೆಂದೂ, ಕರೆದಾಗ ಓಡಿಬರಬೇಕೆಂದು ಹೇಳಿ ತಾನು ಆ ಗುಡಿಸಲಿನ ಸಮೀಪಕ್ಕೆ ಹೋದನು. ಗುಡಿಸಲಿನ ಸಮೀಪಕ್ಕೆ ಹೋಗುತ್ತಲೇ ಕರೀಂ ಗುಲಾಮನು ಸಲಾಂ ಮಾಡಿದನು.

ಮೀರ್‌ಸಾದಕನು—ಕರೀಂ ! ಬೇಗಂಸಾಹೇಬರು ಏನುಮಾಡುತ್ತಾರೆ ? ಎಂದು ಕೇಳಿದನು.

ಅವರು ಒಳಗೆ ದುಃಖಿಸುತ್ತಾ ಕುಳಿತಿದ್ದಾರೆ. ಎಷ್ಟು ಹೇಳಿದರೂ ಆಹಾರವನ್ನೇ ತೆಗೆದುಕೊಳ್ಳುವುದಿಲ್ಲ. ನಾನೇನು ಮಾಡಲಿ ? ಎಂದನು.

ಮೀರ್‌ಸಾದಕನು ಕರೀಂನನ್ನು ವಧ್ಯಸ್ತಂಭದ ಹತ್ತಿರ ಕರೆದುಕೊಂಡು ಹೋದನು. ಅಲ್ಲಿ ಅವನೊಡನೆ ಮಾತಿಗೆ ಆರಂಭಿಸಿದನು. "ಕರೀಂ ! ಇವಳು ರಾಜಸ್ತ್ರಿ ! ಇವಳನ್ನು ಇಟ್ಟುಕೊಂಡು ಏನು ಮಾಡುವೆ ?"

ನಾನೇನು ಮಾಡಲಿ ? ಹಜರತ್ ! ಇವರನ್ನು ನಮ್ಮ ತಾಯಿ ಯಂತೆ ಕಾಪಾಡುತ್ತೇನೆ. ಮುಹಮ್ಮದಾಲಿಯುವರು ನಮಗೆ ಧಣಿ ! ಅವರ ಬೇಗಂಸಾಹೇಬರನ್ನು ಮದುವೆಯಾಗಲಾದೀತೆ ?

ನೀನು ಮದುವೆಯಾಗಿ ಅನುಭವಿಸದಿದ್ದರೆ ಇವಳನ್ನೇಕೆ ಕಟ್ಟಿಕೊಂಡು ಸಾಯುತ್ತಿ ? ನೀನು ?

ಸುಲ್ತಾನರ ಆಜ್ಞೆಯಿಂದ ಸಾಕುತ್ತೇನೆ. ಒಳ್ಳೆಯ ಕಾಲ ಬಂದು, ದಿವಾನರಿಗೆ ಬಿಡುಗಡೆಯಾದರೆ—ಇವರನ್ನು ಕರೆದುಕೊಂಡು ಹೋಗಿ ಅವರಿ ಗೊಪ್ಪಿಸುತ್ತೇನೆ. ನನಗೆ ಏನಾದರೂ ಇನಾಂ ಸಿಕುತ್ತೆ.

ಇನ್ನು ದಿವಾನಸಾಹೇಬರ ಮಾತೇಕೆ ? ಅವರು ಇಷ್ಟು ಹೊತ್ತಿಗಾಗಲೇ ಯಮಲೋಕಕ್ಕೆ ತೆರಳಿರುತ್ತಾರೆ. ಇವರನ್ನು ನನಗೆ ಒಪ್ಪಿಸು, ನಾನು ಇನಾಂ ಕೊಡುತ್ತೇನೆ ಎಂದು ಹತ್ತು ಮೊಹರುಗಳನ್ನು ಅವನ ಕೈಗೆ ಕೊಟ್ಟನು.

ಇದೇನು ಸ್ವಾಮಿ! ತಾವು ಹೀಗೆಲ್ಲಾ ಮಾತನಾಡುತ್ತೀರಿ! ಇಂಥಾ ಅಕಾರ್ಯಕ್ಕೆ ನಾನು ಒಪ್ಪುವುದಿಲ್ಲ. ತಮ್ಮ ಹಣವನ್ನು ತಾವೇ ತೆಗೆದುಕೊಳ್ಳಿ.

ಹೋಗಲಿ! ಹಣವನ್ನು ನೀನೇ ಇಟ್ಟುಕೋ! ನಾನು ಬೇಗಂ ಸಾಹೇಬಳಲ್ಲಿ ಮಾತನಾಡಿ ಬರುತ್ತೇನೆ.

ಮಾತನಾಡಿ ಬನ್ನಿರಿ! ಅದಕ್ಕೇನು? ಎಂದು ಗುಡಿಸಲಿನ ಹತ್ತಿರ ಕರೆದುಕೊಂಡು ಹೋದನು. "ಮಿರ್ಸಾದಕನು ಆ ಗುಡಿಸಲಿನ ಬಾಗಿಲಿನಲ್ಲಿ ಹೋಗಿ ನಿಂತನು. ಫಾತಿಮಳು ಮಾತನಾಡಲಿಲ್ಲ"

ಫಾತಿಮಾ! ಏನು ಮಾಡುತ್ತಿ?

ಫಾತಿಮಳು ತಲೆ ಎತ್ತಿ ನೋಡಿ ಗುರ್ತಿಸಿದಳು. ಕಳ್ಳನೆ ನೀನು ಇಲ್ಲಿಗೂ ಒಂದೆಯಾ! ಏಕೆ ಬಂದೆ?

ಫಾತಿಮಾ! ನಿನ್ನ ದುರವಸ್ಥೆಯನ್ನು ನೋಡಲಾರದೇ ಬಂದೆ. ನನ್ನೊಡನೆ ಬಾ! ನಿನ್ನನ್ನು ರಾಜವೈಭವದಲ್ಲಿಡುತ್ತೇನೆ. ದಿವಾನರ ಕಥೆಯು ಪೂರ್ತಿಯಾಗಿಹೋಯಿತು. ಇನ್ನು ನಾನೇ ನಿನಗೆ ಸ್ವಾಮಿ. ಸುಲ್ತಾನರು ನೆಪಮಾತ್ರಕ್ಕೆ ಈ 'ಗುಲಾಮುನಿಗೆ ನಿನ್ನನ್ನು ಕೊಟ್ಟರು, ನಿಜವಾಗಿಯೂ ಅವರು ನನಗಾಗೆಯೇ ನಿನ್ನನ್ನು ಕೊಟ್ಟಿದ್ದಾರೆ. ನನ್ನೊಡನೆ ಬಂದುಬಿಡು. ನಾವು ಇಂದೇ ನಿಕಾ ಮಾಡಿಕೊಳ್ಳೋಣ.

ಫಾತಿಮಳು ಎದ್ದು ನಿಂತಳು. ಪಾತಕಿಯೆ! ಇಲ್ಲಿಂದ ಹೊರಡು. ಒಂದು ನಿಮಿಷವೂ ಇಲ್ಲಿ ನಿಲ್ಲಬೇಡ. ನನ್ನನ್ನು ಹಾಳು ಮಾಡಿದವನು ನೀನು— ಮತ್ತು ಪಾಪದಲ್ಲಿಡುವುದಕ್ಕೆ ಬಂದೆಯಾ? ದೂರ ಹೋಗು. ಎಂದಳು.

ಕರೀಂನು ಸ್ವಾಮಿ! ನೀವು ಶುದ್ಧ ಅಯೋಗ್ಯರಂತೆ ಕಾಣುತ್ತೀರಿ. ತಾವು ಇಲ್ಲಿಂದ ಹೊರಡಿ ಎಂದು ಮಿರ್ಸಾದಕನನ್ನು ಹೊರದೂಡಿದನು. ಮಿರ್ಸಾದಕನು ಕೂಗಿಕೊಂಡನು. ಅಷ್ಟರಲ್ಲಿ ನಾಲ್ವರು ಶಿದ್ದಿಗಳು ಓಡಿ ಬಂದರು. ಅವರು ಬರುತ್ತಲೇ ಮಿರ್ಸಾದಕನು ಈ ಹೆಂಗಸನ್ನು ಹಿಡಿದುಕೊಳ್ಳಿ, ಎಂದು ಅಪ್ಪಣೆಮಾಡಿದನು. ಅವರು ಗುಡಿಸಿಲಿನೊಳಗೆ ನುಗ್ಗುವುದಕ್ಕೆ ಹೋದರು. ಕರೀಮನು ತಡೆದನು. ಅವರವರಿಗೆ ದೊಡ್ಡ ಹೊಡೆದಾಟವಾಯಿತು. ಶಿದ್ದಿಯೊಬ್ಬನು ದೊಣ್ಣೆಯಿಂದ ಕರೀಮನ ತಲೆಯಮೇಲೆ ಒಂದೇಟು ಹೊಡೆದ.

ಕರೀಮನು ಅಸುವನ್ನು ನೀಗಿ—ನೆಲದಮೇಲೆ ಉರುಳಿದನು. ಶಿದ್ದಿಗಳು ಗುಡಿಸಿಲಿನೊಳಗೆ ನುಗ್ಗಿದರು. ಫಾತಿಮಳನ್ನು ಹಿಡಿದೆಳೆದರು. ಅವಳು ಬಹಳ ಹೋರಾಡಿದಳು. ಮಿರ್ಸಾದಕನನ್ನು ಬೈದಳು. ಏನೂ ಫಲವಾಗಲಿಲ್ಲ. ಶಿದ್ದಿಗಳು ಅವಳ ಬಾಯಿಗೆ ಬಟ್ಟೆತುರುಕಿದರು. ಕಣ್ಣುಕಟ್ಟಿದರು. ಕೈಕಾಲುಗಳನ್ನು ಕಟ್ಟಿ ಹೊತ್ತುಕೊಂಡರು. ಮಿರ್ಸಾದಕನು ಮುಂದೆ ಮುಂದೆ ಹೋದನು. ಅವರು ಹಿಂಪೆಹಿಂದೆ ನಡೆದರು. ಬಹು ದೂರದಲ್ಲಿ ಒಂದು ಚಿಕ್ಕ ದೇವಾಲಯು. ಆ ದೇವಾಲಯದ ಸಮೀಪಕ್ಕೆ ಹೋದರು. ಬಾಗಿಲು ಹಾಕಿತ್ತು. ಒಡೆದು ತೆಗೆದರು. ಒಳಗೆ ದೇವರೇ ಇರಲಿಲ್ಲ. ಪಾಳು ದೇವಾಲಯು. ಅಲ್ಲಿ ಫಾತಿಮಳನ್ನು ಇಳಿಸಿದರು. ಮೀರ್ ಸಾದಕನು ಬಂದು ಕಟ್ಟುಗಳನ್ನು ಬಿಚ್ಚಿದನು. ಫಾತಿಮಾ ನೀನು ನನ್ನನ್ನು ಒರಿಸಬೇಕು. ಇಲ್ಲವೇ ಇಲ್ಲಿ ಅನ್ನಹಾರಗಳಿಲ್ಲದೆ ಸಾಯಬೇಕು ಎಂದು ಕೇಕೆ ಹಾಕಿ ನಕ್ಕನು.

ಫಾತಿಮಳು ನಾನು ಸಾಯುತ್ತೇನೆ ಎಂದಳು.

ಮೀರ್ಸಾದಕನು ಎಷ್ಟೋ ಹೆಣಗಾಡಿದನು. ಫಾತಿಮಳು ಆಸ್ಪದ ಕೊಡಲಿಲ್ಲ. ಮಿರ್ಸಾದಕನು ನಿರ್ವಿಣ್ಣನಾಗಿ ಹೊರಗೆ ಹೊರಡುತ್ತಾ—ಆ ಬಾಗಿಲಿಗೆ ಒಳಗಡೆ ಚಿಲಕವಿದೆಯೇ ಎಂದು ನೋಡಿದನು. ಒಂದು ಚಿಲುಕವಿತ್ತು. ಅದನ್ನು ಕಿತ್ತುಹಾಕಿಸಿದನು. ಆ ಶಿದ್ದಿಗಳನ್ನು ನೀವು ಇಲ್ಲೇ ಕಾದಿರಿ ನಾನು ಬೆಳಗಾಗುವುದರೊಳಗಾಗಿ ಬರುತ್ತೇನೆ ಎಂದು ಹೇಳಿ—ಅವರಿಗೆ ಎರಡೆರಡು ಚಿನ್ನದ ವರಹಾಗಳನ್ನು ಕೊಟ್ಟು ಹೊರಟನು.

ವಾಚಕರೆ! ಈ ಮಿರ್ಸಾದಕನು ಹೀಗೇ ಅಲೆಯುತ್ತಿರಲಿ. ಮಿರ್ ಸಾದಕ್ ಮತ್ತು ಫಾತಿಮಳ ಕಥೆಯು ಇನ್ನೂ ಎಷ್ಟೋ ಇದೆ. ಅವರನ್ನು ಇಲ್ಲೇ ಬಿಟ್ಟು—ನಾವು ಸುಲ್ತಾನರ ಅವಸ್ಥೆ ಏನಾಗಿದೆಯೆಂದು ನೋಡೋಣ. ಇಂದು ದಿವಾನರನ್ನು ವಧೆಮಾಡುವ ದಿನ. ಅಲ್ಲೇನು ನಡಿಯುತ್ತಿದೆಯೆಂಬುದನ್ನು ನೋಡೋಣ.

ದರ್ಬಾರು ಮುಗಿಯುತ್ತಲೇ ಸುಲ್ತಾನನು ಅಂದು ಶಿಬಿರಕ್ಕೆ ಹೋಗಿ ತನ್ನ ಅಂತಃಗೃಹದಲ್ಲಿ ಮಲಗಿದನು. ಅವನು ಚೈತನ್ಯಶೂನ್ಯನಾಗಿ ಹೋಗಿದ್ದಾನೆ.

ಅಧಿಕಾರ ಬಲದಿಂದ ದಿವಾನರ ವಧೆಗೆ ಆಜ್ಞೆಮಾಡಿದ. ಆದರೆ ಅಂತರಾತ್ಮವು ಕುದಿಯುತ್ತಿದೆ. ಮಂತ್ರಿಗಳ ಮಾತಿನಲ್ಲಿ ತಪ್ಪೇನಿದೆ. ನಾವು ನಗರವನ್ನು ಎಲ್ಲಿ ಜಯಿಸಿದ್ದೇವೆ. ಇಯುಜ್‌ಖಾನನು ಸಿಕ್ಕಲೇ ಇಲ್ಲ. ಖಾಸಿಂಖಾನನ್ನು ಗುಂಡಿನಬಾಯಿಗೆ ಕಟ್ಟಿಸಿದೆವು. ಆದರಿಂದ ಯಾವ ಕಾರ್ಯಸಾಧನೆಯಾಯಿತು. ಇಂದು ನಮ್ಮ ದಿವಾನರ ಬಲಿ. ಎಂತಹ ಅಘಟನಾ ಘಟನೆಗಳು. ಮಿರ್‌ಸಾದಕನು ಎಂಥಾ ಪಾಪಿ. ಬೇಗಂಸಾಹೇಬಳ ಮೇಲೆ ಅತ್ಯಾಚಾರ ನಡೆಸಿದ್ದಾನೆ. ಮಧ್ಯ ವಲ್ಲಿ ವಿಧಿಯು ಮಹಮ್ಮದಾಲಿಯವರ ಬಾಯಿಂದ ಅಡ್ಡ ಬಂದು, ವಿಚಾ ರಣೆಯನ್ನು ಅರ್ಧದಲ್ಲಿ ಮುಗಿಸಿಬಿಟ್ಟಿತು. ಇಲ್ಲದಿದ್ದರೆ, ಮಿರ್‌ಸಾದಕನ ಗತಿ ಏನಾಗುತ್ತಿತ್ತು. ಫಾತಿಮಾ ಬೇಗಂ ಎಂಥಾ ಚಲುವೆ. ರಾಜಸಭೆಯಲ್ಲಿ ಇಂದು ಅವಳು ಎಷ್ಟು ಅವಿನಯದಿಂದ ವರ್ತಿಸಿದಳು. ಇವೆಲ್ಲಾ ಏನು ಪ್ರಮಾದ. ಮೈಸೂರು ರಾಜ್ಯಕ್ಕೆ ಇದರಿಂದ ಎಳ್ಳಷ್ಟಾದರೂ ಲಾಭ ಉಂಟೇ. ಮಹಮ್ಮದಾಲಿಯವರು ತಾವಾಗಿ ತಪ್ಪಿ-ತಪ್ಪಿನಮೇಲೆ ತಪ್ಪುಮಾಡಿ, ಪ್ರಾಣಕ್ಕೆ ಆಪತ್ತು ತಂದುಕೊಂಡರು. ಇದರಲ್ಲಿ ಯಾರ ತಪ್ಪು ಏನಿದೆ? ಫಾತಿಮಳು ತಾನಾಗಿ ನರಕದಲ್ಲಿ ಧುಮುಕಿದಳು. ಅದಕ್ಕೆ ಯಾರೇನು ಮಾಡಲಾದೀತು? ಅಲ್ಲಿಂದ ಬಂದು ಈ ರಾಜಸಭೆಯಲ್ಲಿ ಅಗ್ನಿಕುಂಡದಲ್ಲಿ ಹಾರಿದಳು. ನಾನೇನು ಮಾಡಬಲ್ಲೆ. ಹೀಗೆ ಆಲೋಚನೆ ಮಾಡುತ್ತಿದ್ದನು. ಆದರೇನು ಅವನ ಮನಸ್ಸು ಶಾಂತಿ ಇರಲಿಲ್ಲ. ತನ್ನದೇನೂ ತಪ್ಪಿಲ್ಲವೆಂದು ನೂರು ಬಾರಿ ಅಂದು ಕೊಂಡರೂ, ನಡೆದ ಘಟನೆಗಳೆಲ್ಲಾ ವಿಪರೀತವಾದುವುಗಳೆಂದು ಅವನಿಗೆ ಚಿಂತೆ. ಅವನಿಗೆ ಎಲ್ಲವೂ ಶೂನ್ಯವಾಗಿ ತೋರಲಾರಂಭಿಸಿತು. ಎಷ್ಟೋ ಪ್ರಯತ್ನಪಟ್ಟನು ನಿದ್ದೆ ಹತ್ತಲಿಲ್ಲ. ರಾತ್ರಿ ಭೋಜನಕ್ಕೆ ಏಳಲೇ ಇಲ್ಲ.

ಸುಮಾರು ರಾತ್ರಿ ಹನ್ನೊಂದು ಘಂಟೆಯ ಹೊತ್ತಿರಬಹುದು. ಮಹ ಮ್ಮದಾಲಿಯವರು ಇಷ್ಟು ಹೊತ್ತಿಗೆ ಪರಲೋಕ ಪ್ರವಾಸ ಮಾಡಿರಬಹುದು ಎಂದು ಚಿಂತಿಸುತ್ತಿದ್ದರು. ಯಾರೋ ಕುದುರೆಯನ್ನು ದೌಡಾಯಿಸುತ್ತ ಬಂದರು. ಕುದುರೆಯ ಖುರಪುಟವು ಸುಲ್ತಾನರಿಗೆ ಕೇಳಿಸಿತು. ಕುದುರೆ ಯಿಂದ ಇಳಿದವಳು ಹೆಂಗಸು. ಅವಳು—ಸುಲ್ತಾನರ ಅಂತಃಗೃಹಕ್ಕೆ ಹೋಗ ಬೇಕೆಂದು ಹೇಳಿದಳು. ಪಹರೆಯವರು ಬಿಡಲಿಲ್ಲ. ಅವಳು ಅವಸರ ಅವಸರ ದಿಂದ ಸುಲ್ತಾನರನ್ನೆಬ್ಬಿಸಿ ಎಂದು ಹೇಳಿದಳು. ಯಾರೂ ಎಬ್ಬಿಸಲು ಸಾಧ್ಯ

ವಿಲ್ಲವೆಂದು ಉತ್ತರ ಕೊಟ್ಟರು. ಅವಳು ನಾನೇ ಕೂಗಿಕೊಳ್ಳುತ್ತೇನೆ ಎಂದಳು. ಕೂಗಿದರೆ ಹಿಡಿದು ಖೈದಿನಲ್ಲಿಡುತ್ತೇವೆ ಎಂದು ಹವಾಲ್ದಾರನು ಹೇಳಿದನು. ಹೆಂಗಸಾಗಿ ಎಷ್ಟು ಧೈರ್ಯವೇ ನಿನಗೆ. ಈ ಮಧ್ಯರಾತ್ರಿಯಲ್ಲೇನು ಕೆಲಸ. ಸುಲ್ತಾನರನ್ನೆಬ್ಬಿಸಬೇಕಂತೆ. ಇವಳೇ ಕೂಗುತ್ತಾಳಂತೆ. ಕಬರದಾರ್. ಎಂದು ಹೆದರಿಸಿದನು. ಹೆಂಗಸು ಅಸಡ್ಡೆಯಿಂದ ಕೇಕೆ ಹಾಕಿ ನಕ್ಕಳು. ಇದನ್ನು ಟಿಪ್ಪೂಸುಲ್ತಾನನು ಒಳಗಿನಿಂದ ಕಿವಿಗೊಟ್ಟು ಕೇಳುತ್ತಿದ್ದನು. ಅವನು ಆ ಧ್ವನಿಯನ್ನು ಹಿಂದೆ ಕೇಳಿದ್ದನು. ಅದೇ ನಗುವನ್ನು ಕೇಳಿದ್ದನು. ಅದು ಜ್ಞಾಪಕಕ್ಕೆ ಬಂತು. ತಟ್ಟನೆದ್ದು ಹೊರಗೆ ಬಂದನು. ಬಂದು ಆ ಹೆಂಗಸಿನ ಕೈಹಿಡಿದುಕೊಂಡು, ರಾಧಾರಾಣಿಯವರೇ, ದಯಮಾಡಿಸಿ ! ಎಂದು ತನ್ನ ಗುಡಾರದೊಳಗೆ ಕರೆದುಕೊಂಡು ಹೋದನು. ಅಲ್ಲಿ ಅವಳನ್ನು ಆಸನದಮೇಲೆ ಕೂಡಿಸಿದನು.

ರಾಧೆಯು ಗಾಬರಿಯಾಗಿ, ಇಂದು ಸಾವಧಾನವಾಗಿ ಮಾತನಾಡಲು ಆಸ್ಪದವಿಲ್ಲ. ದೌಲತ್ ರಾಣಿಯವರ ಪ್ರಾರ್ಥನೆಯ ಮೇಲೆ ನಾನು ತಮ್ಮ ಶಿಬಿರಕ್ಕೆ ಬಂದಿದ್ದೇನೆ. ಇಂದೇ ತಮಗೆ—ದೌಲತ್ ರಾಣಿಯವರ ಭೇಟಿ ಮಾಡಿಸುತ್ತೇನೆ. ಅವರು ತಮ್ಮಲ್ಲಿ ಒಂದು ಪಾರ್ಥನೆ ಮಾಡುತ್ತಾರೆ. ಅದನ್ನು ಸಲ್ಲಿಸಿ ಕೊಡಬೇಕು.

ದಿವಾನ್ ಮುಹಮ್ಮದಾಲಿಯವರನ್ನು ಬಿಡುಗಡೆ ಮಾಡಬೇಕು. ಬಿಡುಗಡೆ ಮಾಡದಿದ್ದರೂ, ಇಂದು ಅವರನ್ನು ವಧೆ ಮಾಡಕೂಡದು. ನಾಳೆ ದಿನ ಬಡಾಫಕೀರರು ಬರುತ್ತಾರೆ. ಅವರು ಮುಹಮ್ಮದಾಲಿಯವರು ಅಪರಾಧಿಗಳೆಂದು ತೀರ್ಮಾನಿಸಿದರೆ ಶಿಕ್ಷೆ ಮಾಡಬಹುದು. ಇದು ದೌಲತ್‌ರಾಣಿಯವರು ತಮ್ಮಲ್ಲಿ ಮಾಡುವ ಯೋಚನೆ!

ರಾಧಾರಾಣಿಯವರೇ! ತಪ್ಪು ನಿಮ್ಮದು. ಅಪರಾಧವು ದೌಲತ್ ರಾಣಿಯದು. ಎಲ್ಲರಿಗಿಂತ ಹೆಚ್ಚು ಬಡಾ ಫಕೀರರದು. ಅವರು ಮೊದಲೇ ಏಕೆ ಆಜ್ಞೆಮಾಡಲಿಲ್ಲ. ದೌಲತ್ತಳು ಮಧ್ಯಾಹ್ನವೇ ಏಕೆ ಹೇಳಿಕಳುಹಿಸಲಿಲ್ಲ. ನೀವು ಸಂಧ್ಯಾಕಾಲವೇ ಏಕೆ ಬರಲಿಲ್ಲ.

ಹನ್ನೊಂದು ಗಂಟೆಗೆ ಸರಿಯಾಗಿ ಮುಹಮ್ಮದಾಲಿಯವರಿಗೆ ಘೋರ ವಿಷವನ್ನು ಕೊಟ್ಟು ಕೊಲ್ಲುವಂತೆ ಆಜ್ಞೆಯಾಗಿದೆ.

ರಾಧೆಯು ನಡುಗುತ್ತಾ, ಏಳಿರಿ, ಹನ್ನೊಂದು ಇನ್ನೂ ಹೊಡೆದಿಲ್ಲ. ನಮ್ಮ ಕಾರ್ಯಗಳ ನಡುವೆ ಭಗವಂತನ ಸೂತ್ರವು ಇದೆ. ಅವನೇನಾದರೂ ಉಳಿಸುತ್ತಾನೋ ನೋಡೋಣ. ಟಿಪ್ಪೂಸುಲ್ತಾನನು ಎದ್ದು ಹೊರಟನು. ಹೊರಗೆ ಬಂದು ಕುದುರೆಯನ್ನೇರಿದನು. ರಾಧೆಯೂ ಕುದುರೆಯನ್ನು ಹತ್ತಿ ಚಪ್ಪರಿಸಿದಳು. ಕುದುರೆಗಳು ವಾಯುವೇಗದಿಂದ ಮುಹಮ್ಮದಾಲಿಯುವರನ್ನು ಬಂಧನದಲ್ಲಿಟ್ಟಿದ್ದ ಸೈನ್ಯ ಶಿಬಿರದ ಹತ್ತಿರ ಬಂದವು. ಇಬ್ಬರೂ ಬಂಧನಾಗಾರದ ಬಾಗಿಲಿಗೆ ಇಳಿದು ಬಂದರು.

ಪಹರೆಯುವರು ಖಾಸ್ ಸನ್ನಿಧಾನವು ಬಂದಿದ್ದು ನೋಡಿ, ಪರಾಕ್ ಹೇಳಿದರು. ಒಳಗೆ ಮುಹಮ್ಮದಾಲಿಯು ದೇವರ ನಾಮುವನ್ನು ಸ್ಮರಣೆ ಮಾಡುವುದು ಕೇಳಿಸಿತು. ರಾಧೆಯು—"ಇನ್ನೂ ಇಲ್ಲ, ಬದುಕಿದಾರೆ" ಎಂದಳು. ಇಬ್ಬರೂ—ಜೈಲಿನ ಬಾಗಿಲಿಗೆ ಹೋದರು. ಪಹರೆಯುವರೆಲ್ಲಾ ಸಡಗರದಿಂದ ದಾರಿಬಿಟ್ಟರು. ಜೈಲಿನ ಬಾಗಿಲು ತೆಗೆಯಿತು. ಬಾಗಿಲು ತೆಗೆಯುವಷ್ಟರಲ್ಲಿ ಮುಹಮ್ಮದಾಲಿಯು—ವಿಷದ ಪಾತ್ರೆಯಿಂದ ವಿಷವನ್ನು ಪೂರ್ತಿಯಾಗಿ ಪಾನ ಮಾಡಿಬಿಟ್ಟನು. "ಅಲ್ಲಾ-ಹೋ-ಅಕ್ಬರ್" ಎಂದು ಕೂಗುತ್ತಾ ಪಾತ್ರೆಯನ್ನು ಬಿಸಾಡಿದನು. ಅಷ್ಟರಲ್ಲಿ ರಾಧೆಯು ಮುಂದೆ ಬಂದು ನಿಂತಳು.

ಮುಹಮ್ಮದಾಲಿಯು ಗುರ್ತಿಸಿದನು. ರಾಧಾರಾಣಿಯುವರೇ, ಒಳ್ಳೇ ಸಮಯಕ್ಕೆ ಬಂದಿರಿ. ಎಲ್ಲರಿಗೂ ನನ್ನ ವಂದನೆಗಳು—ಎಂದು ಹೇಳಿ ಕಣ್ಣು ಮುಚ್ಚಿದನು. ನೆಲದಲ್ಲಿ ಉರುಳಿದನು. ರಾಧಾರಾಣಿಯುವರು ಗಟ್ಟಿಯಾಗಿ ಅಳತೊಡಗಿದಳು. ದಾಹ! ದಾಹ! ಎಂದು ಕೂಗಿದನು. ಪರಿಚಾರಕರು ನೀರು ತಂದರು. ರಾಧೆಯು ಕುಡಿಸಿದಳು. ಮುಹಮ್ಮದಾಲಿಯ ಶರೀರವು ಒದ್ದಾಡಿತು. ಸುಲ್ತಾನನು ಕಣ್ಣು ಎವೆ ಇಕ್ಕದೇ ನೋಡುತ್ತಾ ನಿಂತಿದ್ದನು. ಬಡಾ ಫಕೀರರು ಜೈಲುಖಾನೆಯನ್ನು ಪ್ರವೇಶಿಸಿದರು. ಹೋಗಿ ಮುಹಮ್ಮದಾಲಿಯ ತಲೆಯನ್ನು ತೊಡೆಯಮೇಲಿಟ್ಟುಕೊಂಡು, ಮುಖದಮೇಲೆ ಮುಖವನ್ನಿಟ್ಟು ಚುಂಬಿಸಿದರು. ಪ್ರಾಣವು ಹಾರಿಹೋಯಿತು. ಬಡಾ ಫಕೀರರ ಕಣ್ಣುಗಳಲ್ಲಿ ತಟತಟನೆ ನೀರು ಸುರಿಯಿತು. ಸುಲ್ತಾನನು ಎಲ್ಲವನ್ನೂ ನೋಡುತ್ತ ಕಲ್ಲುಕಂಬದಂತೆ ನಿಂತಿದ್ದನು. ಬಡಾಫಕೀರರು ರಾಧಾರಾಣಿಯುವರೇ! ತಾವು ನನಗೊಂದು ಉಪಕಾರವನ್ನು ಮಾಡಬಲ್ಲಿರಾ?

ರಾಧೆಯು ಫಕೀರಜೀ! ಅಪ್ಪಣೆಯಾಗಲಿ.

ಈ ಪುಣ್ಯಾತ್ಮನ ಶರೀರವನ್ನು ನಗರದಲ್ಲಿ ಗೋರೀ ಮಾಡಿಸಬೇಕು. ಮುಹಮ್ಮದಾಲಿಯುವರ ಬೇಗಂಸಾಹೇಬಳನ್ನು ಪತ್ತೇಮಾಡಿಸಿಕೊಡಬೇಕು.

ಅಪ್ಪಣೆ!

ಬಡಾ ಫಕೀರರು ಮುಹಮ್ಮದಾಲಿಯುವರ ತಲೆಯುನ್ನು ಕೆಳಗಿಟ್ಟು ಎದ್ದು ನಿಂತರು—ಎರಡು ಹೆಜ್ಜೆ ಮುಂದೆ ಇಟ್ಟರು. ಸುಲ್ತಾನನು ಬಂದು ಸಲಾಂ ಮಾಡಿದನು.

ಬಡಾ ಫಕೀರರು ಮಾತನಾಡಲಿಲ್ಲ. ಸುಲ್ತಾನನು ಅವರ ಕಾಲಿಗೆ ಬಿದ್ದು ಕ್ಷಮಾ ಪ್ರಾರ್ಥನೆ ಮಾಡಿದನು.

ಫಕೀರನು—ಸುಲ್ತಾನರೇ! ನಾನು ಕ್ಷಮಿಸುತ್ತೇನೆ. ಈ ಲೋಕವು ನಿಮ್ಮನ್ನು ಕ್ಷಮಿಸದು. ಅಲ್ಲಾನ ಮುಂದೆ ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ಈ ತಪ್ಪು ಮಹಾಪುರುಷನಾದ ಮುಹಮ್ಮದಾಲಿಯುದು. ಅವನು ವಿರಕ್ತ ಪುರುಷ! ದೇವರ ಭಕ್ತ! ಅವನಿಗೇಕೆ ದಿವಾನಗಿರಿ! ಅವನಿಗೇಕೆ ಯುದ್ಧ ವಿಗ್ರಹಗಳು! ಅವನು ದಾರಿಕಾಣದೆ ಅಲೆಯುತ್ತಿದ್ದನು. ದೇವರು ದಾರಿ ತೋರಿಸಿ, ಕರದುಕೊಂಡನು. ನೀವು ಕೊಲ್ಲಬೇಕೆಂದರೆ ಕೊಲ್ಲಲಾದೀತೆ? ಈಗ ಮುಹಮ್ಮದಾಲಿಯುವರನ್ನು ಬದುಕಿಸಬೇಕೆಂದೇ ಇಲ್ಲಿಗೆ ಓಡಿಬಂದಿರಿ! ಬದುಕಿಸುವುದು ನಿಮ್ಮಿಂದ ಸಾಧ್ಯವಾಯಿತೆ? ಸಾವು ಜೀವಗಳು—ಆ ಭಗವಂತನ ಅಧೀನ! ಎಂದು ಹೇಳಿ ಬಡಾ ಫಕೀರನು ಹೊರಟು ಹೋದನು. ಅಲ್ಲಿ ರಾಧಾರಾಣಿಯೂ ಸುಲ್ತಾನನು ಹೊರತಾಗಿ ಯಾರೂ ಇರಲಿಲ್ಲ. ಅವರಿಬ್ಬರೂ ಮುಹಮ್ಮದಾಲಿಯು ಶವವನ್ನು ಎತ್ತಿ ಮಂಚದಮೇಲೆ ಮಲಗಿಸಿದರು. ರಾಧಾರಾಣಿಯು ಹೊರಟಳು. ಅವಳನ್ನು ಅನುಸರಿಸಿ ಸುಲ್ತಾನನೂ ಹೊರಟನು.

ಶಿಬಿರದಿಂದ ಹೊರಗೆ ಬರುತ್ತಲೇ—ರಾಧಾರಾಣಿ! ನೀವೆಲ್ಲಿಗೆ ಹೋಗುವಿರಿ? ಎಂದು ಸುಲ್ತಾನನು ಕೇಳಿದನು.

ಸುಲ್ತಾನ್! ನಾನು ಫಾತಿಮಾಬೇಗಂಳನ್ನು ಹುಡುಕುವುದಕ್ಕೆ ಹೋಗುತ್ತೇನೆ.

ಈ ನಿಶಿ ರಾತ್ರಿಯಲ್ಲಿ ನೀವೆಲ್ಲಿ ಹುಡುಕುತ್ತೀರಿ. ? ನಾನು ಬಂದು ಫಾತಿಮಳನ್ನು ಪತ್ತೇಮಾಡಿಸಿಕೊಡುತ್ತೇನೆ ಎಂದು ಹೇಳಿ ಸುಲ್ತಾನನೂ ಹೋದನು. ವಧ್ಯ ಮರದ ಹತ್ತಿರ ಹೋಗಿ ಆ ಗುಡಿಸಲಿನ ಹತ್ತಿರ ನೋಡಿ ದನು. ಕರೀಮನ ಶವವು ಬಾಗಿಲಲ್ಲಿ ಬಿದ್ದಿತ್ತು. ಗುಡಿಸಲಿನೊಳಗೆ ಹೋಗಿ ನೋಡಿದನು. ಶೂನ್ಯವಾಗಿತ್ತು.

ದೇವಿ! ಯಾರೋ ಕಳ್ಳರು ಫಾತಿಮಾಬೇಗಂರವರನ್ನು ಅಪಹರಿಸಿ ಕೊಂಡು ಹೋಗಿದಾರೆ.

ಇನ್ನು ನೀವು ಹುಡುಕಲಾರರಿ! ನಾನು ಹುಡುಕಿಕೊಂಡು ಬರುತ್ತೇ ನೆಂದು ಹೇಳಿ ಸುಲ್ತಾನರನ್ನು ಶಿಬಿರಕ್ಕೆ ಕಳಿಸಿ—ತಾನು ಏಕಾಕಿನಿಯಾಗಿ ಹೊರಟಳು. ಕಾಡಿನಲ್ಲಿ ದೇವಾಲಯದ ಬಳಿ ಮನುಷ್ಯರು ಮಾತನಾಡುವ ಸದ್ದು ಕೇಳಿಸಿತು. ಕುದುರೆಯ ಕಾಲು ಸದ್ದು ಕೇಳಿ, ಶಿದ್ದಿಗಳು ಹೆದರಿದರು. ರಾಧೆಯು ದೇವಾಲಯದ ಹತ್ತಿರ ಹೋಗಿ ಕುದುರೆಯನ್ನು ನಿಲ್ಲಿಸಿದಳು. ಕುದುರೆಯಮೇಲೆ ಬಂದಿರುವವಳು ಹೆಂಗಸೆಂದು ತಿಳಿದು, ಶಿದ್ದಿಗಳು ಧೈರ್ಯ ದಿಂದ ಬಂದು ನೀನಾರು ? ಇಲ್ಲಿಗೇಕೆ ಬಂದೆ ? ಹೊರಟುಹೋಗು ! ಎಂದು ಗದ್ದರಿಸಿದರು.

ರಾಧೆಯು ನಗುತಾ, ಈ ದೇವಾಲಯವು ನನ್ನದು ! ನೀವು ಒಳ್ಳೇ ಮಾತಿನಲ್ಲಿ ಹೊರಟುಹೋಗಿರಿ. ಇಲ್ಲದಿದ್ದರೆ ಪ್ರಾಣಕ್ಕೆ ಸಂಚಕಾರ ಬಂದೀತು.

ಶಿದ್ದಿಗಳು—ಹೆಂಗಸು, ಹಿಂದೂ ಹೆಂಗಸು. 'ಉಫ್' ಎಂದರೆ ಹಾರಿ ಹೋಗುವಹಾಗಿದ್ದಾಳೆ. ಭಯವಿಲ್ಲದೆ ನಮ್ಮೊಡನೆ ಮಾತನಾಡುತ್ತಾಳೆ ಎಂದು ಹಾಸ್ಯಮಾಡಿದರು. ನೋಡಿರಿ, ಅಮ್ಮನವರೇ ! ಒಳಗೊಬ್ಬ ಅಮ್ಮನವರು ಇದ್ದಾರೆ. ಅವರು ಮುಸಲ್ಮಾನರು ನೀವು ಹಿಂದೂಗಳು. ನಿಮ್ಮನ್ನೂ ಹಿಡಿದು ಒಳಗೆ ಕೂಡುತ್ತೇವೆ. ನಮಗೆ ಹೆಚ್ಚು ದುಡ್ಡು ಸಿಕುತ್ತೆ.

ರಾಧೆಯು ಒಳಗಿರುವವರು ಯಾರು ? ಧೈರ್ಯವಾಗಿ ನಿನ್ನ ಹೆಸರು ಹೇಳು ಎಂದು ಕೂಗಿದಳು.

ನನ್ನ ಹೆಸರು ಫಾತಿಮಾ ! ಫಾತಿಮಾ !

ನೀವು ಕರೀಂನನ್ನು ಕೊಂದು ಈ ಹೆಂಗಸನ್ನು ಇಲ್ಲಿ ತಂದಿಟ್ಟಿದ್ದೀರೋ ? ಎಂದು ಘಾತುಕರನ್ನು ಹೆದರಿಸಿದಳು.

ಕರೀಂನನ್ನು ಕೊಂದವರು ನಾವಲ್ಲ. ಈ ಹೆಂಗಸನ್ನು ತಂದವರು ನಾವು.

ಈ ಹೆಂಗಸನ್ನೇಕೆ ಇಲ್ಲಿಗೆ ತಂದು ಮುಚ್ಚಿಟ್ಟಿದ್ದೀರಿ ?

ನಮ್ಮ ಸುಲ್ತಾನರ ಅಪ್ಪಣೆಯಂತೆ !

ಸುಳ್ಳು ! ಸುಲ್ತಾನರು ಹೆಂಗಸರನ್ನು ಕದಿಯುವ ಕಳ್ಳರಲ್ಲ. ನಿಮ್ಮ ನಾಲಿಗೆಯನ್ನು ಸೀಳಿಸುತ್ತೇನೆ.

ಎಷ್ಟು ಉದ್ದ ಉದ್ದದ ಮಾತುಗಳನ್ನಾಡುತ್ತೀಯೇ ನೀನು ? ಒಂದು ಕೈಯಿಂದ ಹಿಸುಕಿದರೆ ಚಟ್ಣಿಯಾಗಿಹೋಗುತ್ತಿ. ಎಂದು ಹೇಳುತ್ತಾ ಒಬ್ಬನು ಕುದುರೆಯ ಕಡಿವಾಣವನ್ನು ಹಿಡಿಯುವುದಕ್ಕೆ ಹೋದನು. ಮತ್ತೊಬ್ಬನು ರಾಧೆಯ ಕಾಲು ಹಿಡಿದು ಎಳೆಯುವುದಕ್ಕೆ ಹೋದನು. ರಾಧೆಯು ಕುದುರೆಯನ್ನು ಕಾಲಿನಿಂದ ತಿವಿದಳು. ಕುದುರೆಯು ಹಾರಿ ಒಬ್ಬನಮೇಲೆ ಬಿತ್ತು. ಅವನು ನೆಲದಮೇಲೆ ಬೀಳುವಷ್ಟರಲ್ಲಿ ರಾಧೆಯು ಕತ್ತಿಯನ್ನು ಬೀಸಿದಳು. ಅವನ ತಲೆಯು ನೆಲದಮೇಲೆ ಕಳಚಿ ಬಿತ್ತು. ಉಳಿದ ಮೂವರು ಸರಿದು ನಿಂತರು. ದೂರದಿಂದ ಕಲ್ಲುಗಳನ್ನು ಬೀಸಲಾರಂಭಿಸಿದರು. ಕ್ಷಣಾರ್ಧದಲ್ಲಿ ರಾಧೆಯು ಕುದುರೆಯನ್ನು ಹಾರಿಸಿ ಮತ್ತೊಬ್ಬನನ್ನು ಆಕ್ರಮಣಮಾಡಿದಳು. ಅವನು ಕುದುರೆ ಕಾಲಿಗೆ ಸಿಕ್ಕಿ ಕೂಗುತ್ತಾ ನೆಲದಲ್ಲಿ ಉರುಳಿದನು. ಮತ್ತಿಬ್ಬರು ಸ್ಥಂಭೀಭೂತರಾಗಿ ನಿಂತರು. ರಾಧೆಯು ಕೆಳಗಿಳಿದು ಅವರಿಬ್ಬರ ಮುಂದೆ ನಿಂತಳು. ನೀವು ಈಗ ಖೈದಿಗಳು. ಅತ್ತಿತ್ತ ಅಲಗಿದರೆ—ಯಮನ ಪಟ್ಟಣಕ್ಕೆ ಕಳುಹಿಸುತ್ತೇನೆ ಎಂದು ಹೇಳಿದಳು. ಅವರು ನಡುಗುತ್ತ ನಿಂತರು ಕುದುರೆಯ ಹಗ್ಗದಿಂದ ಅವರ ಕೈಕಟ್ಟಿ ಮರಕ್ಕೆ ಬಿಗಿದಳು. ದೇವಾಲಯದ ಬಾಗಿಲು ತೆಗೆದು ಫಾತಿಮಾ ಬೇಗಂ, ನನ್ನೊಡನೆ ನಡೆಯಿರಿ ಎಂದು ಹೇಳಿದಳು.

ಫಾತಿಮಳು ನೀನಾರು ತಾಯಿ ? ಇಷ್ಟು ಚಿಕ್ಕ ವಯಸ್ಸಿನವಳಾದರೂ ಇಷ್ಟೊಂದು ಪರಾಕ್ರಮಶಾಲಿಯಾಗಿರುವೆ ? ನಿನಗಿರುವ ಶಕ್ತಿಯು ನನಗಿದ್ದಿದ್ದರೆ ಇಷ್ಟು ಪ್ರಮಾದವೇ ಆಗುತ್ತಿರಲಿಲ್ಲ. ನೀನಾರು ಹೇಳು ?

ಬೇಗಂಸಾಹೇಬ್. ನಾನಾರೆಂದುಹೇಳಿದರೂ ಈಗ ಫಲವಿಲ್ಲ. ನಿನಗೆ ಗೊತ್ತಾಗುವುದಿಲ್ಲ. ನೀವು ಯಾರೆಂಬುದನ್ನು ನಾನು ಬಲ್ಲೆ. ನಿಮ್ಮ ಅನ್ವೇಷಣೆಗಾಗಿಯೇ ನಾನು ಇಲ್ಲಿಗೆ ಬಂದೆ. ಸಧ್ಯಕ್ಕೆ ನೀವು ನನ್ನ ಬಂದಿಗಳು. ನಾನು ಹೇಳಿದಹಾಗೆ ಕೇಳಬೇಕು. ಅಷ್ಟೆ.

ಫಾತಿಮುಳಿಗೆ ದಿಕ್ಕು ತೋಚದಾಯಿತು. ಈ ಘಾತುಕರ ಕೈಲಿರುವುದಕ್ಕಿಂತ ಈ ಪರಾಕ್ರಮಶಾಲಿಯೊಂದ ಹೆಂಗಸಿನ ಬಂದಿಯಾಗಿರುವುದು ಮೇಲು ಎಂದುಕೊಂಡು ಮುಂದೆ ಸರಿದಳು. ರಾಧೆಯು—ಬೇಗಂಸಾಹೇಬ್, ತಮಗೆ ಕುದುರೆಯನ್ನು ಹತ್ತುವುದಕ್ಕೆ ಬರುತ್ತದೋ?

ಬರುತ್ತದೆ.

ರಾಧೆಯು ಕುದುರೆಯ ಮೇಲೆ ನೆಗೆದು ಹತ್ತಿದಳು. ಫಾತಿಮುಳಿಗೆ ಕೈ ಕೊಟ್ಟು ಮೇಲಕ್ಕೆ ಎಳೆದುಕೊಂಡಳು. ಒಂದು ಕೈಯಿಂದ ಅವಳನ್ನು ಬಲವಾಗಿ ಹಿಡಿದುಕೊಂಡಳು. ಮತ್ತೊಂದು ಕೈಯಿಂದ ಕುದುರೆಯನ್ನು "ಕಾಳ ನಡೆ" ಎಂದಳು. ಕುದುರೆಯು ಓಡಲಾರಂಭಿಸಿತು. ರಾಧೆಯು ಮರಕ್ಕೆ ಕಟ್ಟಿದ್ದ ಸಿದ್ದಿಗಳ ಕಡೆಗೆ ತಿರುಗಿ—ನಿಮ್ಮ ಸುಲ್ತಾನರು ಬಂದರೆ—ರಾಧಾರಾಣಿಯವರು ಬಂದು ನಿಮ್ಮ ಷಿತಾರಿಯನ್ನು ಅಪಹರಿಸಿಕೊಂಡು ಹೋದರೆಂದು ತಿಳಿಸಿರಿ. ಅವರಿದ್ದಿದ್ದರೆ ಅವರನ್ನು ಈ ಕುದುರೆಯಕಾಲಿಗೆ ಕಟ್ಟಿ ಎಳಕೊಂಡು ಹೋಗುತ್ತಿದ್ದೆ ಎಂದು ಹೇಳಿ ಕಟಕಟನೆ ಹಲ್ಲು ಕಡಿದಳು. ಕುದುರೆಯು ಹೊರಟುಹೋಯಿತು.

ಬಹಳ ಹೊತ್ತಾದಮೇಲೆ ಮಿಾರ್‌ಸಾದಕನು ಒಂದು ಮ್ಯಾನಾ ತೆಗೆಸಿಕೊಂಡುಬಂದನು. ಆ ಕತ್ತಲಿನಲ್ಲಿ ದೇವಾಲಯದ ಮುಂದೆ ಒಂದು ಹೆಣವು ಕಾಲಿಗೆ ತಗಲಿತು. ಅದನ್ನು ಬಗ್ಗಿ ನೋಡಿದನು. ಅದೊಬ್ಬ ಶಿದ್ದಿಯ ಹೆಣ. ಮತ್ತೊಬ್ಬನು ಆರ್ತನಾದ ಮಾಡುತ್ತಾ ಹೆಣಗಾಡುತ್ತಿದ್ದನು. ಸಮಿಾಪದಲ್ಲಿ ಮರಕ್ಕೆ ಇಬ್ಬರನ್ನು ಕಟ್ಟಿತ್ತು. ಮಿಾರ್‌ಸಾದಕನು ಹೋಗಿ ಬಿಚ್ಚಿದನು. ಅವರು ನಡೆದ ವಿದ್ಯಮಾನವನ್ನೆಲ್ಲಾ ಹೇಳಿದರು. ನಾಲ್ವರು ಒಬ್ಬ ಹೆಂಗಸನ್ನು ಹಿಡಿಯಲಾರದೆ ಹೋದಿರಾ? ಎಂದು ಮೂದಲಿಸಿದನು. ಅವರಿಗೆ ದುಡ್ಡು ಕೊಟ್ಟು ಕಳುಹಿಸಿದನು, ಅವರು ಆ ಮುಮೂರ್ಷು ಅವಸ್ಥೆಯಲ್ಲಿದ್ದ ಸ್ನೇಹಿತನನ್ನು ಹೊತ್ತುಕೊಂಡು ಶಿಬಿರಾಭಿಮುಖವಾಗಿ ಹೋದರು. ಮಿಾರ್‌ಸಾದಕನು

ಆ ಮ್ಯಾನಾದವರಿಗೆ ಬಹಳ ದುಡ್ಡು ಕೊಡುವುದಾಗಿ ಒಪ್ಪಿಸಿ, ಅಲ್ಲಿಂದಲೇ ಶ್ರೀರಂಗಪಟ್ಟಣದ ಕಡೆಗೆ ಪ್ರಯಾಣ ಮಾಡಿದನು.

ರಾಧೆಯು ಸುಲ್ತಾನನ ಶಿಬಿರಕ್ಕೆ ಬಂದು ಇಳಿದಳು.

ಬೇಗಂಸಾಹೇಬಳು—ರಾಣಿಯವರೇ ನನ್ನನ್ನು ಪುನಃ ಈ ಶಿಬಿರಕ್ಕೆ ತಂದಿರಾ ? ಎಂದು ಕೇಳಿದಳು.

ಬೇಗಂಸಾಹೇಬ್ ! ಈಗ ನೀವು ನನ್ನ ಬಂಧಿ. ನನ್ನ ಷಿಕಾರಿ. ಯಾರಿಗೂ ಭಯಪಡುವ ಕಾರಣವಿಲ್ಲ. ಧೈರ್ಯವಾಗಿರಿ. ಎಂದು ಹೇಳಿ ಸುಲ್ತಾನರ ಗುಡಾರಕ್ಕೆ ಹೋದಳು. ಅಲ್ಲಿ ಸುಲ್ತಾನನು ಚಿಕ್ಕ ಹುಡುಗನಂತೆ ಅಳುತ್ತಾ ಹೊರಳಾಡುತ್ತಿದ್ದನು. ರಾಧೆಯು ಸುಲ್ತಾನರೇ, ನೀವು ಧೈರ್ಯಗೆಡಬೇಡಿರಿ. ನಿಮ್ಮ ತಪ್ಪೇನಿದೆ? ನೀವು ನಿಮ್ಮ ದರ್ಬಾರೀ ಪದ್ಧತಿಯಂತೆ ಎಲ್ಲವನ್ನೂ ಮಾಡಿದ್ದೀರಿ ಎಂದು ಸಮಾಧಾನ ಮಾಡಿದಳು.

ಸುಲ್ತಾನರೆ. ನಾನು ಫಾತಿಮಾಬೇಗಂರವರನ್ನು ಪತ್ತೆಮಾಡಿ ಕರತಂದಿದ್ದೇನೆ. ಅವರನ್ನು ನನ್ನ ಜೊತೆಯಲ್ಲಿ ಕರೆದುಕೊಂಡು ಹೋಗಲು ಅಪ್ಪಣೆ ಕೊಡಿ ಎಂದು ಬೇಡಿದಳು.

ರಾಣಿಯವರೇ ! ನನ್ನ ಅಪ್ಪಣೆಯೇಕೆ ?

ರಾಜಯೋಗ್ಯವಾದ ಮ್ಯಾನಾ ಬೇಕು. ಯಾರೂ ಕಳ್ಳರು ಬಂದು ಮೇಲೆ ಬೀಳದಂತೆ ಬಂದೋಬಸ್ತು ಬೇಕು. ಈ ಶಿಬಿರದಲ್ಲಿರುವ ಫಾತಿಮಳ ವಸ್ತ್ರಾಭರಣಗಳು ಬೇಕು. ಅದೆಲ್ಲಾ ತಮ್ಮ ಅಪ್ಪಣೆಯಿಲ್ಲದೇ ನಮ್ಮಂಥಾ ಬಿಕಾರಿಗಳಿಗೆ ಹೇಗೆ ದೊರೆಯಬೇಕು ?

ರಾಣಿಯವರೇ ! ತಾವು ನನ್ನನ್ನು ಅಪಹಾಸ್ಯ ಮಾಡುತ್ತೀರೋ ? ಪರೀಕ್ಷೆ ಮಾಡುತ್ತೀರೋ ? ತಿಳಿಯುವಹಾಗಿಲ್ಲ. ಹೇಗೂ ಈಗ ನಾನು ತಮ್ಮ ಆಜ್ಞಾಧಾರಕ. ಎಲ್ಲವನ್ನೂ ಏರ್ಪಾಡುಮಾಡಿ ಕೊಡುತ್ತೇನೆ.

ನಾನೊಮ್ಮೆ ಫಾತಿಮಾಬೇಗಂರವರನ್ನು ನೋಡಿ ಕ್ಷಮಾ ಪ್ರಾರ್ಥನೆ ಮಾಡಬೇಕೆನ್ನಿಸುತ್ತದೆ. ಅಪ್ಪಣೆ ಕೊಡುವಿರಾ ?

ಇಲ್ಲ ! ತಾವು ಈ ಶಿಬಿರದಲ್ಲಿ ಯಾರಿಗೂ ತಲೆಬಾಗಕೂಡದು. ನಾಳೇ ದಿನ ಸಂಧ್ಯಾಕಾಲ ತಾವು ಸೋನಾಮಹಲಿಗೆ ಬನ್ನಿರಿ. ತಾವು ಫಾತಿಮಾಬೇಗಂ

ರವರನ್ನು ಅಲ್ಲೇ ನೋಡಬಹುದು. ದೌಲತ್‌ರಾಣಿಯುವರನ್ನೂ ಭೇಟಿ ಮಾಡಬಹುದು.

ಸುಲ್ತಾನನು ಭಕ್ಷಿಯುವರನ್ನು ಕರಸಿ, ಈ ರಾಧಾಣಿಯುವರು ಹೇಳುವ ಎಲ್ಲಾ ಏರ್ಪಾಡುಗಳನ್ನು ಮಾಡಿಸಿ ಕೊಡಬೇಕೆಂದು ಅಪ್ಪಣೆ ಮಾಡಿದನು. ರಾಧಾರಾಣಿಯು ದಿರ್ವಾರ ಗುಡಾರದಲ್ಲಿದ್ದ ಬೇಗಂ ಸಹೇಬಳ ವಸ್ತ್ರಾಭರಣ ಗಳನ್ನೂ, ನಗಸಾಣ್ಯಗಳನ್ನೂ, ಸೇವಕಿಯರನ್ನೂ ಸಾಗಿಸಲು ಏರ್ಪಾಡು ಮಾಡಿದಳು. ಎಲ್ಲವನ್ನೂ ಮುಂಚೆ ಕಳುಹಿಸಿದಳು. ಮ್ಯಾನಾ ಸಿದ್ಧ ವಾಯಿತು. ಬೇಗಂಸಾಹೇಬಳಿಗೆ ಮ್ಯಾನಾ ಹತ್ತುವಂತೆ ಅಪ್ಪಣೆ ಮಾಡಿದಳು. ಅವಳು ಹತ್ತಿ ಕುಳಿತಳು. ರಾಧೆಯು ಕುದುರೆಯಮೇಲೆ ಕುಳಿತು, ಮ್ಯಾನಾ ಜೊತೆಯಲ್ಲಿ ನಡೆದಳು. ಶಿಬಿರವನ್ನು ದಾಟುವಷ್ಟರಲ್ಲಿ ಬೇಗಂಸಾಹೇಬಳು ರಾಣೀಸಾಹೇಬ್, ಈ ಶಿಬಿರದ ಬಂದೀಖಾನೆಯಲ್ಲಿ ದಿರ್ವಾ ಮುಹಮ್ಮದಾಲಿ ಯುವರಿದ್ದಾರೆ. ದಯವಿಟ್ಟು ನನಗೊಮ್ಮೆ-ಅವರ ಚರಣ ದರ್ಶನವನ್ನು ಮಾಡಿಸಲಾರಿರಾ ? ಎಂದು ಬೇಡಿದಳು.

ರಾಧೆಯು ಮಾಡಿಸುತ್ತೇನೆ. ಈಗ ಉಸರೆತ್ತಬೇಡ—ನಡೆ, ಎಂದು ಗದ್ದರಿಸಿದಳು. ಬೇಗಂಸಾಹೇಬಳು ಮೌನವಾಗಿ ಮ್ಯಾನಾದಲ್ಲಿ ಕುಳಿತಳು. ಮ್ಯಾನಾ ನಗರದ ಕಡೆಗೆ ಹೋಯಿತು.

ನಗರದಿಂದ ರಾಜಮರ್ಯಾದೆಯೊಡನೆ ಪಲ್ಲಕ್ಕಿಯು ಸುಲ್ತಾನರ ಶಿಬಿರಕ್ಕೆ ಬಂತು. ಅದರಲ್ಲಿ ಮುಹಮ್ಮದಾಲಿಯುವರ ಶವವನ್ನು ಅಲಂಕರಿಸಿಟ್ಟು ನಗರಕ್ಕೆ ಸಾಗಿಸಿದರು. ಬಲು ವೈಭವದಿಂದ ಶವವನ್ನು ದರಯಾಬಾಗಿನಲ್ಲಿ ಗೋರೀ ಮಾಡಿಸಿದರು, ಆ ಗೋರಿಯಮೇಲೆ ಒಂದು ತಳಿರು ಚಪ್ಪರವು ಹಾಕಿತು. ಆ ಚಪ್ಪರದಲ್ಲಿ ಬಡಾ ಫಕೀರರು ಕುಳಿತಿದ್ದರು. ಅವರು ಫಾತಿಮಾಬೇಗಂ ರವರಿಗೆ ಹೇಳಿ ಕಳಿಸಿದರು. ರಾಧೆಯು ಅವಳನ್ನು ಕರತಂದಳು- " ಮಗಳೇ ನೀನು ಆಮರಣಾಂತ ಈ ಗೋರಿಯನ್ನು ಸೇವಿಸುತ್ತಿರು. ನಿನ್ನ ಪಾಪವು ಪರಿ ಹಾರವಾಗುವುದು " ಎಂದು ಆಜ್ಞೆ ಮಾಡಿದರು. ಫಾತಿಮಳು ಕಣ್ಣೀರುಗರೆ ಯುತ್ತಾ ನಿಂತಿದ್ದಳು. ಬಡಾ ಫಕೀರರು ಆವಳ ತಲೆಯಮೇಲೆ ಕೈಯಿಟ್ಟು ಆಶೀರ್ವದಿಸಿದರು. ತಮ್ಮ ಬೆರಳಿನಿಂದ ಆ ಗೋರಿಯಮೇಲೆ " ಮೈಸೂರಿನ

ಖಡ್ಗ" ಎಂದು ಬರೆದರು. ತಮ್ಮ ಕಂಬಳಿಯನ್ನು ಆ ಗೋರಿಯಮೇಲೆ ಹೊದ್ದಿಸಿ, ಆ ಗೋರಿಯನ್ನು ಮುಟ್ಟಿ ಕಣ್ಣಿಗೊತ್ತಿಕೊಂಡು—ಆ ಮೃತ್ತಿಕೆಯನ್ನು ತಲೆಯಮೇಲಿಟ್ಟುಕೊಂಡು ಹೊರಟರು. ಅಷ್ಟರಲ್ಲಿ ದೌಲತ್ತಳೂ, ರಾಧೆಯೂ, ಕೃಷ್ಣವೇಣಿಯೂ—ಬಂದು ವಂದಿಸಿದರು. ಅವರನ್ನು ಬಡಾ ಫಕೀರರು ಹರಿಸಿದರು. ಬಡಾ ಫಕೀರರ ಎರಡು ಕಣ್ಣುಗಳಲ್ಲಿಯೂ ನೀರು ಸುರಿಯುತ್ತಿತ್ತು.

ರಾಧೆಯು—ದಾದಾ. ನೀವೇಕೆ ಪಾಮರರಂತೆ ಅಳುತ್ತೀರಿ?

ತಾಯೇ. ನಾನೂ ನಿಮ್ಮಂತೆ ಮಾನವ ಪ್ರಾಣಿ. ನಾನು ಮಹಮ್ಮದಾಲಿಗಾಗಿ ಅಳುವುದಿಲ್ಲ. ಅವನು ಅಲ್ಲಾನ ಲೋಕದಲ್ಲಿ ನಗುತ್ತಿದ್ದಾನೆ. ಈ ಲೋಕದಲ್ಲಿರುವ ಪಾಪಿಗಳಿಗಾಗಿ, ಅತ್ಯಾಚಾರಿಗಳಿಗಾಗಿ ಅಳುತ್ತೇನೆ ಎಂದು ಹೇಳಿ ಹೊರಟುಹೋದರು. ಅವರೆಲ್ಲಿಗೆ ಹೋದರೋ ಯಾರಿಗೂ ಗೊತ್ತಿಲ್ಲ. ಅಂಥಾ ಮಹಾಪುರುಷರು ಭೂಮಿಗೆ ಬರುವುದಿಲ್ಲವೇನು? ಬರುತ್ತಾರೆ. ಆಗಾಗ ಬರುತ್ತಾರೆ.

ಶ್ರೀ ಚಾಮುಂಡೇಶ್ವರೀ ಎಲೆಕ್ಟ್ರಿಕ್ ಪ್ರೆಸ್ ಮೈಸೂರು.